ಶ್ರೀ ವೈ. ರಾಮಕೃಷ್ಣ.— ಆದಷ್ಟು ಜಾಗ್ರತೆ ವಿಷಯ ತಿಳಿದುಕೊಂಡು ನಾಳೆ ನಾಳಿದ್ದರಲ್ಲಿ ಹೇಳುತ್ತೇನೆ.

ಅಧ್ಯಕ್ಷರು.— ವಿಷಯವನ್ನು ಮುಖ್ಯ ಮಂತ್ರಿಗಳ ಗಮನಕ್ಕೆ ಕೂಡ ತಂದಿದ್ದಾರೆ, ಅವರು ಕ್ರಮ ತೆಗೆದುಕೊಳ್ಳುವುದಾಗಿ ಹೇಳಿದ್ದಾರೆ. ಆದರೆ ಇವತ್ತು ಮುಖ್ಯ ಮಂತ್ರಿಗಳು ಬಂದಿಲ್ಲವಾದ್ದರಿಂದ ಅವರಿಗೆ ಈ ವಿಷಯವನ್ನು ತಿಳಿಸಿ ನಾಳೆ, ನಾಡಿದ್ದರಲ್ಲಿ ಹೇಳಿಕೆ ನೀಡುವುದಕ್ಕೆ ಪ್ರಯತ್ನ ಮಾಡುತ್ತೀರಾ?

ಶ್ರೀ ವೈ. ರಾಮಕೃಷ್ಣ.— ಆ ಬಗ್ಗೆ ಪ್ರಯತ್ನ ಮಾಡುವುದಾಗಿ ಹೇಳಿದ್ದೇನೆ.

PRESENTATION OF REPORT

SRI S. R. BOMMAI.— Sir, I present the Eleventh Report of the Committee on Public Accounts on Appropriation Accounts and Finance Accounts for the years 1975-76 to 1978-79 and audit Reports thereon relating to Food Department.

MR. SPEAKER. — The Report is presented.

Leave of Absence

MR. SPEAKER.— I have received a letter from Sri F. S. Patil, hon, Member, Legislative Assembly, requesting for leave of absence from 7th June 1982 to 6th July 1982. Is it the pleasure of the House that permission be granted to Sri F. S. Patil for remaining absent from 7th June 1982 to 6th July 1982?

(No hon. Member dissented)

MR. SPEAKER.—Permission to remain absent is granted.

FINANCIAL BUSINESS

Discussion on the Voting of Demands for grants for 1982-83 Demand No. 43 to 46 and 63.

ಅಧ್ಯಕ್ಷರು.— ತಾವು ಪ್ರಸ್ತಾಪ ಮಾಡುವುದಕ್ಕೆ ಮುಂಚೆ, ನಾವು ಪುನರ್ ಪರಿಶೀಲನೆ ಮಾಡಿ ತೀರ್ಮಾನ ತೆಗೆದುಕೊಂಡ ಪ್ರಕಾರ ಈ ಬೇಡಿಕೆ ಮೇಲಿನ ಚರ್ಚೆ ಮೊನ್ನೆಯೇ ಮುಗಿಯಬೇಕಾಗಿತ್ತು. ಈಗಾಗಲೇ ಎರಡು ದಿವಸ ಹಿಂದೆ ಇದ್ದೇವೆ, ನನಗೆ ಕೊಟ್ಟಿರತಕ್ಕ ಹೆಸರುಗಳನ್ನು ನೋಡಿದರೆ ಆಡಳಿತ ಪಕ್ಷದ ವತಿಯಿಂದ ೧೩ ಜನ ಮತ್ತು ವಿರೋಧಪಕ್ಷದ ವತಿಯಿಂದ ೯ ಜನ ಮಾತನಾಡುವವರಿದ್ದಾರೆ. ಇವರಿಗೆಲ್ಲಾ ಮಾತನಾಡುವುದಕ್ಕೆ ಅವಕಾಶ ಕೊಟ್ಟು, ತದನಂತರ ಮಂತ್ರಿಗಳು ಉತ್ತರ ಹೇಳುವುದಾದರೆ ನಾವು ನಿರ್ಣಯ ಮಾಡಿರುವ ಕಾಲದಲ್ಲಿ ಮುಗಿಸುವುದಕ್ಕೆ ಸಾಧ್ಯವಾಗುವುದಿಲ್ಲ. ಆದ್ದರಿಂದ, ನನಗನ್ನಿಸುತ್ತದೆ, ಮತ್ತೆ ಪುನರ್ ಪರಿಶೀಲನೆ ಮಾಡಿ ಪಟ್ಟಿಯನ್ನು ವ್ಯವಸ್ಥೆಗೊಳಿಸುವುದು ಉತ್ತಮ, ಇಲ್ಲದಿದ್ದರೆ ನಾವು ಗೊತ್ತು ಮಾಡಿರುವ ಅವಧಿಯಲ್ಲಿ ಕಾರ್ಯಕ್ರಮವನ್ನು ಮುಗಿಸುವುದಕ್ಕಾಗುವುದಿಲ್ಲ, ಅಪ್ರೋಪ್ರಿಯೇಷನ್ ಬಿಲ್ಲನ್ನು ಪಾಸ್ ಮಾಡುವುದಕ್ಕಾಗುವುದಿಲ್ಲ. ಕೊನೆಗೆ ಅನಿವಾರ್ಯವಾಗಿ ಗಿಲಿಟಿನ್ ಹಾಕುವ ಪರಿಸ್ಥಿತಿ ಬರಬಹುದು. ಆದಕಾರಣ, ಯಾರು ಅವಶ್ಯಕವಾಗಿ ಮಾ ನಾಡಬೇಕೆಂದಿರುತ್ತಾರೋ ಅವರಿಗೆ ಮಾತನಾಡದೆ ಇರುವವರು ವಿಷಯಗಳನ್ನು ಕೊಟ್ಟರೆ ಅನುಕೂಲವಾಗುತ್ತದೆ.

ಶ್ರೀ ಎಸ್. ಆರ್. ಬೊಮ್ಮಾಯಿ.— ಕ್ಲಾರಿಫಿಕೇಷನ್‌ಗೆ ಅವಕಾಶ ಕೊಡಿ.

ಅಧ್ಯಕ್ಷರು.— ಅದಕ್ಕಾ ಸಮಯ ಜಾಸ್ತಿಯಾಗುತ್ತದೆ? ಅದರಲ್ಲಿ ಕೂಡ ಚರ್ಚೆಯಷ್ಟೇ ಕಾಲ ಹೋಗುತ್ತದೆ.

ಶ್ರೀ ಎಸ್. ಆರ್. ಬೊಮ್ಮಾಯಿ.— ಅಧ್ಯಕ್ಷರು ಹೇಳುವುದನ್ನು ಒಪ್ಪಿಕೊಳ್ಳುತ್ತೇನೆ. ಆದರೆ, ಕೊನೆ ವರ್ಷ ಅವರವರ ಕ್ಷೇತ್ರಕ್ಕೆ ಸಂಬಂಧಪಟ್ಟ ವಿಚಾರಗಳನ್ನಾದರೂ ಕೇಳುವುದಕ್ಕೆ ಅವಕಾಶ ಇರಬೇಕಾಗುತ್ತದೆ.

ಅಧ್ಯಕ್ಷರು— ಅಂಥದ್ದು ಇದ್ದರೆ ಮಂತ್ರಿಗಳಿಗೆ ಪತ್ರ ಬರೆಯಬಹುದು.

ಶ್ರೀ ಎಸ್, ಆರ್. ಬೊಮ್ಮಾಯಿ.— ನಾವು ನಾವೆ ಅಡ್ಜಸ್ಟ್ ಮಾಡಿಕೊಂಡು ಆದಷ್ಟು ಜಾಗ್ರತೆ ಮುಗಿಸುವುದಕ್ಕೆ ವ್ಯವಸ್ಥೆ ಮಾಡೋಣ.

† ಶ್ರೀ ಎಚ್. ಡಿ. ದೇವೇಗೌಡ (ಹೊಳೆನರಸೀಪುರ).— ಮಾನ್ಯ ಅಧ್ಯಕ್ಷರೇ, ಸಭೆಯ ಮುಂದೆ ಮಂಡಿಸಿರತಕ್ಕ ಲೋಕೋಪಯೋಗಿ ಇಲಾಖೆ ಮತ್ತಿತರ ೫ ಪ್ರಮುಖವಾದ ಇಲಾಖೆಗಳ ಬೇಡಿಕೆಗಳ ಬಗ್ಗೆ ಚರ್ಚೆ ಮಾಡಿ ಸಭೆ ಅನುಮೋದನೆ ಮಾಡತಕ್ಕ ಕಾಲದಲ್ಲಿ, ಕಳೆದ ಒಂದೂವರೆ ವರ್ಷಗಳಲ್ಲಿ ಈ ಇಲಾಖೆಯಲ್ಲಿ ಆಗಿರತಕ್ಕ ಆಗುಹೋಗುಗಳ ಬಗ್ಗೆ ಸಭೆ ತನ್ನ ಅಭಿಪ್ರಾಯಗಳನ್ನು ವ್ಯಕ್ತಪಡಿಸುವ ಸಂದರ್ಭದಲ್ಲಿ ತಮ್ಮ ಅನುಮತಿ ಪಡೆದು ನಾನು ಕೆಲವು ಮಾತುಗಳನ್ನು ಹೇಳುವುದಕ್ಕೆ ಇಷ್ಟಪಡುತ್ತಿದ್ದೇನೆ. ಲೋಕೋಪಯೋಗಿ ಇಲಾಖೆ ಬಹುಶ: ರಾಜ್ಯದ ಸಂಚಾರ ಸೌಲಭ್ಯವನ್ನು ಅದರಲ್ಲೂ ಗ್ರಾಮಾಂತರ ಪ್ರದೇಶದ ಸಂಚಾರ ವ್ಯವಸ್ಥೆಯನ್ನು ಮಾಡತಕ್ಕ ಪ್ರಮುಖ ಹೊಣೆಗಾರಿಕೆಯನ್ನು ಹೊತ್ತಿರತಕ್ಕ ಇಲಾಖೆ. ಜೊತೆಗೆ ಸಾರ್ವಜನಿಕ ಕಟ್ಟಡಗಳ ಕಾರ್ಯ ನಿರ್ವಹಣೆ ಮಾಡತಕ್ಕ ಜವಾಬ್ದಾರಿಯನ್ನು ಹೊತ್ತಿರತಕ್ಕ ಒಂದು ಪ್ರಮುಖವಾದ ಇಲಾಖೆ. ಇವತ್ತು ಈ ಇಲಾಖೆಯ ಬಗ್ಗೆ ಈ ಸಭೆಯಲ್ಲಿ ಚರ್ಚೆ ನಡೆಯುವುದಕ್ಕೆ ಅವಕಾಶವಾಗಿದೆ. ಒಂದಾನೊಂದು ಕಾಲದಲ್ಲಿ ಈ ಇಲಾಖೆಗೆ ಇಡೀ ನಮ್ಮ ರಾಜ್ಯ ಸರ್ಕಾರದ ಬೊಕ್ಕಸದ ಅರ್ಧ ಭಾಗಕ್ಕಿಂತ ಹೆಚ್ಚು ಹಣವನ್ನು ಖರ್ಚು ಮಾಡತಕ್ಕ ಕಾಲ ಇತ್ತು. ಈಗ ಅದು ಆ ಸ್ಥಾನವನ್ನು ಕಳೆದುಕೊಂಡಿದೆ ಎಂದರೆ ತಪ್ಪಾಗಲಿಕ್ಕಿಲ್ಲ. (ಇವತ್ತು ಹೆಚ್ಚು ಹಣವನ್ನು ಖರ್ಚು ಮಾಡುತ್ತಿರತಕ್ಕ ಇಲಾಖೆ ಎಂದರೆವಿದ್ಯಾ ಇಲಾಖೆ.) ಆದರೆ ಅದಕ್ಕೆ ಕಾರಣ ನಮ್ಮ ಸಂಪನ್ಮೂಲಗಳ ಕೊರತೆ. ಈ ಎಲ್ಲ ಕಾರಣಗಳಿಂದ ಈ ಇಲಾಖೆಗೆ ಎಷ್ಟು ಖರ್ಚು ಮಾಡಬೇಕೋ ಅಷ್ಟನ್ನು ಮಾಡಲಿಕ್ಕೆ ಸಾಧ್ಯವಾಗಿಲ್ಲ ಎಂಬುದನ್ನು ಮನಗಾಣಬಹುದು. ಜೊತೆಗೆ ನೀರಾವರಿ ಮತ್ತು ವಿದ್ಯುಚ್ಛಕ್ತಿಗೆ ಹೆಚ್ಚು ಹಣವನ್ನು ಖರ್ಚು ಮಾಡತಕ್ಕ ಸನ್ನಿವೇಶದಲ್ಲಿ ಈ ಇಲಾಖೆಗೆ ಹೆಚ್ಚು ಹಣವನ್ನು ಒದಗಿಸುವುದಕ್ಕೆ ಆಗಿಲ್ಲವೆಂಬುದು ಎಲ್ಲರ ಅಭಿಪ್ರಾಯವಾಗಿದೆ. ಒಂದು ಕಡೆ ಈ ಇಲಾಖೆಗೆ ಹಣ ಕೊಡತಕ್ಕದ್ದರಲ್ಲಿ (ಕೊಡುವುದಕ್ಕೆ ಸಾಧ್ಯವಾಗಿಲ್ಲ) ಕಡಿಮೆಯಾಗಿದೆ ಎಂಬುದನ್ನು ಒಪ್ಪುವುದಾದರೂ ಕೂಡ ಮತ್ತೊಂದು ಕಡೆ ಕೊಟ್ಟಿರತಕ್ಕ ಹಣವನ್ನು ಎಷ್ಟರ ಮಟ್ಟಿಗೆ ಯೋಗ್ಯ ರೀತಿಯಲ್ಲಿ ವೆಚ್ಚ ಮಾಡುವುದಕ್ಕೆ ಇರತಕ್ಕ ನಮ್ಮ ವ್ಯವಸ್ಥೆಯಲ್ಲಿ ಸಾಧ್ಯವಾಗಿದೆ ಎಂಬುದನ್ನು ಗಮನವಿಟ್ಟು ನೋಡಬೇಕೆಂದು ಪ್ರಥಮತ: ಹೇಳುವುದಕ್ಕೆ ಇಷ್ಟ ಪಡುತ್ತೇನೆ. ಈ ಇಲಾಖೆಯ ಮೇಲೆ ನನಗೆ ಜ್ಞಾಪಕ ಇರುವ ಹಾಗೆ ೪–೫ ವರ್ಷಗಳ ಹಿಂದೆ ಮಾತನಾಡಿದ್ದೆ, ನಂತರ ಹೆಚ್ಚಾಗಿ ಮಾತನಾಡುವ ಪ್ರವೃತ್ತಿಯನ್ನು ಬೆಳೆಸಿಕೊಳ್ಳಲಿಲ್ಲ. ಮಧ್ಯದಲ್ಲಿ ಎಲ್ಲಾದರೂ ಕೆಲವು ಸಲಹೆಗಳನ್ನು ಮಾತ್ರ ಈ ಇಲಾಖೆಯ ಬಗ್ಗೆ ಕೊಟ್ಟಿರಬಹುದು. ಇವತ್ತು ಕೂಡ ನಾನು ಬಹುಶ: ಹಿಂದೆ ಹೇಳಿರತಕ್ಕ ವಿಷಯಗಳನ್ನು ಪುನರುಚ್ಚಾರ ಮಾಡತಕ್ಕದು ಅನಿವಾರ್ಯ ಎಂದು ಕೆಲವು ವಿಚಾರಗಳನ್ನು ಪ್ರಸ್ತಾಪಿಸಬಯಸುತ್ತೇನೆ. ಈ ಇಲಾಖೆಯನ್ನು ಪುನರ್ವಿಂಗಡಣೆ ಮಾಡುವ ಸಲುವಾಗಿ ಶ್ರೀಮಾನ್ ಶ್ರೇಷ್ಠ ಎಂಬ ನಿವೃತ್ತ ಮುಖ್ಯ ಇಂಜಿನಿಯರ್‌ರವರ ಅಧ್ಯಕ್ಷತೆಯಲ್ಲಿ ಏನು ಒಂದು ಕಮಿಟಿಯನ್ನು ಮಾಡಿದ್ದಾರೆ ಅದನ್ನು ಸರ್ಕಾರ ಸದುದ್ದೇಶದಿಂದ ಮಾಡಿರಬಹುದೆಂದು ಭಾವಿಸಿರುತ್ತೇನೆ. ಆದರೆ ಇಂಥ ಕಮಿಟಿಗಳ ಅವಶ್ಯಕತೆ ಇಲ್ಲವೆಂದು ನನ್ನ ಅಭಿಪ್ರಾಯ. ಏಕೆಂದರೆ ಹಿಂದೆ ಇಂಥ ಹಲವಾರು ಕಮಿಟಿಗಳು ವರದಿಗಳನ್ನು ಕೊಟ್ಟಿವೆ. ಆದರೆ ಅವುಗಳನ್ನು ಕಾರ್ಯ ರೂಪಕ್ಕೆ ತರುವುದರಲ್ಲಿ ಅಂದರೆ ಈ ಇಲಾಖೆಯನ್ನು ಪುನರ್ವಿಂಗಡಣೆ ಮಾಡುವುದರಲ್ಲಿ ಈ ಸರ್ಕಾರವಾಗಲೀ ಅಥವಾ ಹಿಂದಿನ ಯಾವ ಸರ್ಕಾರಗಳೂ ಪ್ರಾಮಾಣಿಕ ಪ್ರಯತ್ನವನ್ನು ಮಾಡಲಿಲ್ಲ. ಮೈತ್ರ ಕಮಿಟಿ ಮಾಡಿದರು ಮತ್ತು ಅದಕ್ಕೆ ಪೂರ್ವದಲ್ಲಿ ಒಂದೆರಡು ಕಮಿಟಿಗಳನ್ನು ಮಾಡಿದ್ದರು. ಆದರೆ ಯಾವ ಕಮಿಟಿಗಳು ಕೊಟ್ಟಂಥ ವರದಿಯನ್ನು ಸರ್ಕಾರ ಅನು

† Indicates that remarks or speeches have not been revised by the member concerned.

ಷ್ಠಾನಕ್ಕೆ ತರುವುದಕ್ಕೆ ಮನಸ್ಸು ಮಾಡಿಲ್ಲವೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಇವತ್ತಿನ ದಿವಸ, ಶ್ರೇಷ್ಠರವರ ವರದಿಯನ್ನು ತರಿಸಿಕೊಳ್ಳಬಹುದು, ಆದರೆ ಅದರಿಂದ ಸಮಾಜಕ್ಕೆ ಪರಿಹಾರ ಸಿಗುವುದಿಲ್ಲವೆಂದು ನನ್ನ ಅಭಿಪ್ರಾಯ. ಕಾರಣ ಈ ಇಲಾಖೆಯ ಅಡ್ಮಿನಿಸ್ಟ್ರೇಟೀವ್ ಮತ್ತು ಎಸ್ಟಾಬ್ಲಿಷ್‌ಮೆಂಟ್‌ನ ಜವಾಬ್ದಾರಿ ಆಡಳಿತಕ್ಕೆ ಸಂಬಂಧಪಟ್ಟದ್ದು. ಸಿಬ್ಬಂದಿಗೆ ಸಂಬಂಧಪಟ್ಟ ಜವಾಬ್ದಾರಿ ಲೋಕೋಪಯೋಗಿ ಇಲಾಖೆಯ ಮಂತ್ರಿಗಳ ಮತ್ತು ಕಾರ್ಯದರ್ಶಿಗಳ ಹಿಡಿತದಲ್ಲಿದೆ ಎಂಬುದನ್ನು ಕಾಣಬಹುದು. ಇರಿಗೇಷನ್ ಡಿಪಾರ್ಟ್‌ಮೆಂಟ್. ಪಿ.ಹೆಚ್.ಇ. ಡಿಪಾರ್ಟ್‌ಮೆಂಟು ಎಂದು ವಿಭಾಗ ಮಾಡಿದ್ದಾರೆ. ಆದರೆ ಈ ಎರಡು ಇಲಾಖೆಗಳಿಗೂ ಕೊಡತಕ್ಕ ಸಿಬ್ಬಂದಿ ವರ್ಗ ಒಂದೇ ಒಂದು. ಈ ಇಲಾಖೆಗಳನ್ನು ಪ್ರತ್ಯೇಕ ಮಾಡಿದ್ದಾರೆಂದು ಹೇಳುವುದಾದರೆ ಆ ಇಲಾಖೆಯವರು ಇಟ್ಟುಕೊಂಡಿರತಕ್ಕ ವಾಹನಗಳ ಮೇಲೆ ಇರತಕ್ಕ ಹೆಸರುಗಳನ್ನು ನೋಡಿ ಹೇಳಬೇಕಾಗುತ್ತದೆ. ಆ ಇಲಾಖೆಗಳ ವಾಹನಗಳ ಮೇಲೆ ಇರಿಗೇಷನ್ ಡಿಪಾರ್ಟ್‌ಮೆಂಟ್ ವೆಹಿಕಲ್, ಪಿ.ಹೆಚ್.ಇ. ಡಿಪಾರ್ಟ್‌ಮೆಂಟ್ ವೆಹಿಕಲ್ ಎಂದು ಲೇಬಲ್ ಹಾಕಿರುವುದನ್ನು ಕಾಣಬಹುದೇ ವಿನಹ ವಿಧಾನ ಸೌಧದ ಮಟ್ಟದಿಂದ ಹಿಡಿದು ಕೆಳಗಡೆವರೆಗೆ ಅಂದರೆ ಜೂನಿಯರ್ ಇಂಜಿನಿಯರ್‌ವರೆಗೆ ಈ ಇಲಾಖೆಗಳನ್ನು ಪ್ರತ್ಯೇಕ ಮಾಡುವುದಕ್ಕೆ ಆಗಿಲ್ಲ

೧೦-೩೦ ಎ.ಎಂ.

ತಾವು ಮಂತ್ರಿಗಳಾಗಿದ್ದ ಕಾಲದಲ್ಲಿ ಸಚಿವ ಸಂಪುಟದಲ್ಲಿ ನೀರಾವರಿ ಇಲಾಖೆಯನ್ನು ಪ್ರತ್ಯೇಕವಾಗಿ ಮಾಡಬೇಕೆಂದು ನಿರ್ಣಯ ಮಾಡಿದ್ದಿರಿ. ಆದರೆ ಅದು ಇವತ್ತಿನವರೆಗೂ ಆಗಿಲ್ಲ. ಇವತ್ತು ಶ್ರೇಷ್ಟ ಕಮಿಟಿಯವರಿಗೆ ವರದಿ ಕೊಡಬೇಕೆಂದು ಹೇಳಿದ್ದೀರಿ, ಅದು ಬಂದಮೇಲೆ ಅದನ್ನು ಅನುಷ್ಠಾನಕ್ಕೆ ತರುವುದಕ್ಕೆ ಪ್ರಾಮಾಣಿಕ ಪ್ರಯತ್ನ ನಡೆಯಲಾರದು ಎಂದು ನನ್ನ ಅನಿಸಿಕೆಯೆಂಬುದನ್ನು ಪೂರ್ವಭಾವಿಯಾಗಿ ಹೇಳಲಿಕ್ಕೆ ಇಚ್ಛೆಪಡುತ್ತೇನೆ. ಇವತ್ತು ನಾನು ಯಾವ ವ್ಯಕ್ತಿಯನ್ನೇ ಕುರಿತು ಟೀಕೆ ಮಾಡುವುದಕ್ಕೆ ಹೋಗುವುದಿಲ್ಲ. ಈ ಇಲಾಖೆಯನ್ನು ರಾಜಕೀಯವಾಗಿ ತುಂಬ ಉಪಯೋಗ ಮಾಡಿಕೊಂಡಿದ್ದಾರೆ. ರಾಜಕೀಯ ಉದ್ದೇಶಕ್ಕೋಸ್ಕರ ಇದನ್ನು ಹರಿದು ಹಂಚಿ ತುಂಡು ತುಂಡು ಮಾಡಿ ಲೋಕೋಪಯೋಗಿ ಇಲಾಖೆಯ ಮಹತ್ವವನ್ನೇ ಕಿತ್ತುಹಾಕಿದ್ದಾರೆಂದರೆ ತಪ್ಪಾಗಲಾರದು. ಸಾರ್ವಜನಿಕ ಆರೋಗ್ಯ ಮತ್ತು ಇಂಜಿನಿಯರಿಂಗ್, ಸಣ್ಣ ನೀರಾವರಿ, ಸಂಪರ್ಕ ಮತ್ತು ಕಟ್ಟಡಗಳು, ಬಂದರುಗಳು, ಭಾರಿ ನೀರಾವರಿ, ಪವರ್ ಕಾರ್ಪೊರೇಷನ್ ಹೀಗೆ ಎಲ್ಲಾ ಇಲಾಖೆಗಳನ್ನು ವಿಂಗಡಣೆ ಮಾಡಿ ಇದಕ್ಕೆ ಇದ್ದಂಥ ಮಹತ್ವವನ್ನು ಸಾಕಷ್ಟು ಕೆಳಮಟ್ಟಕ್ಕೆ ಇಳಿಸಿದ್ದಾರೆ ಎಂಬುದು ನನ್ನ ಅಭಿಪ್ರಾಯ. ೧೯೭೦ಕ್ಕಿಂತ ಪೂರ್ವದಲ್ಲಿ ಈ ಇಲಾಖೆಗಳೆಲ್ಲಾ ಒಬ್ಬರೇ ಒಬ್ಬ ಲೋಕೋಪಯೋಗಿ ಇಲಾಖೆ ಮಂತ್ರಿಗಳ ಕೈಕೆಳಗೆ ಕೆಲಸ ಮಾಡುತ್ತಿತ್ತು. ಅವರ ಸಹಾಯಕರಾಗಿ ಒಬ್ಬ ರಾಜ್ಯ ಮಂತ್ರಿಗಳೋ, ಉಪ ಮಂತ್ರಿಗಳೋ ಇದ್ದು ಉನ್ನತ ಮಟ್ಟದಲ್ಲಿ ಕೆಲಸ ಆಗುತ್ತಿತ್ತು ಎಂಬುದನ್ನು ಇವತ್ತು ನೆನೆಸಿಕೊಳ್ಳಬಹುದು. ಈಗ ರಾಜಕೀಯಕ್ಕನುಗುಣವಾಗಿ ಈ ಇಲಾಖೆಯನ್ನು ಸಾಕಷ್ಟು ಛಿದ್ರಛಿದ್ರ ಮಾಡಿರತಕ್ಕದ್ದನ್ನು ನಾವು ಕಾಣಬಹುದು. ಈ ರೀತಿ ಹಲವಾರು ಕಾರಣಗಳಿಂದ ಈ ಇಲಾಖೆಯ ಆದ್ಯತೆ ಮತ್ತು ಮಹತ್ವವನ್ನು ಕಡಿಮೆ ಮಾಡಿ ತುಂಡುತುಂಡು ಮಾಡಿರುವ ಸನ್ನಿವೇಶದಲ್ಲಿ ಕೆಲಸ ಕೂಡ ಪರಿಪಕ್ವವಾಗಿ ಆಗುವುದಕ್ಕೆ ಸಾಧ್ಯವಿಲ್ಲ ಎಂಬುದನ್ನು ಮನಗಾಣಬೇಕು. ಸಚಿವರ ಹಂತದಲ್ಲಿ ತೆಗೆದುಕೊಳ್ಳತಕ್ಕ ನಿರ್ಣಯಗಳನ್ನು ನಾವು ಗಮನದಲ್ಲಿಟ್ಟುಕೊಳ್ಳುವುದಾದರೆ ಯಾವ ಯಾವ ರಂಗದಲ್ಲಿ ಯಾರುಯಾರು ಪರಿಣಿತರಿದ್ದಾರೆ ಅವರನ್ನು ಆಯಾಆಯಾ ಇಲಾಖೆಗೆ ವರ್ಗ ಮಾಡುವುದನ್ನು ಕೂಡ ನಾವು ಕಾಣುವುದಕ್ಕೆ ಸಾಧ್ಯವಾಗುತ್ತಿಲ್ಲ. ಪಿ.ಹೆಚ್.ಇ. ಯಲ್ಲಿ ಪರಿಣತಿ ಹೊಂದಿರುವವರನ್ನು ಸಿ ಅಂಡ್ ಬಿ ಯಲ್ಲಿ ಕೆಲಸ ಮಾಡುವುದಕ್ಕೆ ಹಾಕುವುದು, ಸಿ ಅಂಡ್ ಬಿ ಯಲ್ಲಿ ಪರಿಣತಿ ಹೊಂದಿರುವವರನ್ನು ಇರಿಗೇಷನ್‌ಗೆ ಒಳ್ಳೆಯದು.ಕೆಲಸ ಮಾಡುವುದಕ್ಕೆ ಹಾಕುವುದು ಕಷ್ಟ ಇದೆ. ಇದನ್ನು ಸರ್ಕಾರದವರು ಅರ್ಥ ಮಾಡಿಕೊಂಡರೆ ಒಂದೊಂದು ರಂಗದಲ್ಲಿ ಒಬ್ಬೊಬ್ಬ ತಂತ್ರಜ್ಞರು ವಿಶೇಷಮಾಹಿತಿಗಳನ್ನು ಹೊಂದಿದವರಾಗಿದ್ದು ಅವರನ್ನು ಸರಿಯಾದ ರೀತಿಯಲ್ಲಿ ಬಳಕೆ ಮಾಡಿಕೊಳ್ಳುವುದಕ್ಕೆ ಸಾಧ್ಯವಾಗಿಲ್ಲ ಎಂಬುದನ್ನು ಗಮನಿಸಬೇಕು ಸನ್ನಿವೇಶ ಈ ರೀತಿ ಇದೆ, ನಾನು ಈಗ ಯಾರಮೇಲೂ ದೋಷಾರೋಪಣೆ ಮಾಡುತ್ತಿಲ್ಲ ಬಿ.ಇ. ಪರೀಕ್ಷೆಯಲ್ಲಿ ತೇರ್ಗಡೆಯಾದಮೇಲೆ ಕೆಲವರು ಸ್ಟ್ರಕ್ಚರಲ್ ಇಂಜಿನಿಯರಿಂಗ್‌ನಲ್ಲಿ, ಕೆಲವರು ಡಿಸೈನ್‌ನಲ್ಲಿ ಹೀಗೆ ವಿವಿಧ ರಂಗದಲ್ಲಿ ತರಬೇತಿ ಹೊಂದಿರುವ ಅಧಿಕಾರಿಗಳನ್ನು ಆಯಾ ಇಲಾಖೆಗೆ ಸರಿಯಾಗಿ ಜೋಡಣೆ ಮಾಡುವುದರಲ್ಲಿ ನಾವು ವಿಫಲರಾಗಿದ್ದೇವೆ. ಇವತ್ತು ನಮ್ಮ ರಾಜ್ಯದಲ್ಲಿ ಈ ಇಲಾಖೆಯನ್ನು ಪುನರ್‌ವಿಂಗಡಣೆ ಮಾಡಬೇಕೆಂಬ ಉದ್ದೇಶವನ್ನಿಟ್ಟುಕೊಂಡು ಮತ್ತೊಂದು ಕಮಿಟಿಯನ್ನು ಏನು

ಮಾಡಿದ್ದೀರಿ ಈ ಸಂದರ್ಭದಲ್ಲಿ ತಮಗೆ ಒಂದು ಸೂಚನೆಯನ್ನು ಕೊಡುವುದಕ್ಕೆ ಇಷ್ಟಪಡುತ್ತೇನೆ. ಈ ಇಲಾಖೆಯ ಮಹತ್ವವನ್ನು ಸರಿಯಾಗಿ ಅರ್ಥ ಮಾಡಿಕೊಂಡು ಇದಕ್ಕೆ ಹೊಸ ತಿರುವು ಕೊಡಬೇಕೆಂಬ ಉದ್ದೇಶ ನಿಮ್ಮ ಮನಸ್ಸಿನಲ್ಲಿದ್ದರೆ ಈ ಕಮಿಟಿಯವರು ಕೊಟ್ಟಂಥ ವರದಿಯನ್ನು ಅತ್ಯಂತ ಜಾಗರೂಕತೆಯಿಂದ ಪರಿಶೀಲನೆ ಮಾಡಿ ಜಾರಿಗೆ ತರಬೇಕ . ಈ ಕಮಿಟಿಯವರು ಉತ್ತಮವಾದ ವರದಿಯನ್ನು ಕೊಡಬಹುದೆಂದು ನಾನು ನಿರೀಕ್ಷೆ ಮಾಡುತ್ತೇನೆ. ಅದನ್ನು ಅನುಷ್ಠಾನಕ್ಕೆ ತರುವುದಕ್ಕೆ ನಿಮ್ಮ ಕಾಲಾವಧಿಯಲ್ಲಿಸಾಧ್ಯ ಆಗದೇಹೋದರೂ ಮುಂದೆ ಬರುವ ಸರ್ಕಾರಗಳು ಇಲಾಖೆಯನ್ನು ಸುಧಾರಿಸುವ ಪ್ರಯತ್ನ ಮಾಡಬಹುದು. ಆಗಲೂ ಕೂಡ ಪಿ.ಡಬ್ಲ್ಯು.ಡಿ ಮತ್ತು ಸಿ ಅಂಡ್ ಬಿಯನ್ನು ಪ್ರತ್ಯೇಕವಾಗಿ ಮಾಡುವುದಕ್ಕೆ ಸಾಧ್ಯವಿಲ್ಲ. ಈಗಿರತಕ್ಕ ವ್ಯವಸ್ಥೆಯೇ ಮುಂದುವರೆಯಬೇಕಾಗುತ್ತದೆ. ಮತ್ತೆ ಈ ರಾಷ್ಟ್ರೀಯ ಹೆದ್ದಾರಿ ಬಗ್ಗೆ ಹೇಳುವುದಾದರೆ ಒಂದು ಹಂತಕ್ಕೆ ಬರುವವರೆಗೆ ಅದನ್ನು ಪ್ರತ್ಯೇಕವಾಗಿ ಮುಂದುವರೆಸಿಕೊಂಡು ಹೋಗುವ ಅವಶ್ಯಕತೆ ಇದೆ. ನೀರಾವರಿಯಲ್ಲಿ ಸಣ್ಣ ನೀರಾವರಿ ಇರಲಿ, ದೊಡ್ಡ ನೀರಾವರಿ ಇರಲಿ ಅವೆರಡನ್ನೂ ಒಂದುಗೂಡಿಸಿ ನೀರಾವರಿ ಇಲಾಖೆಯೆಂದು ಪ್ರತ್ಯೇಕವಾಗಿ ಸೆಕ್ರೆಟೇರಿಯೆಟ್ ಮಟ್ಟದಿಂದ ಪುನರ್‌ರೂಪಿಸಬೇಕಾಗುತ್ತದೆ. ಸುಮ್ಮನೆ ತೋರಿಕೆಗೆ ಮಾತ್ರ ಪ್ರತ್ಯೇಕ ಇಲಾಖೆ ಎಂದು ಹೇಳುವುದರಲ್ಲಿ ಅರ್ಥವಿಲ್ಲ. ಪಿ ಹೆಚ್.ಇ. ಬಗ್ಗೆ ಹೇಳುವುದಾದರೆ ಕರ್ನಾಟಕ ಅರ್ಬನ್ ವಾಟರ್‌ಸಪ್ಲೈ ಅಂಡ್ ಸಿವರೇಜ್ ಬೋರ್ಡ್ ಎಂದು ಏನು ಮಾಡಿದ್ದೀರಿ...

ಶ್ರೀ ಕಾಗೋಡು ತಿಮ್ಮಪ್ಪ.—ಮಾನ್ಯ ಸದಸ್ಯರು ನೀರಾವರಿ ಇಲಾಖೆಯನ್ನು ಒಟ್ಟಿಗೆ ಮಾಡಬೇಕೆಂದು ಹೇಳಿದ್ದೀರಿ. ತಾವು ಈ ಇಲಾಖೆಯ ಬಗ್ಗೆ ಸಾಕಷ್ಟು ಅನುಭವವನ್ನು ಹೊಂದಿದ್ದೀರಿ. ಒಂದು ವೇಳೆ ಸಣ್ಣ ನೀರಾವರಿ, ಮಧ್ಯಮ ನೀರಾವರಿ ಮತ್ತು ದೊಡ್ಡ ನೀರಾವರಿ ಇಲಾಖೆಯನ್ನು ಜೊತೆಗೆ ಸೇರಿಸಿದಾಗ ಇರತಕ್ಕ ಡಿವಿಷನ್ ಮತ್ತು ಸಬ್‌ಡಿವಿಷನ್‌ಗಳಲ್ಲಿ ರಸ್ತೆ ಮತ್ತು ಕಟ್ಟಡದ ಕೆಲಸದ ಹೊರೆಯಿಂದ ಅದಕ್ಕೆ ಬೇಕಾದ ವರ್ಕ್‌ಲೋಡ್ ಸಿಕ್ಕದೇಹೋದಾಗ ಕೆಲವೊಂದು ಬದಲಾವಣೆ ಮಾಡತಕ್ಕ ಸನ್ನಿವೇಶ ಒದಗಿಬಂದರೆ ಆ ಸನ್ನಿವೇಶದಲ್ಲಿ ಏನು ಮಾಡಬೇಕು ಎಂಬ ಬಗ್ಗೆ ಏನು ಅಭಿಪ್ರಾಯ ಕೊಡುತ್ತೀರಿ

ಶ್ರೀ ಹೆಚ್ ಡಿ. ದೇವೇಗೌಡ —ನಾನು ಆಮೂಲಾಗ್ರವಾಗಿ ಹೇಳುವುದಿಲ್ಲ, ಸೂಕ್ಷ್ಮವಾಗಿ ಒಂದೇ ಒಂದು ಮಾತನ್ನು ಹೇಳುತ್ತೇನೆ. ತಮ್ಮ ಇಲಾಖೆಯ ಅಧಿಕಾರಿಗಳನ್ನು ಕರೆದು ವಿಚಾರಮಾಡಿ ಮೇಜರ್ ಇರಿಗೇಷನ್ ಮೈನರ್ ಇರಿಗೇಷನ್ ಇಲಾಖೆಯನ್ನು ಒಂದು ಮಾಡಬೇಕೆಂದು ಹೇಳಿದಾಗ ಹೊಸ ಸಮಸ್ಯೆಗಳು ಉದ್ಭವವಾಗಿದೆ. ಎಲ್ಲಿ ಹೊಸಹೊಸ ಬೃಹತ್ ನೀರಾವರಿ ಯೋಜನೆಗಳನ್ನು ಮಾಡುತ್ತಿದ್ದಾರೆ ಅದರಹಿಂಭಾಗದಲ್ಲಿ ಇರತಕ್ಕ ಮಧ್ಯಮ ನೀರಾವರಿ ಯೋಜನೆ ಕೆಳಗಿರತಕ್ಕ ಅಚ್ಚುಕಟ್ಟುಗಳ ಮೈಂಟೆನೆನ್ಸ್‌ಗೆ ಹೊಸ ಸಮಸ್ಯೆ ಉದ್ಭವವಾಗಿದೆ ಎಂಬುದನ್ನು ಅರ್ಥ ಮಾಡಿಕೊಳ್ಳಬೇಕು. ಪ್ರಾಜೆಕ್ಟ್ ರಿಪೋರ್ಟಿನಲ್ಲಿ ಬರತಕ್ಕ ಒಟ್ಟು ಏರಿಯಾವನ್ನು ಲೆಕ್ಕಕ್ಕೆ ತೆಗೆದುಕೊಳ್ಳುವಾಗ ಮೈನರ್ ಇರಿಗೇಷನನ್ನು ಗಮನದಲ್ಲಿಟ್ಟುಕೊಂಡಿಲ್ಲ. ಅಚ್ಚುಕಟ್ಟುಗಳನ್ನು ಗಮನಕ್ಕೆ ತೆಗೆದುಕೊಂಡಿಲ್ಲ. ಅದರ ಪರಿಣಾಮವಾಗಿ ಸಾಕಷ್ಟು ಜಿಜ್ಞಾಸೆ ಇಲಾಖೆಯಲ್ಲಿ ಆಗಿದೆ. ಈಗಾಗಲೇ ಸರ್ಕಾರ ಆಜ್ಞೆ ಹೊರಡಿಸಿ ಎಲ್ಲಾ ಬೃಹತ್ ನೀರಾವರಿಯನ್ನು ಚೀಫ್ ಇಂಜಿನಿಯರ್ ಅಡಿಯಲ್ಲಿ ತರಬೇಕು ಎಂದು ಮಾಡಿದ್ದಾರೆ. ಕೆಲವು ತಾಲ್ಲೂಕುಗಳಲ್ಲಿ ವರ್ಕ್‌ಲೋಡ್ ಬರದೇ ಇದ್ದರೂ ಎರಡು ಮೂರು ತಾಲ್ಲೂಕುಗಳನ್ನು ಒಂದುಗೂಡಿಸಿ ಇರಿಗೇಷನ್ ಸಬ್–ಡಿವಿಜನ್ ಎಂದು ಮಾಡಬಹುದು. ಪಿ.ಹೆಚ್.ಇ.ನಲ್ಲಿ ಮಾಡಿದ್ದೀರಿ. ಅಲ್ಲಿ ಒಂದೇ ತಾಲ್ಲೂಕಿನಲ್ಲಿ ವರ್ಕ್‌ಲೋಡ್ ಇಲ್ಲದಿದ್ದರೂ ಚೀಫ್ ಇಂಜಿನಿಯರನ್ನು ಇಟ್ಟಿದ್ದೀರಿ. ಅಲ್ಲಿ ಮೂರು ನಾಲ್ಕು ತಾಲ್ಲೂಕುಗಳನ್ನು ಸೇರಿಸಿ ಸಬ್–ಡಿವಿಜನ್ ಮಾಡಿದ್ದೀರಿ. ಅದೇ ರೀತಿ ಮಾಡಬಹುದು. ಒಂದು ತಾಲ್ಲೂಕಿನಲ್ಲಿ ಮೈನರ್ ಇರಿಗೇಷನ್, ಇನ್ನೊಂದು ಕಡೆ ಪಿ.ಹೆಚ್.ಇ. ಇನ್ನೊಂದು ಕಡೆ ಸಿಅಂಡ್‌ಬಿ ಇಡಬಹುದು. ಲೋಕೋಪಯೋಗಿ ಇಲಾಖೆಯಲ್ಲಿ ವರ್ಕ್‌ಲೋಡ್ ಹಂಚತಕ್ಕ ಕಾಲದಲ್ಲಿ ಸ್ವಲ್ಪ ಗಮನದಲ್ಲಿಟ್ಟುಕೊಂಡು ಹಂಚಬೇಕು. ಪಿ.ಹೆಚ್.ಇ. ಒಂದು ತಾಲ್ಲೂಕಿನ ವ್ಯಾಪ್ತಿಯಲ್ಲಿಟ್ಟರೆ ಇನ್ನೊಂದು ತಾಲ್ಲೂಕಿನಲ್ಲಿ ಸಿ ಅಂಡ್‌ಬಿ ಇಡಬಹುದು. ಹೀಗೆ ರಾಜ್ಯದಲ್ಲಿ ೧೮೫ ತಾಲ್ಲೂಕುಗಳಲ್ಲಿ ಒಂದೊಂದು ಸಬ್‌ಡಿವಿಜನ್ ಇರುವಂತೆ ಮಾಡಬಹುದು. ವರ್ಕ್‌ಲೋಡು ಗಮನದಲ್ಲಿಟ್ಟು ವರ್ಗೀಕರಣ ಮಾಡಬೇಕಾಗುತ್ತದೆ. ಕೇಂದ್ರದಲ್ಲಿ ಎನರ್ಜಿ ಮಿನಿಸ್ಟ್ರಿ ಎಂದು ಮಾಡಿದ್ದಾರೆ. ಹಾಗೆ ಮಾಡಿದರೆ ಪವರ್ ಕಾರ್ಪೊರೇಷನ್ ಮತ್ತು ಕೆ.ಇ.ಬಿ. ಒಂದೇ ಆಡಳಿತದಲ್ಲಿ ಬರುತ್ತದೆ. ಆ ರೀತಿ ಒಂದೇ ಆಡಳಿತದಲ್ಲಿ ಎರಡನ್ನೂ ತಂದು ಸೆಕ್ರೆಟೇರಿಯಟ್ ಮಟ್ಟದಲ್ಲಿ ಒಂದು ಪ್ರತ್ಯೇಕ ವ್ಯವಸ್ಥೆಯನ್ನು ಮಾಡುವಂತೆ ನಿರ್ಣಯ ಮಾಡಬೇಕಾಗುತ್ತದೆಂಬುದನ್ನು ಈ ಸಂದರ್ಭದಲ್ಲಿ ತಿಳಿಸುವುದಕ್ಕೆ ಇಚ್ಛೆಪಡುತ್ತೇನೆ.

ಅದೇರೀತಿ ಸೆಂಟ್ರಲ್ ಮೆಕಾನಿಕಲ್ ಆರ್ಗನೈಸೇಷನ್ ವಿಂಗನ್ನು ಪ್ರತ್ಯೇಕ ಇಲಾಖೆಯನ್ನಾಗಿ ಮಾಡಬೇಕೆಂದು ಸಾರ್ವಜನಿಕ ಲೆಕ್ಕಪತ್ರ ಸನಿುತಿಯವರು ಕೂಡ ತಮ್ಮ ಅಭಿಪ್ರಾಯವನ್ನು ಕೊಟ್ಟಿದ್ದರು. ಒಂದಲ್ಲ; ೪-೬ ಭಾರಿ ಕೂಡ ಅಭಿಪ್ರಾಯನ್ನು ಕೊಟ್ಟಿದ್ದಾರೆ. ಅಭಿಪ್ರಾಯವನ್ನು ಕೊಡತಕ್ಕಂಥ ಕಾಲದಲ್ಲಿ ಕೇವಲ ಸಮಿತಿಯವರು ಮಾತ್ರ ಕೂತು ನಿರ್ಣಯ ಮಾಡಿಲ್ಲ. ಹೆಸರುಗಳಿಸಿದಂತ ಹಲವಾರು ಇಂಜಿನಿಯರುಗಳನ್ನು ಕರೆಸಿ, ಅವರ ಅಭಿಪ್ರಾಯವನ್ನು ತೆಗೆದುಕೊಂಡಿದ್ದೇವೆ. ಬೋರ್ಡ್ ಆಫ್ ಚೀಫ್ ಇಂಜಿನಿಯರ್ಸ್ ಸಭೆ ಕರೆಸಿ ; ಅವರ ಅಭಿಪ್ರಾಯ ಪಡೆದುಕೊಳ್ಳಲಾಗಿದೆ. ಅವರು ಕೂಡ ಸೆಂಟ್ರಲ್ ಮೆಕಾನಿಕಲ್ ಆರ್ಗನೈಸೇಷನ್ ವಿಂಗನ್ನು ಪ್ರತ್ಯೇಕವಾಗಿ ಮಾಡತಕ್ಕಂಥಾದ್ದು ಸೂಕ್ತ ಎಂದು ಹೇಳಿದ್ದಾರೆ. ಈಗ ಒಬ್ಬರನ್ನು ಇದರ ಮೇಲ್ವಿಚಾರಣೆ ನೋಡಿಕೊಳ್ಳಲು ಸೂಪರಿಂಟೆಂಡೆಂಟ್ ಇಂಜಿನಿಯರ್‌ರವರನ್ನು ಇಟ್ಟಿದ್ದೀರಿ; ನಾಮಕಾವಾಸ್ತೆಗೆ ಇಟ್ಟಿದ್ದೀರಿ. ಇದರ ವಿಷಯದಲ್ಲಿ ಯಾವುದೇ ರೀತಿಯಲ್ಲೂ ಸರಿಯಾದ ಆಡಳಿತ ವ್ಯವಸ್ಥೆಯನ್ನು ಮಾಡಿಲ್ಲವೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ, ದುರ್ದೈವದಿಂದ ನಮ್ಮಲ್ಲಿ ಸುಮಾರು ಹತ್ತಾರು ಕೋಟಿ ರೂಪಾಯಿ ಬೆಲೆ ಬಾಳತಕ್ಕ ಯಂತ್ರೋಪಕರಣಗಳು ಇವೆ. ಇದರ ಬಗ್ಗೆ ಕಮರ್ಷಿಯಲ್ ಅಕೌಂಟ್ಸ್ ಇಡುವಂತ ಪರಿಪಾಠ ಇಲ್ಲ. ಸರ್ಕಾರದವರು ಕೂಡ ಇದರ ಬಗ್ಗೆ ಗಮನ ಹರಿಸುವುದಕ್ಕೆ ಕಾಲ ಕೂಡ ಇಲ್ಲ; ವ್ಯವಹಾರ ಮಾಡುವಂತ ತಾಳ್ಮೆ ಕೂಡ ಇಲ್ಲ. ಪ್ರತಿಯೊಂದು ವಿಭಾಗದಲ್ಲಿಯೂ ಲೋಕೋಪಯೋಗಿ ಆಗಬಹುದು, ಪಿ. ಹೆಚ್. ಇ. ಆಗಬಹುದು, ಸಿ ಮತ್ತು ಬಿ ಆಗಬಹುದು. ಇವುಗಳಲ್ಲಿ ವಾಹನಗಳ ಸಂಖ್ಯೆ ಎಷ್ಟಿದೆ ? ಇವುಗಳಿಂದ ಬರತಕ್ಕ ಆದಾಯವೇನು ? ಇವುಗಳಿಗಾಗಿ ಖರ್ಚು ಮಾಡತಕ್ಕ ವೆಚ್ಚವೇನು ? ಎನ್ನುವುದರ ಬಗ್ಗೆ ನಿಮ್ಮಲ್ಲಿ ಲೆಕ್ಕ ಇದೆಯೆ ? ಪ್ರತ್ಯೇಕವಾದ ಲೆಕ್ಕ ಇದೆಯೋ ? ಇಲ್ಲ ಏಕೆಂದರೆ, ಕಂಟ್ರಾಕ್ಟ್‌ದಾರರುಗಳಿಂದ ಬಾಡಿಗೆ ಆಧಾರದ ಮೇಲೆ ವಾಹನಗಳನ್ನು ಪಡೆದು ಜನರಲ್ ಅಕೌಂಟ್ಸ್ ತೆಗೆದುಕೊಳ್ಳತಕ್ಕ ಪದ್ಧತಿ ಇರುವುದರಿಂದ ಇಲಾಖೆಗಳಿಗೆ ಸಂಬಂಧಪಟ್ಟಂತ ವಾಹನಗಳ ಮೇಲೆ ಹೂಡಿರತಕ್ಕಂಥ ಬಂಡವಾಳ, ಅವುಗಳ ಉಪಯೋಗಕ್ಕಾಗಿ ತಗಲತಕ್ಕಂಥ ವೆಚ್ಚ ಅವುಗಳಿಂದ ಲಾಭ ಇದೆಯೆ ? ನಷ್ಟ ಇದೆಯೆ ? ಎನ್ನುವ ಬಗ್ಗೆ ಇಡೀ ಕರ್ನಾಟಕ ರಾಜ್ಯದಲ್ಲಿರತಕ್ಕ ಯಾವುವೇ ಇಲಾಖೆಯನ್ನೂ ತೆಗೆದುಕೊಂಡರೂ ಕೂಡ ಕಮರ್ಷಿಯಲ್ ಅಕೌಂಟ್ ಇಟ್ಟಿಲ್ಲ. ಪರಿಸ್ಥಿತಿ ಹೀಗಿರುವುದರಿಂದ ಇವುಗಳಿಂದ ಆಗತಕ್ಕಂಥ ಅಪವ್ಯಯ ಅನ್ಯಾಯವನ್ನು ಸರಿಪಡಿಸುವುದಕ್ಕೆ ಸಾಧ್ಯವಾಗಿಲ್ಲ ಎನ್ನುವಂತ ಮಾತನ್ನು ಈ ಸಂದರ್ಭದಲ್ಲಿ ಹೇಳಬೇಕಾಗಿದೆ. ನಾವು ಕೊಟ್ಟಂತ ವರದಿ ಸರ್ಕಾರದ ಗಮನಕ್ಕೆ ಬಂದಿಲ್ಲ. ಯಾವುದೇ ಮಂತ್ರಿಯ ಮೇಲೆ ಕೊಟ್ಟಂತ ವರದಿಯಲ್ಲ. ಒಂದು ಕಡೆ ೨೦ ಲಾರಿಗಳು ಕೆಲಸ ಇಲ್ಲದೇ ಬಿದ್ದಿರುತ್ತವೆ, ಯಾವುದೋ ಪ್ರಾಜೆಕ್ಟ್‌ನಲ್ಲಿ ಬುಲ್ಡೋಜರುಗಳು ಬಿದ್ದಿರುತ್ತವೆ. ಎಲ್ಲಿ ಅವಶ್ಯಕತೆ ಇದೆ; ಅದನ್ನು ಗಮನಿಸಿ ; ಕೇಂದ್ರ ಕಛೇರಿಯಿಂದ ಇಡೀ ೧೯ ಜಿಲ್ಲೆಗಳಿಗೆ ವಾಹನಗಳನ್ನು ಒದಗಿಸುವಂತೆ ವ್ಯವಸ್ಥೆ ಇರಬೇಕು ; ಇದನ್ನು ಸೆಂಟ್ರಲ್ ಮೆಕಾನಿಕಲ್ ಆರ್ಗನೈಸೇಷನ್‌ಗೆ ವಹಿಸಬೇಕು. ಆ ಸಂಸ್ಥೆ ಇದರ ಲೆಕ್ಕವನ್ನು ಇಟ್ಟಿರಬೇಕು. ಇದರ ಆದಾಯ ನಷ್ಟ ಎಷ್ಟು ಎನ್ನುವ ಲೆಕ್ಕವನ್ನು ತೆಗೆದುಕೊಳ್ಳುವ ವ್ಯವಸ್ಥೆ ಇರಬೇಕೆಂದು ಸೂಚನೆ ಮಾಡುತ್ತೇನೆ ಮಹಾರಾಷ್ಟ್ರದಲ್ಲಿ ಸೆಂಟ್ರಲ್ ಮೆಕಾನಿಕಲ್ ಆರ್ಗನೈಸೇಷನ್ ವಿಂಗ್‌ನ್ನು ಸ್ವಾಯತ್ತ ಸಂಸ್ಥೆಯನ್ನಾಗಿ ಮಾಡಿದ್ದಾರೆ. ಇಲಾಖೆಗಳಿಗೆ ಸಂಬಂಧಪಟ್ಟ ಎಲ್ಲಾ ವಾಹನಗಳು ಇದರ ವ್ಯಾಪ್ತಿಯಲ್ಲಿ ಬರುತ್ತವೆ ಯಾವ ಯಾವ ವಿಭಾಗಗಳಿಗೆ, ಯಾವ ಯಾವ ಪ್ರಾಜೆಕ್ಟ್‌ಗಳಿಗೆ ಎಷ್ಟೆಷ್ಟು ವಾಹನಗಳು ಬೇಕೆಂಬುದನ್ನು ಈ ಸಂಸ್ಥೆ ನಿರ್ಣಯ ಮಾಡುತ್ತದೆ. ಈ ಸಂಸ್ಥೆಯ ಹಿರಿಯ ಅಧಿಕಾರಿಯೊಬ್ಬರು ವಾಹನಗಳ ವಿಲೇವಾರಿಯ ಬಗ್ಗೆ ನಿರ್ಣಯ ತೆಗೆದುಕೊಳ್ಳುತ್ತಾರೆ. ಹಾಗೆ ವಾಹನಗಳನ್ನು ಬಾಡಿಗೆ ಆಧಾರದಮೇಲೆ ಕೊಡುತ್ತಾರೆ. ಕಂಟ್ರಾಕ್ಟ್‌ದಾರರುಗಳಿಂದ ತೆಗೆದುಕೊಳ್ಳುವುದಿಲ್ಲ. ಬಾಡಿಗೆ ಹಣವನ್ನು ಸೆಂಟ್ರಲ್ ಮೆಕಾನಿಕಲ್ ವಿಂಗ್‌ಗೆ ವರ್ಗ ಮಾಡಬೇಕು. ಇದರಿಂದ ಯಾವುದೇ ರೀತಿಯಲ್ಲೂ ಲೋಪ ಮಾಡುವುದಕ್ಕೆ ಅವಕಾಶ ಇಲ್ಲ. ಲಾಕ್ ಪುಸ್ತಕದಲ್ಲಿ ಮೋಸ ಮಾಡಿ ಬರೆಯುವುದಕ್ಕೆ ಆಗುವುದಿಲ್ಲ. ಇಲ್ಲಿ ಹತ್ತು ದಿವಸ ಎಂದು ಹೇಳಿ ಮೂರು ದಿವಸ ಬರೆಯುತ್ತಾರೆಂದು ಕೇಳಿದ್ದೇನೆ. ಈ ಸಂಸ್ಥೆಯ ಮೂಲಕ ಯಾವ ವಿಭಾಗದಲ್ಲಿ ವಾಹನಗಳನ್ನು ಪಡೆದುಕೊಂಡು ಹೋದರು ಆಯಾ ವಿಭಾಗದ ಮುಖ್ಯ ಅಧಿಕಾರಿಗಳ ಸಂಪೂರ್ಣವಾದಂತ ಜವಾಬ್ದಾರಿಯನ್ನು ಹೊತ್ತುಕೊಂಡು, ಬಾಡಿಗೆ ವೆಚ್ಚವನ್ನು ಕೊಡಬೇಕಾಗುತ್ತದೆ. ಇದರಿಂದ ಆಗತಕ್ಕಂಥ ಲೋಪವನ್ನು ತಡೆಗಟ್ಟುವುದಕ್ಕೆ ಸಾಧ್ಯ ; ಇದನ್ನು ತಾವು ಗಮನದಲ್ಲಿಟ್ಟುಕೊಳ್ಳಬೇಕೆಂದು ಹೇಳುತ್ತೇನೆ ಎಲ್ಲ ವಿಧವಾದ ವಾಹನಗಳು ಒಂದೇ ಸಂಸ್ಥೆಯ ವ್ಯಾಪ್ತಿಗೆ ಹತೋಟಿಗೆ ಬರುವ ಹಾಗೆ ಒಂದು ಪ್ರತ್ಯೇಕ ಇಲಾಖೆಯನ್ನು ಮಾಡಬೇಕಾದುದು ಅವಶ್ಯಕತೆ ಇದೆಯೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ.

ಇನ್ನು ಪಿ.ಹೆಚ್.ಇ. ಮತ್ತು ರೂರಲ್ ವಾಟರ್ ಸಪ್ಲೈಗೆ ಸಂಬಂಧಪಟ್ಟ ಹಾಗೆ ಪ್ರತ್ಯೇಕವಾಗಿ ಬೋರ್ಡು ಮತ್ತು ಕಾರ್ಪೊರೇಷನ್, ಮಾಡತಕ್ಕಂಥಾದ್ದು ಸೂಕ್ತವಲ್ಲ. ಇಡೀ ರಾಜ್ಯಕ್ಕೆ ಸಂಬಂಧಪಟ್ಟ ಹಾಗೆ ಪ್ರತ್ಯೇಕವಾದ ಇಲಾಖೆ ಇರಬೇಕು ; ಒಬ್ಬರು ಸಚಿವರು ಕೂಡ ಇರಬೇಕು; ಈ ದಿಸೆಯಲ್ಲಿ ರೂರಲ್ ವಾಟರ್ ಸಪ್ಲೈ ಸ್ಕಿಂ ಮತ್ತು ಪಿ.ಹೆಚ್.ಇ. ವಿಭಾಗಗಳನ್ನು ರೀ ಆರ್ಗನೈಸ್ ಮಾಡುವುದಕ್ಕೆ ತಾವು ಪ್ರಯತ್ನ ಮಾಡಬೇಕೆಂದು ತಿಳಿಸುತ್ತೇನೆ. ಅದೇರೀತಿ ಆಯಾಯಾ ರಂಗದಲ್ಲಿರತಕ್ಕ ಪರಿಣತರು ಯಾರಿದ್ದಾರೆ; ಅಂಥ ಅಧಿಕಾರಿಗಳ ಪ್ರತ್ಯೇಕ ಕೇಡರ್ ಮಾಡಬೇಕಾಗುತ್ತದೆ. ಆಯಾಯಾ ಅಧಿಕಾರಿಗಳನ್ನು ಅಲ್ಲಿಯೇ ಪ್ರಮೋಷನ್ ಕೊಟ್ಟು ಉಳಿಸಿಕೊಳ್ಳುವಂತ ವ್ಯವಸ್ಥೆ ಮಾಡಬೇಕೆಂದು ಈ ಸಂದರ್ಭದಲ್ಲಿ ತಿಳಿಸುವುದಕ್ಕೆ ಇಚ್ಛೆಪಡುತ್ತೇನೆ.

ಇನ್ನು ಕ್ವಾಲಿಟಿ ಮತ್ತು ಕಂಟ್ರೋಲ್ ವಿಭಾಗ ಏನಿದೆ ಇದರ ಬಗ್ಗೆ ಅಧಿಕಾರಿಗಳೊಂದಿಗೆ ವಿಚಾರ ಮಾಡಿ; ಇದು ಮಹತ್ವವಾದ ವಿಭಾಗ ಎನ್ನುವುದನ್ನು ಅರ್ಥಮಾಡಿಕೊಳ್ಳಬೇಕು. ನನಗೆಗೊತ್ತಿರುವ ಹಾಗೆ ಸಿ, ಅಂಡ್ ಬಿ ಇಲಾಖೆಗೆ ಕ್ವಾಲಿಟಿ ಮತ್ತು ಕಂಟ್ರೋಲ್ ವಿಭಾಗ ಇದೆಯೋ ಎನ್ನುವುದು ಗೊತ್ತಿಲ್ಲ. ಒಂದು ಬ್ರಿಡ್ಜ್‌ಗೆ ಅಡಿಪಾಯ ಹಾಕಬೇಕಾದರೆ ಕೆ.ಆರ್.ಎಸ್.ಗೆ ಕಳುಹಿಸಬೇಕಾಗುತ್ತದೆ; ಇಲ್ಲದೇ ಹೋದರೆ ಪೂನಕ್ಕೆ ಕಳುಹಿಸಬೇಕಾಗುತ್ತದೆ. ಕೇಂದ್ರ ಕಚೇರಿಯಲ್ಲಿ ಕ್ವಾಲಿಟಿ ಕಂಟ್ರೋಲ್ ವಿಂಗ್ ಇಟ್ಟು; ಅದಕ್ಕೆ ಹೆಚ್ಚಿನ ಅಧಿಕಾರ ಕೊಡಬೇಕೆಂದು ಹೇಳುತ್ತೇನೆ. ೧೯ ಜಿಲ್ಲೆಗಳಿಗೆ ಎರಡು ಭಾಗದಲ್ಲಿ ಕ್ವಾಲಿಟಿ ಕಂಟ್ರೋಲ್ ವಿಭಾಗ ಇದೆ. ಒಂದು ಬೆಂಗಳೂರಿನಲ್ಲಿ ಇನ್ನೊಂದು ಧಾರವಾಡದಲ್ಲಿ ಇದೆ. ಇಷ್ಟೊಂದು ಬೃಹತ್ ಪ್ರಮಾಣದಲ್ಲಿ ನೀರಾವರಿ ಕೆಲಸ ರಾಜ್ಯದಲ್ಲಿ ನಡೆಯುತ್ತಿದೆ. ಕೆಲಸದ ಗುಣಮಟ್ಟವನ್ನು ಸರಿಯಾದ ರೀತಿಯಲ್ಲಿ ಪರಿಶೀಲನೆ ಮಾಡಿ; ಆಗತಕ್ಕಂಥ ಅನಾಹುತವನ್ನು ತಪ್ಪಿಸುವುದಕ್ಕೆ ಸರಿಯಾದಂತ ವ್ಯವಸ್ಥೆ ಇಲ್ಲ. ಮೇಜರ್ ಇರಿಗೇಷನ್‌ನಲ್ಲಿ ಕ್ವಾಲಿಟಿ ಕಂಟ್ರೋಲ್ ವಿಭಾಗ ಇಟ್ಟಿದ್ದೀರಿ; ಅಲ್ಲೂ ಕೂಡ ಕ್ವಾಲಿಟಿ ಕಂಟ್ರೋಲ್ ವಿಭಾಗ ಸರಿಯಾದ ರೀತಿಯಲ್ಲಿ ವರದಿಯನ್ನು ಕೊಡುತ್ತಿಲ್ಲ. ಯಾರ ಮೇಲೆ ಕ್ರಮ ತೆಗೆದುಕೊಳ್ಳುತ್ತೀರಿ, ಇದು ಬಹಳ ಜಟಿಲವಾದ ಪ್ರಶ್ನೆ. ಜವಾಬ್ದಾರಿಯನ್ನು ಯಾರ ಮೇಲೆ ಹಾಕುತ್ತೀರಿ? ಗೋಪಿನಾಥಂ ಕೆರೆ ಹೊಡೆದುಹೋಯಿತು. ಕ್ವಾಲಿಟಿ ಕಂಟ್ರೋಲ್ ವಿಭಾಗದ ಅಧಿಕಾರದ ಕೆಲಸವನ್ನು ಪರಿಶೀಲಿಸಿ, ಗುಣಮಟ್ಟ ಸರಿಯಾಗಿಲ್ಲವೆಂದು ಹೇಳಿ ವರದಿಯನ್ನು ಕೊಟ್ಟರು. ತಪ್ಪು ಮಾಡಿದ ಅಧಿಕಾರಿಗಳ ಮೇಲೆ ಅಂತಿಮ ನಿರ್ಣಯ ತೆಗೆದುಕೊಳ್ಳಬೇಕಾಗುತ್ತದೆ. ದುರ್ದೈವದಿಂದ ಕ್ವಾಲಿಟಿ ಕಂಟ್ರೋಲ್ ವಿಭಾಗದವರು ಕೊಟ್ಟಂತ ವರದಿಯನ್ನು ಸಂಪೂರ್ಣವಾಗಿ ನಿರ್ಲಕ್ಷ ಮಾಡಿರತಕ್ಕ ಅನೇಕ ನಿದರ್ಶನಗಳನ್ನು ನಾನು ಕೊಡುತ್ತೇನೆ. ನನ್ನ ಹತ್ತಿರ ಅದರ ಬಗ್ಗೆ ಸಾಕಷ್ಟು ದಾಖಲೆಗಳು ಇವೆ. ಕೆಲವು ಕಡೆ ಕ್ವಾಲಿಟಿ ಕಂಟ್ರೋಲ್ ವಿಭಾಗದ ಅಧಿಕಾರಿಗಳು ಕಂಟ್ರಾಕ್ಟುದಾರರುಗಳಿಗೆ ಅನುಕೂಲವಾಗುವಂತ ವರದಿಯನ್ನು ಕೊಟ್ಟಿರುವಂತ ನಿದರ್ಶನಗಳು ನಿಮ್ಮ ಅಧಿಕಾರಿಗಳು ಕೊಟ್ಟಂತ ವರದಿಯಿಂದಲೇ ಗೊತ್ತಾಗುತ್ತದೆಂದು ಹೇಳುತ್ತೇನೆ. ಪವರ್ ಪ್ರಾಜೆಕ್ಟ್‌ನಲ್ಲಿ ಕೂಡ ಕ್ವಾಲಿಟಿ ಕಂಟ್ರೋಲ್ ವಿಭಾಗದ ಬಗ್ಗೆ ಪರಿಶೀಲನೆ ಮಾಡಬೇಕಾಗುತ್ತದೆ. ಅದಕ್ಕೋಸ್ಕರ ಕ್ವಾಲಿಟಿ ಕಂಟ್ರೋಲ್ ವಿಭಾಗವನ್ನು ಒಬ್ಬರು ಚೀಫ್ ಇಂಜಿನಿಯರ್‌ರವರ ಅಧಿಕಾರಕ್ಕೆ ಒಳಪಡಿಸಿ; ಅವರು ಕೊಟ್ಟಂತ ಸರ್ಟಿಫಿಕೇಟನ್ನೇ ಜವಾಬ್ದಾರಿಯನ್ನಾಗಿ ಮಾಡಬೇಕಾಗುತ್ತದೆ ; ಇದರ ಬಗ್ಗೆ ಸರ್ಕಾರ ಅಂತಿಮವಾದ ತೀರ್ಪುಕೊಡುವಂತಾದ್ದು ಉಚಿತವೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ

ಇವೊತ್ತು ಗುಣಮಟ್ಟವನ್ನು ಕಾಯ್ದುಕೊಳ್ಳುವುದರಲ್ಲಿ ಹಿಂದೆ ಬಿದ್ದರೆ ಆಗತಕ್ಕ ಅನಾಹುತವನ್ನು ತಪ್ಪಿಸಲಿಕ್ಕೆ ಸಾಧ್ಯವಿಲ್ಲ, ಎಲ್ಲಾ ರಂಗಗಳಲ್ಲಿಯೂ ಹಣ ಪೋಲಾಗುತ್ತಿದೆ. ಗುಣಮಟ್ಟವನ್ನು ಕಾಯ್ದುಕೊಳ್ಳಲಿಕ್ಕೆ ಆಗಿಲ್ಲ, ನಿಮ್ಮ ರಸ್ತೆ ಕೆಲಸ ಮಾಡತಕ್ಕದ್ದರಲ್ಲಿ, ನೀರಾವರಿ ಕೆಲಸ ಮಾಡತಕ್ಕದ್ದರಲ್ಲಿ, ಪಿ.ಹೆಚ್.ಇ. ಕೆಲಸ ಮಾಡತಕ್ಕದ್ದರಲ್ಲಿ, ಯಾವ ಕೆಲಸದಲ್ಲಿಯೋ ಆಗಲಿ ಗುಣಮಟ್ಟ ಕಾಯ್ದುಕೊಳ್ಳುವುದರಲ್ಲಿಸರಿಯಾದ ಕ್ವಾಲಿಟಿ ವರ್ಕ್ ಎಲ್ಲಾ ರಂಗಗಳಲ್ಲಿ ಕಳಪೆಯಾಗತಕ್ಕ ಸಂದರ್ಭ ಬಂದಿದೆ, ಕ್ವಾಲಿಟಿ ಕಂಟ್ರೋಲ್‌ನಲ್ಲಿ ಅತ್ಯಂತ ಪರಿಣತೆ ಇರಬೇಕಾಗುತ್ತದೆ, ಆದ್ದರಿಂದ ಕ್ವಾಲಿಟಿ ಕಂಟ್ರೋಲ್‌ನಲ್ಲಿ ಕೆಲಸ ಮಾಡತಕ್ಕ ಅಧಿಕಾರಿಗಳಿಗೆ ಸ್ಪೆಷಲ್ ಅಲೋಯೆನ್ಸ್ ಕೊಡಬೇಕಾಗುತ್ತದೆ. ಇನ್ನು ಈ ಕ್ವಾಲಿಟಿ ಕಂಟ್ರೋಲ್‌ಗೆ ಈ ಡಿಸೈನ್ಸ್ ವಿಂಗ್‌ಗೆ ಅಧಿಕಾರಿ ನೇಮಕ ಮಾಡುವ ಸಂದರ್ಭದಲ್ಲಿ ಅವಶ್ಯಕವಾಗಿ ಯಾಗು ಕಂಡುಬರುವುದಿಲ್ಲ. ಅಂಥವರನ್ನು ಅಲ್ಲಿಗೆ ತೆಗೆದುಕೊಂಡು ಹೋಗಿ ಹಾಕತಕ್ಕ ಪರಿಪಾಠ ಇದೆ. ಇವೊತ್ತು ಡಿಸೈನ್ ವಿಂಗ್‌ಗೂ ಕೂಡ ಮತ್ತು ಎಲ್ಲಾ ರಂಗಗಳಿಗೂ ಸರಿಯಾದಂಥ, ಪರಿಣಿತರಾದಂಥ, ಡಿಸೈನ್‌ಗಳಲ್ಲಿ ಹೆಚ್ಚು ಮಾಹಿತಿ ಹೊಂದಿರತಕ್ಕವರನ್ನು ನೀವು ಹಾಕತಕ್ಕಂಥಾದ್ದು ಅವಶ್ಯಕ

ಎಂದು ಹೇಳುತ್ತೇನೆ. ಇವೊತ್ತು ಚೀಫ್ ಇಂಜಿನಿಯರ್ ಸಂಖ್ಯೆ ಹೆಚ್ಚು ಮಾಡಿದ್ದೀರಿ. ಡಿಸೈನ್ ವಿಂಗ್‌ಗೆ ಸಂಬಂಧಪಟ್ಟಂತೆ ಸೂಪರಿಂಟೆಂಡೆಂಟ್ ಇಂಜಿನಿಯರ್ ಹುದ್ದೆಗಳು ಖಾಲಿ ಇವೆ. ಆದ್ದರಿಂದ, ಆ ಕೆಲಸಗಳು ಸಾಕಷ್ಟು ಹಿಂದೆ ಬಿದ್ದಿದೆ. ಪ್ರತ್ಯೇಕ, ಪ್ರತ್ಯೇಕವಾಗಿ ವಿಭಾಗಗಳನ್ನು ರಚನೆ ಮಾಡತಕ್ಕ ಕಾಲದಲ್ಲಿ ಅದಕ್ಕೆ ಬೇಕಾದಂಥ ಡಿಸೈನ್ ವಿಂಗ್‌ಗಳನ್ನು ಮಾಡಿಕೊಳ್ಳದೇ ಇರುವುದೇ, ಅದಕ್ಕೆ ಕಾರಣವಾಗಿದೆ. ತಾವು ಈ ಇಲಾಖೆಗಳನ್ನು ಪುನರ್‌ವಿಂಗಡಣೆ ಮಾಡುವಾಗ, ಅದಕ್ಕೆ ಸಂಬಂಧಪಟ್ಟಂತೆ ಸೆಂಟ್ರಲ್ ಮೆಕಾನಿಕ್ ಆರ್ಗನೈಸೇಷನ್ ಒಂದನ್ನು ಬಿಟ್ಟು, ಎಲ್ಲಾ ಕಡೆ, ಡಿಸೈನ್ ವಿಭಾಗ, ಕ್ವಾಲಿಟಿ ಕಂಟ್ರೋಲ್ ಅತಿ ಮುಖ್ಯ ಅಂಥ ಇಟ್ಟುಕೊಳ್ಳಬೇಕು. ಇವೊತ್ತಿನವರೆಗೂ ಲೂಪ್ ಹೋಲ್ಸ್ ಪ್ಲಗ್ ಮಾಡಲಿಕ್ಕೆ ಸಾಧ್ಯವಾಗಿಲ್ಲ. ಇದರ ಬಗ್ಗೆ ತುಂಬಾ ಒಳಹೊಕ್ಕು ನೋಡಬೇಕಾಗುತ್ತದೆ. ಏಕೆಂದರೆ ಪ್ರತಿವರ್ಷವೂ ಷೆಡ್ಯೂಲ್ ರೇಟ್ ರಿವೈಸ್ ಮಾಡತಕ್ಕ ವಿಚಾರ ನಡೆಯುತ್ತಿರುತ್ತದೆ. ಯಾವ ವರ್ಷವಾದರೂ ಕೂಡ ನೀವು ಮಾಡತಕ್ಕ ಷೆಡ್ಯೂಲ್ ರೇಟ್ ಏನು ಇದೆ, ಅದನ್ನು ಆಯಾ ಸರ್ಕಲ್ ಸೂಪರಿಂಟೆಂಡೆಂಟ್ ಇಂಜಿನಿಯರ್ ಅವರು ರಿವೈಸ್ ಮಾಡಬೇಕೆಂದು ಹೇಳುತ್ತೀರಿ, ಅದನ್ನು ರಿವೈಸ್ ಮಾಡತಕ್ಕವರು ಯಾರು ಯಾವುದೋ ಒಂದು ಸಣ್ಣ ಕಮಿಟಿ. ಎಕ್ಸಿಕ್ಯುಟೀವ್ ಇಂಜಿನಿಯರ್ ಕುಳಿತುಕೊಂಡು ರಿವಿಜನ್ ಮಾಡಲಿಕ್ಕೆ ಪ್ರಯತ್ನ ಮಾಡುತ್ತಾರೆ. ಯಾವುದೋ ಒಂದು ಡಿವಿಜನ್‌ಗೆ ಸಂಬಂಧಪಟ್ಟಂತೆ ಡ್ರಾಫ್ಟ್‌ಮೆನ್ ಹಳೆಯ ವರ್ಷದ್ದು ತೆಗೆದು ಲೆಕ್ಕಾಚಾರ ಮಾಡಿ ಮಾಡುತ್ತಾರೆ. ವಾಸ್ತವಾಂಶದಿಂದ ಕೂಡಿರತಕ್ಕ ರಿವಿಜನ್ ಅದು ಅಲ್ಲ. ಲೆಕ್ಕದಲ್ಲಿ ಇಟ್ಟುಕೊಂಡು ಕೆಲಸ ಮಾಡತಕ್ಕದ್ದರಲ್ಲಿ, ಪ್ರತಿವರ್ಷವು ೧೦ ಪರ್‌ಸೆಂಟ್‌ಗಿಂತಲೂ ಹೆಚ್ಚು ಇರಬಾರದು. ಮತ್ತೊಂದು ನಿರ್ಬಂಧ ಹಾಕತಕ್ಕ ರೀತಿಯಲ್ಲಿ ನಡೆಸಿಕೊಂಡು ಬಂದಿದ್ದಾರೆ. ಇವೊತ್ತು ಇದರ ಪರಿಣಾಮ ಏನಾಗುತ್ತದೆ. ನೀವು ಷೆಡ್ಯೂಲ್ ರೇಟ್ ರಿವೈಸ್ ಮಾಡಿದಮೇಲೆ ನೀವು ಟೆಂಡರ್ ಕರೆದಮೇಲೆ, ೪೦ ಪರ್‌ಸೆಂಟ್ ಹೆಚ್ಚು, ೨೦ ಪರ್‌ಸೆಂಟ್ ಕೆಳಗೆ ಬರುವುದರಲ್ಲಿ ಅರ್ಥ ಏನಿದೆ. ತಮಗೆ ಒಂದು ಉದಾಹರಣೆ ಹೇಳಬೇಕೆಂದರೆ, ಕೊಡಗಿನಲ್ಲಿ ಒಂದು ಐಟಂ ಜಿಲ್ಲೆಗೆ ೫೦ ರೂಪಾಯಿ ಆದರೆ ಹಾಸದಲ್ಲಿ ೪೦ ರೂಪಾಯಿ ಇದೆ, ಏತಕ್ಕೆ ಇಷ್ಟು ವ್ಯತ್ಯಾಸ ಅಂದರೆ ಕಾಸ್ಟ್ ಆಫ್ ಲೇಬರ್ ಹೆಚ್ಚಾಗಬಹುದು. ಅಲ್ಲಿ ಕಾಫಿ ಪ್ಲಾಂಟೇಷನ್ ಇರುವುದರಿಂದ ಆ ಭಾಗದಲ್ಲಿ ೧೦-೧೫ ರೂಪಾಯಿ ಲೇಬರ್ ಕೇಳಿದರೆ ಹಾಸನದಲ್ಲಿ ೧೦ ರೂಪಾಯಿಗೆ ಬರಬಹುದು. ಜೆಲ್ಲಿ ಚಚ್ಚುವ ಕೆಲಸವೆಲ್ಲಾ ಒಂದೇ, ಅಲ್ಲಿ ಒಂದು ಯೂನಿಟ್‌ಗೆ ೫೦ ರೂಪಾಯಿ, ಇಲ್ಲಿ ೪೦ ರೂಪಾಯಿ ಒಂದು ಯೂನಿಟ್ ಇರುತ್ತದೆ. ಒಂದು ಡಿವಿಜನ್ ಮತ್ತೊಂದು ಡಿವಿಜನ್‌ಗೆ ಹೋಲಿಸಿ ನೋಡಿದಾಗ, ಅದರ ಗ್ಯಾಪ್ ತುಂಬಾ ವಿಪರೀತ ಇರತಕ್ಕ ಸನ್ನಿವೇಶ ನೋಡಬಹುದು. ಆದ್ದರಿಂದ, ಷೆಡ್ಯೂಲ್ ರೇಟ್ ರಿವಿಜನ್‌ನಲ್ಲಿ ಸಾಕಷ್ಟು ನ್ಯೂನತೆ ಇದೆ. ಇದನ್ನು ಸರಿಪಡಿಸತಕ್ಕದ್ದಕ್ಕೆ, ಯಾರು ಆಯಾ ಡಿವಿಜನ್‌ನಲ್ಲಿ ಎಕ್ಸಿಕ್ಯುಟೀವ್ ಹೆಡ್ ಇರುತ್ತಾರೆ. ಎಕ್ಸಿಕ್ಯುಟೀವ್ ಇಂಜಿನಿಯರ್ ಇರಬಹುದು, ಸೂಪರಿಂಟೆಂಡೆಂಟ್ ಇಂಜಿನಿಯರ್ ಇರಬಹುದು, ತಾವು ಅವರನ್ನೇ ನೇಮಕ ಮಾಡಬೇಡಿ. ಏಕೆಂದರೆ, ಅಲ್ಲಿ ಕೆಲಸ ಮಾಡಿದಂಥವರಿಗೆ ತಕ್ಕಂತೆ ಷೆಡ್ಯೂಲ್ ರೇಟ್ ಮಾರ್ಪಾಡು ಮಾಡಿಕೊಳ್ಳಲಿಕ್ಕೆ ಪ್ರಯತ್ನ ಮಾಡುತ್ತಾರೆ. ಪ್ರತಿ ವರ್ಷ ರಿವಿಜನ್ ಆಗುವಾಗ ತಮಗೆ ಅನುಕೂಲವಾಗುವ ರೀತಿಯಲ್ಲಿ, ಕೆಲವು ಕಡೆ ತಮಗೆ ಬೇಕಾದ ರೀತಿಯಲ್ಲಿ ಷೆಡೂಲ್ ರೇಟ್ ಮಾರ್ಪಾಡು ಮಾಡಿಕೊಳ್ಳುವುದನ್ನು ನಾವು ಕಾಣಬಹುದು. ನಾನ್ ಎಕ್ಸಿಕ್ಯುಟೀವ್ ಆಫೀಸರ್ ಯಾರು ಇದ್ದಾರೆ ಅವರನ್ನು ಅದಕ್ಕೆ ಹೊಣೆಗಾರರನ್ನಾಗಿ ಮಾಡಬೇಕು, ಷೆಡ್ಯೂಲ್ ರೇಟ್ ರಿವೈಸ್ ಮಾಡಲಿಕ್ಕೆ ಎಸ್.ಸಿ. ರಿವೈಸ್ ಇರಬಹುದು, ಎಸ್.ಸಿ. ಕ್ವಾಲಿಟಿ ಕಂಟ್ರೋಲ್ ಇರಬಹುದು, ಇಂಥವರನ್ನೊಳಗೊಂಡಂತೆ ಒಂದು ಕಮಿಟಿ ಮಾಡಿ ಷೆಡ್ಯೂಲ್ ರೇಟ್ ರಿವಿಜನ್ ಮಾಡತಕ್ಕದ್ದನ್ನು ಮಾಡಬೇಕು. ಈಗ ಡೆಲ್ಲಿಯಲ್ಲಿ ಸೆಂಟ್ರಲ್ ಪಿ.ಡಬ್ಲ್ಯು.ಡಿ.ನಲ್ಲಿ ಅವರು ಪ್ರತಿ ವರ್ಷ ರಿವಿಜನ್ ಮಾಡುವುದಿಲ್ಲ ಅವರು ಮೂರು ವರ್ಷಕ್ಕೆ, ಅಥವಾ ಐದು ವರ್ಷಕ್ಕೆ ಒಂದು ಸಾರಿ ರಿವಿಜನ್ ಮಾಡತಕ್ಕದ್ದು ನಡೆಯುತ್ತದೆ. ಅವರು ಪ್ರತಿ ವರ್ಷ ರಿವೈಸ್ ಮಾಡಲಿಕ್ಕೆ ಹೋಗುವುದಿಲ್ಲ. ಪೀಸ್ ವರ್ಕ್ ಕೊಡುವಾಗ ಹೆಡ್ ಆಫ್ ದಿ ಡಿಪಾರ್ಟ್‌ಮೆಂಟ್ ಯಾರು ಇರುತ್ತಾರೆ. ಅವರು ೧೦-೧೫ ಪರ್‌ಸೆಂಟ್ ಡಿಪೆಂಡಿಂಗ್ ಅಪ್ ಆನ್ ದಿ ಕಾಸ್ಟ್ ಎಸ್‌ಕಲೇಷನ್ ಆಫ್ ದಟ್ ಇಯರ್, ಇದನ್ನು ಗಮನದಲ್ಲಿಟ್ಟುಕೊಂಡು ಈ ವರ್ಕ್ ಎಕ್ಸಿಕ್ಯೂಷನ್‌ಗೆ ಕೊಡತಕ್ಕ ಪದ್ಧತಿ 'ಇದೆ ಅಂಥ ಕೇಳಿದ್ದೇನೆ' ಇದರ ಬಗ್ಗೆ ಸೂಕ್ತ ಮಾರ್ಪಾಡು ಮಾಡಬೇಕೆಂದು ಸೂಚನೆ ಕೊಡಲಿಕ್ಕೆ ಇಷ್ಟಪಡುತ್ತೇನೆ. The Committe which is going to revise the Scheduled rate should be a responsive Committee. It can not be farce. ತಮಗೆ ಬೇಕಾದಂಥ ಷೆಡ್ಯೂಲ್ ರೇಟ್ ರಿವೈಸ್ ಮಾಡಿಕೊಳ್ಳತಕ್ಕ ವ್ಯವಸ್ಥೆ

ಇರಬಾರದು, ಇನ್ನು ಮೈನ್‌ಟೆನೆನ್ಸ್ ಆಫ್ ರೋಡ್ಸ್, ಪ್ರತಿ ವರ್ಷ ಇಪ್ಪತ್ತು ಕೋಟಿ ರೂಪಾಯಿ ಖರ್ಚು ಮಾಡುತ್ತೇವೆ, ಯಾರು ಇದನ್ನು ಚೆಕ್ ಮಾಡುವವರು ? Is there any periodical check either by the Chief Engineer or by the Superintending Engineer or by the Executive Engineer ? ನಿಮಗೆ ಈ ಪೀರಿಯಾಡಿಕಲ್ ಚೆಕ್ ಮಾಡಿದ ರಿಪೋರ್ಟ್ ಬರುತ್ತದೆಯೋ ? ಇವೊತ್ತು ರಾಜ್ಯದಲ್ಲಿ ಇಪ್ಪತ್ತು ಕೋಟಿ ರೂಪಾಯಿ ಖರ್ಚು ಮಾಡುತ್ತೇವೆ. ರೂರಲ್ ರೋಡ್, ವಿಲೇಜ್ ರೋಡ್‌ಗೆ ೧,೫೦೦ ರೂಪಾಯಿ ಪರ್ ಕಿಲೋಮೀಟರ್ ಇದೆ. ಇದೇ ರೀತಿ ಡಿಸ್ಟ್ರಿಕ್ಟ್ ರೋಡ್ಸ್‌ಗಳಿಗೆಲ್ಲಾ ಇಟ್ಟುಕೊಂಡಿದ್ದೇವೆ. ಸ್ಟೇಟ್ ಫಂಡ್ ರೋಡ್‌ಗೆ ೬ ಸಾವಿರ ರೂಪಾಯಿ, ಮೇಜರ್ ಡಿಸ್ಟ್ರಿಕ್ಟ್ ರೋಡ್‌ಗೆ ೪ ಸಾವಿರ ರೂಪಾಯಿ ಹೀಗೆ ಎಲ್ಲಾ ಒಟ್ಟು ರೋಡ್ ಮೈನ್‌ಟೆನೆನ್ಸ್‌ಗೆ ೨೦ ಕೋಟಿ ರೂಪಾಯಿಗಳನ್ನು ಈ ಸದನ ಮಂಜೂರಾತಿ ಕೊಡುತ್ತದೆ. ಅಲ್ಲಿ ಅಪವ್ಯಯವಾಗತಕ್ಕದ್ದನ್ನು ಕಂಡುಹಿಡಿಯಲಿಕ್ಕೆ ಸಾಧ್ಯವಾಗಿದೆಯೋ ? ಆ ಹಣವನ್ನು ಖರ್ಚು ಮಾಡ ತಕ್ಕ ಕಾಲದಲ್ಲಿ ವ್ಯವಸ್ಥಿತವಾಗಿ, ಖರ್ಚು ಮಾಡಿದ್ದಾರೆಯೋ, ಅದನ್ನು ಪರಿಶೀಲನೆ ಮಾಡಲಿಕ್ಕೆ ಪರ್ ಫಾರಮೆನ್ಸ್ ವಿಂಗ್ ಆಡಿಟ್ ಮಾಡಬೇಕಾಗಿದೆ, ಅವರು ಅದನ್ನು ಹೇಳುವುದಕ್ಕೆ ಸಾಧ್ಯವಿಲ್ಲ. ಇವೊತ್ತು ಯಾವುದೇ ಹಳ್ಳಿಯಲ್ಲಿ ರೂರಲ್ ರೋಡ್‌ಮೇಲೆ ಎರಡು ಲಕ್ಷ ರೂಪಾಯಿವರೆಗೆ ಖರ್ಚು ಮಾಡಬೇಕಾಗು ತ್ತದೆ. ಅದು ಸರಿಯಾದ ರೀತಿಯಲ್ಲಿ ಖರ್ಚಾಗಿದೆಯೋ ಎಂದು ನೋಡತಕ್ಕ ವ್ಯವಸ್ಥೆ ಏತಕ್ಕೆ ಇಲ್ಲ. ಇವೊತ್ತು ಪೀರಿಯಾಡಿಕಲ್ ಚೆಕ್ ಮಾಡುವ ವ್ಯವಸ್ಥೆ ಇಲ್ಲ, ಈಗ ಇರತಕ್ಕ ಸೀನಿಯರ್ ಅಧಿಕಾರಿಗಳ ಬಗ್ಗೆ ನಾನು ಹೇಳುತ್ತಿಲ್ಲ, ಇದು ಮೊದಲಿನಿಂದಲೂ ಬಂದಿದ್ದೆ, ಇನ್ನು ನಿಮ್ಮ ರಸ್ತೆ ವಿಭಾಗ, ಕಟ್ಟಡದ ವಿಭಾಗಕ್ಕೆ ಸುಮಾರು ೬೦–೭೦ ಕೋಟಿ ರೂಪಾಯಿಗಳ ಖರ್ಚು ಇದೆ. ಅದಕ್ಕೆ ಒಂದು ಇಲಾಖೆ ಎಸ್ಟಾಬ್ಲಿಷ್‌ಮೆಂಟ್ ಇದೆ. ಇಷ್ಟೊಂದು ಎಸ್ಟಾಬ್ಲಿಷ್‌ಮೆಂಟ್ ಇಟ್ಟುಕೊಂಡಿರತಕ್ಕ ಸನ್ನಿವೇಶದಲ್ಲೂ ಕೂಡ ಅದರ ಉಸ್ತುವಾರಿ ನೋಡತಕ್ಕದ್ದರ ಬಗ್ಗೆ ಸಾಕಷ್ಟು ಗಮನಹರಿಸಿಲ್ಲವೆಂದು ಇವೊತ್ತು ಅರ್ಥ ಮಾಡಿಕೊಳ್ಳಬೇಕಾಗಿದೆ.

೧೧–೦೦ ಎ. ಎಂ

ಮೈನ್‌ಟೆನೆನ್ಸ್‌ಗೆ ಇವತ್ತು ಹಣ ಖರ್ಚಾಗಬಹುದು. ಆದರೆ ಅದು ಪ್ರಾಮಾಣಿಕವಾಗಿ ದುರುಪ ಯೋಗ ಆಗುತ್ತಿಲ್ಲವೆಂಬುದನ್ನು ದಯ ಮಾಡಿ ಗಮನದಲ್ಲಿಟ್ಟುಕೊಳ್ಳಬೇಕೆಂದು ಸೂಚಿಸಲಿಕ್ಕೆ ಇಷ್ಟಪಡುತ್ತೇನೆ.

ಇನ್ನೊಂದು ವಿಚಾರ ಎಂದರೆ ಗ್ಯಾಂಗ್ ಕೂಲಿಗಳಿಗೆ ಸಂಬಂಧಪಟ್ಟಿದ್ದು. ನಾನು ಇವರನ್ನೆಲ್ಲಾ ತೆಗೆದು ಹಾಕಬೇಕೆಂದು ಹೇಳುತ್ತಿಲ್ಲ. ಎಸ್ಟಾಬ್ಲಿಷ್‌ಮೆಂಟ್ ವಿಚಾರ ಬಂದಾಗ ಇದನ್ನು ನಾನು ಮಾತನಾಡುತ್ತೇನೆ. ತಾವು ಗ್ಯಾಂಗ್‌ಮನೆಗಳ ಕೂಲಿಗಾಗಿ ಎಷ್ಟು ಹಣವನ್ನು ಖರ್ಚು ಮಾಡುತ್ತಿದ್ದೀರಿ, ಅವರು ಏನು ಪ್ರೋಗ್ರೆಸ್ ತೋರಿಸುತ್ತಾರೆ ಇವೆರಡನ್ನೂ ಲೆಕ್ಕ ಹಾಕಿದರೆ ಖರ್ಚಾದ ಹಣಕ್ಕೆ ತಕ್ಕಂಥ ರೀತಿಯಲ್ಲಿ ತಾವು ಪ್ರಯೋಜನವನ್ನು ಅವರಿಂದ ಪಡೆಯುತ್ತಿದ್ದೀರಾ ಎಂಬುದನ್ನು ನೋಡಬೇಕು, ಅವರು ಎಲ್ಲೋ ಒಂದು ಮರದ ಕೆಳಗೆ ಮಲಗಿದ್ದು ಆಮೇಲೆ ಎದ್ದುಬಂದು ಲೆಕ್ಕ ಕೊಟ್ಟು ಹೋಗುತ್ತಾರೆ. ಇಲ್ಲದಿದ್ದರೆ ಯಾರೋ ಒಬ್ಬ ಅಧಿಕಾರಿಯ ಮನೆಯಲ್ಲಿ ಸೌದೆ ಒಡೆದುಕೊಂಡಿರುತ್ತಾರೆ. ನಿಮ್ಮಲ್ಲಿ ಎಷ್ಟು ಜನ ಗ್ಯಾಂಗ್ ಕೂಲಿಗಳಿದ್ದಾರೆ, ಅವರಿಗೆ ಎಷ್ಟು ಹಣವನ್ನು ಕೂಲಿಗಾಗಿ ಕೊಡುತ್ತಿದ್ದೀರಿ ಎಂಬುದನ್ನು ಹೇಳಬೇಕು. ಬಾಕಿ ಟಿ ಅಂಡ್ ಟಿ ಛಾರ್ಜಸ್ ಅಂತ ಹೇಳುತ್ತೀರಿ. ಅಲ್ಲಿ ಎಕ್ವಿಪ್ ಮೆಂಟ್ಸ್‌ಗೆ ಖರ್ಚಾಗತಕ್ಕ ಹಣ ಎಷ್ಟು ಎಂಬುದನ್ನು ಹೇಳಬೇಕು. ಇನ್ನೊಂದು ಬಹಳ ಮುಖ್ಯವಾದ ವಿಷಯ ಎಂದರೆ, ಇಲಾಖೆಗಳಲ್ಲಿ ಸರ್ಕಾರೀ ಅಧಿಕಾರಿಗಳು ಜೀಪು, ವ್ಯಾನ್‌ಗಳನ್ನು ಉಪಯೋಗಿಸು ವುದು. ಮಾನ್ಯ ಸಚಿವರಾದ ರಾಮಯ್ಯನವರ ಇಲಾಖೆಯಲ್ಲಿ ಒಂದು ತಿಂಗಳಿಗೆ ಸುಮಾರು ೨೦೦–೨೫೦ ರೂ.ನಷ್ಟು ಮಾತ್ರ ಪೆಟ್ರೋಲ್ ಖರ್ಚು ಮಾಡಬೇಕೆಂದು ನಿಗದಿ ಮಾಡಿದ್ದಾರೆಂದು ಕೇಳಿದ್ದೇನೆ. ಆದರೆ ಕೆಲವು ಅಧಿಕಾರಿಗಳು ವರ್ಷಕ್ಕೆ ೩೦–೪೦ ಸಾವಿರ ರೂ.ನಷ್ಟು ಪೆಟ್ರೋಲನ್ನು ಖರ್ಚು ಮಾಡುತ್ತಿದ್ದಾರೆಂದು ಕೇಳಿದ್ದೇನೆ. ಇದಕ್ಕೆ ಏನಾದರೂ ಒಂದು ಕೊನೆ ಇದೆಯೆ? ಇಡೀ ರಾಜ್ಯಕ್ಕೆ ಸಂಬಂಧಪಟ್ಟಂತೆ ಇಲಾಖೆಗಳಲ್ಲಿರತಕ್ಕ ವಾಹನಗಳಿಗೆ ಎಷ್ಟು ಪೆಟ್ರೋಲ್ ಖರ್ಚಾಗುತ್ತದೆ, ಗ್ಯಾಂಗ್ ಕೂಲಿಗೆ ಎಷ್ಟು ಖರ್ಚಾಗುತ್ತದೆ, ರೋಡ್ ಮೈನ್‌ಟೆನೆನ್ಸ್‌ಗೆ ಎಷ್ಟು ಖರ್ಚಾಗುತ್ತದೆ ಎಂಬುದನ್ನು ಏನಾದರೂ ಒಂದು ಪಟ್ಟಿ ಮಾಡಿದ್ದೀರಾ? ಎಂದು ತಮ್ಮನ್ನು ಕೇಳಬಯಸುತ್ತೇನೆ. ರೋಡ್ ಮೈನ್‌ಟೆನೆನ್ಸ್‌ಗೆ ನಾವು ಬಡ್ಜೆಟ್‌ನಲ್ಲಿ ಏನು ಹಣವನ್ನು ಮಂಜೂರು ಮಾಡಿಕೊಡುತ್ತೇವೆ

ಅದು ಸದುಪಯೋಗವಾಗುತ್ತಿಲ್ಲ. ನಾವು ಕೆಲವು ಕಡೆ ಸ್ಟೇಟ್ ಹೈವೇನಲ್ಲಿ ತಲೆತಗ್ಗಿಸಿಕೊಂಡು ಹೋಗಬಹುದು. ಆದರೆ ಇನ್ನೂ ಕೆಲವು ಕಡೆ ಅದೂ ಕೂಡ ಸಾಧ್ಯವಿಲ್ಲ ಇನ್ನು ಡಿಸ್ಟ್ರಿಕ್ಟ್ ಬೋರ್ಡ್ ರೋಡ್ಸ್ ಅಥವಾ ರೂರಲ್ ಕಮ್ಯುನಿಕೇಷನ್ ರೋಡ್ಸ್‌ಗೆ ನಾವು ಎಷ್ಟು ಹಣವನ್ನು ಕೊಡುತ್ತಿದ್ದೇವೆ ಅದರಲ್ಲಿ ೫೦ ಪರ್ಸೆಂಟ್ ಕೂಡ ಹಣ ಸದುಪಯೋಗವಾಗುತ್ತಿಲ್ಲ ಎಂಬುದನ್ನು ತಾವು ತಿಳಿದುಕೊಳ್ಳುವುದು ಒಳ್ಳೆಯದು. ಈ ವಿಚಾರವನ್ನು ತಾವು ಬಹಳ ಗಹನವಾಗಿ ಪರಿಶೀಲಿಸಬೇಕಾಗಿದೆ.

ಇನ್ನೊಂದು ವಿಚಾರ ಏನೆಂದರೆ, ಟೆಂಡರ್ ಷೆಡ್ಯೂಲ್ ಬಗ್ಗೆ ಕೂಡ ನಾನು ಈ ಹಿಂದೆಯೇ ಹೇಳಿದ್ದೇನೆ. ಅದನ್ನೆಲ್ಲಾ ತಾವು ಈಗ ಮಾರ್ಪಾಡು ಮಾಡಬೇಕಾಗುತ್ತದೆ. ಟೆಂಡರ್‌ಗಳನ್ನು ಕರೆಯುವಾಗ ಅದರಲ್ಲಿರತಕ್ಕ ಲೋಪದೋಷಗಳನ್ನು ಸರಿಪಡಿಸುವುದಕ್ಕೆ ಒಂದು ತಜ್ಞರ ಸಮಿತಿಯನ್ನು ನೇಮಕ ಮಾಡಿ ಕೆಲವು ಮಾರ್ಪಾಡುಗಳನ್ನು ಮಾಡಬೇಕಾದುದು ಅವಶ್ಯಕ ಇದೆಯೆಂದು ನಾನು ಹೇಳಬಯಸುತ್ತೇನೆ. ಇನ್ನು ರಿಜಿಸ್ಟ್ರೇಷನ್ ಪದ್ಧತಿ ಏನಿದೆ ಅದನ್ನೂ ಕೂಡ ತಾವು ಗಮನಿಸಬೇಕು. ನಿಮ್ಮ ಛೇಂಬರ್‌ನಲ್ಲಿ ಒಮ್ಮೆ ನಡೆದಂಥ ಸಭೆಯಲ್ಲಿ ನಿಮ್ಮ ಹಿರಿಯ ಅಧಿಕಾರಿಗಳೆಲ್ಲಾ ಅಲ್ಲಿದ್ದರು. ಉದಾಹರಣೆಗೆ ಹೇಳುವುದಾದರೆ ಒಂದು ಬ್ರಿಡ್ಜ್‌ಗೆ ಟೆಂಡರ್‌ನ್ನು ಕರೆದು ಒಂದು ವರ್ಷವಾಯಿತು. ಆದರೆ ಇದುವರೆಗೂ ಆ ಕೆಲಸವನ್ನು ಕೈಗೊಳ್ಳಲಿಲ್ಲ, ನನಗೆ ಜ್ಞಾಪಕವಿರುವಂತೆ ನಿಮ್ಮ ಕಾರ್ಯದರ್ಶಿಯವರು ಅವತ್ತಿನ ದಿವಸ ಮಾತನಾಡುತ್ತಾ ರಾಜಕೀಯ ಒತ್ತಡ ಇಲ್ಲದಿದ್ದರೆ ನಾವು ಕೆಲವು ಅಧಿಕಾರಿಗಳ ಮೇಲೆ ಬಿಗಿ ಕ್ರಮವನ್ನು ತೆಗೆದುಕೊಂಡು ಅವರನ್ನು ಬ್ಲ್ಯಾಕ್ ಲಿಸ್ಟ್‌ನಲ್ಲಿ ಇಡಬಹುದು. ಆದರೆ ಕೆಲವು ಸಂದರ್ಭಗಳಲ್ಲಿ ರಾಜಕಾರಣಿಗಳಿಂದ ನಮಗೆ ಬಹಳ ಇಕ್ಕಟ್ಟಿನ ಪರಿಸ್ಥಿತಿ ಉಂಟಾಗುತ್ತದೆಂದು ಹೇಳಿದರು. ಕಾರಣ ಇಷ್ಟೆ. ಕ್ಲಾಸ್ ೧ ಮತ್ತು ಕ್ಲಾಸ್ ೨ ಕಂಟ್ರಾಕ್ಟರುಗಳು ಪ್ರಭಾವಶಾಲಿಗಳಾಗಿ ಕೆಲಸ ಮಾಡುತ್ತಾರೆ ಎಂಬುದನ್ನು ನಾವು ಇಲ್ಲಿ ಒಪ್ಪಿಕೊಳ್ಳಬೇಕೇ, ಬೇಡವೇ ಎಂಬುದನ್ನು ಯೋಚನೆ ಮಾಡಬೇಕಾಗುತ್ತದೆ. ಆ ಕಂಟ್ರಾಕ್ಟರ್‌ಗಳು ಒಂದೆರಡು ವರ್ಷ ಸರಿಯಾಗಿ ಕೆಲಸ ಮಾಡದಿದ್ದರೆ ಅವರನ್ನು ಬ್ಲ್ಯಾಕ್ ಲಿಸ್ಟ್‌ನಲ್ಲಿಡುವುದು, ಇವರ ರಿಜಿಸ್ಟ್ರೇಷನ್‌ನ್ನು ರದ್ದು ಮಾಡಿ ಹೊರಗಡೆ ಇಡುವುದು ಇಂಥ ಕೆಲವು ಬಿಗಿ ಕ್ರಮಗಳನ್ನು ಕೈಗೊಳ್ಳುವುದು ಸೂಕ್ತವೆಂದು ಹೇಳಲಿಕ್ಕೆ ಇಚ್ಛೆಪಡುತ್ತೇನೆ.

ಇನ್ನು ಬಡ್ಜೆಟೆಡ್ ವರ್ಕ್ಸ್ ಬಗ್ಗೆ ನಾನು ಈ ಹಿಂದೆ ಕೂಡ ಹೇಳಿದ್ದೇನೆ ಇವತ್ತೂ ಹೇಳುತ್ತಿದ್ದೇನೆ. ಈ ಸದನದಲ್ಲಿ ನಾವು ಒಂದು ನಿರ್ಣಯವನ್ನು ಮಾಡಿ ಇಂಥಿಂಥ ಕೆಲಸಕ್ಕೆ ಇಂತಿಷ್ಟು ಹಣವನ್ನು ಕೊಡಬೇಕೆಂದು ಹೇಳುತ್ತೇವೆ. ಎಕ್ಸಿಕ್ಯುಟಿವ್ ಇಂಜಿನಿಯರ್‌ಗಳಿಗೆ ನಾವು ಕೊಟ್ಟಿರತಕ್ಕ ಫೈನಾನ್ಷಿಯಲ್ ಪವರ್‌ನಲ್ಲಿ ಈ ಕೆಲಸ ಬಂದರೆ ಆಗ ಅವರು ಫೈನಾನ್ಸ್ ಡಿಪಾರ್ಟ್‌ಮೆಂಟ್‌ನವರನ್ನು ಕೇಳಬೇಕಾಗಿಲ್ಲ. ಅವರೇ ಮಂಜೂರು ಮಾಡಿಕೊಳ್ಳುತ್ತಾರೆ. ಸೂಪರಿಂಟೆಂಡಿಂಗ್ ಇಂಜಿನಿಯರ್‌ರವರ ವ್ಯಾಪ್ತಿಯಲ್ಲಿ ಬಂದರೆ ಅವರೇ ಮಂಜೂರು ಮಾಡುತ್ತಾರೆ, ಅದೇ ರೀತಿ ಚೀಫ್ ಇಂಜಿನಿಯರ್‌ರವರ ವ್ಯಾಪ್ತಿಯಲ್ಲಿ ಬಂದರೆ ಅವರೇ ಮಂಜೂರು ಮಾಡುತ್ತಾರೆ. ಅವರು ಫೈನಾನ್ಸ್ ಡಿಪಾರ್ಟ್‌ಮೆಂಟ್‌ನವರನ್ನು ಕೇಳಬೇಕಾಗಿಲ್ಲ. ಆದರೆ ಸರ್ಕಾರಕ್ಕೆ ಬಂದರೆ ನಿಮಗೆ ಅಧಿಕಾರ ಇಲ್ಲ. ಪ್ರತಿ ಹಂತದಲ್ಲೂ ನೀವು ಫೈನಾನ್ಸ್ ಡಿಪಾರ್ಟ್‌ಮೆಂಟ್‌ಗೆ ಕಳುಹಿಸಬೇಕಾಗುತ್ತದೆ. ಎಕ್ಸ್‌ಪೆಂಡಿಚರ್‌ನ್ನು ಕಂಟ್ರೋಲ್. ಮಾಡುವುದಕ್ಕೆ ನೀವು ಲೆಟರ್ ಆಫ್ ಕ್ರೆಡಿಟ್ ಸಿಸ್ಟಂನ್ನು ಇಟ್ಟುಕೊಂಡಿದ್ದೀರಿ. ಬಡ್ಜೆಟ್‌ನಲ್ಲಿ ನಾವು ಮಂಜೂರು ಮಾಡಿರುತ್ತೇವೆ. ಆದರೆ ನೀವು ಪ್ರತಿ ಹಂತದಲ್ಲೂ ಏತಕ್ಕೆ ಕುತ್ತಿಗೆ ಹಿಸುಕುತ್ತೀರಿ? ಈ ಸದನದಲ್ಲಿ ನಾವು ಮಂಜೂರಾತಿ ಕೊಟ್ಟಿದ್ದೇವೆ. The Secretary to PWD is the highest authority. He should be allowed to sanction the work. Nobody should interfere. ನೀವು ಇಲ್ಲಿ ಎಕ್ಸ್‌ಪೆಂಡಿಚರ್ ಕಂಟ್ರೋಲ್ ಮಾಡುವಾಗ ಲೆಟರ್ ಆಫ್ ಕ್ರೆಡಿಟ್‌ನಲ್ಲಿ ಪ್ರತಿ ತಿಂಗಳೂ ನೀವು ಇಷ್ಟೇ ಹಣವನ್ನು ಖರ್ಚು ಮಾಡಬೇಕೆಂದು ಅವರಿಗೆ ಹೇಳಿ. ಆದರೆ ಆ ಎಸ್ಟಿಮೇಟ್ ಅಲ್ಲಿಗೆ ಹೋಗಿ ಯಾವುದೋ ಒಂದು ಗ್ರೌಂಡ್ ಮೇಲೆ ಮತ್ತೆ ವಾಪಸು ಅದು ಬರಬಾರದು. ಇದರ ಪರಿಣಾಮ ಏನಾಗುತ್ತದೆ ಎಂದರೆ ಪ್ರತಿಸಾರಿಯೂ ಅಂದಾಜು ವೆಚ್ಚ ಜಾಸ್ತಿಯಾಗುತ್ತಾ ಹೋಗುತ್ತದೆ. ಫೈನಾನ್ಸ್ ಡಿಪಾರ್ಟ್‌ಮೆಂಟ್‌ನವರು ಏನೋ ಒಂದು ಕೊಕ್ಕೆ ಹಾಕಿ ಆ ಎಸ್ಟಿಮೇಟ್‌ನ್ನು ಅಲ್ಲಿಂದಿಲ್ಲಿಗೆ, ಇಲ್ಲಿಂದಲ್ಲಿಗೆ ಓಡಾಡಿಸಿ ಹೆಚ್ಚು ವಿಳಂಬ ಮಾಡುವುದರಿಂದ ಎಸ್ಟಿಮೇಟ್ ಕಾಸ್ಟ್ ಜಾಸ್ತಿಯಾಗುತ್ತದೆ. ಆದ್ದರಿಂದ ಇದರ ಬಗ್ಗೆ ತಾವು ಗಮನ ಕೊಡಬೇಕೆಂದು ಸೂಚಿಸಿ. Once this House has approved any particular work. the administrative department should be the final authority so far as the administrative or financial

sanction is concerned. ಇಂಥ ಒಂದು ನಿಲುವನ್ನು ಜಾರಿಗೆ ತರುವುದು ಅವಶ್ಯಕವೆಂದು ಹೇಳ ಬಯಸುತ್ತೇನೆ.

ಇನ್ನೊಂದು ವಿಚಾರ ಏನೆಂದರೆ, ಯಾವುದೋ ಒಂದು ಕಟ್ಟಡದ ಕೆಲಸ ಅಥವಾ ಪ್ರಾಜೆಕ್ಟ್ ಕೆಲಸವನ್ನು ಸ್ಯಾಂಕ್ಷನ್ ಮಾಡಬೇಕಾದರೆ ಮೂರನೇ ಒಂದು ಭಾಗ ಹಣ ಇದ್ದರೆ ಮಾತ್ರ ಮಂಜೂರಾತಿ ಕೊಡಬೇಕೆಂಬ ಒಂದು ನೀತಿಯನ್ನು ಇಟ್ಟುಕೊಂಡಿದ್ದೀರಿ. ಎಷ್ಟೋ ಕೆಲಸಗಳು ಟೆಕ್ನಿಕಲ್. ರೀಸನ್ಸ್ ನಿಂದ ಇರಬಹುದು, ಅಡ್ಮಿನಿಸ್ಟ್ರೆಟಿವ್ ರೀಸನ್ಸ್‌ನಿಂದ ಇರಬಹುದು ನಿಮ್ಮ ನಿಯಮಾವಳಿ ಪ್ರಕಾರ ಮೂರನೆ ಒಂದು ಭಾಗ ಹಣ ಇದ್ದರೂ ಕೂಡ ಎಷ್ಟೋ ಸಂದರ್ಭಗಳಲ್ಲಿ ಆ ಕೆಲಸಗಳು ಕಾರ್ಯಗತವಾಗಿಲ್ಲ.

ಸ್ವಾಮಿ, ನಾವು ಆಗಿಂದಾಗ್ಗೆ ಹೇಳುತ್ತಲೇ ಇರುತ್ತೇವೆ. ಇಂಥ ಕೆಲಸಗಳು ಕಳೆದ ೪–೫ ವರ್ಷ ಗಳಿಂದಲೂ ಬಡ್ಜೆಟ್‌ನಲ್ಲಿ ಬರುತ್ತಿವೆ ಆದರೂ ಕಾರ್ಯಗತವಾಗುತ್ತಿಲ್ಲ ಎಂದು ಆಯಾಯ ಕೆಲಸಕ್ಕೆ ಬರತಕ್ಕ ಹಣವನ್ನು ಆಯಾಯ ವರ್ಷದಲ್ಲಿ ಖರ್ಚು ಮಾಡುವುದಕ್ಕೆ ಸಾಧ್ಯ ಆಗದೆ ಹಣ ಲ್ಯಾಪ್ಸ್ ಆಗುತ್ತಿರುತ್ತದೆ. ಇದಕ್ಕೆ ಬದಲಾಗಿ ಪವರ್ ಇರಿಗೇಷನ್ ಅಥವಾ ಬೇರೆ ಯಾವುದೇ ಇಲಾಖೆಯ ಕೆಲಸ ವಾಗಿರಲಿ ಒಂದು ಸಾರಿ ಬಡ್ಜೆಟ್‌ನಲ್ಲಿ ಸೇರಿಸಿದಮೇಲೆ ಅದು ಟೆಕ್ನಿಕಲಿ ಫೀಸಿಬಿಲಿಟಿ ಅಥವಾ ಅಡ್ಮಿನಿಸ್ಟ್ರೇಟಿವ್ ಫೀಸಿಬಿಲಿಟಿ ಇದ್ದರೆ ಅಂಥ ಕೆಲಸಗಳನ್ನೆಲ್ಲಾ ಮಾಡಿ ಮುಗಿಸುವುದಕ್ಕೆ ಆ ಇಲಾಖೆಯ ಮುಖ್ಯಸ್ಥರಿಗೆ ತಾವು ಸಂಪೂರ್ಣ ಅಧಿಕಾರವನ್ನು ಕೊಡಬೇಕು, ಅಲ್ಲಿ ಮೂರನೇ ಒಂದು ಭಾಗ ಹಣ ಇಲ್ಲ, ಕೇವಲ ೧೦ ಪರ್ಸೆಂಟ್ ಮಾತ್ರ ಟೋಕನ್ ಗ್ರ್ಯಾಂಟ್ ಇಟ್ಟಿದ್ದೇವೆಂದು ಹೇಳುವುದು ಬೇಡ. ಹಾಗೆ ಹೇಳುವುದಾದರೆ ಸಿ ಅಂಡ್ ಬಿ ನ ಚೀಫ್ ಇಂಜನೀಯರ್‌ಗೆ ೮೨–೮೩ನೇ ಸಾಲಿಗೆ ಇಂತಿಷ್ಟು ಎಂದು ಹಣ ಕೊಟ್ಟ ಮೇಲೆ he should be made responsible to spend that money and to take up any work which has been included in the budget whether it has 1/3rd provision or 10 % there or a token provision of Rs. 1000 is there. ನೀವು ಅದನ್ನು ಅಡ್ಡಿ ಮಾಡುವುದಕ್ಕೆ ಹೋಗಬಾರದು. ನೀವು ಅದನ್ನು ಸ್ಕ್ರೂಟಿನಿ ಮಾಡುವುದಕ್ಕೆ ಹೋದರೆ ಅನೇಕ ರಾಜಕೀಯ ಅಡ್ಡಿ ಆತಂಕಗಳು ವಿಧಾನಸೌಧದ ಮಟ್ಟದಲ್ಲಿ ಬರುತ್ತವೆ. ಆದರೆ ತಾವು ಅದಕ್ಕೆ ಅವಕಾಶ ಕೊಡಬಾರದೆಂದು ಹೇಳಬಯಸುತ್ತೇನೆ. ಒಟ್ಟಿನಲ್ಲಿ ಇದರಲ್ಲಿ ಏನೇನು ನ್ಯೂನತೆಗಳಿವೆ ಅವುಗಳನ್ನೆಲ್ಲಾ ಸೂಕ್ತ ರೀತಿಯಲ್ಲಿ ಮಾರ್ಪಾಡು ಮಾಡಬೇಕೆಂದು ಸಲಹೆ ಮಾಡಲಿಚ್ಛಿಸುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಸ್ವಾಮಿ, ಬಡ್ಜೆಟೆಡ್ ವರ್ಕ್ ಬಗ್ಗೆ ಮಾತನಾಡುತ್ತಾ ಇಂಥಿಂಥ, ಕೆಲಸ ಇಂತಿಷ್ಟು ವರ್ಷದಿಂದ ಅಂದರೆ ೪–೫ ವರ್ಷದಿಂದ ಇನ್‌ಕ್ಲೂಡ್ ಆಗುತ್ತಲೇ ಬರುತ್ತಿವೆ ಆದರೆ ಕಾರ್ಯಗತವಾಗುತ್ತಿಲ್ಲವೆಂದು ತಾವು ಹೇಳುತ್ತಿದ್ದೀರಿ. ಅದಕ್ಕೆ ಹಣವನ್ನು ಒದಗಿಸ ದಿದ್ದರೆ ಕೆಲಸ ಆಗುವುದಿಲ್ಲ. ಅದರ ಬಗ್ಗೆ ಪಬ್ಲಿಕ್ ಅಕೌಂಟ್ಸ್ ಕಮಿಟಿಯವರು ಪರಿಶೀಲಿಸಿ ಬಡ್ಜೆಟ್‌ನಲ್ಲಿ ಬರುವುದಕ್ಕೆ ಮೊದಲೇ ಪ್ಲಾನ್, ಎಸ್ಟಿಮೇಟ್ ಅಪ್ರೂವ್ ಆಗಿರುವುದನ್ನು ಹಾಕಬೇಕು. ಅದು ಬಜೆಟ್‌ನಲ್ಲಿ ಅಪ್ರೂವ್ ಆದ ಮೇಲೆ ಅವರು ಆ ಕೆಲಸವನ್ನು ಮಾಡುವುದಕ್ಕೆ ಸಂಪೂರ್ಣ ಅಧಿಕಾರ ಇರಬೇಕು. ಮತ್ತೆ ಅದನ್ನು ಫೆನಾನ್ಸ್ ಡಿಪಾರ್ಟ್‌ಮೆಂಟ್‌ಗೆ ಕಳುಹಿಸುವುದು ಬೇಡ. ಇದರಿಂದ ಕೆಲಸ ನಿಧಾನವಾಗುತ್ತದೆ. ತಮಗೆ ಇಂಥ ಅನೇಕ ಉದಾಹರಣೆಗಳನ್ನು ಕೊಡುತ್ತೇನೆ. ಗೋಪಿನಾಥಂ ರಿಪೋರ್ಟ್‌ನಲ್ಲಿ ನಾವು ಹೇಳಿದ್ದೇವೆ. ಬಡ್ಜೆಟ್‌ನಲ್ಲಿ ಇನ್‌ಕ್ಲೂಡ್ ಮಾಡಿದ ೬ ವರ್ಷದ ನಂತರ ಆ ಕೆಲಸ ವನ್ನು ತೆಗೆದುಕೊಂಡಿದ್ದಾರೆ, ಅಷ್ಟೇ ಅಲ್ಲ ಅಪ್ರೂವಲ್ ಇಲ್ಲದೆ ಹಣವನ್ನು ಖರ್ಚು ಮಾಡಿದ್ದಾರೆ.

ಶ್ರೀ ಎಂ. ವೀರಪ್ಪಮೊಯ್ಲಿ.—ಸನ್ಮಾನ್ಯ ದೇವೇಗೌಡರು ಹೇಳಿದ ಪ್ರಕಾರ ಇದು ಪ್ರಮುಖವಾದ ಪ್ರಶ್ನೆಯಾಗಿದೆ. ಪ್ರೀ–ಬಡ್ಜೆಟ್ ಸ್ಕ್ರೂಟನಿ ಮಾಡಿದರೆ ಆರ್ಥಿಕ ಇಲಾಖೆಗೆ ಬರುವ ಆಗತ್ಯವಿರುವುದಿಲ್ಲ. ಆಯಾ ಇಲಾಖೆಯವರು ನೇರವಾಗಿ ಲೋಕೋಪಯೋಗಿ ಇಲಾಖೆಗೆ ಕಳುಹಿಸಿಕೊಡಬಹುದು. ಈ ಬಗ್ಗೆ ನಾವು ಎರಡು ವರ್ಷದ ಹಿಂದೆಯೇ ಒಂದು ಕಾರ್ಯಕ್ರಮ ತೆಗೆದುಕೊಂಡಿದ್ದೇವೆ. ಆದರೆ ತಮಗೆಲ್ಲಾ ಗೊತ್ತಿರುವಂತೆ ಎಂ.ಎಲ್.ಎ.ಗಳು ತಮ್ಮ ಕ್ಷೇತ್ರದಲ್ಲಿ ಇಂತಹ ಕೆಲಸಗಳಾಗಬೇಕಾಗಿದೆ ಎಂದು ಹೇಳುತ್ತಾರೆ, ಅಂತಹ ಕೆಲಸಗಳನ್ನು ಬಡ್ಜೆಟ್‌ನಲ್ಲಿ ಸೇರಿಸಲಾಗುತ್ತದೆ. ಆದರೆ ಇಂತಹ ಕೆಲಸ ಗಳಿಗೆ ಮೊದಲೇ ಟೆಕ್ನಿಕಲ್ ಸ್ಯಾಂಕ್ಷನ್ ಮತ್ತು ಅಡ್ಮಿನಿಸ್ಟ್ರೇಟಿವ್ ಸ್ಯಾಂಕ್ಷನ್ ಇರುವುದಿಲ್ಲ. ಈ ರೀತಿ

ಎಸ್ಟಿಮೇಟ್ ತಯಾರಾಗದೆ ಬಡ್ಜೆಟ್‌ನಲ್ಲಿ ಸೇರಿಸಲಾಗುತ್ತದೆ. ಇದು ಯಾರ ತಪ್ಪು? ಇದು ಸರ್ಕಾರದ ತಪ್ಪು ಎಂದು ಹೇಳುವುದಕ್ಕಾಗುವುದಿಲ್ಲ. ಏಕೆಂದರೆ ಶಾಸಕರೇ ಇಂತಹ ಕೆಲಸಗಳನ್ನು ಬಡ್ಜೆಟ್‌ನಲ್ಲಿ ಸೇರಿಸಬೇಕೆಂದು ಹೇಳುತ್ತಾರೆ. ಈ ಕಾರಣದಿಂದ ಇಂತಹ ಒಂದು ಪ್ರಶ್ನೆ ಬಂದಿದೆ. ಆದರೂ ಬರುವ ಬಡ್ಜೆಟ್‌ನಲ್ಲಿ ಸ್ವಲ್ಪಮಟ್ಟಿಗೆ ಲೋಕೋಪಯೋಗಿ ಇಲಾಖೆಗೆ ಸಂಬಂಧಪಟ್ಟಂತೆ ಈ ಒಂದು ಕಾರ್ಯ ಕ್ರಮ ಕೈಗೊಳ್ಳಬೇಕೆಂದು ನಮ್ಮ ಸರ್ಕಾರ ಆಲೋಚನೆ ಮಾಡಿದೆ.

ಶ್ರೀ ಎಚ್.ಡಿ. ದೇವೇಗೌಡ.—ಮಾನ್ಯ ಮಂತ್ರಿಗಳು ಹೇಳಿದಂಥ ಒಂದು ವಾದ ಬಹುಶ: ವಾಸ್ತವಾಂಶದಿಂದ ಕೂಡಿದ ವಾದ ಆಗಲಾರದು. ನಾವು ಚುನಾಯಿತ ಪ್ರತಿನಿಧಿಗಳು ಇಂತಹ ಕೆಲಸ ಗಳನ್ನು ಬಡ್ಜೆಟ್‌ನಲ್ಲಿ ಸೇರಿಸಬೇಕೆಂದು ಹೇಳುತ್ತೇನೆ. ಬಡ್ಜೆಟ್‌ನಲ್ಲಿ ಸೇರಿಸಿದ ಮೇಲೆ that does'nt mean the Officer can straightway take up the work without applying any technical norms. ಈಗ ಯಾವುದೇ ಒಂದು ಕೆಲಸ ತೆಗೆದುಕೊಳ್ಳಬೇಕಾದರೂ ಅದಕ್ಕೆ ಟೆಕ್ನಿಕಲ್ ಫೀಸಿಬಿಲಿಟಿ ಇದೆಯೋ ಹೇಗೆ ಎಂದು ನೋಡಲಾಗುತ್ತದೆ, ಮೇಜರ್ ಇರಿಗೇಷನ್ ಆದರೆ ಒಂದು ಎಕರೆಗೆ ೫ ಸಾವಿರ ರೂ.ಗಳ ಮೇಲೆ ಖರ್ಚು ಬರಬಾರದು, ಮೈನರ್ ಇರಿಗೇಷನ್ ಆದರೆ ಒಂದು ಎಕರೆಗೆ ಎರಡೂವರೆ ಸಾವಿರ ರೂ.ಗಳ ಮೇಲೆ ಖರ್ಚು ಬರಬಾರದು ಎಂದು ಕೆಲವು ನಾರಮ್ಸ್‌ನ್ನು ಇಟ್ಟುಕೊಳ್ಳಲಾಗಿದೆ. ಈ ಕೆಲವು ನಾರಮ್ಸ್‌ನ ಚೌಕಟ್ಟಿನಲ್ಲಿ ಬರುವ ಕೆಲಸಗಳನ್ನು ತೆಗೆದುಕೊಳ್ಳು ವುದಕ್ಕೆ ಸರ್ಕಾರ ಯೋಚನೆ ಮಾಡುವುದಾದರೂ ಏನಿದೆ? ಒಂದು ಎಕರೆಗೆ ಎಷ್ಟು ಖರ್ಚು ಬರುತ್ತ ದೆಂಬುದನ್ನು ಮೊದಲೇ ಲೆಕ್ಕಾಚಾರ ಮಾಡಲಾಗುತ್ತದೆ. ಒಂದು ಪರಿಮಿತಿಯಲ್ಲಿ ಖರ್ಚಾಗುವುದಾದರೆ ಮಾತ್ರ ಅಂತಹ ಕೆಲಸವನ್ನು ತೆಗೆದುಕೊಳ್ಳಬಹುದೆಂದು ಸರ್ಕಾರಕ್ಕೆ ಮೊದಲೇ ಶಿಫಾರಸ್ ಮಾಡುತ್ತಾರೆ. ಇದರ ಒಂದ ಆಧಾರದ ಮೇಲೆ ಎಸ್ಟಿಮೇಟ್ ಸಹ ತಯಾರು ಮಾಡುತ್ತಾರೆ. ಇಂತಹ ಕೆಲಸಗಳಿಗೆ ಆರ್ಥಿಕ ಇಲಾಖೆಯವರು ಮಂಜೂರಾತಿ ಕೊಡುತ್ತಾರೆಯೇ ಹೊರತು ಹೊಸದಾಗಿ ಮತ್ತೇನನ್ನೂ ನೋಡುವುದಿಲ್ಲ, ಪ್ರೀ-ಬಡ್ಜೆಟ್ ಸ್ಕ್ರೂಟಿನಿ ಮಾಡುವಂತಹ ಪ್ರಶ್ನೆ ಮುಖ್ಯವಲ್ಲ. Technical norms, technical fessibility, financial fessibility ಏನಿದೆ ಎಂಬುದನ್ನು ನೋಡ ಬೇಕಾಗುತ್ತದೆ. ಇದೆಲ್ಲಾ ಸರಿಯಾಗಿದ್ದರೆ ಮಾತ್ರ ಸರ್ಕಾರಕ್ಕೆ ಶಿಫಾರಸ್ ಮಾಡುತ್ತಾರೆ ಇಲ್ಲದಿದ್ದರೆ ಮಾಡುವುದಿಲ್ಲ. ಅವರು ಶಿಫಾರಸ್ ಮಾಡದೆ ತಾವು ಯಾವ ಕೆಲಸವನ್ನೂ ತೆಗೆದುಕೊಳ್ಳುವುದಕ್ಕಾಗು ವುದಿಲ್ಲ. ಆದ್ದರಿಂದ ಬಡ್ಜೆಟ್‌ನಲ್ಲಿ ತಾವು ಸಿ ಅಂಡ್ ಬಿ ಗೆ ಎಷ್ಟು ಹಣ ಇಟ್ಟಿದ್ದೀರಿ, ಅದನ್ನು ಖರ್ಚು ಮಾಡುವಂತಹ ಅಧಿಕಾರವನ್ನು ಅಡ್ಮಿನಿಸ್ಟ್ರೇಟಿವ್ ಸೆಕ್ರೆಟರಿ ಅವರಿಗೆ ಕೊಡಿ. You leave it to him. If he has got the power he can approve, if he has no power, he can send it to the Government. The Administrative Secretary at the Government level will take care of all these things. ಇದರ ಬಗ್ಗೆ ತಾವು ಯೋಚನೆ ಮಾಡಿ ಈ ರೀತಿ ಮಾಡದಿದ್ದರೆ ವೃಥಾ ಕಾಲಹರಣವಾಗುತ್ತದೆ ಮತ್ತು ಹಣದ ಖರ್ಚು ಸಹ ಜಾಸ್ತಿಯಾಗುತ್ತದೆಂದು ಹೇಳುತ್ತೇನೆ.

ಇನ್ನು ರಸ್ತೆಗಳ ಬೆಳವಣಿಗೆಯನ್ನು ಸ್ವಲ್ಪ ನೋಡೋಣ. ರಸ್ತೆಗಳ ಬಗ್ಗೆ ಮಾನ್ಯ ಮಂತ್ರಿಗಳು ಕಳೆದ ಸಲ ತಮ್ಮ ಬೇಡಿಕೆಗಳ ಮೇಲೆ ಉತ್ತರ ಕೊಡುವಾಗ ಬಹಳವಾಗಿ ಹೇಳಿದರು. ಬೆಳ್ಳಿಹಬ್ಬದ ಪ್ರಯುಕ್ತ ಹೆಚ್ಚಿನ ರಸ್ತೆ ಕೆಲಸ ತೆಗೆದುಕೊಳ್ಳುವುದಾಗಿ ಹೇಳಿದ್ದರು. ಆದರೆ ಇವರು ಕೊಟ್ಟಿರುವ ಅಂಕಿ ಅಂಶಗಳನ್ನು ನೋಡಿದಾಗ ಇವರ ಒಂದು ಪ್ರಗತಿ ಸ್ವಲ್ಪವೂ ಆಗಿಲ್ಲವೆಂದು ಹೇಳಬೇಕಾಗುತ್ತದೆ. ಈ ದಿಶೆಯಲ್ಲಿ ಸ್ವಲ್ಪವೂ ಅಲುಗಾಡಿಲ್ಲ. ಈಗ ಉದಾಹರಣೆಗೆ ನ್ಯಾಷನಲ್ ಹೈವೇ ತೆಗೆದುಕೊಂಡರೆ ೧೯೭೭ರಲ್ಲಿ ೧೯೬೮ ಕಿಲೋಮೀಟರ್ ಇದ್ದರೆ ೧೯೮೨ರಲ್ಲಿಯೂ ಅಷ್ಟೇ ಇದೆ. ಒಂದು ಇಂಚ್ ಸಹ ಮುಂದೆ ಹೋಗಿಲ್ಲ. ಅದೇ ರೀತಿ ಸ್ಟೇಟ್ ಹೈವೇಸ್‌ಗೆ ಬಂದರೆ ೧೯೮೦ರಲ್ಲಿ ೭೮೦೨ ಕಿಲೋಮೀಟರ್ ಇದ್ದರೆ ೧೯೮೧ರಲ್ಲಿ ೭೮೧೩ ಕಿಲೋಮೀಟರ್ ಆಗಿದೆ. ಅಂದರೆ ೧೧ ಕಿಲೋಮೀಟರ್ ಜಾಸ್ತಿ ಆಗಿದೆ. ಆದರೆ ೧೯೮೨ರಲ್ಲಿಯೂ ಇಷ್ಟೇ ಇದೆ. ಪ್ರಗತಿ ಏನೂ ಆಗಿಲ್ಲ. ಮೇಜರ್ ಡಿಸ್ಟ್ರಿಕ್ ರೋಡ್ಸ್‌ಗೆ ಬಂದರೆ, ೧೯೭೭ರಲ್ಲಿ ೧೯೭೭ರಿಂದ ೧೯೮೦ರವರೆಗೆ ೧೨೯೧೨ ಕಿಲೋಮೀಟರ್ ಇದ್ದರೆ ೧೯೮೧ರಲ್ಲಿ ಇದು ೧೨೯೦೧ಕ್ಕೆ ಇಳಿದಿದೆ. ಈ ರೀತಿ ಕಡಿಮೆಯಾದ ೧೧ ಕಿಲೋಮೀಟರನ್ನು ಸ್ಟೇಟ್ ಹೈವೇಗೆ ಸೇರಿಸಿ ದ್ದಾರೆ. ಇಷ್ಟು ಹೊರತು ಯಾವುದೇ ಮಾರ್ಪಾಟು ಆಗಿಲ್ಲ. ವರ್ಷಕ್ಕೆ ೨೦ ಕೋಟಿ ರೂಪಾಯಿ ಗಳನ್ನು ಮೇನ್‌ಟೆನೆನ್ಸ್ ಗ್ರಾಂಟ್ಸ್ ರೂಪದಲ್ಲಿ ಖರ್ಚು ಮಾಡುತ್ತಾರೆ. ಆದರೆ ಯಾವುದೇ ಪ್ರಗತಿ

ಯಾಗಿಲ್ಲವೆಂಬುದನ್ನು ತಾವು ಒಪ್ಪಿಕೊಳ್ಳಬೇಕು. ನ್ಯಾಷನಲ್ ಹೈವೇನಲ್ಲಿ ನಾವು ಆಲ್-ಇಂಡಿಯಾ ಆವರೇಜ್‌ಗಿಂತ ೫೦ ಪರ್ಸೆಂಟ್ ಕೆಳಗೆ ಇದ್ದೇವೆ. ಈಗ ನಮ್ಮ ರಾಜ್ಯದವರೇ ಕೇಂದ್ರದಲ್ಲಿ ಮಂತ್ರಿಗಳಾಗಿದ್ದಾರೆ. ಈ ಕಾರಣದಿಂದ ಅವರು ನಮಗೆ ಹೆಚ್ಚು ಹಣ ಕೊಟ್ಟಿದ್ದಾರೆಂದು ತಾವು ಮೊನ್ನೆ ಒಂದು ಪ್ರಶ್ನೆಗೆ ಉತ್ತರ ಕೊಡುವಾಗ ಇಲ್ಲಿ ಹೇಳಿದ್ದಿರಿ. ಆದರೆ ಇಡೀ ದೇಶದಲ್ಲಿ ೧೯ ಪರ್ಸೆಂಟ್‌ವರೆಗೆ ಬೆಳವಣಿಗೆಯಾಗಿದ್ದರೆ ನಮ್ಮ ರಾಜ್ಯದ್ದು ಕೇವಲ ೧೦ ಪರ್ಸೆಂಟ್ ಮಾತ್ರ ಬೆಳವಣಿಗೆಯಾಗಿದೆ ಎಂಬುದನ್ನು ತಾವು ಅರ್ಥಮಾಡಿಕೊಳ್ಳಬೇಕಾಗುತ್ತದೆ. ಆದ್ದರಿಂದ ಕೇಂದ್ರದಿಂದ ಹೆಚ್ಚು ಹಣ ಪಡೆಯಲು ತಾವು ಪ್ರಯತ್ನ ಮಾಡಬೇಕಾಗುತ್ತದೆ. ಇದಕ್ಕೆ ಸಂಬಂಧಪಟ್ಟ ಮಾಹಿತಿಗಳನ್ನೆಲ್ಲಾ ತಾವು ತೆಗೆದುಕೊಂಡು ದೆಹಲಿಗೆ ಹೋಗಿ ಸಂಬಂಧಪಟ್ಟವರ ಜೊತೆಯಲ್ಲಿ ತಾವು ಮಾತನಾಡಿದ್ದೇ ಆದರೆ ಅವರು ಹಣ ಸಹಾಯ ಮಾಡುವುದರಲ್ಲಿ ಹಿಂದೆ ಬೀಳುವುದಿಲ್ಲ. ಆದ್ದರಿಂದ ಇದು ತಮ್ಮ ಮೇಲೆ ಬಿದ್ದಿರುವ ಭಾರ ಎಂದು ಹೇಳುತ್ತೇನೆ. ನಮ್ಮ ಕರ್ನಾಟಕ ರಾಜ್ಯದ ರಸ್ತೆಗಳ ಬಗ್ಗೆ ಇಲ್ಲಿ ಕೆಲವೊಂದು ಅಂಕಿಅಂಶಗಳನ್ನು ಕೊಟ್ಟಿದ್ದೀರಿ. ಈ ಅಂಕಿಅಂಶಗಳನ್ನು ಆಲ್ ಇಂಡಿಯಾ ಆವರೇಜ್‌ಗೆ ಹೋಲಿಸಿ ನೋಡುವುದಾದರೆ ನಾವು ಹತ್ತನೇ ಸ್ಥಾನದಲ್ಲಿದ್ದೇವೆ. ಇದು ನಮ್ಮ ಹಣೆಬರಹವೆಂದು ಹೇಳಬಹುದು. ಇಲ್ಲಿ ೧೨೪ನೇ ಪೇಜ್‌ನಲ್ಲಿ ವಿವರಗಳನ್ನು ಇದರ ಬಗ್ಗೆ ಕೊಟ್ಟಿದ್ದೀರಿ. ಈ ವಿವರಗಳನ್ನು ಇಡೀ ರಾಷ್ಟ್ರದ ಒಂದು ಹಿನ್ನೆಲೆಯಲ್ಲಿ ಪರಿಶೀಲನೆ ಮಾಡುವುದಾದರೆ, ಕೇರಳದ್ದು ೨೩೨ ಆದರೆ ಕರ್ನಾಟಕದ್ದು ೫೫. ನಾನು ಎಲ್ಲಾ ಅಂಕಿಅಂಶಗಳನ್ನು ಇಲ್ಲಿ ಹೇಳುವುದಿಲ್ಲ. ಒಟ್ಟಿನಲ್ಲಿ ನಾವು ೧೧ನೇ ಸ್ಥಾನದಲ್ಲಿದ್ದೇವೆ. ನ್ಯಾಷನಲ್ ಹೈವೇ, ಸ್ಟೇಟ್ ಹೈವೇ ಮೊದಲ್ಗೊಂಡು ಬ್ಲಾಕ್-ಟಾಪ್‌ವರೆಗೆ ನಾವು ತುಂಬಾ ಹಿಂದೆ ಇದ್ದೇವೆ ಎಂಬುದನ್ನು ತಾವು ಒಪ್ಪಿಕೊಳ್ಳಬೇಕಾಗುತ್ತದೆಂಬುದನ್ನು ಈ ಸಂದರ್ಭದಲ್ಲಿ ತಮಗೆ ತಿಳಿಸುವುದಕ್ಕೆ ಇಷ್ಟಪಡುತ್ತೇನೆ.

ಇನ್ನು ಹಣದ ಖರ್ಚಿನ ಮೇಲೆ ಹಿಡಿತ ಇಟ್ಟುಕೊಳ್ಳಲಾಗಿದೆ ಎಂದು ಮಾನ್ಯ ಮಂತ್ರಿಗಳು ಹೇಳುತ್ತಾರೆ. ಕಳೆದ ವರ್ಷ ರಜತ ಮಹೋತ್ಸವವನ್ನು ಆಚರಿಸುವ ಸಂದರ್ಭದಲ್ಲಿ ಸರ್ಕಾರದವರು ರಾಜ್ಯದಲ್ಲಿರುವ ಎಲ್ಲ ಸರ್ಕಾರದ ಕಟ್ಟಡಗಳಿಗೂ ಸುಣ್ಣಬಣ್ಣ ಮಾಡಿಸಿದರು. ಇದಕ್ಕೆ ಸಂಬಂಧಪಟ್ಟಂತೆ ಇನ್ನೂ ಎಷ್ಟು ಪೇಮೆಂಟ್ ಆಗಬೇಕಾಗಿದೆ ಎಂಬುದನ್ನು ತಾವು ತಿಳಿಸಬೇಕು. ಅದೇ ರೀತಿ ಮಹಾಮಸ್ತಕಾಭಿಷೇಕಕ್ಕೆ ಸಂಬಂಧಪಟ್ಟಂತೆ ಎಷ್ಟು ಹಣ ಖರ್ಚು ಮಾಡಿದಿರಿ ಮತ್ತು ಇನ್ನೂ ಎಷ್ಟು ಪೇಮೆಂಟ್ ಮಾಡಬೇಕಾಗಿದೆ ಎಂಬುದನ್ನು ತಾವು ತಿಳಿಸಬೇಕು. ಏಕೆಂದರೆ, ಈ ಕೆಲಸಗಳನ್ನು ಮಾಡಿದ ಕಂಟ್ರಾಕ್ಟರ್‌ಗಳು ಏನಾದರು ಬೋಗಸ್ ಬಿಲ್‌ಗಳನ್ನು ಕೊಟ್ಟಿದ್ದರೆ ಪರವಾಗಿಲ್ಲ, ಆದರೆ ಪ್ರಾಮಾಣಿಕವಾಗಿಯೂ ಕೆಲಸ ಮಾಡಿದ್ದರೆ ಮತ್ತು ಅದಕ್ಕೆ ತಾವು ಹಣ ಕೊಡದಿದ್ದರೆ ಅವರು ನೇಣುಹಾಕಿಕೊಳ್ಳಬೇಕಾಗುತ್ತದೆ ತಾವು ಒಂದು ಸಲ ಕೆಲಸ ಮಾಡಿಸಿದ ಮೇಲೆ ಹಣ ಕೊಡಬೇಕು. ಇಲ್ಲದಿದ್ದರೆ ಕೆಲಸವನ್ನೇ ಮಾಡಿಸಬಾರದು. ಕೆಲವು ಕೇಸ್‌ಗಳಲ್ಲಿ ತಾವು ಒಂದೂವರೆ ವರ್ಷಗಳಾದ ಮೇಲೂ ಹಣವನ್ನು ಪಾವತಿ ಮಾಡಿಲ್ಲ. ಇಂತಹ ಸಂದರ್ಭಗಳಲ್ಲಿ ಕಂಟ್ರಾಕ್ಟರ್‌ಗಳ ಪರಿಸ್ಥಿತಿ ಏನಾಗಬೇಕು? ಇದನ್ನೆಲ್ಲಾ ನೋಡಿದರೆ ಇವರ ಒಂದು ಆರ್ಥಿಕ ವ್ಯವಸ್ಥೆ ಸರಿಯಾಗಿಲ್ಲವೆಂದು ನಾವು ಅರ್ಥ ಮಾಡಿಕೊಳ್ಳಬೇಕಾಗುತ್ತದೆ. ಈ ಎರಡು ವಿಷಯಗಳಿಗೆ ಸಂಬಂಧಪಟ್ಟಂತೆ ಒಟ್ಟು ಎಷ್ಟು ಬಾಕಿ ಇದೆ ಎಂಬುದನ್ನು ತಾವು ನಾಳೆ ಉತ್ತರ ಕೊಡುವಾಗ ತಿಳಿಸಬೇಕೆಂದು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಇನ್ನು ಇಲಾಖೆಯಲ್ಲಿ ಇರತಕ್ಕಂಥ ಕೆಲವು ದೋಷಗಳ ಬಗ್ಗೆ ನಾವುಅಡ್ಮಿನಿಸ್ಟ್ರೇಷನ್‌ಗೆ ಅನುಗುಣವಾಗಿ ಕೆಲವು ವಿಷಯಗಳನ್ನು ಹೇಳಬೇಕಾಗಿದೆ.ನಿಮ್ಮ ಮೇಲೆ ಪಾದ ಪ್ರಾರಂಭವಾಯಿತು. ಅದು ಏನೆಂದರೆ ಮಾನ್ಯ ಜೀವರಾಜಆಳ್ವರವರು ಒಂದು ಸಮಾಜಕ್ಕೆ ವಿರುದ್ಧವಾಗಿದ್ದಾರೆ ಎನ್ನುವ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಕ್ಕೆ ತಾವು ಪ್ರಾಮಾಣಿಕವಾಗಿ ಹೇಳಲಿಲ್ಲ ಎನ್ನುವ ಮಾತನ್ನು ಹೇಳಿದ್ದೀರಿ. ಚರ್ಚೆ ಅಲ್ಲಿಗೆ ಮುಕ್ತಾಯವಾಯಿತು. ಒಂದೇ ಒಂದು ವಿನಂತಿ ಮಾಡಿಕೊಳ್ಳುವುದೇನೆಂದರೆ ತಮ್ಮ ಮುಖಾಂತರ ಮಾನ್ಯ ಸಚಿವರನ್ನು, ನಾನು ಯಾರನ್ನು ವ್ಯಕ್ತಿಗತವಾಗಿ ಟೀಕೆ ಮಾಡಲಿಕ್ಕೆ ಹೋಗುವುದಿಲ್ಲ ಇಪ್ಪತ್ತು ವರ್ಷಗಳ ಕಾಲ ಈ ಸದನದಲ್ಲಿ ಕೆಲಸ ಮಾಡತಕ್ಕಂಥಕಾಲದಲ್ಲಿ ನನಗೆ ಆದ ಅನುಭವದ ಪ್ರಕಾರ ಯಾವ ವ್ಯಕ್ತಿಯ ಮೇಲೂಆರೋಪ ಮಾಡತಕ್ಕಂಥದ್ದು ಸಾರ್ವಜನಿಕವಾಗಿಲಾಭವಿಲ್ಲವೆನ್ನುವುದು ನನಗೆ ಗೊತ್ತಿದೆ. ವಿಷಯದ ಒಂದು ತೀವ್ರತೆ ವಿಷಯದ ಒಂದು ಸ್ವರೂಪ ತೀವ್ರತರವಾಗಿರುವುದರಿಂದಮತ್ತು ಗಹನವಾಗಿರುವುದರಿಂದ ಇಲಾಖೆಯ ಪೂರ್ಣ ಜವಾಬ್ದಾರಿಯನ್ನು ತಾವು ಹೊತ್ತುಕೊಳ್ಳಬೇಕಾಗುತ್ತದೆ. ತಾವು ಪ್ರಮೋಷನ್ ಪೋಸ್ಟಿಂಗ್ಸ್, ಟ್ರಾನ್ಸ್‌ಫರ್ ಮತ್ತು ಡಿಸಿಪ್ಲಿನರಿ ಆಕ್ಷನ್ ಇವೆಲ್ಲ ಇಲಾಖೆಯಲ್ಲಿ ಕಾರ್ಯನಿರ್ವಹಣೆ-

ಮಾಡತಕ್ಕಂಥಕಾಲದಲ್ಲಿ ಮಾನ್ಯ ಮುಖ್ಯ ಮಂತ್ರಿಗಳ ಹತ್ತಿರ ನಿರ್ಣಯವನ್ನು ತೆಗೆದುಕೊಳ್ಳಬೇಕಾಗುತ ದೆ ಈ ರೀತಿ ನಿರ್ಣಯವನ್ನು ತೆಗೆದುಕೊಳ್ಳುತಕ್ಕಂಥಕಾಲದಲ್ಲಿ ಯಾವ ಆಧಾರದ ಮೇಲೆ ತೆಗೆದುಕೊಳ್ಳು ತ್ತೀರೊ ಅದು ತಮಗೆ ಬಿಟ್ಟಿದ್ದು. ಜನತಂತ್ರ ವ್ಯವಸ್ಥೆಯಲ್ಲಿ ಇದೆಲ್ಲ ಇರಬೇಕಾಗುತ್ತದೆ. ಏತಕೆಂದರೆ ತಮ್ಮನ್ನು ನಾನು, ಬಹಳ ಹತ್ತಿರದಿಂದ ನೋಡಿದ್ದೇನೆ ನಾನು ನಿಮ್ಮ ಜೊತೆಯಲ್ಲಿಯೇ ಕೂತು ಕೆಲಸ ಮಾಡಿದ್ದೇನೆ. ನಮ್ಮ ಸ್ನೇಹಿತರಾದ ಮಾನ್ಯ ಹನುಮೇಗೌಡರು ತಂದಂಥ ಖಾಸಗಿ ನಿರ್ಣಯ ಜಾತಿ ಆಧಾರದ ಮೇಲೆ ಜನಗಣತಿ ಮಾಡಬೇಕೆಂದು ೧೯೭೩-೭೪ರಲ್ಲಿಯೇ ಈ ಸದನದಲ್ಲಿ ಚರ್ಚೆ ಯಾಯಿತು, ಮಾನ್ಯ ತಿಮ್ಮಪ್ಪನವರು ಈ ಸದನದಲ್ಲಿ ಪಬ್ಲಿಕ್ ಆಗಿ ಉಲ್ಲೇಖನ ಮಾಡಬೇಕು, ರಾಷ್ಟ್ರದ ಪಂಚವಾರ್ಷಿಕ ಯೋಜನೆಗಾಗಿ ಒಟ್ಟು ವೆಚ್ಚ ಏನಾಗಿದೆ ಅದರ ಹಿನ್ನೆಲೆಯಲ್ಲಿ ಅದರ ಪೂರ್ಣ ಲಾಭಯಾರು ಯಾರು ತೆಗೆದುಕೊಂಡಿದ್ದಾರೆ. ಈ ರಾಜ್ಯದಲ್ಲಿ ಒಟ್ಟು ವೆಚ್ಚ ಮಾಡಿರತಕ್ಕಂಥ ಹಣ ಅದರ ಪೂರ್ಣ ಲಾಭ ಯಾವ ಸಮಾಜ ತೆಗೆದುಕೊಂಡಿದ್ದಾರೆಂಬುದಕ್ಕೆ ಅವರು ಹೇಳಿದರು ಅದು ಕೇವಲ ಮೇಲ್ ಜಾತಿ ಬ್ರಾಹ್ಮಣರ, ಒಕ್ಕಲಿಗರು ಹೆಚ್ಚಿಗೆ ತೆಗೆದುಕೊಂಡಿದ್ದಾರೆ ಎನ್ನುವ ಮಾತನ್ನು ತಾವು ಹೇಳಿದ್ದೀರಿ. ಇದು ತಮ್ಮ ಪ್ರಾಮಾಣಿಕ ಅನಿಸಿಕೆ ಇರಬಹುದು. ಆದರಬಗ್ಗೆ ಈ ರೀತಿಯಾಗಿ ಅಭಿಪ್ರಾಯ ಹೊಂದಿರುವುದಕ್ಕೆ ನಾನು ಬೇಸರಪಡುವುದಿಲ್ಲ. ಒಕ್ಕಲಿಗರೇ ತುಂಬಿದ್ದಾರೆಯೇ ಎನ್ನುವುದು ನನ್ನವಾದ ೧೯೭೪ನೇ ಏಪ್ರಿಲ್ ತಿಂಗಳಲ್ಲಿ ಹೇಳಿದ್ದೀರಿ, ತಮ್ಮ ಮನಸ್ಸಿನಲ್ಲಿ ಯಾವುದೇ ಒಂದು ಸಮಾಜ ಉಪೇಕ್ಷಿತ ವಾಗಿದೆ, ಯಾವುದೇ ಒಂದು ಸಮಾಜ ತುಳಿತಕ್ಕೆ ಒಳಪಟ್ಟಿದೆ ಅದನು ಎತ್ತಿಹಿಡಿಯಬೇಕು ಎನ್ನುವ ತೀರ್ಮಾನಕ್ಕೆ ತಾವು ಬಂದಿದ್ದರೆ ಅದಕ್ಕೆ ಒಂದು ಮಾತನ್ನು ತಮಗೆ ಹೇಳಲಿಕ್ಕೆ ಇಚ್ಛೆಪಡುತ್ತೇನೆ. ಹಾಗೆ ಮಾಡತಕ್ಕಂಥ ಕಾಲದಲ್ಲಿ ಬೇರೆ ಎಲ್ಲಾ ಜಾತಿಗಳವರನ್ನು ಒಂದು ಸಮನ್ವಯದೃಷ್ಟಿಯಿಂದ ಮಾಡಬೇಕೆಂದು ಹೇಳುತ್ತೇನೆ. ಇಷ್ಟುಮಾತ್ರ ಹೇಳುವುದಕ್ಕೆ ಇಚ್ಛೆ ಪಟ್ಟು ತಮ್ಮ ಇಲಾಖೆಗಳ ಮುಖಾಂತರ ಒಂದು ಪ್ರೋಫಾರ್ಮ ಕಳುಹಿಸಿಕೊಟ್ಟಿದ್ದೀರಿ. ನಿಮ್ಮ ಇಲಾಖೆಯ ಮುಖಾಂತರ ಪ್ರೋಫಾರ್ಮ ಹೋಗಿರುವ ಬಗ್ಗೆ ಬಹುಶಃ ನಾವು ಏನಾದರೂ ಹೇಳಿದ್ದರೆ ಅದು ತಪ್ಪಾಗ ಬಹುದು. further arguments advanceಮಾಡುವುದುಬೇಡ. ಜಾತಿಯ ಆಧಾರದಮೇಲೆ ಅಧಿಕಾರಿಯ ಪರ್ಟಿಕ್ಯುಲರ್ ಕೇಳಿದ್ದೀರಿ, ಅಧಿಕಾರಿಯ ಹೆಸರು, ಅವನ ಕ್ವಾಲಿಫಿಕೇಶನ್, ಅವನ ಜಾತಿ ಅವನ ಹುಟ್ಟಿದ ತಾರೀಖು ಸರ್ವೀಸ್‌ಗೆ ಎಂಟ್ರಿ ಆದದ್ದು, ಯಾವ ಯಾವ ಕೆಲಸಗಳನ್ನು ಯಾವ ಯಾವ ಸಂಸ್ಥೆಗಳಲ್ಲಿ ಮಾಡಿದ್ದಾರೆ, ಯಾವ ಯಾವ ಸ್ಥಳಗಲ್ಲಿ ಎಷ್ಟೆಷ್ಟು ವರ್ಷ ಕೆಲಸ ಮಾಡಿದ್ದಾರೆ ಇದೆಲ್ಲ ವನ್ನೂ ಕೇಳಿದ್ದೀರಿ. ಬಹುಶಃ ನನಗೆ ರಾತ್ರಿಗೊತ್ತಿರುವ ಹಾಗೆ ಜಾತಿಯ ಆಧಾರದಮೇಲೆ ವರಧಿ ತರಿಸಿಕೊಳ್ಳತಕ್ಕಂಥದ್ದು ಏನು ಇದೆ ಇದು ಪ್ರಥಮ ಪ್ರಯತ್ನವಾಗಿರುತ್ತದೆ. ಏನಾದರೂ ಬೇರೆ ಬೇರೆ ಇಲಾಖೆಗಳಲ್ಲಿ ಇದ್ದಗೆ ಅದನ್ನು ಮಾನ್ಯ ಸಚಿವರೇ ಹೇಳಲಿ, ಏತಕ್ಕೆಂದರೆ ಮುಂದೆ ಚರ್ಚೆ ಮಾಡ ಬೇಕಾಗಿದೆ. This is the first time that this type of proforma circular has been issued to all the Subordinate Officers.

ನಮಗೆ ಗೊತ್ತಿಲ್ಲ ಬೇರೆ ಕಡೆ ಏನಾದರೂ ಇದ್ದರೆ ಹೇಳಲಿ. ಹೀಗೆ ಕೊಟ್ಟಿರುವುದರ ಹಿನ್ನೆಲೆ ಸಾದು ವಾದುದು ಎಂದು ತಿಳಿದುಕೊಂಡು ಹೈಪೋತೆಟಿಕಲ್‌ವಾದ ಮಾಡುತ್ತೇನೆ. ಕೆಲವು ವರ್ಗಗಳಿಗೆ ಆಡಳಿತ ವ್ಯವಸ್ಥೆಯಲ್ಲಿ ಕೆಲವು ಕಾಲದಿಂದ ಮೀಸಲಾಗಿತ್ತು ಎನ್ನುವ ಅಭಿಪ್ರಾಯ ಏನು ಇತ್ತು ಗುತ್ತೇದಾರಿ ಯಾಗಿತ್ತು ಎನ್ನುವ ಪ್ರಾಮಾಣಿಕ ಅನಿಸಿಕೆ ಸರ್ಕಾರದಲ್ಲಿ ಇದ್ದರೂ, Only you should try to discriminate between ‘a’ and ‘b’ Iam not bothered. ಒಂದು ವೇಳೆ ಸರ್ಕಾರದ ಅಭಿಪ್ರಾಯ ಹಾಗೆ ಇದೆ ಎಂದು ಇಟ್ಟುಕೊಳ್ಳೋಣ. ಸ್ವಾಮಿ ಈವತ್ತು ತಾವು ಪ್ರೊಫಾರ್ಮ ಇನ್‌ಫರ್‌ಮೇಷನ್ ತರಿಸಿದ್ದರೆ ಸಭೆಯ ಮುಂದೆ ವರದಿ ಕೊಡುತ್ತೀರಾ ? ಈ ರಾಜ್ಯದಲ್ಲಿ ಯಾವ ಯಾವ ಜಾತಿಗೆ ಸಂಬಂಧಪಟ್ಟ ಅಧಿಕಾರಿಗಳು ಎಷ್ಟೆಷ್ಟು ದಿವಸಗಳಿಂದ ನಿಮ್ಮ ಇಲಾಖೆಯಲ್ಲಿ, ಅಂದರೆ ಬಿ.ಡಿ.ಎ ನಿಮ್ಮ ಇಲಾಖೆಗಳ ಸಂಬಂಧಪಟ್ಟಂತೆ ಒಟ್ಟು ಪೋಸ್ಟ್ಸ್ ಚೀಫ್ ಇಂಜಿನಿಯರ್ಸ್ ಸೂಪರಿಂಟೆಂಡಿಂಗ್ ಇಂಜಿನಿಯರ್ಸ್ ಅಸಿಸ್ಟೆಂಟ್ ಇಂಜಿನಿಯರ್ಸ್, ಅಸಿಸ್ಟೆಂಟ್ ಎಕ್ಸಿಕ್ಯುಟೀವ್ ಇಂಜಿನಿಯರ್ಸ್, ಜೂನಿಯರ್ ಇಂಜಿನಿಯರ್ಸ್, ಡ್ರಾಫ್ಟ್‌ಮೆನ್ಸ್ ಇವೆಲ್ಲವನು ಪಟ್ಟಿಮಾಡಬೇಕು ಒಂದುವೇಳೆ ೧೮ ಪರ್ಸೆಂಟ್ ಕೊಟ ಈವತ್ತು ಮಾನ್ಯ ಹಾವನೂರ್ ಕಮೀಷನ್ ವರದಿಯ ಆಧಾರದ ಮೇಲೆ ಬ್ಯಾಕವರ್ಡ್‌ಕ್ಲಾಸ್‌ಗೆ ಕೊಡತಕ್ಕಂಥದ್ದು ಏನು ಸವಲತ್ತುಗಳು ಇವೆ ಅದು ಹಿಂದೆ ಬಿದ್ದಿದ್ದರೆ ಈ ಸದನದಲ್ಲಿ ಅದು ಕೂಡ ಒಂದು ಅಭಿಪ್ರಾಯವನ್ನು ಸಭೆಯಮುಂದೆ ಮಂಡಿಸ

ಬೇಕು. ಬ್ಯಾಕಲಾಗ್ ತುಂಬುವವರೆಗೆ ಯಾರು ಓವರ್ ವೈಟೇಜಿ ತೆಗೆದುಕೊಂಡಿದ್ದಾರೆ, ಯಾವ ಸಮಾಜದವರನ್ನು ನೇಮಕಾತಿ ಮಾಡತಕ್ಕಂಥ ಕಾಲದಲ್ಲಿ ತಡೆ ಹಿಡಿದಿದ್ದಾರೆ ಅದನ್ನೂ ಕೂಡ ಪ್ರಾಮಾಣಿಕವಾಗಿ ತಾವು ಉತ್ತರಕೊಡುವಾಗ ಹೇಳಬೇಕು. ಏತಕ್ಕೆಂದರೆ ಈವತ್ತು ಅತಾರೇಟಿಟೀವ್ ಇನ್‌ಫರ್‌ಮೇಷನ್ ತರಿಸಿದ್ದೀರಿ. ಜಾತೀಯ ಆಧಾರದಮೇಲೆ ಯಾವ ಯಾವ ಜಾತಿಯವರು ಎಷ್ಟೆಷ್ಟು ಇದ್ದಾರೆ ಎನ್ನುವ ಮಾಹಿತಿಯನ್ನು ತರಿಸಿಕೊಂಡಿದ್ದೀರಿ. ಅದು ಸರಿಯೋ ತಪ್ಪೊ ಅದರ ಬಗ್ಗೆ ವಾದ ಮಾಡುವುದಕ್ಕೆ ಹೋಗುವುದಿಲ್ಲ. ಈ ಸದನಕ್ಕೆ ಲಿಂಗಾಯತರು, ಒಕ್ಕಲಿಗರು ಬ್ರಾಹ್ಮಣರು ಷೆಡ್ಯೂಲ್‌ಕ್ಯಾಸ್ಟ್ ಷೆಡ್ಯೂಲ್‌ಟ್ರೈಬ್ಸ್, ಈಡಿಗರು ಎಷ್ಟು ಜನ ಇದ್ದಾರೆಂಬುದರ ಬಗ್ಗೆ ಅಂಕಿಅಂಶಗಳನ್ನು ಈ ಸದನದ ಮುಂದೆ ಇಡಬೇಕೆಂದು ಹೇಳುತ್ತೇನೆ. ತಾವು ಕೊಟ್ಟಿರತಕ್ಕಂಥ ಸರ್‌ಕ್ಯುಲರ್ ಹಿನ್ನೆಲಿಯ ಬಗ್ಗೆ ಉತ್ತರ ಕೊಡಬೇಕೆಂದು ಅಪೇಕ್ಷೆಪಡುತ್ತೇನೆ. ಒಂದು ವೇಳೆ ಎಕ್ಸಿಕ್ಯುಟೀವ್ ಇಂಜಿನೀಯರ್, ಷೆಡ್ಯೂಲ್ ಕ್ಯಾಸ್ಟ್, ಬ್ಯಾಕ್‌ವರ್ಡ್ ಕ್ಲಾಸ್ ಎಷ್ಟು ಹಿಂದೆ ಬಿದ್ದಿದ್ದಾರೆ, ಸೂಪರಿಂಟೆಂಡೇಟ್ ಇಂಜಿನೀಯರ್ ಪೋಸ್ಟ್‌ಗಳಲ್ಲಿ ಕಡಿಮೆ ಇದ್ದರೆ, ಈ ಸದನದಲ್ಲಿ ಅದರ ಬಗ್ಗೆಯೂ ಹೇಳಬೇಕು, ಮತ್ತು ಪ್ರಮೋಷನಲ್ ಕೋಟಾ ಕೊಡಬೇಕಾಗಿದ್ದರೆ ಅದರಲ್ಲಿ ನಮ್ಮ ಅಭ್ಯಂತರವೇನೂ ಇಲ್ಲ ಇದೇ ವಿಷಯದ ಬಗ್ಗೆ ವಿರೋದ ಪಕ್ಷದವರಾದ ಶ್ರೀಮಾನ್ ಬೊಮ್ಮಾಯಿಯವರು ಶ್ರೀಮಾನ್ ದೇವರಾಜ ಅರಸ್‌ರವರೂ ಕೂಡ ವೆಲ್‌ಕಮ್ ಮಾಡಿದ್ದಾರೆ. ಆಯಾ ಹುದ್ದೆಗಳಲ್ಲಿ ಎಲ್ಲಿ ಕಡಿಮೆ ಇದೆ ಅಂಥ ಕಡೆ ಬರ್ತಿಮಾಡುವುದಕ್ಕೆ ಹೇಳಿರುತ್ತಾರೆ. ಅದನ್ನು ಮಾಡಿದರೆ ಜಾತಿಯ ಕೂಗು ನಿಲುತ್ತದೆ ಎಂಬುದು ನಮ್ಮ ಅಭಿಪ್ರಾಯವಾಗಿರುತ್ತದೆ. ಆದ್ದರಿಂದ ದಯವಿಟ್ಟು ಎಲ್ಲ ವಿವರಗಳನ್ನು ಸಭೆಯ ಮುಂದೆ ಇಡಬೇಕೆಂದು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ Posting is the prerogative right of the Government. We cannot ask posting of 'a' Officer to 'a' place or 'b' place. We are granting sums to the department. After this House votes, ಆದರೆ ಖರ್ಚು ಹೇಗೆ ಆಯಿತು ಎನ್ನುವುದನ್ನು ನೋಡುವುದಕ್ಕೆ ನಮಗೆ ಅಧಿಕಾರವಿದೆ. ಅದನ್ನು ಖರ್ಚು ಮಾಡುವುದಕ್ಕೆ 'ಎ' ಇಂಜಿನಿಯರ್ ಇಟ್ಟುಕೊಳ್ಳಿ, 'ಬಿ' ಜಾತಿಯವರನ್ನೇ ಇಟ್ಟುಕೊಳ್ಳಿ, ಅದಕ್ಕೂ ನಮಗೂ ಸಂಬಂಧವಿಲ್ಲ. ಅವರನ್ನು ಇಟ್ಟುಕೊಳ್ಳಿ, ಇವರನ್ನು ಇಟ್ಟುಕೊಳ್ಳಿ ಎಂದು ಈ ಸದನದಲ್ಲಿ ಆಫಿಷಿಯಲ್ ಆಗಿ ಹೇಳುವುದಕ್ಕೂ ಅಧಿಕಾರವಿಲ್ಲ. Posting and to keep the person incharge of 'A' Divison or 'B' Division or 'B' Zone is purely the prerogative right of the Government. We have no voice. But while doing it, you cannot adopt double standard. There cannot be a matter of prerogative right of the Government. I wanted to make it very clear on that issue. ಸ್ವಾಮಿ ಎಸ್ಟಾಬ್ಲಿಷ್‌ಮೆಂಟ್ ಬಗ್ಗೆ ಪ್ರಮೋಷನ್ ಲಿಸ್ಟ್ ಮಾಡುತ್ತೇವೆಂದು ಹೇಳಿರುತ್ತೀರಿ. ಪ್ರಮೋಷನ್ ಲಿಸ್ಟ್ ಮಾಡುವಾಗ ಇತ್ತೀಚೆಗೆ ಕೆಲವು ನಾರಮ್ಸ್ ಕೂಡ ಹಾಕ್ಕಿದ್ದೀರಿ. ಬ್ಯಾಕ್‌ಲಾಗ್ ಅಪಾಯಿಂಟ್‌ಮೆಂಟ್ ಕೊಡುವ ಸಲುವಾಗಿ ಎಸ್‌ಸಿ, ಎಸ್‌ಟಿಯವರಿಗೆ ಮೂರು ವರ್ಷಗಳಾಗಿದ್ದರೂ ಕೂಡ ಅಸ್ಟೆಂಟ್ ಇಂಜಿನಿಯರ್ ಇಂದ ಎಕ್ಸಿಕ್ಯುಟೀವ್ ಇಂಜಿನೀಯರ್ ಪೋಸ್ಟ್‌ಗೆ ಪ್ರಮೋಷನ್ ಕೊಡಬೇಕೆಂದು ಹೇಳಿದ್ದೀರಿ. To fill up the quota, t is done, 1 have no objection.

೧೧-೩೦ ಎ.ಎಂ.

ಪ್ರಮೋಷನ್ ಮಾಡುವಾಗ ನಿಮ್ಮ ಹತ್ತಿರ ಪ್ರಮೋಷನ್ ಲಿಸ್ಟ್ ಇದೆಯೋ ? ಅದು ಇಲ್ಲ. ಯುದ್ಧ ಕಾಲದಲ್ಲಿ ಶಸ್ತ್ರಾಭ್ಯಾಸ ನಡೆಸತಕ್ಕ ಕೆಲಸ ಮಾಡಿದ್ದಾರೆ. ಅದರ ಪರಿಣಾಮ ಏನಾಗಿದೆ ಅಂದರೆ ಎಳೆಂಟು ತಿಂಗಳು ಎಲ್ಲವನ್ನು ಇನ್‌ಚಾರ್ಜ್ ಅರೇಂಜ್‌ಮೆಂಟ್ ಮಾಡಿಕೊಂಡು ಬಂದಿದ್ದಾರೆ. ಅಸಿಸ್ಟೆಂಟ್ ಎಕ್ಸಿಕ್ಯೂಟಿವ್ ಇಂಜಿನೀಯರರ್, ಎಕ್ಸಿಕ್ಯೂಟೀವ್ ಇಂಜಿನೀಯರ್ ಆಗಿಕೆಲಸ ಮಾಡುತ್ತಾರೆ. ಅದೇರೀತಿ ಎಕ್ಸಿಕ್ಯೂಟಿವ್ ಇಂಜಿನೀಯರ್, ಸೂಪರ್‌ಇನ್‌ಟೆಂಡಿಂಗ್ ಇಂಜಿನೀಯರರ್ ಆಗಿ ಇನ್‌ಛಾರ್ಜ್ ಮಾಡಿದ್ದಾರೆ. ಎಕ್ಸಿಕ್ಯೂಟಿವ್ ಇಂಜಿನೀಯರ್ ಆಗಿ ಪ್ರಮೋಷನಲ್ ಬಿಲ್‌ಗಳನ್ನು ಕಳುಹಿಸಿದರೆ ಸೂಪರ್ ಇನ್‌ಟೆಂಡಿಂಗ್ ಇಂಜಿನೀಯರ್ ಇನ್‌ಚಾರ್ಜ್ ಇರುವುದರಿಂದ ಬಿಲ್ ಮಾಡುತ್ತಾರೆ. ಅವರೇ ಪಾಸು ಮಾಡಿಕೊಳ್ಳುತ್ತಾರೆ. ಇಂತಹ ಬೇಕಾದಷ್ಟು ಉದಾಹರಣೆಗಳಿವೆ.

ಶ್ರೀ ಎಸ್. ಆರ್. ಬೊಮ್ಮಾಯಿ.— ನಮ್ಮ ಜಿಲ್ಲೆಯ ಸೂಪರಿಂಟೆಂಡಿಂಗ್ ಇಂಜಿನೀಯರ್ ಪೋಸ್ಟ್ ೮ ತಿಂಗಳಿಂದ ಇನ್‌ಛಾರ್ಜ್‌ನಲ್ಲಿದೆ.

ಶ್ರೀ ಕಾಗೋಡು ತಿಮ್ಮಪ್ಪ.—ಮಾನ್ಯ ದೇವೇಗೌಡರು ಎಲ್ಲೆಲ್ಲಿ ಇದೆ ದಯಮಾಡಿ ನನಗೆ ಪಟ್ಟಿ ಕೊಡಿ.

ಶ್ರೀ ದೇವೇಗೌಡ.—ಅದರ ಬಗ್ಗೆ ಪಟ್ಟಿ ಕೊಡಬೇಕಾದರೆ ಜಾಸ್ತಿಯಾಗುತ್ತದೆ. ಅವರುಗಳ ಹೆಸರು ಹೇಳುವುದರಿಂದ ಜಾತೀಯತೆ ಪ್ರಶ್ನೆ ಬರುವುದರಿಂದ ಹೆಸರು ಹೇಳುವುದಕ್ಕೆ ಹೋಗುವುದಿಲ್ಲ. ನಿಮ್ಮ ಸಿನಿಯಾರಿಟಿ ಲಿಸ್ಟ್ ಎಷ್ಟು ಸಾರಿ ಮಾರ್ಪಾಡಾಗುತ್ತದೆ ? ಇದಕ್ಕೆ ಇತಿಮಿತಿ ಇದೆಯೋ ? ಇವತ್ತು ಒಂದು ವರ್ಕಿಂಗ್ ಲಿಸ್ಟ್ ಅಡ್‌ಹಾಕ್ ಲಿಸ್ಟ್ ಆಗುತ್ತದೆ. ಈ ರೀತಿ ಬದಲಾವಣೆ ಮಾಡುವುದು ಅನಾವಶ್ಯಕ. ಈ ರೀತಿ ಮಾಡುವುದರಿಂದ ಪ್ರಾಮಾಣಿಕವಾಗಿ ಕೆಲಸ ಮಾಡತಕ್ಕ ಅಧಿಕಾರಿಗಳ ಮನಸ್ಸಿನ ಮೇಲೆ ಭೀಕರವಾದ ಆಘಾತವಾಗುತ್ತದೆ. ಇದೇ ವಿಷಯದಲ್ಲಿ ಮಾನ್ಯ ಅರಸ್ಮಗಂರವರು ಸದನದಲ್ಲಿ ಕರ್ಕಶ ಧ್ವನಿಯಲ್ಲಿ ಹೇಳಿದರು. ಸ್ಪೆಷಲ್ ಕಾನ್ಫಿಡೆನ್ಸಿಯಲ್ ರಿಪೋರ್ಟ್ ಬರೆಯುವಾಗ ನಾನು ಹೆಸರು ತೆಗೆದು ವಾದ ಮಾಡಲಿಕ್ಕೆ ಹೋದರೆ ಜಾತೀಯತೆಯ ಘರ್ಷಣೆ ಬರುತ್ತದೆ. ಆದ್ದರಿಂದ ಅದನ್ನು ತಡೆಗಟ್ಟುವುದು ಸೂಕ್ತ. ಅಲ್ಲಿ ತೆಗೆದುಕೊಳ್ಳತಕ್ಕ ನಿರ್ಣಯಗಳು ಆ ಒಂದು ಪದ್ಧತಿ. ಅದಕ್ಕೆ ಅವಕಾಶವಾಗಬಾರದು. ತಾವು ಎಲ್ಲರ ಹಿತದೃಷ್ಟಿಯಿಂದ ಕೆಲಸ ಮಾಡಬೇಕಾಗುತ್ತದೆ. I donot think you are representing a section of the people ಅದು ಸಾಧ್ಯವಿಲ್ಲ. ಎಲ್ಲಿ ವೈಟೇಜ್ ಕೊಡಬೇಕೋ ಅಲ್ಲಿ ಕೊಡಬೇಕು. ಇನ್‌ಚಾರ್ಜ್ ಅರೆಂಜ್‌ಮೆಂಟ್ಸ್ ಮಾಡುವುದನ್ನು ನಿಲ್ಲಿಸಬೇಕೆಂದು ನಾನು ನಿಮಗೆ ತಿಳಿಸುವುದಕ್ಕೆ ಇಚ್ಛೆಪಡುತ್ತೇನೆ.

So far asposting of an officer is concerned of cource it is your prerogative. I have no voice. ವಾಣಿಜ್ಯ ತೆರಿಗೆ ಇಲಾಖೆ ರೆವಿನ್ಯೂ ಡಿಪಾರ್ಟ್‌ಮೆಂಟ್‌ಗಳಲ್ಲಿ ರಿಕ್ರೂಟ್‌ಮೆಂಟ್ ಮಾಡುವ ಹಾಗೆ ಲೋಕೋಪಯೋಗಿ ಇಲಾಖೆಯಲ್ಲೂ ಅಸಿಸ್ಟೆಂಟ್ ಎಕ್ಸಿಕ್ಯುಟೀವ್ ಇಂಜಿನೀಯರ್‌ಗಳನ್ನು ಆಯ್ಕೆ ಮಾಡುವ ಬಗ್ಗೆ ಸಾಕಷ್ಟು ಚರ್ಚೆಯಾಗಿದೆ, ಇವತ್ತಿನವರೆಗೂ ಅದು ಸಾಧ್ಯವಾಗಿಲ್ಲ. ಡೈರೆಕ್ಟ್ ರಿಕ್ರೂಟ್‌ಮೆಂಟ್ ಮಾಡುವುದಕ್ಕೆ ಏತಕ್ಕೆ ಆಗುವುದಿಲ್ಲ ? ಬೇರೆ ಇಲಾಖೆಗಳಲ್ಲಿ ತೆಗೆದುಕೊಳ್ಳುವಂತೆ ನೀವು ಕೂಡ ೧೦, ೨೦. ಜನಗಳನ್ನು ತೆಗೆದುಕೊಳ್ಳುವುದಕ್ಕೆ ಕೊರತೆ ಏನು ? ಬೇಕಾದಷ್ಟು ಜನ ಇಂಜಿನಿಯರಿಂಗ್ ಗ್ರಾಜುಯೇಟ್ಸ್‌ಗಳು ಇದ್ದಾರೆ. ಸುಮಾರು ಆರೇಳು ವರ್ಷಗಳಿಂದ ಇದುನಿಂತುಹೋಗಿದೆ. ನೀವು ಮಂತ್ರಿಗಳಾಗಿ ಬಂದಮೇಲೆ ನಿಂತುಹೋಗಿದೆ ಎಂದು ಹೇಳುವುದಕ್ಕೆ ಹೋಗುವುದಿಲ್ಲ.

ಶ್ರೀ ಕಾಗೋಡು ತಿಮ್ಮಪ್ಪ.--೧೬೦ ಅರ್ಜಿಗಳನ್ನು ಕರೆದಿದ್ದೆವು. ೬೦ ಇನ್ ಸರ್ವೀಸ್‌ನಲ್ಲಿರುವವರಿಗೆ ೧೦೦ ಹೊರಗಡೆಯವರಿಗೆ ಎಂದು ಅರ್ಜಿಗಳನ್ನು ಕರೆದಿದ್ದೆವು. ಅರ್ಜಿ ಕರೆದಾಗ ಹಿಂದುಳಿದ ವರ್ಗದವರಿಗೆ ೧೦ ಸಾವಿರ ರೂಪಾಯಿ ವರಮಾನವನ್ನು ನಿಗದಿ ಮಾಡಲಾಗಿದೆ. ೧೦ ಸಾವಿರ ರೂಪಾಯಿ ವರಮಾನ ನಿಗದಿ ಮಾಡಿರುವುದರಿಂದ ಸರ್ವೀಸ್‌ನಲ್ಲಿರುವವರಿಗೆ ಯಾರಿಗೂ ಅವಕಾಶವಾಗುವುದಿಲ್ಲ. ಆದ್ದರಿಂದ ರಿಸರ್ವೇಷನ್‌ರವರಿಗೆ ಅನ್ಯಾಯವಾಗುತ್ತದೆಂದು ರೆಪ್ರೆಸೆಂಟೇಷನ್ ಬಂದಾಗ ಅದನ್ನು ಪರಿಶೀಲನೆ ಮಾಡುವ ಸನ್ನಿವೇಶ ಬಂತು. ಈ ಒಂದು ವಾದದಲ್ಲಿ ಸ್ವಲ್ಪ ಮಟ್ಟಿಗೆ ನಿಂತಿದೆ. ನೇರವಾಗಿ ಹುದ್ದೆಗಳಿಗೆ ತೆಗೆದುಕೊಳ್ಳುವಾಗ ಹಿಂದೆ ರೂಲ್‌ನಲ್ಲಿ ಒಂದು ನಿಯಮ ಇದೆ. ಆರು ತಿಂಗಳು ಟ್ರೈನಿಂಗ್ ಇರುವ ಸರ್ಟಿಫಿಕೇಟ್ ಎನ್‌ಕ್ಲೋಸ್ ಮಾಡಬೇಕೆನ್ನುವ ನಿಯಮ ಇದೆ. ಎಂ. ಬಿ. ಬಿ. ಎಸ್. ನವರಿಗೆ ಹೌಸ್ ಸರ್ಜನ್ ರೆಕಗ್ನೈಸ್ ಇದೆಯೋ ಹಾಗೆ ಎನ್ನುವ ರೀತಿಯಲ್ಲಿ ನಮ್ಮಲ್ಲಿ ಕಂಟ್ರಾಕ್ಟರ್ ಹತ್ತಿರ ಸರ್ಟಿಫಿಕೇಟ್ ತಂದರೆ ಅದಕ್ಕೆ ವ್ಯಾಲ್ಯು ಕೊಡಬೇಕೇ ಬೇಡವೇ ಎನ್ನುವ ಪ್ರಶ್ನೆ ಬರುತ್ತದೆ. ಕೆಲವರು ಅರ್ಜಿಗಳಿಗೆ ಎನ್‌ಕ್ಲೋಸ್ ಮಾಡಿದ್ದಾರೆ. ಕೆಲವರು ಎನ್‌ಕ್ಲೋಸ್ ಮಾಡಿಲ್ಲ. ಆ ಸರ್ಟಿಫಿಕೇಟ್ ಎನ್‌ಕ್ಲೋಸ್ ಮಾಡತಕ್ಕದ್ದು ಈ ಕೋರ್ಸ್‌ನವರಿಗೆ ಅನಾವಶ್ಯಕ ಇದನ್ನು ತೆಗೆದುಹಾಕಬೇಕೆಂದು ಇದರ ಬಗ್ಗೆ ಆಸಕ್ತಿ ವಹಿಸಿದ್ದೇನೆ.

ಶ್ರೀ ಎಚ್. ಡಿ. ದೇವೇಗೌಡ.—ವಾಸ್ತವವಾಗಿ ಅಸಿಸ್ಟೆಂಟ್ ಎಕ್ಸಿಕ್ಯೂಟೀವ್ ಇಂಜಿನೀಯರ್ ಪೋಸ್ಟ್‌ಗಳನ್ನು ಡೈರೆಕ್ಟ್ ರಿಕ್ರೂಟ್ ಮಾಡುವುದಕ್ಕೆ ಅವಕಾಶ ಕೊಟ್ಟಿಲ್ಲ. ಹಲವಾರು ಕಾರಣಗಳಿಗೆ

ಅವಕಾಶವಾಗಿದೆ. ದಯಮಾಡಿ ಇರತಕ್ಕ ಗೊಂದಲವನ್ನು ಪರಿಹರಿಸಬೇಕೆಂದು ತಮಗೆ ಹೇಳಲಿಕ್ಕೆ ಇಚ್ಛಿ ಪಡುತ್ತೇನೆ.

ಇನ್ನು ಸ್ಕ್ಯಾಲರಿ ಡಿಸ್‌ಪ್ಯಾರಿಟಿ ಬಗ್ಗೆ ಹೇಳುವುದಾದರೆ ಎಂ. ಬಿ. ಬಿ. ಎಸ್. ಡಾಕ್ಟರುಗಳಿಗೆ ಇರುವಂತೆ ವೆಟರಿನರಿ ಡಾಕ್ಟರುಗಳಿಗೂ ಮಾಡಿದ್ದಾರೆ. ಬಿ. ಇ. ಗ್ರಾಜುಯೇಟ್ಸ್‌ಗಳ ಪ್ರಶ್ನೆ ಇದೆ. ವೆಟರಿನರಿ ಡಾಕ್ಟರುಗಳಿಗೆ ೧೨೦೦ ಸ್ಕೇಲ್ ಕೊಟ್ಟಿದ್ದೇವೆಂದು ಹೇಳಿದ್ದಾರೆ, ಅದೇರೀತಿ ಇಂಜಿನೀಯರಿಂಗ್ ಗ್ರಾಜುಯೇಟ್ಸ್‌ಗಳಿಗೆ ಮಾಡಬೇಕು. ಈಗ ಬಿ. ಇ. ಗ್ರಾಜುಯೇಟ್ಸ್‌ಗಳನ್ನು ಕಡಿಮೆ ದರ್ಜೆಗೆ ಇಳಿಸಿದ್ದೀರಿ. ಸದ್ಯದಲ್ಲಿ ೯೦೦–೧೭೦೦ ಇದೆ. ಇದಕ್ಕೆ ತಾವು ಶೀಘ್ರವಾಗಿ ನಿರ್ಣಯ ಮಾಡತಕ್ಕಂತಹದ್ದು ಸೂಕ್ತವೆಂದು ನಾನು ನಿಮಗೆ ಸೂಚನೆ ಕೊಡಲಿಕ್ಕೆ ಇಚ್ಛೆಪಡುತ್ತೇನೆ. ನಿಮ್ಮ ಇಲಾಖೆಯಲ್ಲಿ ವರ್ಕ್–ಚಾರ್ಜಿನಲ್ಲಿರತಕ್ಕವರಿಗೆ ಕನ್ವರ್ಮ್ ಮಾಡಲಾಗುತ್ತದೆಂದು ಮಾನ್ಯ ಬಂಗಾರಪ್ಪನವರು ಲೋಕೋಪಯೋಗಿ ಮಂತ್ರಿಗಳಾಗಿದ್ದಾಗ ಹೇಳಿದ್ದಾರೆ. ನೀವು ಸ್ವಲ್ಪ ತೊಡಕು ಎಂದು ಹೇಳಿದ್ದೀರಿ.

(ಶ್ರೀ ಎಂ. ಸಿ. ಬಸಪ್ಪನವರು ಅಧ್ಯಕ್ಷ ಪೀಠಕ್ಕೆ ಬಂದರು.)

ದಿನಗೂಲಿಯ ಮೇಲೆ ಕೆಲಸ ಮಾಡತಕ್ಕವರನ್ನು ಅವರ ಸರ್ವೀಸ್ ಮೇಲೆ ಗ್ಯಾರಂಟಿ ಮಾಡಬೇಕು. ೮–೧೦ ವರ್ಷ ದಿನಗೂಲಿಯ ಮೇಲೆ ಕೆಲಸ ಮಾಡಿರತಕ್ಕವರನ್ನು ನಿಮ್ಮ ಕೆಲಸ ಆಗುವವರೆಗೂ ಇಟ್ಟುಕೊಂಡು ಆಮೇಲೆ ಮನೆಗೆ ಕಳಿಸುತ್ತೀರಿ ಇದು ಸರಿಯಾದುದಲ್ಲ. ೮–೧೦ ವರ್ಷ ಕೆಲಸ ಮಾಡಿರುವವರನ್ನು ವರ್ಕ್‌ಚಾರ್ಜ್‌ನಲ್ಲಿಟ್ಟುಕೊಂಡು ಅವರಿಗೆ ಸರ್ವೀಸ್ ಕೊಡುವ ವ್ಯವಸ್ಥೆ ಮಾಡಿ ಮುಂದುವರಿಸಬೇಕು. ಪ್ರಾಮಾಣಿಕವಾಗಿ ಕೆಲಸ ಮಾಡುವವರಿಗೆ ಖಾಯಂ ಮಾಡಿ ಎಂದು ಕೇಳಿದರೆ ಅರ್ಥಿಕ ಮುಗ್ಗಟ್ಟು ಮಾಡುವುದಕ್ಕೆ ಸಾಧ್ಯವಿಲ್ಲವೆಂದು ಹೇಳಿದರೆ ಅವರನ್ನು ಏತಕ್ಕೆ ಅಷ್ಟು ವರ್ಷಗಳು ಇಟ್ಟುಕೊಳ್ಳುತ್ತೀರಿ ? ಬೇರೆ ಕಡೆ ಉದ್ಯೋಗ ಸಿಗುವುದು ತಪ್ಪುತ್ತದೆ.

ಡಿಸಿಪ್ಲಿನರಿ ಆಕ್ಷನ್ ಬಗ್ಗೆ ನಾನು ಒಂದು ತಿಂಗಳ ಐದು ದಿವಸಗಳ ಹಿಂದೆ ಒಂದು ಪ್ರಶ್ನೆ ಕೇಳಿದ್ದೇನೆ. ರೈಡ್ ಮಾಡಿ ಎಷ್ಟು ಜನ ಅಧಿಕಾರಿಗಳನ್ನು ಸಸ್ಪೆಂಡ್ ಮಾಡಿದ್ದೀರಿ? ವಿಜಿಲೆನ್ಸ್ ಕಮಿಷನ್ ವಿಚಾರಣೆ ಆಧಾರದ ಮೇಲೆ ಎಷ್ಟು ಜನ ಅಧಿಕಾರಿಗಳನ್ನು ಸಸ್ಪೆಂಡ್ ಮಾಡಿದ್ದೀರಿ ಮಂತ್ರಿಗಳು ನಿಮ್ಮ ಇಲಾಖೆಯ ಕಾರ್ಯದರ್ಶಿಗಳು, ಮುಖ್ಯ ಇಂಜಿನಿಯರ್‌ಗಳು ಎಷ್ಟು ಜನ ಅಧಿಕಾರಿಗಳನ್ನು ಸಸ್ಪೆಂಡ್ ಮಾಡಿದ್ದೀರಿ ಎಂದು ಅದರ ಬಗ್ಗೆ ಸದನಕ್ಕೆ ವರದಿ ಕೊಡಬೇಕೆಂದು ಪ್ರಶ್ನೆ ಹಾಕಿದ್ದೆ ಇದುವರೆಗೆ ಉತ್ತರ ಕೊಟ್ಟಿಲ್ಲ. ನಿಮ್ಮ ಇಲಾಖೆಯ ಕಾರ್ಯದರ್ಶಿಗಳಿಂದ ಒಂದು ಪತ್ರ ಬಂದಿದೆ. ಇದು ತುಂಬಾ ದೊಡ್ಡ ಪ್ರಶ್ನೆ, ಇದು ಚುಕ್ಕೆ ಗುರುತಿನ ಪ್ರಶ್ನೆ ಪರಿವರ್ತನೆ ಮಾಡಬೇಡಿ 'ಅನ್‌ಸ್ಟಾರ್ಡ್ ಕೊಶ್ಚನ್' ಕೇಳಿ ಎಂದು ಪತ್ರ ಬಂದಿದೆ ಎಂದು ಕೇಳಿದ್ದೇನೆ.

ನಾನು ಇದನ್ನು ಕೇಳುವ ಉದ್ದೇಶ ಏನೆಂದರೆ ಈ ರಾಜ್ಯದಲ್ಲಿ ಒಂದು ರೀತಿಯಾಗಿ ನಡೆಯುತ್ತಾ ಇರುವುದನ್ನು ನೋಡಿದರೆ ಕೆಲವೇ ಅಧಿಕಾರಿಗಳನ್ನು ಶಿಕ್ಷೆಗೆ ಗುರಿ ಮಾಡುತ್ತೀರಿ ಅನ್ನುವ ಒಂದು ಭಾವನೆ ಬಂದಿದೆ. ಈ ಸಂಶಯವನ್ನು ಹೋಗಲಾಡಿಸದಿದ್ದರೆ ಒಂದು ರೀತಿಯಾದ ಸಂಶಯ ಬರುವುದಕ್ಕೆ ಸಾಧ್ಯ ಈ ಘಟನೆಗಳ ಬಗ್ಗೆ ಬಂದಿರುವ ಈ ಒಂದು ಸಂಶಯವನ್ನು ಈ ಸದನಕ್ಕೆ ತಾವು ಹೋಗಲಾಡಿಸಬೇಕು. ಇಲ್ಲದೇ ಹೋದರೆ ಇದು ಒಂದು ಸಂಶಯಭೂತವಾಗಿ ಕಾಡುತ್ತದೆ. ಸಾಮಾನ್ಯವಾಗಿ ಈಗ ಇರತಕ್ಕಂಥಾ ಭಾವನೆಗಳು ಬರೇ ಪಿ.ಡಬ್ಲ್ಯು.ಡಿ.ನಲ್ಲಿ ಮಾತ್ರ ಇಂಥಾ ಹೆಚ್ಚು ಅಪ್ರಮಾಣಿಕರು ಇದ್ದಾರೆ, ಬೇರೆ ಡಿಪಾರ್ಟ್‌ಮೆಂಟ್‌ನಲ್ಲಿ ಇಲ್ಲವೇನೋ ಅನ್ನುವ ಭಾವನೆ ಬರುತ್ತದೆ. ಇದ್ದರೂ ಕೂಡ ೩–೪ ಡಿಪಾರ್ಟ್‌ಮೆಂಟ್‌ನಲ್ಲಿ ಅಂದರೆ ಪೋಲೀಸ್ ಎಕ್ಸೈಜ್ ಮತ್ತು ಕಮರ್ಷಿಯಲ್ ಟ್ಯಾಕ್ಸ್ ಡಿಪಾರ್ಟ್‌ಮೆಂಟ್‌ನಲ್ಲಿ ಅಪ್ರಾಮಾಣಿಕರು ಬಹಳ ಕಡಿಮೆ, ಬಹಳಷ್ಟು ಈ ಪಿ.ಡಬ್ಲ್ಯು.ಡಿ. ಡಿಪಾರ್ಟ್‌ಮೆಂಟ್‌ನಲ್ಲೇ ಇದ್ದಾರೆ. A particular section of the people have been branded as corrupt people according to the events, I want to make myself clear. ಆದುದರಿಂದ ಈ ಬಗ್ಗೆ ಈ ಸದನದಲ್ಲಿ ವಾದ ಮಾಡಬೇಕಾಗಿದೆ. ಯಾರು ಇದಕ್ಕೆ ಹಿನ್ನೆಲೆ ಇದ್ದಾರೆ, ಇದಕ್ಕೆ ಸರ್ಕಾರ ಏನಾದರೂ ಹಿನ್ನೆಲೆ ಇದೆಯೋ ಅಥವಾ ಅಧಿಕಾರಿಗಳದ್ದು ಯಾರಾದರೂ ಹಿನ್ನೆಲೆ ಇದೆಯೋ ಈ ಬಗ್ಗೆ ನಿಮ್ಮ ಸಾಮರ್ಥ್ಯ ಏನು ಈ ಬಗ್ಗೆ ನಾವು ಚರ್ಚೆ ಮಾಡಬೇಕಾಗಿದೆ. ನಮ್ಮ ಮುಂದೆ ತಾವೇನೋ ಒಂದು ಪಟ್ಟಿ ಇಟ್ಟಿದ್ದೀರಿ. ಮಾನ್ಯ ಸದಸ್ಯರಾದ ಶ್ರೀ ಬಿ.ವಿ. ರಾಮಚಂದ್ರ ರೆಡ್ಡಿಯವರು ಈ ಬಗ್ಗೆ

ಒಂದು ಪ್ರಶ್ನೆಯನ್ನು ಹಾಕಿದ್ದಕ್ಕೆ ಅದರ ಬಗ್ಗೆ ಉತ್ತರವನ್ನೂ ಸಹ ಕೊಟ್ಟಿದ್ದೀರಿ. ೯ ಪ್ರಕರಣಗಳಿಗೆ ಸಂಬಂಧಪಟ್ಟಂತೆ ಸಿಮೆಂಟ್ ಮತ್ತು ಸ್ಟೀಲ್ ಎಷ್ಟು ದುರುಪಯೋಗವಾಗಿದೆ ಅನ್ನುವ ವಿಚಾರದಲ್ಲಿ ತಾವು ಮಾಹಿತಿ ಕೊಟ್ಟಿದ್ದೀರಿ. ಅದರಲ್ಲಿ ೮-೧೦ ಜನ ಆಫೀಸರ್ಸ್ ಹೆಸರನ್ನು ಒಂದೊಂದಾಗಿ ಕೊಟ್ಟಿದ್ದೀರಿ. ಆದರೆ ನಾನು ಅದರ ಬಗ್ಗೆ ಈಗ ಹೇಳುವುದಕ್ಕೆ ಹೋಗುವುದೂ ಇಲ್ಲ, ಅಲ್ಲದೆ ಅದನ್ನು ಹೇಳುವ ಅವಶ್ಯಕತೆಯೂ ಇಲ್ಲ. ಈ ೯ ಪ್ರಕರಣಗಳ ಪಟ್ಟಿ ಏನು ಕೊಟ್ಟಿದ್ದೀರಿ ಅದರಲ್ಲಿ ಕೆಲವು ಕಡೆ ರಿಕವರಿ ಪ್ರೋಸೀಡಿಂಗ್ಸ್ ಮಾಡುವುದಕ್ಕಾಗಲಿಲ್ಲ ಅನ್ನುವುದನ್ನು ತಾವೇ ಒಪ್ಪಿಕೊಂಡಿದ್ದೀರಿ ಡೈರಕ್ಟರ್‌ರವರಿಂದ ಸ್ಟೀಲ್ ಷಾರ್ಟೇಜ್ ಅಂತ ರಿಪೋರ್ಟ್ ಅಂತ ಬಂದಿದ್ದರೂ ಅದರ ಬಗ್ಗೆ ರಿಕವರಿ ಪ್ರೊಸಿಡಿಂಗ್ಸ್ ಮಾಡುವುದಕ್ಕಾಗಲಿಲ್ಲ ಎಂದು ತಾವು ಹೇಳಿಕೊಂಡು ಬಂದಿದ್ದೀರಿ. The shortage of Cement as such recovery has been made. In other two cases no recovery has been made. ಈ ರೇಡ್ ಬಗ್ಗೆ ನಾನು ಈವೊತ್ತು ಚರ್ಚೆ ಮಾಡುವುದಕ್ಕೆ ಹೋಗುವುದಿಲ್ಲ. ನಮ್ಮ ಮುಂದೆ ಪಟ್ಟಿಯನ್ನು ಕೊಟ್ಟಿದ್ದೀರಿ. ಇದು ಆಕ್ಸಿಡೆಂಟಲ್ ಆಗಿ ಇರಬಹುದು. ಇದರಲ್ಲಿ ಇಬ್ಬರು ಲಿಂಗಾಯಿತರು, ೩ ಜನ ಇನ್ನೊಂದು ಜಾತಿಯವರು ಇದ್ದಾರೆ ಅಂತ ಹೇಳಿದ್ದೀರಿ. ತಾವು ರೇಡ್ಸ್ ಮಾಡಿದ ಮೇಲೆ ಎಷ್ಟು ಎನ್‌ಕ್ವೈರಿ ಮಾಡಿಸಿದ್ದೀರಾ ಎಷ್ಟು ಜನರನ್ನು ಸಸ್ಪೆಂಡ್‌ನಲ್ಲಿ ಇಟ್ಟಿದ್ದೀರಾ? ಎಷ್ಟು ಜನರನ್ನು ಸಸ್ಪೆನ್‌ಷನ್ ರಿವೋಕ್ ಮಾಡಿದ್ದೀರಾ? ಅದಕ್ಕೆ ಕಾರಣ ಏನು ? ತಪ್ಪು ಮಾಡಿದ್ದವರನ್ನು You can hang them. I am not bothered. I am not going to advocate for them but the discrimination shown by the Government I am, objecting to, ತಪ್ಪು ಇದ್ದರೆ ಶಿಕ್ಷೆ ಮಾಡಿ. We cannot be dumb animals in this House. I have got several things to say. ಶ್ರೀ ವೆಂಕಟರಮಣಪ್ಪ ಅವರ ಮನೆ ರೇಡ್ ಮಾಡಿದಿರಿ. ಅವರೇನೂ ಒಕ್ಕಲಿಗರೂ ಅಲ್ಲ, ಲಿಂಗಾಯಿತರೂ ಅಲ್ಲ. ಇವರು ಷೆಡ್ಯೂಲ್ಡ್ ಕ್ಯಾಸ್ಟ್‌ನವರು. ನಾನು ಇವರ ಮನೆಯನ್ನು ಎರಡು ಸಾರಿ ರೇಡ್ ಮಾಡಿದ್ದಾರೆ ಎಂದು ಕೇಳಿದ್ದೇನೆ ಸರಿಯಾಗಿ ಗೊತ್ತಿಲ್ಲ. ನನಗೆ ತಿಳಿದು ಬಂದಿರುವ ಪ್ರಕಾರ ಒಂದು ಸಾರಿ ಇನ್‌ಕಂ ಟ್ಯಾಕ್ಸ್‌ನವರು ರೇಡ್ ಮಾಡಿದ್ದಾರೆ ಇನ್ನೊಂದು ಸಾರಿ ವಿಜಿಲೆನ್ಸ್ ಕಮೀಷನ್‌ನವರು ರೇಡ್ ಮಾಡಿದ್ದಾರೆ. ಹಿಂದಿನ ಸರ್ಕಾರದವರು ಈ ರೀತಿ ರೇಡ್ ಮಾಡಿದ್ದರೂ ಕೂಡ ಆ ಅಧಿಕಾರಿಗಳನ್ನು ಸಸ್ಪೆಂಡ್ ಮಾಡುತ್ತಿರಲಿಲ್ಲಾ. ಕರ್ನಾಟಕದ ರಾಜ್ಯದ ಆಗಿನ ಮುಖ್ಯಮಂತ್ರಿಗಳು ನಮ್ಮ ಗುರುಗಳು ಎಂದು ತಾವು ಸಂಭೋದನೆಮಾಡಿದರು. ಅದಕ್ಕಾಗಿ ಅವರಿಗೆ ತಾವು ಸಂತಾಪಸೂಚನೆ ನಿರ್ಣಯವನ್ನೂ ಸಹ ಮಂಡಿಸಿದಿರಿ. ಆವಾಗ ಶ್ರೀಮಾನ್ ಬಾಲರಾಜ್ ಅವರ ಮನೆ ರೇಡ್ ಈಗ ಅವರು ರಿಟೈರ್ಡ್ ಆಗಿದ್ದಾರೆ. ಅವರ ಮನೆ ರೇಡ್ ಆಗಿದ್ದರೂ ಕೂಡ ಅವರನ್ನು ಸರ್ವಿಸ್‌ನಲ್ಲಿ ಅವಮಾನತ್‌ಗೊಳಿಸಿದ್ದರು. ಕೆಲಸದಿಂದ ತೆಗೆದುಹಾಕಿರಲಿಲ್ಲಾ. ಈಗ ಅಂಥಾವರನ್ನು ತಾವು ಸಸ್ಪೆಂಡ್ ಮಾಡುತ್ತೀರಿ ಇದು ನಿಮ್ಮ ಸರ್ಕಾರದ ಧೋರಣೆ. ಅದಕ್ಕೆ I have no objection. I have no comments on that. ಸ್ವಾಮಿ, ವೆಂಕಟೇಶ್ ಅವರ ಮೇಲೆ ಸಿಮೆಂಟ್ ಮತ್ತು ಸ್ಟೀಲ್ ದುರುಪಯೋಗವಾಗಿದೆ ಅಂತ ಕ್ರಿಮಿನಲ್ ಕಂಪ್ಲೈಂಟ್ ಲಾಡ್ಜ್ ಮಾಡಿದ್ದೀರಿ. ಅದೇ ರೀತಿಯಾಗಿ ಇನ್ನೊಂದು ಕ್ರಿಮಿನಲ್ ಕಂಪ್ಲೈಂಟ್ ಅನ್ನು ಬಿ.ಡಿ.ಎ.ನಲ್ಲಿದ್ದ ರಾಜವೇಲು ಅವರ ಮೇಲೂ ಲಾಡ್ಜ್ ಮಾಡಿದ್ದೀರಿ. ಇವರುಗಳನ್ನು ಸಸ್‌ಪೆನ್ಸನಿಂದ ರಿವೋಕ್ ಮಾಡಿದಿರಿ. It runs to several lakhs of rupees. ಆದರೂ ಅವರನ್ನು ಸಸ್‌ಪೆನ್‌ಷನ್ ರಿವೋಕ್ ಮಾಡಿದಿರಿ. A criminal complain has been launched investigation has been completed and it has been established according to them and the case has been filed before the court. ಹಾಗಾದರೆ ಅದರ ಉದ್ದೇಶ ಏನು? ನೀವು ಮಾಡುವುದು ತಪ್ಪು ಅಂತಲೇ? ರೇಡ್‌ಮಾಡುವುದು ಆ ಮೇಲೆ ರಿವೋಕ್ ಮಾಡುವುದು ಎಂದರೆ ಏನರ್ಥ? ರೇಡ್ ಬಗ್ಗೆ ನಾನು ಮಾತನಾಡುವುದಕ್ಕೆ ಹೋಗುವುದಿಲ್ಲ. I am not bothered. What I want is why did the Government discriminate the cases? ರೇಡ್ ಮಾಡಿಸಿ, ಅವರ ಮೇಲೆ ಕ್ರಿಮಿನಲ್ ಕಂಪ್ಲೈಂಟ್ ಬೇಕಾದರೂ ಲಾಡ್ಜ್ ಮಾಡಲಿ. I have no objection. ಅವರನ್ನು ಸಸ್ಪೆನ್‌ಷನ್‌ನಲ್ಲಿಟ್ಟು ಮತ್ತೆ ರಿವೋಕ್ ಮಾಡಿದರಲ್ಲಾ. ಏತಕ್ಕೆ ಹಾಗೆ ಮಾಡಬೇಕು? What is the object of suspension I want to know. According to them if the officials were to be in office they may try to temper the investigation. ಆದರೆ ಆ ಇನ್‌ವೆಸ್ಟಿ

ಗೇಷನ್‌ನ ಸ್ಟೇಜ್‌ನಲ್ಲಿ ಅವನನ್ನು ಸರ್ವೀಸ್‌ನಲ್ಲಿ ಅವಮಾನತ್ ಮಾಡುತ್ತೀರಾ? ತಮಗೆ ಹೇಳಬೇಕಾದರೆ ಎರಡು ಕೇಸಸ್‌ನಲ್ಲಿ ಕೋರ್ಟಿಗೆ ಛಾರ್ಜ್‌ಷೀಟ್ ಹಾಕಿದ್ದೀರಾ? ಅದು ಕೋರ್ಟ್ ಮುಂದೆ ಇದೆ. ದಯ ವಿಟ್ಟು ಇದರ ಬಗ್ಗೆ ಸರ್ಕಾರದ ಧೋರಣೆ ಏನು ಅನ್ನುವುದನ್ನು ತಿಳಿಸಬೇಕು. ಕೆಲವು ಕಡೆ ಇನ್‌ಕಂ ಟ್ಯಾಕ್ಸ್‌ನವರೂ ಸಹ ಹೋಗಿ ರೇಡ್ ಮಾಡಿದರು, ಅದರ ಬಗ್ಗೆ ಇನ್‌ವೆಸ್ಟಿಗೇಷನ್ ಕಂಪ್ಲೀಟ್ ಆಗಿದೆ. ಆದರೆ ಸಸ್ಪೆನ್‌ಷನ್ ಆರ್ಡರ್ ಅನ್ನು ರಿವೋಕ್ ಮಾಡಿಲ್ಲಾ. What are the circumstances, what are the consider ations? Is it cast consideration or any other extraneous consideration? ದಯುವಿಟ್ಟು ತಿಳಿಸಿ. ನನಗೆ ತಿಳಿದ ಮಟ್ಟಿಗೆ ಅದು ಇನ್ ಕಂಟ್ಯಾಕ್ಸ್ ರೇಡ್ಸ್ ಅಲ್ಲ. ಒಂದು ಕಡೆ ನೋಡಿದರೆ ಸಸ್ಪೆನ್‌ಷನ್ ರಿವೋಕ್ ಮಾಡಿದ್ದೀರಿ ಇನ್ನೊಂದು ಕಡೆ ನೋಡಿದರೆ ಇನ್‌ಕಂಟ್ಯಾಕ್ಸ್ ರೇಡ್ಸ್ ಮಾಡಿದ್ದಾರೆ. ನೀವು ಕೋರ್ಟಿನಲ್ಲಿ ಛಾರ್ಜ್‌ಷೀಟ್ ಹಾಕಿ ದ್ದರೆ ಇನ್‌ಕಂಟ್ಯಾಕ್ಸ್‌ನವರು ರೇಡ್ ಮಾಡುವುದಕ್ಕೆ ಸಾಧ್ಯವಿಲ್ಲ. ಒಂದುವೇಳೆ ಸಿ.ಓ.ಡಿ. ಅವರು ಛಾರ್ಜ್‌ಷೀಟ್ ಹಾಕಿದ್ದರೆ ನೀವೇಕೆ ರಿವೋಕ್ ಮಾಡಬೇಕಾಗಿತ್ತು? ಇದರ ಬಗ್ಗೆ ನಿಮ್ಮ ನಾರ್ಮ್ಸ್ ಏನು. ದಯುವಿಟ್ಟು ತಿಳಿಸಿ. We have to concentrate one full day for this issue ನಾನು ಇದರ ಬಗ್ಗೆ ಸಾಕಷ್ಟು ಮಾಹಿತಿ ಇಟ್ಟುಕೊಂಡು ಮಾತನಾಡುತ್ತಿದ್ದೇನೆ. ಕೆಲವು ಕೇಸಸ್‌ನಲ್ಲಿ ವಿಜಿಲೆನ್ಸ್ ಏನು ರೇಡ್ ಮಾಡುತ್ತಾರೆ ಅದನ್ನು ಪತ್ರಿಕೆಗಳಲ್ಲಿ ಬಿಡುಗಡೆ ಮಾಡುತ್ತಾರೆ. ಪಂಚೆ ಇಷ್ಟು ಸಿಕ್ಕಿತು, ಷರಟು ಇಷ್ಟು ಸಿಕ್ಕಿತು, ೮ ಸೀರೆ ಸಿಕ್ಕಿತು, ಫಾರಿನ್ ಮೇಟಿರಿಯಲ್ಸ್ ಇಷ್ಟು ಸಿಕ್ಕಿತು, ಚಿನ್ನ, ಬಣ್ಣ ಇಷ್ಟು ಸಿಕ್ಕಿತು, ೩೦ ಲಕ್ಷ ರೂಪಾಯಿ ದುಡ್ಡು ಸಿಕ್ಕಿತು, ಬಾಂಡ್ ಇಷ್ಟು ರೂಪಾಯಿದು ಸಿಕ್ಕಿದೆ, ಎಂದು ಪತ್ರಿಕೆಗಳಲ್ಲಿ ಬಿಡುಗಡೆ ಮಾಡುತ್ತಾರೆ. ಇನ್ನು ಕೆಲವು ರೇಡ್ಸ್ ಮಾಡಿದ್ದುದು ಅವರು ಪತ್ರಿಕೆಗೆ ಬಿಡುಗಡೆನೇ ಮಾಡುವುದಿಲ್ಲ. How many raids have been conducted by the Vigilance Commissson. ದಯುವಿಟ್ಟು ಇದರಲ್ಲಿ ಎಷ್ಟು ಕೇಸಸ್‌ಗಳನ್ನು ಪತ್ರಿಕೆಗಳಿಗೆ ಬಿಡುಗಡೆ ಮಾಡಿದ್ದಾರೆ ಎಷ್ಟು ಕೇಸಸ್‌ಗಳು ಪತ್ರಿಕೆಗಳಿಗೆ ಬಿಡುಗಡೆ ಮಾಡಿಲ್ಲಾ ತಿಳಿಸಿ. ಈ ವಿಷಯು ಪತ್ರಿಕಗಳಿಗೇ ಬಾರದೇ ಹೋದರೆ ಈ ಪತ್ರಿಕೆಗಳಿಗೆ ಸುದ್ದಿ ಬಿಡುಗಡೆ ಮಾಡುವವರೇ ಕಾರಣರು ಎಂದು ತಿಳಿಯೋಣವೇ? Is it to brand a particular officer a topmost officer as corrupt in the state? ಇನ್ನು ಕೆಲವರು ಈ ಪತ್ರಿಕೆಗಳಿಗೆ ವಿಷಯಗಳನ್ನು ಬಿಡುಗಡೆ ಮಾಡದಿದ್ದರೆ Is it with an intention to tarnish the image of a particular officer ? ಈ ಬಗ್ಗೆ ಈ ಸದನ ಸ್ವಲ್ಪ ಸಮೀಕ್ಷೆ ಮಾಡಬೇಕಾಗಿದೆ. I do not want to express any comment on the Vigilance Commissioner I know the present Vigilance Commissioner is a sitting Judge of the High Court. I have high regards for him, ಆದರೆ ಅದರ ನಡವಳಿಕೆಗಳ ಬಗ್ಗೆ ನಮ್ಮ ಮುಂದೆ ಏನು ಇದೆ ಅದನ್ನು ಪರಿಶೀಲನೆಮಾಡಿ ನೋಡಿದಾಗ ಕೆಲವು ಕಡೆಗಳಲ್ಲಿ ರೇಡ್ಸ್‌ಮಾಡಿದು ಮಾರನೇ ದಿನವೇ ಪತ್ರಿಕೆಗಳಲ್ಲಿ ಬಂದಿದೆ, ಇನ್ನು ಕೆಲವು ಪತ್ರಿಕೆಗಳಲ್ಲಿ ಅದರ ಸುದ್ದಿಯೇ ಇರುವುದಿಲ್ಲ.

ಆದ್ದರಿಂದ ನಾವು ಹೇಳುವುದೇನೆಂದರೆ ಮಾನ್ಯ ಮಂತ್ರಿಗಳು ಉತ್ತರ ಕೊಡುವಾಗ ಇದರ ಬಗ್ಗೆ ವಿವರವಾಗಿ ಉತ್ತರಕೊಡಬೇಕು, ಏತಕ್ಕೆ ಈ ರೀತಿಯು ಧೋರಣೆಯುನ್ನು ಹಾಕಿಕೊಂಡಿದ್ದಾರೆ ಎನ್ನು ವುದರ ಬಗ್ಗೆ ಮಾನ್ಯ ಮಂತ್ರಿಗಳ ಉತ್ತರ ಕೊಡಬೇಕು. ಸ್ವಾಮಿ ತಾವು ಕೆಲವು ಜನ ಅಧಿ ಕಾರಿಗಳನ್ನು ಸಸ್‌ಪೆಂಡ್ ಮಾಡಿದ್ದೀರಿ. I am not going to charge against Sri Kagodu Thimmappa. ನಾನು ಮಾತನಾಡುವ ಧಾಟಿಯಲ್ಲಿ ಆ ರೀತಿಯು ಅಭಿಪ್ರಾಯು ಬರುತ್ತದೆ What is the magnitude of the mistakes they have committed. ಸ್ವಾಮಿ ತಾವು ಕೋಲಾರ ಜಿಲ್ಲೆಯಲ್ಲಿ ಕೆಲಸ ಮಾಡುತ್ತಿರುವ ಶ್ರೀಮಾನ್ ರಂಗಯ್ಯ ಎನ್ನುವಂತಹ ಒಬ್ಬ ಆಸಿಸ್ಟಂಟ್ ಇಂಜಿನೀಯರ್‌ರವನ್ನು ಸಂಸ್‌ಪೆಂಡ್ ಮಾಡಿದ್ದೀರಿ. ಇದು ಪತ್ರಿಕೆ ಯಲ್ಲಿ ಸುದ್ದಿ ಬಂದಿ. ತಾವು ಸಸ್‌ಪೆಂಡ್ ಮಾಡಿರುವ ಉದ್ದೇಶವೇನೆಂದರೆ ಇದಕ್ಕೆ ಸೂಪರಿನ್‌ಟೆಂ- ಡಿಂಗ್ ಇಂಜಿನೀಯುರ್‌ರವರಿಂದ ಏನಾದರೂ ವರದಿ ಬಂದಿದೆಯೋ ? ಚೀಫ್ ಇಂಜೀನಿಯುರ್‌ರವರಿಂದ ಏನಾದರೂ ವರದಿ ಬಂದಿದೆಯೋ. ಇಲ್ಲ ವಿಜಿಲೆನ್ಸ್‌ಕಮೀಷನರ್‌ರವರಿಂದ ಏನಾದರೂ ವರದಿ ಬಂದಿ ದೆಯೋ ? ಎಂಬುದನ್ನು ದಯುಮಾಡಿ ಮಾನ್ಯ ಮಂತ್ರಿಗಳು ಈ ಸಭೆಯು ಮುಂದೆ ಇಡಬೇಕು, ಈ

ವರದಿ ಎಲ್ಲಿಂದ ನನಗೆ ಬಂತು ಎನ್ನುವ ಪ್ರಶ್ನೆ ಮಾಡುವ ಅವಶ್ಯಕತೆ ತಮಗೆ ಇಲ್ಲ. I am quoting the conclusion para of the report of S. E.

> "From the perusal of the above facts, it is seen that the then Executive Engineer, Kolar Division has been taken timely action to sanction the estimates which are approved by the Taluk Level Relief Committee as and when they are received from the Sub-divisions. The Executive Engineer has also taken action to regularise the expenditure incurred in respect of committed works to avoid audit objections. It may not be correct to say that there was rush of expenditure and also technical sanction to the estimates only after receipt of tranfer order, as there were instructions from the Government and the Deputy Commissioner to close the Relief operation before 30-9-1981. Hence, I am of the opinion that no serious irregularities have been committed by Sri L. Rangaiah, the then Executive Engineer, Kolar Division."

ಶ್ರೀ ಹೆಚ್. ಟಿ. ಕೃಷ್ಣಪ್ಪ.—ಸ್ವಾಮಿ ಸರ್ಕಾರದ ದಾಖಲೆಗಳು ಮಾನ್ಯ ಸದಸ್ಯರಿಗೆ ಹೇಗೆ ಬಂದವು ಎಂಬುದನ್ನು ತಿಳಿಸಬೇಕು.

ಶ್ರೀ ಹೆಚ್. ಡಿ. ದೇವೇಗೌಡ.—ಮಾನ್ಯ ಸದಸ್ಯರು ಈ ಸದನದ ಸದಸ್ಯರಾಗಿ ಎಷ್ಟು ವರ್ಷಗಳಿಂದ ಕೆಲಸ ಮಾಡುತ್ತಿದ್ದಾರೆ. ನಾನು ವಿರೋಧಪಕ್ಷದ ನಾಯಕನಾಗಿದ್ದಾಗ ಅಂದರೆ ೧೯೭೭-೮೦ನೇ ಇಸವಿಯಲ್ಲಿ ಯಾವ ದಾಖಲೆಗಳು ಬೇಕಾದರೂ ನನ್ನ ಕೈಗೆ ಬರುತ್ತಿದ್ದವು. ಮಾನ್ಯ ಸದಸ್ಯರಾದಂತಹ ಶ್ರೀಮಾನ್ ಕೃಷ್ಣಪ್ಪನವರು ಮನಸ್ಸು ಮಾಡಿದರೆ ಯಾವ ದಾಖಲೆಗಳು ಬೇಕಾದರೂ ತರಬಹುದು. ಆದರೆ ಕೆಲವೊಂದು ಸಾರಿ ಕ್ಯಾಬಿನೇಟ್ ಮೀಟಿಂಗ್‌ನಲ್ಲಿ ಮಾನ್ಯ ಮಂತ್ರಿಗಳು ತೆಗೆದುಕೊಂಡಂಥ ತೀರ್ಮಾನಗಳು ಹೊರಗಡೆ ಬರುತ್ತವೆ ಅಂತಹ ಸಂದರ್ಭದಲ್ಲಿ ದಾಖಲೆಗಳು ತರುವುದು ಕಷ್ಟದ ಕೆಲಸವೇನೂ ಅಲ್ಲ, It is a very minor matter. I am not going to attach much importance to it. ಒಂದುಸಾರಿದುರ್ದೈವ ಏನಾಗಿದೆ ಎಂದರೆ ಹಿಂದಿನಮಾನ್ಯ ಮುಖ್ಯಮಂತ್ರಿಗಳು. ಕ್ಯಾಬಿನೇಟ್ ಮೀಟಿಂಗ್‌ನಲ್ಲಿ ಒಂದು ನಿಲುವನ್ನು ಸುಮಾರು ೧೨-೩೦ ಗಂಟೆಯಲ್ಲಿ ತೆಗೆದುಕೊಂಡರು ಆದರೆ ಆ ತೀರ್ಮಾನದ ಬಗ್ಗೆ ನಾನು ಈ ಸದನದಲ್ಲಿ ೨-೩೦ ಕ್ಕೆ ರೈಜ್ ಮಾಡಿದ್ದೇನೆ. ಆಗ ಈ ಕ್ಯಾಬಿನೇಟ್ ಮೀಟಿಂಗ್‌ನಲ್ಲಿ ಆದಂಥ ತೀರ್ಮಾನ ಮಾನ್ಯ ಸದಸ್ಯರಿಗೆ ಯಾವ ರೀತಿ ದೊರಕಿತು ಎಂದು ಹೇಳಿ ಸಂಬಂಧಪಟ್ಟ ಪಿ. ಡಬ್ಲ್ಯೂ. ಡಿ, ಕಾರ್ಯದರ್ಶಿಯನ್ನು ಕರೆಸಿ ಕೇಳಿದ್ದಾರೆ. That poor P.W.D. Secretary did not know anything. In the name of God I swear in this House that he was innocent. That poor officer has been massacred and he has been posted to nine places in a period of five months. ಈಗ ಆ ಅಧಿಕಾರಿ ಡೆಲಿಯಲ್ಲಿ ಕೆಲಸ ಮಾಡುತ್ತಿದ್ದಾರೆ. ಆದರೆ ಆ ವಿಷಯದ ಬಗ್ಗೆ ಈಗ ಚರ್ಚೆ ಬೇಡ.

ಶ್ರೀ ಎಂ. ಸಿ. ನಾಣಯ್ಯ.—ಈಗ ಈ ಮಾಹಿತಿಯನ್ನು ಯಾರು ಕೊಟ್ಟರು ಎಂದು ಕೇಳಿ ಯಾರಿಗಾದರೂ ತೊಂದರೆ ಮಾಡಿದರೆ ಏನು ಮಾಡುವುದು. ?

ಶ್ರೀ ಹೆಚ್. ಡಿ. ದೇವೇಗೌಡ.—ನಾವು ಇದರ ಬಗ್ಗೆ ಚರ್ಚೆ ಮಾಡಿ ಸರಿಯೆಂದು ಹೇಳಿ ಭ್ರಷ್ಟಾಚಾರದ ಆರೋಪವನ್ನು ಸಹ ಮಾಡುವುದಕ್ಕೆ ಹೋಗುವುದಿಲ್ಲ. ಭ್ರಷ್ಟಾಚಾರದ ಸಂಖ್ಯೆಯನ್ನು ಹೆಚ್ಚು ಮಾಡಿ ಆಪಾದನೆ ಮಾಡುವುದರಲ್ಲಿ ಯಾವ ಅರ್ಥವಿಲ್ಲ. ರಾಜಕೀಯವಾಗಿ ಆಪಾದನೆಗಳನ್ನು ಮಾಡುವುದು ನಡೆದುಕೊಂಡು ಬಂದಿದೆ. I have taken a decision in this regard. ಆದ್ದ

ರಿಂದ ನಾನು ಯಾರ ಮೇಲೂ ಭ್ರಷ್ಟಾಚಾರದ ಆಪಾದನೆ ಮಾಡುವುದಕ್ಕೆ ಹೋಗುವುದಿಲ್ಲ. ಮಾನ್ಯ ಸದಸ್ಯರಾದಂತಹ ಶ್ರೀಮಾನ್ ಇಬ್ರಾಹಿಂ ರವರು ಒಂದು ಮಾತನ್ನು ಹೇಳಿದರು. ಮೊದಲು ಹರಿಜನ ಮತ್ತು ಗಿರಿಜನರ ಮೇಲೆ ಆಪಾದನೆಯನ್ನು ಮಾಡಿದರು ಮತ್ತೇ ಮೈನಾರಿಟೀಸ್ ಮೇಲೆ ಆಪಾದನೆಯನ್ನು ಮಾಡಿದರು ನಂತರ ಈಗ ಬ್ಯಾಕ್‌ವರ್ಡ್ ಕಮ್ಯುನಿಟಿಯವರ ಮೇಲೆ ಆಪಾದನೆ ಮಾಡುವುದಕ್ಕೆ ಹೊರಟ್ಟಿದ್ದೀರಿ ಎಂದು, ಆದರೆ ರೇಣುಕಾರಾಜೆಂದ್ರನ್‌ರವರ ವಿಷಯದಲ್ಲಿ when I was the President of the Party, I received that letter. It is not a new thing to me. When I was the Party Leader and the Leader of the Opposition. I reeeived that latter and I took a magnanimous view that it is a very small matter. I myself took that decision. The Hon'ble Minister Sri Kagodu Thimmappa might be knowing it. ಅಸತ್ಯಕ್ಕೆ ಕೈ ಹಾಕುವುದು ಬೇಡ. ಇದು ನನಗೆ ಅರ್ಥವಾಗಿಲ್ಲ. ನಾನು ಒಂದೇ ಕಡೆ ಕುಳಿತುಕೊಂಡು ಕೆಲಸ ಮಾಡಿದ್ದೇನೆ. ನಾನು ವಿರೋಧಪಕ್ಷದಲ್ಲಿ ಇದ್ದಾಗ ಅರಸುರವರ ಮೇಲೆ ಸಾಕಷ್ಟು ದೂರುಗಳು ಬಂದಿದ್ದವು. ಸದಾಶಿವ ನಗರದ ಬಗ್ಗೆ ಹೇಳಿದರು. ಆದರೆ ನಾನು ಅಂತಹ ಕೆಳಮಟ್ಟದ ರಾಜಕೀಯವನ್ನು ಮಾಡುವಂತಹ ಅವಶ್ಯಕತೆ ನನಗೇನು ಇಲ್ಲ. ಆದರೆ ಅಧಿಕಾರ ಬರುವುದು, ಹೋಗುವುದು ಮುಖ್ಯವಲ್ಲ, ಆದರೆ ಜೀವನದಲ್ಲಿ ಒಂದೇ ಪರಿಸ್ಥಿತಿ ಇರುವುದಕ್ಕೆ ಸಾಧ್ಯವಿಲ್ಲ. But do not make discrimination when you are going to take disciplinary action. In all humility, I would like to represent through this House that caste should not become a yardstick. ಮತ್ತೇ ತಮ್ಮ ಡಿವಿಜನ್‌ನಲ್ಲಿ ಒಬ್ಬರನ್ನು ಸಸ್‌ಪೆಂಡ್ ಮಾಡಿದ್ದಾರೆ, He is the Executive Engineer in the Chamarajanagar division, I know him, His father ie no more. They are my voters. But accidentally, he also belongs vokkaliga community. ಟ್ರೈಬಲ್‌ಒಂದು ಟೆಂಡರ್‌ಅನ್ನು ಕರೆದಿದ್ದಾರೆ, ಅದು ಏನಾಗಿದೆ ಎಂದು ಮಾನ್ಯ ಮಂತ್ರಿಗಳು ಈ ಸದನಲ್ಲಿಯೇ ಇರುವುದರಿಂದ ಉತ್ತರ ಹೇಳಬಹುದ. ಒಂದು ವೇಳೆ ನಾನು ಹೇಳುತ್ತಿರುವುದು ತಪ್ಪು ಇದ್ದರೆ ತಿದ್ದಿಕೊಳ್ಳಬಹುದು. ಆದರೆ ಸ್ವಾಮಿ ಪ್ಯಾಕ್ಟ್ ಆಫ್ ದಿ ಕೇಸ್ ಏನು ಎಂದರೆ ೧-೧೨-೧೯೮೧ ರಲ್ಲಿ ನೋಟಿಫಿಕೇಷನ್ ಮಾಡಿದ್ದೀರಿ. ಅದು ನಂತರ ದಿನಾಂಕ ೨೬-೧೨-೧೯೮೧ ಒಳಗೆ ಟೆಂಡರ್‌ಗೆ ಬರಬೇಕಾಗಿತ್ತು.

೧೨-೦೦ ಮಧ್ಯಾಹ್ನ

ಅವರು ಒಂದು ಕಾಗದವನ್ನು ಬರೆದರು. The Superintending Engineer, Mysore circle, has directed vide his letter No. 11090-96 dated 5th January 1982 to the Executive Engineer to re-tender after splitting up the works. ಪಾಪ ಅವರು ವರ್ಕ್ಸ್‌ನ್ನು ಸ್ಪ್ಲಿಟ್ ಮಾಡಿದರು. ೧೨-೧-೧೯೮೨ಕ್ಕೆ ಟೆಂಡರ್ ನೋಟಿಫಿಕೇಷನ್ ಹೊರಡಿಸಿ, ೨೭-೧-೧೯೮೨ಕ್ಕೆ ಲಾಸ್ಟ್ ಡೇಟ್ ಫಿಕ್ಸ್ ಮಾಡಿದರು. ಇದಾದ ಮೇಲೆ ಟೆಂಡರ್ ಷೆಡ್ಯೂಲ್ಡ್ ಅಪ್ರೂವ್ ಆಗಲಿಲ್ಲ. ೨೭-೧-೧೯೮೨ ಲಾಸ್ಟ್ ಡೇಟ್ ಇದ್ದದ್ದು ೨೭-೨-೧೯೮೨ಕ್ಕೆ ಅದು ಪೋಸ್ಟ್‌ಪೋನ್ ಆಯಿತು, ಈ ಮಧ್ಯದಲ್ಲಿ ಎಸ್.ಇ ಮತ್ತು ಆಫೀಸರ್ಸ್ ಮೀಟಿಂಗ್ ಆಯಿತು. ೨ ದಿನಗಳ ಕಾಲ ಸೂಪರಿಂಟೆಂಡೆಂಟ್ ಇಂಜಿನಿಯರ್ ಆಫೀಸರ್ಸ್ ಮೀಟಿಂಗ್‌ಗೆ ಹೋದರು. ಅಲ್ಲಿ ಪ್ರಪೌಂಡ್ ಮಾಡುವುದಕ್ಕೆ ಡಿಲೇ ಆಯಿತು ಎಂದು ಹೇಳಿದರು. ಆ ಮೇಲೆ ಪ್ರಪೌಂಡ್ ಮಾಡಿದರು, ಪ್ರಪೌಂಡ್ ಮಾಡಿದ ನೋಟಿಫಿಕೇಷನ್ ಅನ್ನು ಎಸ್.ಇ ಗೆ ಕಳಿಸಿಕೊಟ್ಟರು. ಇದರ ಮೇಲೆ ಕಾಮೆಂಟ್ಸ್ ಇಲ್ಲ. ನಾನು ಫೋನ್‌ನಲ್ಲಿ ಮಾತನಾಡಿದ್ದೇನೆ. ಅವರು ಇಲ್ಲ ಎಂದು ಹೇಳಲಿ, ಆ ಮೇಲೆ ವಿಚಾರ ಮಾಡೋಣ. ಇದಾದ ಮೇಲೆ ಪ್ರಪೌಂಡ್ ಡೇಟ್‌ಗೂ ಯಾರಿಂದಲೂ ಟೆಂಡರ್ ಬರಲಿಲ್ಲ. ಇದಾದ ಮೇಲೆ ಮತ್ತೆ ಫರ್ದರ್ ಪೋಸ್ಟ್‌ಪೋನ್ ಆಯಿತು. ಈ ಮಧ್ಯೆ ಒಬ್ಬ ಕೋರ್ಟಿಗೆ ಹೋದ, ಕಾರಣ ವೈಡ್ ಪಬ್ಲಿಸಿಟಿ ಸಿಕ್ಕಲಿಲ್ಲ ಎಂದು ಹೇಳಿ ಅವನು ಹೋದ. ಅದರ ಕಾಪಿ ಕೂಡ ನನ್ನ ಹತ್ತಿರ ಇದೆ. ಆಮೇಲೆ ೧೬-೩-೧೯೮೨ಕ್ಕೆ ಮತ್ತೆ ಟೆಂಡರ್ ಕರೆದರು. Even at that stage the S.E interfered in the matter and gave directions to the Executive Engineer in Bangalore on 15 4-1982 While attending a meeting to

extend the date of receipt of tender to a further date on a contention that many contractors working in Chamaraja nagar division have not renewed. ಮೊದಲು ಕ್ಲಾಸ್ (ಎ) ಕಂಟ್ರಾಕ್ಟರ್ಸ್ ಇಲ್ಲ ಎಂದು ಹೇಳಿ ಸ್ಪ್ಲಿಟ್ ಮಾಡುವುದಕ್ಕೆ ಹೇಳಿದರು. ಈ ಬಗ್ಗೆ ನಾನು ಈಗಾಗಲೇ ತಮ್ಮ ಮುಂದೆ ಚರ್ಚೆ ಮಾಡಿದ್ದೇನೆ. ಇಷ್ಟೆಲ್ಲಾ ಆದ ಮೇಲೆ ಎಕ್ಸಿಕ್ಯುಟಿವ್ ಇಂಜಿನಿಯರನ್ನು ಮತ್ತು ಸೂಪರಿಂಟೆಂಡಿಂಗ್ ಇಂಜಿನಿಯರನ್ನು ಸಸ್ಪೆನ್ಷನ್ ನಲ್ಲಿ ಇಟ್ಟಿದ್ದರೆ ನಾನೇನೂ ಅವರ ಮೇಲೆ ದೋಷಾರೋಪಣೆ ಮಾಡುತ್ತಾ ಇರಲಿಲ್ಲ There are eight contractors which fact has been admitted by your Chief Engineer. He has reported to Government. I have got a copy of that also. I feel both of them would have been kept under suspension. They may be vokkaligas or otherwise. I am not bothered about that. Disciplinary action cannot be taken on the basis of caste. Posting is your prerogative right. Put any man in any place, I have no objection. I don't question that. But while taking disciplinary action you cannot make discrimination between the persons on the basis of caste. The aggrieved officer has gone to the extent of writing to the Divisional Commissioner himself. I have got a copy of that. I can show you umpteen number of such instances. ಅದರ ಒಂದು ಕಾಪಿ ಯನ್ನು ನಾನು ತಮಗೆ ಕಳಿಸಿಕೊಟ್ಟಿದ್ದೇನೆ ಈ ಬಗ್ಗೆ ಒಂದು ಪಟ್ಟಿಯನ್ನೇ ಇಟ್ಟುಕೊಂಡಿದ್ದೇನೆ. ಅದನ್ನೆಲ್ಲಾ ಹೇಳುತ್ತಾ ಹೋದರೆ ಬಹಳಷ್ಟು ಆಗುತ್ತದೆ.

SRI V. V. PATTAR.—Whenever there is a possibility of tampering of evidences by an official he has to be kept under suspension. This order is made for that purpose. Government, in some cases, may come to the conclusion that there is no question of tampering of evidences and therefore he may not be kept under suspension I would like to know whether the hon'ble member is of the opinion that such officials should also be kept under suspension where tampering of evidences is not possible ?

ಶ್ರೀ ಹೆಚ್. ಡಿ. ದೇವೇಗೌಡ —ಸ್ವಾಮಿ, ಈಗ ತಾನೇ ಮಾನ್ಯ ಸದಸ್ಯರು, ಕೆಲವು ಕೇಸ್‌ಗಳಲ್ಲಿ ಸರ್ಕಾರದವರು ಟ್ಯಾಂಪರಿಂಗ್ ಆಫ್ ಎವಿಡೆನ್ಸ್ ಆಗಿಲ್ಲ ಎನ್ನುವ ಅಭಿಪ್ರಾಯಕ್ಕೆ ಬಂದುಬಿಡಬಹುದು ಎನ್ನತಕ್ಕಂಥ ಮಾತನ್ನು ಹೇಳಿದರು. ಅದು ಯಾವ ಸಂದರ್ಭದಲ್ಲಿ ಎಂಬುದನ್ನು ಅವರು ಹೇಳಿದರೆ ನಾನು ಅದನ್ನು ಒಪ್ಪಿಕೊಳ್ಳುತ್ತೇನೆ.

SRI V. V. PATTAR.—It is an administrative decision, we cannot question that.

ಶ್ರೀ ಹೆಚ್. ಡಿ. ದೇವೇಗೌಡ.—ಇದು ತೊಗಲಕ್ ದರ್ಬಾರ್ ಅಲ್ಲ ಇದು ಪ್ರಜಾಪ್ರಭುತ್ವದ ಸರ್ಕಾರ.

SRI M. C. NANIAH.—Sir, the hon'ble member Sri Pattar may be taken as an advisor to P.W.D.

SRI H. D. DEVEGOWDA.—Sir, this House has got a right to scrutinise all these things. ಆದರೆ ಅಂತಹ ಒಂದು ಕಾಲ ಬಹಳ ಹಿಂದೆಯೇ ಹೊರಟು ಹೋಯಿತು. ಪ್ರತಿಯೊಂದು ಇಷ್ಯೂ ಬಗ್ಗೆ ವಿಮರ್ಶೆ ಮಾಡುವುದಕ್ಕೆ ಜನ ನಮಗೆ ಅಧಿಕಾರ ಕೊಟ್ಟಿದ್ದಾರೆ. ಆದರೆ ಪ್ರತಿಯೊಂದು ವಿಚಾರವನ್ನೂ ಪಾರ್ಟಿ ಇಷ್ಯೂವಾಗಿ ತೆಗೆದುಕೊಳ್ಳುತ್ತಾ ಇರುವುದ

ರಿಂದ ಈ ಬಗ್ಗೆ ನಮಗೆ ಅವಕಾಶವಾಗುತ್ತಾ ಇಲ್ಲ. ಈ ಸದನದಲ್ಲಿ ಅಂತಹ ಒಂದು ಅಧಿಕಾರ ಇಲ್ಲ ವಾಗಿದೆ. ಇಂತಹ ಒಂದು ಪಾರ್ಟಿ ಸಿಸ್ಟಂನಿಂದ ಒಂದೊಂದು ಸಾರಿ ಕಷ್ಟವಾಗುತ್ತದೆ.

ಶ್ರೀ ಜಿ. ರಾಜುಗೌಡ.—ಮಾನ್ಯ ಅಧ್ಯಕ್ಷರೇ, ಚಾಮರಾಜನಗರದ ಎಕ್ಸಿಕ್ಯುಟಿವ್ ಇಂಜಿನಿಯರ್ ಸೇವೆಯನ್ನು ಅಮಾನತ್ತಿನಲ್ಲಿ ಇಡುವ ಬಗ್ಗೆ ಅವರು ಕೆಲವು ವಿಚಾರಗಳನ್ನು ಮಾತನಾಡಿದರು. ಅದು ನಮ್ಮ ತಾಲ್ಲೂಕಿಗೆ ಸಂಬಂಧಪಟ್ಟಂತಹ ವಿಷಯ. ಟ್ರೈಬಲ್ ಸಬ್‌ಪ್ಲಾನ್‌ನಲ್ಲಿ ನನ್ನ ಕ್ಷೇತ್ರದಲ್ಲಿ 9 ರಸ್ತೆಗಳನ್ನು ಮಾಡಲು ಸರ್ಕಾರ ಮಂಜೂರಾತಿ ನೀಡಿತು.

CHAIRMAN.—Why are you interfering. Let him continue.

ಶ್ರೀ ಜಿ. ರಾಜುಗೌಡ.—ಅದು ಹೇಗೆ ಆಯಿತು ಎಂದು ಹೇಳುವುದಕ್ಕೆ ನನಗೆ ಅವಕಾಶ ಕೊಡಿ.

ಶ್ರೀ ಕಾಗೋಡು ತಿಮ್ಮಪ್ಪ.—ನೀವು ಹೇಳುವುದನ್ನೇ ಅವರೂ ಹೇಳುತ್ತಿದ್ದಾರೆ.

ಶ್ರೀ ಜಿ. ರಾಜುಗೌಡ.—ಇದರಲ್ಲಿ ಸ್ವಲ್ಪ ವ್ಯತ್ಯಾಸವಿದೆ. ನಾನು ಆಗಲೇ ಹೇಳಿದ ಹಾಗೆ ಸರ್ಕಾರ ಅದಕ್ಕೆ ಮಂಜೂರಾತಿ ಕೊಟ್ಟ ನಂತರ ಟೆಂಡರ್‌ಗಳನ್ನು ಕಾಲ್ಫರ್ ಮಾಡಿದರು. ಯಾವುದೋ ಒಂದು ಡೇಟ್‌ನಲ್ಲಿ ಟೆಂಡರ್ ಫಾರಂ ಕೊಟ್ಟರು. 10 ಜನ ಕಂಟ್ರಾಕ್ಟರ್‌ಗಳು ಫಾರಂ ತೆಗೆದುಕೊಂಡರು. ಈ ಲೋಕೋಪಯೋಗಿ ಇಲಾಖೆಯ ಚರಿತ್ರೆಯಲ್ಲಿ ಯಾವುದೇ ಕೆಲಸಕ್ಕೆ ಪ್ರಪೌಂಡ್ ಮಾಡಿರಲಿಲ್ಲ ಎಂದು ನನಗನ್ನಿಸುತ್ತಿದೆ. ಇದಕ್ಕೆ ಮಾತ್ರ ಪ್ರಪೌಂಡ್ ಮಾಡಿದರು. ಇದರಲ್ಲಿ 6 ಜನರಿಂದ ಟೆಂಡರ್ ಫಾರಂನ್ನು ತೆಗೆದುಕೊಂಡರು. ಅವರಲ್ಲಿ ಇನ್ನುಳಿದ ನಾಲ್ಕು ಜನ ಟೆಂಡರ್ ಫಾರಂ ಹಾಕಲಿಲ್ಲ. ಇದರಲ್ಲಿ ಅಗ್ರೀವ್ಡ್ ಕಂಟ್ರಾಕ್ಟರ್ ಯಾರಿದ್ದಾನೆ ಅವನನ್ನು ಕರೆದುಕೊಂಡು ಬಂದು ಲೋಕೋಪಯೋಗಿ ಇಲಾಖೆ ಯಲ್ಲಿ ಅರ್ಜಿ ಕೊಡಿಸಿದವನು ನಾನು. ಏಕೆಂದರೆ ಅಲ್ಲಿ ಯಾವುದೇ ವಿಧವಾದ ತೊಂದರೆಯಾಗಬಾರದು ಎಂದು ಹೇಳಿ. ಆವರೂ ಇದರಲ್ಲಿ ತೊಂದರೆಯಾಗಿರುವುದು ಕಂಡುಬಂತು. ಈ ಬಗ್ಗೆ ಪರಿಶೀಲನೆ ಮಾಡಿ ನ್ಯಾಯ ದೊರಕಿಸಿಕೊಡುತ್ತೇನೆ ಎಂದು ಅಲ್ಲಿಯ ಅಧಿಕಾರಿಯವರು ಹೇಳಿದರು. ಮತ್ತು ಸಂಬಂಧಪಟ್ಟ ಫೈಲನ್ನು ಪಿ ಡಬ್ಲ್ಯುಡಿ. ಸೆಕ್ರೆಟರಿಯವರಿಗೆ ಕಳಿಸಿಕೊಟ್ಟರು. ಆ ರೀತಿ ಮಾಡಿರ ತಕ್ಕಂಥದ್ದು ತಪ್ಪು ಎಂದು ಹೇಳಿ ಅವರು ಅದನ್ನು ಮೇಲಕ್ಕೆ ಕಳಿಸಿಕೊಟ್ಟರು. ಇದೆಲ್ಲಾ ಸತ್ಯವಾಗಿರ ತಕ್ಕಂಥ ವಿಚಾರ,

ಶ್ರೀ ಎಚ್. ಡಿ. ದೇವೇಗೌಡ.—ಮಾನ್ಯ ಅಧ್ಯಕ್ಷರೇ, ಮಾನ್ಯ ರಾಜುಗೌಡರವರು ಈ ಬಗ್ಗೆ ಬೆಳಕನ್ನು ಚೆಲ್ಲಿದ್ದಾರೆ. ಅದಕ್ಕಾಗಿ ನಾನು ಅವರಿಗೆ ಆಭಾರಿಯಾಗಿದ್ದೇನೆ. ನಾನು ಹೇಳಿದುದಕ್ಕಿಂತ ಪ್ರತ್ಯೇಕವಾಗಿ ಅವರು ಏನೂ ಹೇಳಿಲ್ಲ. ಅಲ್ಲಿ ಪ್ರಪೌಂಡ್ ಮಾಡಿದ್ದನ್ನು ನಾನೂ ಕೂಡ ಹೇಳು ತ್ತಿದ್ದೇನೆ. ಫಸ್ಟ್ ನೋಟಿಫಿಕೇಷನ್ ಮಾಡತಕ್ಕಂಥ ಸಂದರ್ಭದಲ್ಲಿ ಸ್ಪ್ಲಿಟ್ ಮಾಡಬೇಕೆಂದು ಹೇಳಿದರಲ್ಲ ಅದನ್ನು ಏತಕ್ಕೆ ಹೇಳಿದರು ? When there are 8 class-II contractors in that particular division what was the reason for the S.E to give directions for splitting the estimates ? Is it to help a particular individual by S.E ? Who is responsible ?

ಶ್ರೀ ಕಾಗೋಡು ತಿಮ್ಮಪ್ಪ.—ಮಾನ್ಯ ಅಧ್ಯಕ್ಷರೇ ಅವರು ಅನೇಕ ಸಾರಿ ಪೀಸ್ ವರ್ಕ್ ಕೊಡಿ ಎಂದು ಹೇಳಿದರು. ನಾವು ಫೈನಾನ್ಸ್ ನೋಡಿಕೊಂಡು if I remember correctly. it is subject to correction.

ಶ್ರೀ ಹೆಚ್. ಡಿ. ದೇವೇಗೌಡ.—ಇದರಲ್ಲಿರುವಂತಹ ವಾಸ್ತವಾಂಶವನ್ನು ನಾನು ಮಾನ್ಯ ಮಂತ್ರಿ ಗಳ ಗಮನಕ್ಕೆ ತರುತ್ತಿದ್ದೇನೆ. ಟೆಂಡರ್ ಅನ್ನು ಕರೆದ ಮೇಲೆ ಎಸ್ಟಿಮೇಟ್ split ಮಾಡುವುದಾದರೆ when there are 8 Class II contractors, what is the sanctity. The report of the C-E. is in my hands. According to the codel rules the Executive Engineer has no powers to prepone the tender. I will come to the next point. How tenders have been fabricated, I will reveal. ಈ ವಿಷಯವನ್ನು ನಾನು ಬಹಳ ದೂರ ಎಳೆಯುವುದಕ್ಕೆ ಹೋಗುವುದಿಲ್ಲ. ತಾವು ಇಬ್ಬರನ್ನು ಸಸ್‌ಪೆಂಡ್ ಮಾಡಿದ್ದೀರಿ. If you want to give shock treatment, I

have no objection for that. I have met the P.W.D. Secretary and I have got highest regards for him. Honestly I am telling this. I also told him that I had not come to plead to revoke the suspension order. ಆಡಳಿತದಲ್ಲಿ ಲೋಪದೋಷಗಳು ಬಂದಾಗ ಅದನ್ನು ಸರಿಪಡಿಸುವುದಕ್ಕಾಗಿ ಒಂದು ನಿರ್ಣಯವನ್ನು ಮಾಡುವುದಾದರೆ I have no objection. Secretary ಅವರನ್ನು ಪ್ರಮುಖವಾಗಿ ಅಮಾನತ್ ಮಾಡಿ ಇಟ್ಟಿದ್ದಾರೆ. ಆದರೆ ಸರ್ಕಾರ ಸರಿಯಾದ ರೀತಿಯಲ್ಲಿ ರೆಕಾರ್ಡ್ಸ್‌ಗಳನ್ನು ಸಂಪೂರ್ಣವಾಗಿ ಪರಿಶೀಲನೆ ಮಾಡುವುದಕ್ಕೆ ಸಾಧ್ಯವಿಲ್ಲ. ಅದರ ಪೂರ್ಣ ವಿವರವನ್ನು ಸಹ ತಿಳಿದುಕೊಳ್ಳುವುದಕ್ಕೂ ಹೋಗುವುದಿಲ್ಲ. ಆದ್ದರಿಂದ ಸರಿಯಾಗಿ ರೆಕಾರ್ಡ್‌ಗಳನ್ನು ಪರಿಶೀಲನೆ ಮಾಡುವಷ್ಟರಲ್ಲಿ ಪ್ರಪಂಚ ಮುಳುಗಿ ಹೋಗುವುದು ಏನು ಇತ್ತು ? ಸರಿಯಾದಂತಹ ಮಾಹಿತಿಯನ್ನು ತರಿಸಿಕೊಂಡು ನೋಡಿ ಅಮಾನತ್ತು ಮಾಡಬಹುದಾಗಿತ್ತು. ಇಲ್ಲದಿದ್ದರೆ ಅವರನ್ನು ಡಿಸ್‌ಮಿಸ್ ಮಾಡಬಹುದಾಗಿತ್ತು. ಇನ್ನು ಒಬ್ಬ ಅಸಿಸ್ಟೆಂಟ್ ಸೂಪರಿನ್‌ಟೆಂಡೆಂಟ್ ಇಂಜಿನಿಯರ್ ಕೆಂಪಲಿಂಗಯ್ಯ ಎಂಬುವವರನ್ನು ಚೀಫ್ ಇಂಜಿನಿಯರ್ ರಿಪೋರ್ಟ್ ಕಳುಹಿಸಿದ್ದರಿಂದ ಸಸ್‌ಪೆಂಡ್ ಮಾಡಿದ್ದಾರೆ. ಅಲ್ಲಿ ಚೀಫ್ ಇಂಜನಿಯರ್ ರಿಪೋರ್ಟ್ ಇದೆಯೇ ? ಲೋಕೋಪಯೋಗಿ ಇಲಾಖೆಯ ಕಾರ್ಯದರ್ಶಿಗಳು ಸಂಬಂಧಪಟ್ಟ ಫೈಲ್ ತರಿಸಿಕೊಂಡು ನೋಡಿದ್ದಾರೆ. ಆದರೆ ತಾವು ಎಷ್ಟು ಜನ ಅಧಿಕಾರಿಗಳನ್ನು ಸಸ್‌ಪೆಂಡ್ ಮಾಡಿದ್ದೀರಿ. ಎಷ್ಟು ಜನ ಅಧಿಕಾರಿಗಳ ಮೇಲೆ ಚೀಫ್ ಇಂಜಿನಿಯರ್ ರಿಪೋರ್ಟ್ ಕಳುಹಿಸಿದ್ದಾರೆ. ಅವರನ್ನೆಲ್ಲಾ ತಾವು ಏತಕ್ಕೆ ಸಸ್‌ಪೆಂಡ್ ಮಾಡಲಿಲ್ಲ, The reason you have attributed is that Chief Engineer has reported so and so. ಆ ಒಬ್ಬ ಧಿಕಾರಿ ಏನೋ ಒವರ್ ಪೆಂಜರ್‌ಮೆಂಟ್ ಮಾಡಿದ ಎಂದು ಹೇಳಿ ಚೀಫ್ ಇಂಜಿನೀಯರ್ ರಿಪೋರ್ಟ್ ಕಳುಹಿಸಿದ್ದರಿಂದ ಸರ್ಕಾರದ ನಾರಮ್ಸ್ ಪ್ರಕಾರ ತಾವು ಏತಕ್ಕೆ ಸಸ್‌ಪೆಂಡ್ ಮಾಡಲಿಲ್ಲ. ನಮ್ಮ ಮಾನ್ಯ ಮಂತ್ರಿಗಳ ಕ್ಷೇತ್ರದ ಒಬ್ಬ ಅಸಿಸ್ಟೆಂಟ್ ಇಂಜಿನಿಯರ್ ಜಗನ್ನಾಥ್‌ರವರನ್ನು......I am just telling, Don't be under the impression that ನಮ್ಮ ಮಾನ್ಯ ಸಚಿವರಾದ ಶ್ರೀಮಾನ್ ರಾಮಕೃಷ್ಣರವರ ಮೇಲೆ ನಾನು ಚಾರ್ಜ್ ಮಾಡಿದ್ದೇನೆಂದು ಅವರು ಹೇಳಿದರು. You go through the proceedings. I don't want to mince the matters. ಎನ್.ಆರ್.ಇ.ಪಿ. ಸ್ಕೀಮ್‌ನಲ್ಲಿ ಹಣದ ದುರುಪಯೋಗವಾಗಿದೆ ಎಂದು ಹೇಳಿದ್ದೇನೆಂದು ಹೇಳಿದರು. Incidentally he may be a Minister there. ಈಗ ಹೇಮಾವತಿ ಪ್ರಾಜೆಕ್ಟ್‌ನಲ್ಲಿ ನಾಲ್ಕಾರು ಜನ ಅಧಿಕಾರಿಗಳು ಭ್ರಷ್ಟಾಚಾರ ಮಾಡಿದ್ದಾರೆಂದು ಹೇಳಿದ ಮೇಲೂ ಯಾರನ್ನು ತಾವು ಸಸ್‌ಪೆಂಡ್ ಮಾಡಲಿಲ್ಲ. These series of events unnecessarily give room for suspicion as well as whether there is malafide intention or not. ಆದ್ದರಿಂದ ದಯವಿಟ್ಟು ಸರ್ಕಾರ ಈ ಬಗ್ಗೆ ಎಚ್ಚರಿಕೆ ವಹಿಸಬೇಕು. ಮಾನ್ಯ ಸದಸ್ಯರಾದಂತಹ ಶ್ರೀಮಾನ್ ರಾಜುಗೌಡರು ಪ್ರಿ-ಫೋನ್ ಬಗ್ಗೆ ಕೆಲವಾರು ವಿಷಯಗಳನ್ನು ಹೇಳಿದರು. ಆದರೆ ಅದಕ್ಕೆ ನಾನು ಒಂದು ವಿಷಯವನ್ನು ಹೇಳುತ್ತೇನೆ. ದೆಹಲಿಯಲ್ಲಿ ಕರ್ನಾಟಕ ಭವನ ಕಟ್ಟುತ್ತಿದ್ದಾಗ ಅದರ ಒರಿಜನಲ್ ಕಾಸ್ಟ್ ಸುಮಾರು ೧೨ ಲಕ್ಷ ರೂಪಾಯಿಗಳು ಇದರಲ್ಲಿ ೧೦ ಲಕ್ಷ ರೂಪಾಯಿಗಳು ಪರ್ಮನೆಂಟ್ ಸ್ಟೀಲ್ ಸ್ಟ್ರಕ್ಚರ್ ಇನ್ನು ೨ ಲಕ್ಷ ಇನ್‌ಕ್ಲೂಡಿಂಗ್ ಡೆಕೋರೇಷನ್ You gave work to T.S.P. It is a Government Organisation. They manufacture steel structures. They reached Delhi. ಈಗಲೂ ಆ ಸ್ಟೀಲ್ ಕರ್ನಾಟಕ ಭವನದ ಹಿಂದೆ ಬಿದ್ದಿದೆಯೋ ಏನೋ ಯಾರಿಗೆ ಗೊತ್ತು. ನಾಗಪುರದ ಬಳಿ ಲಾರಿ ಆಕ್ಸಿಡೆಂಟ್ ಆಯಿತು. ಮತ್ತೆ ಪ್ರಧಾನ ಮಂತ್ರಿಗಳ ಕಾರ್ಯದರ್ಶಿಗಳು ಹೇಳಿದರು ಕರ್ನಾಟಕ ಭವನದ ಕೆಲಸ ಬಹಳ ವಿಳಂಬವಾಗುತ್ತಿದೆ. ಆದ್ದರಿಂದ ಅದನ್ನು ತ್ವರಿತವಾಗಿ ಮಾಡಿ ಎಂದು ಹೇಳಿದರು. ಇದರ ವಾಸ್ತವಾಂಶವನ್ನು ಪರಿಶೀಲನೆ ಮಾಡಿದರೆ I don't want to attribute motives. Decision changed. P.W.D Secretary rushed to Delhi. A pavilion of wooden structure was constructed. What is the cost ? 24 or 25 lakhs. Executive Engineer, Bangalore Division, went to Delhi on November 22. He gave tender form to contractor. ಎಲ್ಲಾ ಅಧಿಕಾರಿಗಳು ಪ್ರಿಫೋನ್ ಮಾಡುವುದಾದರೆ

ಅವರೆಲ್ಲರನ್ನು ತಾವು ಸಸ್‌ಪೆಂಡ್ ಮಾಡಿದ್ದೀರಾ ? ಏನೂ ಇಲ್ಲ. ಈ ಇಂಡಸ್ಟ್ರಿಯಲ್ ಎಗ್ಜಿಬಿಷನ್ ಮುಗಿದು ಹೋಯಿತ ಇದರ ಬಗ್ಗೆ ಎಸ್ಟಿಮೇಟ್ ಸಬ್‌ಮಿಟ್ ಮಾಡಿದ್ದು ಆಯಿತು. ಲೋಕೋಪಯೋಗಿ ಇಲಾಖೆಯವರಿಗೆ ರಾಜ್ಯ ಸರ್ಕಾರ ಕೆಲಸ ಮಾಡಿ ಎಂದು ಹೇಳಿದ್ದು ಆಯಿತು. ಆ ಲೋಕೋಪಯೋಗಿ ಇಲಾಖೆಯವರು ಹೋಗಿ ಕೆಲಸವನ್ನು ನೋಡಿಕೊಂಡು ಬಂದಿದ್ದು ಆಯಿತು. ಆದರೆ ಅವರು ಅಲ್ಲಿಗೆ ಹೋಗಿ ಹಣವನ್ನು ತಮ್ಮ ಕಿಸೆಯಲ್ಲಿ ತುಂಬಿಕೊಂಡು ಬಂದರು ಎಂದು ನಾನು ಆಪಾದನೆ ಮಾಡುವುದಕ್ಕೆ ಹೋಗುವುದಿಲ್ಲ. ಅನ್ಯಾಯ ಮಾಡಿದ್ದಾರೆ ಎನ್ನುವ ಮಾತನ್ನು ಸಹ ಹೇಳುವುದಕ್ಕೆ ನಾನು ಹೋಗುವುದಿಲ್ಲ. Internal decoration has removed. Estimate was submitted. Payment was made to the contractor. 1:6 payment was made for a temporary wooden structure. ನಾಗಪುರದ ಬಳಿ ಲಾರಿ ಆಕ್ಸಿಡೆಂಟ್ ಆಯಿತು. ಮತ್ತೇ ಅದಕ್ಕೆ ಬೆಂಕಿ ಬಿದ್ದಿತ್ತು. ತುಂಗಭದ್ರಾ ಸ್ಟೀಲ್ ಪ್ರಾಜೆಕ್ಟ್‌ನವರು ಮೂರು ದಿವಸಗಳಲ್ಲಿ ಮಾಡಿ ಮುಗಿಸುತ್ತಿದ್ದರು. ಆದರೆ ಅಲ್ಲಿಗೆ ತೆಗೆದುಕೊಂಡು ಹೋಗಿದ್ದಾರೆ. ನಾಗಪುರದಲ್ಲಿ ಆಕ್ಸಿಡೆಂಟ್ ಆಯಿತು. ಎರಡು ಸಲ ಬೆಂಕಿ ಬಿದ್ದಿದೆ. ಇಂಡಸ್ಟ್ರೀಯಲ್ ಪೆವಿಲಿಯನ್‌ದಲ್ಲಿ ಕರ್ನಾಟಕದ ಮಳಿಗೆಗೆ ಮಾತ್ರ ಅಗ್ನಿದೇವ touch ಮಾಡಿದ ; Please get all the records and place it on the table or the House tomorrow. What is the technical report given by the lower subordinate officers ? What is the report of the Executive Engineer ? What is the report of the Superintending Engineer ? Place the facts before the House. Let us examine and override the scrutiny. I would like to ask that all these matters be placed on the table of the House. It is not the question of case alone being the criterion here. ಅಲ್ಲಿ ಯಾರೋ ಟೆಂಡರನ್ನು ಪ್ರಪೋಸ್ ಮಾಡಿದ್ದಾರೆ. ಮತ್ತೊಂದನ್ನು ಬೇರೆಯವರಿಗೆ ಕೊಡುವ ಸಲುವಾಗಿ ಹಿಂದಿನ ಡೇಟ್ ಅನ್ನು ಹಾಕಿದ್ದಾರೆ. ಮಾಡುವುದಕ್ಕೆ ಪ್ರಶ್ನೆ ಇಲ್ಲ. This cannot be allowed to go on because this House has got the power to override the scrutiny of the accounts that we are going to sanction. There is a notification issued by the Executive Engineer, Buildings Division, Bangalore, to purchase 5,900 tonnes of steel. It costs about Rs. 3 crores. ಸ್ವಾಮಿ, ಮೂರು ಕೋಟಿ ರೂಪಾಯಿಗಳ ಪರ್ಚೆಸ್ ಟೆಂಡರನ್ನು ಒಬ್ಬ ಎಕ್ಸಿಕ್ಯೂಟಿವ್ ಇಂಜಿನೀಯರ್ ಕರೆದಿದ್ದಾರೆ. What is the purchase power of the Executive Engineer ? Rs. 7,500, according to Codel Rules. You cannot find anywhere in the codel rule powerto prepone the tender. Is there any case of this nature that an Executive Engineer, who has got powers to purchase articles worth Rs.7,500, has got the courage to call for tenders worth Rs.3 crores to purchase steel?

CHAIRMAN.—He may have only the authority to call tenders.

SRI H. D. DEVE GOWDA,—It is a purchase, I know. I have sufficiently tried to digest myself not for the benefit of others but for the henefit of myself. ಇದನ್ನು ನಾನು ಒಪ್ಪುವುದಕ್ಕೆ ಸಾಧ್ಯವಿಲ್ಲ. ಈ ಹಂತದಲ್ಲಿ ತಿಕ್ಕಾಟ ನಡೆದು ಅದು ಅಲ್ಲಿಗೇ ನಿಂತು ಹೋಯಿತು. You know how to regulate the discipline in the Finance Department. Who authorised him? Whether they prepared the estimate and submitted it to Government and obtained the the powers after the sanction to purchase steel ಏನು ನಡೆದಿದೆ ಅದರ ಹಿನ್ನೆಲೆಯಲ್ಲಿ ಮುಂದೆ ಹೋಗುವುದಕ್ಕೆ ಯೋಚನೆ ಮಾಡಬೇಕಾಗುತ್ತದೆ. A man who has been

posted to Corporation. one Ashwatha Narayana, - I am sorry, I did not want to mention any name, came in the way.

ಎಲ್ಲಿ ಪರ್ಚೆಸ್ ಮಾಡಬೇಕು ಸ್ವಾಮಿ ಇದನ್ನು ? ೧೬ ಲಕ್ಷ ರೂಪಾಯಿಯ ಸ್ಟೀಲ್‌ನ್ನು ಎಲ್ಲಿ ಪರ್ಚೆಸ್ ಮಾಡಬೇಕು ? The Superintending Engineer has not agreed to accept whatever was received by the Buildings Division Executive Engineer and the matter could not be finalised. Unfortunately the Government has taken decision to post the same Executive Engineer as Superintending Engineer now. Of course, posting is your prerogative right and I have no business. ಭದ್ರಾವತಿಯಲ್ಲಿ ಪರ್ಚೆಸ್ ಮಾಡಿಲ್ಲ. ಒಬ್ಬ ಖಾಸಗಿ ಡೀಲರ್ another Rs. 60 lakhs worth of steel has been purchased for the National Highways by the Headquarters Engineers. It is Rs. 60 lakhs approximately but it may be a little more. What is your Government Order regarding purchase ? Whether it should be from Bhadravathi Iron and Steel or from the Steel Authority of India, Hindustan Steels or from approved rerollers by the Government ? where from the steal was purchased ? Whether it has been used ? Whether they have been in a position to use it ? It is going to be brittle because it is a substandard steel from that dealer. Is there any certificate from the Bhadravathi Iron and Steel that they had no stock? If you want to regulate them, well, we will welcome it. Whoever he may be. hang him.

ಕೆ ಆರ್. ಮಾರ್ಕೆಟ್ ಸರ್ಕಲ್‌ನಲ್ಲಿ ಗುಂಡು ಹೊಡೆಸಿ ಅದು ನಿಮ್ಮ ಇಷ್ಟ ೩೫ ಜನ ಅಧಿಕಾರಿಗಳ ಮನೆಗಳ ಮೇಲೆ ರೈಡ್ ಮಾಡಿದ್ದಾರೆ. ತಾವು ದಯಮಾಡಿ ಇದನ್ನು ಸಮಗ್ರ ದೃಷ್ಟಿಯಿಂದ ಯೋಚನೆ ಮಾಡಬೇಕು ಎಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ. ಯಾರೋ ಅಬ್ಬೆ ಬಾರಿಗಳ ಪ್ರಶ್ನೆಯಲ್ಲ, ಒಂದು ಜಾತಿಯ ಪ್ರಶ್ನೆ ಅಲ್ಲ. ಸ್ವಾಮಿ, ಸ್ಟೀಲ್ ಪರ್ಚೇಸ್ ಮಾಡುವಾಗ ಎಕ್ಸಿಕ್ಯೂಟೀವ್ ಇಂಜಿನೀಯರ್ ಎಷ್ಟೆಷ್ಟು ಎಸ್ಟಿಮೇಟ್ ಮಾಡಬಹುದು. ಅದಕ್ಕೆ ಇಂಡೆಂಟ್ ಇದೆಯಾ ? ಯಾವಾಗ ಈ ಪದ್ಧತಿಯನ್ನು ಜಾರಿಗೆ ತರಬೇಕು? ಹಿಂದೆ ಸೆಂಟ್ರಲ್ ಸ್ಟೋರ್ ೧೯೬೨ಕ್ಕೆ ಮುಂಚೆ ಇತ್ತು. ಈಹೊಸ ಪದ್ಧತಿ ಅನುಷ್ಠಾನಕ್ಕೆ ಬರುವುದಕ್ಕೆ ಕಾರಣ ಏನು ? Whether the steel which has been purchased can be used ? Please be polite and ask, your Vigilance Commissioner to-day. He has got a band of technical officers. Let them go and examine in both the cases and submit a report by tomorrow evening. I want the report on whether the steel purchased is substandard purchased from an unrecognised dealer because there is Rs 600 variation per ton. The steel is going to be brittle if they want to fabricate. Let them report before the House tomorrow. I have no objection. If I have made any mistake of making unnecessary accusations, I will ask apology, I will make an unconditional apology because I do not want to wound the feelings of anybody.

೧೨-೩೦ ಪಿ.ಎಂ.

ನೀವು ಹೇಳಿ ಮಾಡಿಸಿದಿರಿ ಎಂದು ಹೇಳಲಿಕ್ಕೆ ನಾನು ಹೋಗೇ ಇಲ್ಲ. ಮಾನ್ಯ ತಿಮ್ಮಪ್ಪನವರೂ ನಾವಿಬ್ಬರೂ ಸ್ಟೀಲ್ ಪ್ರಕರಣವನ್ನು ನೋಡಿದ್ದೇವೆ, ನಾನು ಅವರು ಮಾಡಿದ ಭಾಷಣವನ್ನು ಇಟ್ಟು

ಕೊಂಡಿದ್ದೇನೆ. ಮಾನ್ಯ ತಿಮ್ಮಪ್ಪನವರೂ ನಾವಿಬ್ಬರೂ ಈ ಸಭೆಯಲ್ಲಿ ಭಾಷಣ ಮಾಡಿದ್ದೇವೆ, ಅವರು ಸ್ಟೀಲ್ ಭಾಷಣ ಮಾಡಿದ್ದಾರೆ, ಅವರು ನನಗಿಂತ ಹೆಚ್ಚಾಗಿ ಅಬ್ಬರಿಸಿದರು. Let us go right now–the Committee of the House-and see the eitire articles. ಅಷ್ಟು ದೂರ ಹೋಯಿತು, ಏಕೆ ಹೋಗಬೇಕು. ೬೦ ಲಕ್ಷ ರೂಪಾಯಿನ ಸ್ಟೀಲನ್ನು ನಾಳೆ ಮಧ್ಯಾಹ್ನದ ಒಳಗೆ ಬದಲಾವಣೆ ಮಾಡುವುದಕ್ಕೆ ಆಗುವುದಿಲ್ಲ, ಅದು ಎಲ್ಲೂ ಹೋಗುವುದಿಲ್ಲ. ಹೊತ್ತುಕೊಂಡು ಬರಬೇಕಾದರೆ ಅಷ್ಟು ಸಾಧ್ಯವಿಲ್ಲ. ನಿಮ್ಮ ಆಫೀಸರ್ಸ್‌ಗೆ ಹೇಳಿ ನಾಳೆ ಸಂಜೆಯೊಳಗೆ ರಿಪೋರ್ಟ್ ಬರಲಿ ಸ್ವಾಮಿ. The Central Headquarters Executive Engineer, for what businees he has got to procure materials pertaining to all the divisions in the State. ? ಗುಲ್ಬರ್ಗದಲ್ಲಿ ಯಾವನಿಗೊ ಪೇಂಟ್ ಬೇಕಾದರೆ He has got powers under the codal provisions to purchase upto Rs. 7,500 Where is the need to come here to Bangalore ? ತಾವು ಇಷ್ಟೊಂದು ಶ್ರಮಪಟ್ಟು ಹಣದ ದುಂದು ವೆಚ್ಚ ನಿಲ್ಲಿಸುತ್ತೇನೆ ಎಂದು ಒದ್ದಾಡುತ್ತಿದ್ದೀರಿ. I compliment for your efforts. ಆದರೆ ಲೆಟರ್ ಆಫ್ ಇಂಡೆಂಟ್, ಫೈನಾನ್ಸ್‌ನವರು ಹಿಂದೆ ಮುಂದೆ ಒದ್ದಾಡಿ ಮಾಡುತ್ತಾರೆ. ಮತ್ತೆ ಇಂಪೋರ್ಟೆಡ್ ಸಿಮೆಂಟ್ ಬಂತು. ವಿಶಾಖಪಟ್ಟಣದಿಂದ ಮತ್ತು ಮಂಗಳೂರಿನಿಂದ ಬೆಂಗಳೂರಿಗೆ ಸಿಮೆಂಟ್ ತರಿಸಿಕೊಂಡು ಇಲ್ಲಿಂದ ಗುಲ್ಬರ್ಗಕ್ಕೆ ಏಕೆ ಕಳಿಸಬೇಕು. ಟ್ರಾನ್ಸ್‌ಪೋರ್ಟೇಷನ್ ಚಾರ್ಜ್ ಎಷ್ಟಾಗುತ್ತದೆ. What is the transportation charge ? Why ? ವಿಶಾಖಪಟ್ಟಣದಿಂದ ಬಂದರೆ ಗುಲ್ಬರ್ಗಾಕ್ಕೆ ರಾಯಚೂರಿಗೆ ಹಾಗೇ ಕಳಿಸಿಬಿಡಿ. ಮಂಗಳೂರು ಬಂದರಿನಲ್ಲಿ ಬಂದರೆ ಹಾಗೇ ಹಾಸನ, ಕೊಡಗಿಗೆ ಕಳಿಸಬಹುದಲ್ಲ, ಅದು ಬಿಟ್ಟು ಅಲ್ಲಿಂದ ಬೆಂಗಳೂರಿಗೆ ಬರಬೇಕು, ಯಾರೋ ಇಲ್ಲಿ ಎಕ್ಸಿಕ್ಯೂಟೀವ್ ಇಂಜಿನಿಯರ್ ಇನ್‌ವೈಟ್ ಮಾಡಬೇಕು ಇಲ್ಲಿಂದ ಮತ್ತೆ ಹೋಗಬೇಕಾದರೆ ಟ್ರಾನ್ಸ್‌ಪೋರ್ಟೇಷನ್ ಚಾರ್ಜಸ್ ಎಷ್ಟಾಗುತ್ತದೆ. ಬೆಂಗಳೂರು ಸಿಟಿರೈಲ್ವೆ ಸ್ಟೇಷನ್ನಿನಿಂದ ಸೆಂಟ್ರಲ್ ಸ್ಟೋರ್ಸ್‌ಗೆ ಬರುವ ರೇಟ್, ಹೈರ್ ಚಾರ್ಜಸ್, ಇಲ್ಲಿಂದ ಗುಲ್ಬರ್ಗಕ್ಕೆ ಹೋಗುವುದಕ್ಕೆ ತಾವು ಕೊಡಬೇಕು, ಹಾಲಿ ಎಷ್ಟು ಕೊಟ್ಟೀದ್ದೀರಿ, ಹೇಗೆ ಕೊಟ್ಟಿದ್ದೀರಿ. What is the transportation charges you have given ? ಅದನ್ನು ಈ ಸಭೆಯ ಮುಂದೆ ಹೇಳಿ. ರಾಜ್ಯಕ್ಕೆ Unnecessary expenditure ಎಷ್ಟಾಯಿತು ಎಂದು ನಾಳೆ ದಯಮಾಡಿ ವಿವರಣೆ ಕೊಡಿ. ಮಾನ್ಯ ಪತ್ತಾರ್ ಸಾಹೇಬರು ಒಂದು ಪ್ರಶ್ನೆಯನ್ನು ಕೇಳಿದರು. ಸಸ್ಪೆನ್‌ಷನ್ ಸರ್ಕಾರದ ದೃಷ್ಟಿಯಿಂದ ಬೇಡ ಅಂದರೆ ಅದಕ್ಕೆ ಏನು ಮಾಡಬೇಕು ಎಂದು ಹೇಳಿದರು, ಸಂತೋಷ. ಕೆಲವು ಸಂದರ್ಭಗಳಲ್ಲಿ ರೂಲ್ ೧೪ರಲ್ಲಿ ವಿಜಿಲೆನ್ಸ್ ಕಮಿಷನ್ ಬಗ್ಗೆ ಹೇಳಬೇಕಾದರೆ ಜಿ.ಎ.ಡಿ. ವಿಚಾರ ಬರಲಿ ಚರ್ಚೆ ಮಾಡೋಣ, ವಿಜಿಲೆನ್ಸ್ ಕಮಿಷನ್ ವಿಷಯ ಬರಬೇಕು ಚರ್ಚೆ ಮಾಡೋಣ. ಈ ದೇಶದಲ್ಲಿ ಇಲ್ಲಿ ಕೂತಿರುವ ರಾಜಕಾರಣಿಗಳು ಅಪ್ರಾಮಾಣಿಕರು, ನಾವೆಲ್ಲಾ ದೇಶ ಹಾಳು ಮಾಡಿರುವ ಜನಗಳು, ಇಲ್ಲಿ ಕೂತಿರುವವರ್‍ಯಾರಿಗೂ ಗೌರವವಿಲ್ಲ, ಎಂ.ಎಲ್.ಎ. ಗಿರಿ ಹೊರಟು ಹೋದರೆ ಬಹುಶಃ ಯಾರೂ ಮಾತನಾಡುವುದಿಲ್ಲ, ಆ ಲೆವೆಲ್‌ನಲ್ಲಿ ಅಧಿಕಾರಿಗಳು ಇದ್ದಾರೆ. ನಾವು ಜನತಾ ಪ್ರತಿನಿಧಿಗಳು ಬಂದು ಹೇಳುತ್ತೇವೆ, ನೀವೂ ಹೋಗಿ ಹೇಳಬೇಕಾಗುತ್ತದೆ, ವಿಜಿಲೆನ್ಸ್ ಕಮಿಷನ್ ವಿಷಯ ಬಂದಾಗ ಚರ್ಚೆ ಮಾಡೋಣ. ರೂಲ್ ೧೪(ಎ) ಪ್ರಕಾರ ಎನ್‌ಕ್ವೈರಿ ನಡೆಯುತ್ತಾ ಇದ್ದರೆ ಆ ಅಧಿಕಾರಿಗಳ ಬಗ್ಗೆ ಯಾವ ಡಿಸಿಪ್ಲಿನರಿ ಆಕ್ಷನ್ ಬೇಕಾಗುವುದಿಲ್ಲ. ಒರಿಜಿನಲಿ ಬೇಕಾದರೆ ಸಸ್ಪೆಂಡ್ ಮಾಡಿ ಬಿಡುತ್ತೀರಿ. ಸ್ವಾಮಿ, ಎಷ್ಟು ಜನ ಅಧಿಕಾರಿಗಳ ಮೇಲೆ ರೂಲ್ ೧೪(ಎ) ಪ್ರಕಾರ ವಿಜಿಲೆನ್ಸ್ ಕಮಿಷನ್‌ನಲ್ಲಿ ಎನ್‌ಕ್ವೈರಿ ನಡೆಯುತ್ತಾ ಇದೆ, ನಿಮ್ಮ ಡಿಪಾರ್ಟ್‌ಮೆಂಟ್‌ಗೆ ಸಂಬಂಧಪಟ್ಟಿದ್ದು, ಬೇರೆ ಡಿಪಾರ್ಟ್‌ಮೆಂಟ್‌ಗೆ ಸಂಬಂಧಪಟ್ಟಿದ್ದು ನಾನು ಇವತ್ತು ಪ್ರಶ್ನೆ ಕೇಳುವುದಿಲ್ಲ. ಇದರ ಬಗ್ಗೆ ದಯಮಾಡಿ ನಾಳೆ ವಿವರಣೆ ಕೊಡುತ್ತೀರಾ. ಈಗ ಹಾಲಿ ರೂಲ್ ೧೪(ಎ) ಪ್ರಕಾರ ಇನ್‌ವೆಸ್ಟಿಗೇಷನ್ ಮೊದಲು ವಿಜಿಲೆನ್ಸ್‌ನಲ್ಲಿ ಹೋಗಿದು ಸರ್ಕಾರ ಆರ್ಡರನ್ನು ಚಲಾಯಿಸಿ ವಿಜಿಲೆನ್ಸ್ ಕಮಿಷನ್ ಮುಂದೆ ವಿಚಾರಣೆ ನಡೆಯುತ್ತಿದೆಯೆಲ್ಲಾ ಅದಕ್ಕೆ ಸಂಬಂಧಪಟ್ಟಿದ್ದು ಎಷ್ಟು ಕೇಸಸ್ ಇದೆ. ಯಾರು ಯಾರದ್ದು ಇದೆ, ಅವರು ಯಾವ ಯಾವ ಸ್ಥಾನದಲ್ಲಿದ್ದಾರೆ, ಆ ಎನ್‌ಕ್ವೈರಿ ಪರಿಪಕ್ವವಾಗಿ ನಡೆಯಲಿಕ್ಕೆ ಸಾಧ್ಯವೇ, ಅದನ್ನು ಸಭೆಯ ಮುಂದೆ ದಯಮಾಡಿ ಇಡಿ. ಮತ್ತೆ ಸಿಮೆಂಟ್ ಶಾರ್ಟೇಜ್, ಸ್ಟೀಲ್ ಶಾರ್ಟೇಜ್ ಕೇಸಸ್ ಎಷ್ಟೆಷ್ಟು ಪೆಂಡಿಂಗ್ ಇದೆ. ಇಲ್ಲದೇ ಹೋದರೆ Revoke all the suspension orders, to whichever community he belongs.

ಹೋಗಲಿ ಬಿಟ್ಟುಬಿಡಿ. ಕೆಲವರನ್ನು ಹಿಡಿದು ಚಾಕುವಿನಲ್ಲಿ ತಿವಿಯುವುದು, ಇನ್ನು ಕೆಲವರಿಗೆ ಏನೂ ಇಲ್ಲ, ಹೀಗೆ ಮಾಡಬೇಡಿ, ಬಿಟ್ಟುಬಿಡಿ. I am not going to demand the Government to take such extreme position.

SRI M. C. NANAIAH.—It is Karnataka State's silver jubilee concession to all.

SRI H. D. DEVE GOWDA.—Discrimination between A & B.

SRI M. SHER KHAN.—I am on a Point of Order. No doubt very serious discussions are going. But, time is important. ಈಗ ೧೨-೩೦ ಗಂಟೆ ಆಯಿತು. ಇನ್ನೂ ಎಷ್ಟು ಹೊತ್ತು ಮಾಡುತ್ತೀರಿ.

CHAIRMAN.—I think you will conclude. How much time do you require ?

SRI H. D. DEVE GOWDA.—We have got ample opportunity. In Major Irrigation I am going to initiate. I know my party has asked. We have got ample opportunity. I do not want to make my colleagues feel restlessness.

ಶ್ರೀ ಎ. ಲಕ್ಷ್ಮೀಸಾಗರ.—ಅವರು ಏನೇನು ಹೇಳಬೇಕು ಎಂಬ ಎಲ್ಲಾ ವಿಚಾರವನ್ನು ಬಹಳ ಸೂಕ್ಷ್ಮವಾಗಿ ಹೇಳಿದ್ದಾರೆ.—ಈಗಲೇ ಕನ್‌ಕ್ಲೂಡ್ ಮಾಡಬೇಕು ಎಂದು ಅಲ್ಲ.

CHAIRMAN.—We will leave it to him. He says he is concluding.

ಶ್ರೀ ಹೆಚ್. ಡಿ. ದೇವೇಗೌಡ.—ಮಾನ್ಯ ಸಚಿವರು ಒಂದು ಮಾತು ಕೇಳಿದರು. ಎಲ್ಲರನ್ನೂ ಸಸ್ಪೆಂಡ್ ಮಾಡಿದ್ದಾರೆಂದು ಹೇಳಲಿಲ್ಲ. ನಾನು ಹೇಳಿದ್ದು Put a guide-line ಎಂದು ಯಾವ ಸಂದರ್ಭದಲ್ಲಿ ಅಧಿಕಾರಿಯನ್ನು ಸಸ್ಪೆಂಡ್ ಮಾಡಬೇಕು, ಯಾವ ಸಂದರ್ಭದಲ್ಲಿ ಅಧಿಕಾರಿಯನ್ನು ಸಸ್ಪೆಂಡ್ ಮಾಡಬಾರದು, ಇನ್‌ವೆಸ್ಟಿಗೇಷನ್ ಹಂತದಲ್ಲಿ ಸಸ್ಪೆಂಡ್ ಮಾಡಬೇಕಾ, ಚಾರ್ಜ್‌ಶೀಟ್ ಕೊಟ್ಟ ಮೇಲೆ ಸಸ್ಪೆನ್‌ಷನ್ ಮುಂದುವರೆಸಬೇಕಾ, ಯಾವ ಸಂದರ್ಭದಲ್ಲಿ ಸಸ್ಪೆನ್‌ಷನ್ ರಿವೋಕ್ ಮಾಡಬೇಕು-ರೂಲ್ ೧೪ (ಎ) ಪ್ರಕಾರ ಎನ್‌ಕ್ವೈರಿನಡೆಯುತ್ತಾ ಇರುವಾಗ ಸಸ್ಪೆನ್‌ಷನ್ ಮಾಡಬೇಕಾ ಎನ್ನುವುದಕ್ಕೆ ಗೈಡ್‌ಲೈನ್ ಹಾಕಿ ಯೂನಿಫಾರಂ ಆಗಿ ಅಪ್ಲೈ ಮಾಡಿ. ಒಬ್ಬನಿಗೆ ಸಸ್ಪೆಂಡ್ ಮಾಡುವುದು, ಒಬ್ಬನಿಗೆ ರಿವೋಕ್ ಮಾಡುವುದು, ಇದು ಏಕೆ ? ಚನ್ನಸೋಮಣ್ಣ ಎನ್ನುವವರನ್ನು ಸಸ್ಪೆನ್‌ಷನ್ ಮಾಡಿದರು, ಅವರು ಎಗ್ಸಿಕ್ಯೂಟೀವ್ ಇಂಜಿನಿಯರ್ ಇದ್ದರು. ವಿಷಯಗಳನ್ನು ಹೇಳುತ್ತಾ ಹೋದರೆ ಹೇಳಿಕೊಂಡು ಹೋಗಬೇಕಾಗುತ್ತದೆ. ಆ ಎಗ್ಸಿಕ್ಯುಟೀವ್ ಇಂಜಿನಿಯರ್ ಪಾಪ ಬೆಂಗಳೂರು ಡಿವಿಜನ್‌ನಲ್ಲಿದ್ದರು. ನಿಮ್ಮ ರವೀಂದ ಕಲಾಕ್ಷೇತ್ರದ ಬಾಡಿಗೆ ಟ್ರೆಝುರಿಗೆ ಜಮಾ ಆಗುವಾಗ ಮೋಸ ನಡೆದಿದೆ ಎಂದು ಸಸ್ಪೆನ್‌ಷನ್ ಮಾಡಿದರು. ಅವನು ಅಪರಾಧಿಯೋ ನಿರಾಪರಾಧಿಯೋ ಎಂಬುದನ್ನು ಆಮೇಲೆ ಚರ್ಚೆಮಾಡೋಣ. ಯಾವನೋ ಕ್ಯಾಷಿಯರ್ ಜಮಾ ಮಾಡಿಕೊಂಡು ಬರುತ್ತಾ ಇದ್ದ. ಎ. ಜಿ. ಒಂದು ಸಾರಿ ಯಾವುದೋ ವೋಚರ್ ವೆರಿಫಿಕೇಷನ್‌ನಲ್ಲಿ ಸಿಕ್ಕಿತು, ಅಲ್ಲಿ ಪತ್ತೆ ಮಾಡಿದರು. ಅವರನ್ನು ಸಸ್ಪೆಂಡ್ ಮಾಡಬೇಕು ಎಂದು ಚೀಫ್ ಇಂಜಿನಿಯರ್ ಹೇಳಿದರೆ, ಅವರು ಎಸ್. ಸಿ. ವರ್ಗದವರೇ, ನೀವು ಏಕೆ ಸಸ್ಪೆಂಡ್ ಮಾಡಿದಿರಿ.

ಅವರು ಬೀದಿಯಲ್ಲಿ ತಿರುಗುತ್ತಿದ್ದಾರೆ. ಸಸ್ಪೆಂಡ್‌ನಲ್ಲಿ ಅವರನ್ನು ಇಡಬೇಕೆಂದು ಹೇಳಿದಾಗ, ಅಮಾನತ್ತಿನಲ್ಲಿಡಬೇಕು ಎಂದು ಹೇಳಿದಾಗ, I have got the highest regard for the PWD Secretary. Let him at least formulate certain norms ಮಾನ್ಯ ಶ್ರೀ ಕಾಗೋಡು ತಿಮ್ಮಪ್ಪನವರಿಗೆ ಹೇಳುತ್ತೇನೆ, ವ್ಯಕ್ತಿಶಃ ಅವರನ್ನು ನಿಂದನೆ ಮಾಡುವುದಕ್ಕೆ ಹೋಗುವುದಿಲ್ಲ. ಯಾವ ಹಂತಕ್ಕೆ ಮುಟ್ಟಿದೆ ಎಂದರೆ ಮೋಟಿವ್‌ನ್ನು ಅಟ್ರಿಬ್ಯೂಟ್ ಮಾಡುವ ಹಂತಕ್ಕೆ ಬಂದಿದೆ, ಈ ಸನ್ನಿವೇಶ, ಈ ವಾತಾವರಣ ಇವತ್ತು ಈ ಇಲಾಖೆಯಲ್ಲಿ ಬರಲಿಕ್ಕೆ ಅವಕಾಶ

ವಾಗಿದೆ. ಆದುದರಿಂದ ಇದನ್ನು ತಾವು ಜಾಗರೂಕತೆಯಿಂದ ನೋಡಿಕೊಳ್ಳಬೇಕಾಗಿದೆ. ಏತಕ್ಕೆಂದರೆ ಸೀರೀಸ್ ಆಫ್ ಆಫೀಸರ್ಸ್ ಪಟ್ಟಿಯನ್ನು ನಾನು ಸಂಗ್ರಹಣೆ ಮಾಡಿದೆ ಅದನ್ನೆಲ್ಲಾ ಈ ಸಭೆಯಲ್ಲಿ ಹೇಳಬೇಕೆಂದರೆ ಇನ್ನು ಒಂದು ಗಂಟೆಗಳ ಕಾಲ ಬೇಕಾಗುತ್ತದೆ. ಅದನ್ನೆಲ್ಲಾ ಸದನದ ಮುಂದಿಟ್ಟು ಹ್ಯುಮಿಲಿಯೇಟ್ ಮಾಡಬೇಕಾದ್ದು ಏನೂ ಇಲ್ಲ, ಯಾವುದನ್ನೋ ದೇವೇಗೌಡರು ಮನಸ್ಸಿನಲ್ಲಿಟ್ಟುಕೊಂಡು ಹೇಳಿದ್ದಾರೆಂದರೆ ಅದು ಸರಿಯಲ್ಲ. ಆದುದರಿಂದ ಅದನ್ನು ಪರಿಶೀಲನೆ ಮಾಡಿ ನೋಡಿ, ನಿಮ್ಮ ಕಾನ್‌ಷೆನ್ಸ್‌ಗೆ ಒಪ್ಪಿಗೆ ಯಾದರೆ ನಾನು ಹೇಳಿದ್ದು ಸತ್ಯ ಎಂದರೆ ಡಾಕ್ಯುಮೆಂಟ್‌ನ್ನು ಈ ಸದನದ ಮುಂದಿಡಿ. Purchase of steel by Central Division of National Highway and certain anomolies omissions and commissions which I have mentioned with regard to the purchase. ೧೪ (ಎ) ಪ್ರಕಾರವಾಗಿ ವಿಚಾರಣೆಗಳು ನಿಮ್ಮ ಇಲಾಖೆಯಲ್ಲಿ ಯಾವುದು ಯಾವುದು ನಡೆದಿವೆ? ಸ್ಟೀಲ್‌ಗೆ ಸಂಬಂಧಪಟ್ಟಿದ್ದು, ಸಿಮೆಂಟ್‌ಗೆ ಸಂಬಂಧಪಟ್ಟಿದ್ದು. ಯಾವ ಯಾವ ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಂಡಿದ್ದೀರಿ ಎಂಬುದನ್ನು ಈ ಸಭೆಯ ಮುಂದಿಡುವುದಾದರೆ ನಾನು ತಮಗೆ ಅಭಿನಂದಿಸುತ್ತೇನೆ. ಇಷ್ಟು ಹೇಳಿ ಇನ್ನು ಹೆಚ್ಚಿಗೆ ಈ ಸಭೆಯ ಕಾಲವನ್ನು ತೆಗೆದುಕೊಳ್ಳದೆ ಮಿಕ್ಕ ವಿಷಯವನ್ನ ಮೇಜರ್ ಇರಿಗೇಷನ್ನಿಗೆ ಸಂಬಂಧಪಟ್ಟ ಡಿಮ್ಯಾಂಡ್‌ನ ಮೇಲೆ ಮಾತನಾಡತಕ್ಕ ಕಾಲದಲ್ಲಿ ಹೇಳುತ್ತೇನೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

CHAIRMAN.--The House will now rise to reassemble at 2.30 P. M

(The House adjourned at Forty three minutes past Twelve of the Clock to reassemble at thirty minutes past two of the Clock.)

(The House re-assembled at 2-45 P. M.

MR. SPEAKER. (SRI K. H. Ranganath) in the Chair.

FURTHER DISCUSSION ON DEMANDS FOR GRANTS FOR 1982-83.

† ಶ್ರೀ ಎಸ್ ವಿ. ನಾಯಕ್ (ಕುಮಟಾ).—ಸನ್ಮಾನ್ಯ ಅಧ್ಯಕ್ಷರೆ, ಲೋಕೋಪಯೋಗಿ ಇಲಾಖೆ ಸಚಿವರು ಮತ್ತು ಮೀನುಗಾರಿಕೆ ಹಾಗೂ ಬಂದರುಗಳ ಸಚಿವರು ಮಂಡಿಸಿರತಕ್ಕ ಬೇಡಿಕೆಯನ್ನು ಬೆಂಬಲಿಸುತ್ತಾ ಈ ಚರ್ಚೆಯಲ್ಲಿ ಭಾಗವಹಿಸುತ್ತಿದ್ದೇನೆ. ಲೋಕೋಪಯೋಗಿ ಸಚಿವರಾದ ಮಾನ್ಯ ಕಾಗೋಡು ತಿಮ್ಮಪ್ಪನವರ ಶೀಲ, ಚಾರಿತ್ರ್ಯ, ಚಾತುರ್ಯ ಮತ್ತು ಚಾರುತ್ವವನ್ನು ಯಾರೂ ಪ್ರಶ್ನಿಸಲಾರರು. ಸಮಾಜವಾದಿಯಾಗಿ ಹುಟ್ಟಿ, ಸಮಾಜವಾದಿಯಾಗಿ ಬೆಳೆದು ಸಮಾಜವಾದಿ ಆಂದೋಳನದಲ್ಲಿ ಮೇಲೆ ಬಂದ ತಿಮ್ಮಪ್ಪನವರಿಗೆ ರಾಜಕೀಯ ಹಿನ್ನೆಲೆ ಇದೆ, ಅವರು ಎಂದೂ ಅಧಿಕಾರದ ಬೆನ್ನುಹತ್ತಿ ಹೋದವರಲ್ಲ. ಅಧಿಕಾರವೇ ಅವರ ಬೆನ್ನುಹತ್ತಿ ಬಂದಾಗ ಬಡವರ, ದೀನದಲಿತರ ಶೋಷಣೆಗೆ ಒಳಗಾದವರ ಸೇವೆಯನ್ನು ಮಾಡುವಲ್ಲಿ ಮಾಡಿದ ಪ್ರಯತ್ನವನ್ನು. ಪ್ರತಿಜ್ಞೆಯನ್ನು ನಾವು ಮೆಚ್ಚಬೇಕು. ನಾನು ಆ ಕೋಮಿಗೆ ಸೇರಿದವನೆಂದು ಈ ಮಾತುಗಳನ್ನು ಹೇಳುತ್ತಿಲ್ಲ. ನಾನು ಸಮಾಜವಾದಿಯಾಗಿ ಹುಟ್ಟಿ ಬೆಳೆದು ಬಹಳ ಹತ್ತಿರದಿಂದ ತಿಮ್ಮಪ್ಪನವರನ್ನು ಕಂಡಿದ್ದೇನೆ. ಮಾನ್ಯ ದೇವೇಗೌಡರು ತಮ್ಮ ಭಾಷಣವನ್ನು ಪ್ರಾರಂಭ ಮಾಡುವಾಗ ನಾನು ಮೈಯೆಲ್ಲಾ ಕಣ್ಣಾಗಿ ಬಹಳ ಎಚ್ಚರಿಕೆಯಿಂದ ಆಲಿಸಿದ್ದೇನೆ. ಮಾನ್ಯ ದೇವೇಗೌಡರ ಮಾತಿನಲ್ಲಿ ಜೋಗ ಜಲಪಾತದ ರೀವಿ ಮತ್ತು ಓಜಸ್ಸು ಇತ್ತು. ನನಗೇಕೋ ಅದರಲ್ಲಿ ವಿನಯದ ಕೊರತೆ ಕಂಡುಬಂತು. ಉತ್ತರ ರಾಮ ಚರಿತ್ರೆಯಲ್ಲಿ ಒಂದು ಪ್ರಸಂಗ ಬರುತ್ತದೆ. ಶ್ರೀರಾಮಚಂದ್ರನನ್ನು ಎದುರಿಸುವುದಕ್ಕೆ ಹೊರಟ ಲವ ಕುಶರು ಒಂದು ಮಾತನ್ನು ಹೇಳುತ್ತಾರೆ. ''ಪರತೇಜೋ ಮದಗರ್ವ ದುಕ್ಕರ್ಷಮಂ ತೇಜಸ್ವಿ ತಾಂ ಸೈರಿಸಂ'' ಎಂದು. ತೇಜಸ್ವಿಯಾದವನು ಎಂದಿಗೂ ಅವರ ವಾದವನ್ನು ಸಹಿಸುವುದಕ್ಕೆ ಸಾಧ್ಯವಿಲ್ಲ. ಮಾನ್ಯ ಕಾಗೋಡು ತಿಮ್ಮಪ್ಪನವರು ಅದಕ್ಕೆ ಸೂಕ್ತವಾದ ಉತ್ತರವನ್ನು ಕೊಡುತ್ತಾರೆಂದು ಭಾವಿಸುತ್ತೇನೆ. ತಿಮ್ಮಪ್ಪನವರು ಮತ್ತು ದೇವೇಗೌಡರು ಒಟ್ಟಿಗೆ ಕುಳಿತು ಬಹಳ ದಿವಸ ರಾಜಕೀಯ ಮಾಡಿದವರು

ಎಂದು ಅವರು ಹೇಳಿದ್ದಾರೆ. ಅದಕ್ಕೆ ಸಮರ್ಥವಾದ ಉತ್ತರವನ್ನು ಕೊಡುವ ಸಾಮರ್ಥ್ಯ ತಿಮ್ಮಪ್ಪ ನವರಿಗಿದೆ ಎಂದು ನಾನು ಭಾವಿಸಿದ್ದೇನೆ. ಮಾನ್ಯ ದೇವೇಗೌಡರ ಮಾತಿನುದ್ದಕ್ಕೂ ಜಾತೀವಾದ ಹಾಸು ಹೊಕ್ಕಾಗಿತ್ತು ಎಂಬ ಭಾವನೆ ನನ್ನದು. ಇದು ನನ್ನ ವೈಯಕ್ತಿಕ ಭಾವನೆಯಾದರೂ ಆಗಿರಬಹುದು. ಮಾನ್ಯ ದಿನಕರ ದೇಸಾಯಿಯವರು ಹೇಳಿರುವ ಒಂದು ಮಾತನ್ನು ಈ ಸಂದರ್ಭದಲ್ಲಿ ಹೇಳಬಯಸು ತ್ತೇನೆ. ನೆಗಡಿಯಂತಿರುವ ಈ ಜಾತಿಯ ರೋಗ ಗುಣ ಹೊಂದಬೇಕಾದರೆ ಜಾತಿಗಳನ್ನೆಲ್ಲಾ ಬೇಯಿಸಿ ಕಿಚಡಿ ಮಾಡಬೇಕು ಎಂದಿದ್ದಾರೆ. ಈ ಜಾತಿ ಎಂಬ ರೋಗ ದೊಡ್ಡ ರೋಗ ಅಲ್ಲ. ಇದು ನೆಗಡಿ ಯಂತೆ ಸಣ್ಣ ರೋಗವಾದರೂ ಕಿರಿಕಿರಿ ಮಾಡುತ್ತಿರುತ್ತದೆ. ಆದ್ದರಿಂದ ಇದನ್ನೆಲ್ಲಾ ಕಿಚಡಿ ಮಾಡಿದರೆ ಮಾತ್ರ ಈ ಜಾತೀಯತೆಯ ರೋಗ ಹೋಗಬಹುದು ಎಂಬ ನನ್ನ ಭಾವನೆಯನ್ನು ಉಚ್ಚರಿಸುತ್ತಾ ಕೆಲವು ಮಾತುಗಳನ್ನು ಹೇಳಬಯಸುತ್ತೇನೆ. ಮಾನ್ಯ ದೇವೇಗೌಡರು ಇನ್ನೂ ಹಲವಾರು ಆರೋಪ ಗಳನ್ನು ನೇರವಾಗಿ ಮಾಡಿರುವುದಲ್ಲದೆ ವಿಜಿಲೆನ್ಸ್ ಕಮಿಷನ್‌ನಿಂದ ಬಂದಂಥ ಹಲವಾರು ಪ್ರಕರಣಗಳಲ್ಲಿ ತಾರತಮ್ಯ ಭಾವನೆಯನ್ನು ತೋರಿದ್ದೀರಿ ಎಂದು ಹೇಳಿದ್ದಾರೆ. ಇದಕ್ಕೆಲ್ಲಾ ನೇರವಾಗಿ ಉತ್ತರ ಕೊಡುವಂಥ ಸಾಮರ್ಥ್ಯ ಮತ್ತು ಅದಕ್ಕೆ ಬೇಕಾದ ಸಲಕರಣೆ ಇವೆಲ್ಲಾ ಶ್ರೀ ಕಾಗೋಡು ತಿಮ್ಮಪ್ಪ ಹತ್ತಿರ ಇದೆ. ತಾವು ಯೋಗ್ಯ ಸಂದರ್ಭದಲ್ಲಿ ಉತ್ತರ ಕೊಡುತ್ತೀರಿ ಎಂದು ಭಾವಿಸುತ್ತೇನೆ. ಇಲ್ಲಿಯವರೆಗೆ ಈ ಮನೆಯಲ್ಲಿ ದೇವೇಗೌಡರ ಬಗ್ಗೆ ಗೌರವ ಇತ್ತು. ಅಂದ ಮಾತ್ರಕ್ಕೆ ಈಗ ಇಲ್ಲ ಎಂದು ನಾನು ಹೇಳುತ್ತಿಲ್ಲ. ನನ್ನ ಅಭಿಪ್ರಾಯಗಳು ವೈಯಕ್ತಿಕವಾದುದು ಎಂದು ಮೊದಲೇ ನಾನು ಹೇಳಿದ್ದೇನೆ ನನ್ನ ಅನಿಸಿಕೆಯನ್ನು ಮಾತ್ರ ನಾನು ಹೇಳುತ್ತಿದ್ದೇನೆ ಎಂಬುದನ್ನು ನೆನಪಿಟ್ಟುಕೊಳ್ಳ ಬೇಕು. ನಮ್ಮ ಸರ್ಕಾರಕ್ಕೆ ರಾಜಗುರುವಿನಂತೆ ವರ್ತಿಸಿದ್ದಾರೆ, ಅವರ ಅನುಭವವನ್ನು ಯಾರೂ ಪ್ರಶ್ನೆ ಮಾಡಲಿಕ್ಕೆ ಆಗುವುದಿಲ್ಲ. ಅವರ ಪ್ರಾಮಾಣಿಕತನದ ಬಗ್ಗೆಯೂ ಕೂಡ ಪ್ರಶ್ನೆ ಮಾಡಲಿಕ್ಕೆ ಹೋಗುವುದಿಲ್ಲ. ಅವರ ಅನುಭವದ ಮೂಸೆಯಲ್ಲಿ ಬೆಂದ ಲಾಭವನ್ನು ಈ ಸದನ ಬಹಳ ಕಾಲದಿಂದ ತೆಗೆದುಕೊಂಡಿದೆ. ರಾಜಗುರುವಾಗಿ ವರ್ತಿಸಿದ್ದಾರೆ ಎಂಬ ವಾದವನ್ನು ಮುಂದಿಡುತ್ತಾ, ನಾನು ನಮ್ರವಾಗಿ ವಿನಂತಿಸಿಕೊಳ್ಳುತ್ತಿದ್ದೇನೆ. ಕಳೆದ ೫ ವರ್ಷಗಳಲ್ಲಿ ಮುಖ್ಯ ಮಂತ್ರಿಗಳಿಂದ ಹಿಡಿದು ಇಲ್ಲಿಯವರೆಗೆ ಉಪ ವಿಭಾಗದವರೆವಿಗೂ ಯಾವ ಯಾವ ಜಾತಿಯವರು ಯಾವ ಯಾವ ಕೋಮಿನವರು ಅಧಿಕಾರದಲ್ಲಿದ್ದರು ಎನ್ನುವ ಬಗ್ಗೆ ಒಂದು ಸಮಗ್ರ ಪಟ್ಟಿಯನ್ನು ಕೊಡಬೇಕೆಂದು ಹೇಳುತ್ತೇನೆ. ಭಾರಿ ಭಾರಿ ನೀರಾವರಿ ಯೋಜನೆಗಳಾದ ಹೇಮಾವತಿ ಮತ್ತಿತರ ಯೋಜನೆಗಳಲ್ಲಿ ಚೀಫ್ ಇಂಜಿನಿಯರ್ ರಿಂದ ಹಿಡಿದು ಜೂನಿಯರ್ ಇಂಜಿನಿಯರ್‌ರವರೆಗೆ ಯಾವ ಯಾವ ಜಾತಿಯವರು ಕೆಲಸ ಮಾಡಿದ್ದಾ ರೆನ್ನುವ ಪಟ್ಟಿ ಕೊಡಿ. ನೀವು ಅಧಿಕಾರಕ್ಕೆ ಬಂದ ಮೇಲೆ ಒಂದು ಜಾತಿಯನ್ನು ಮೆಟ್ಟಿ ತುಳಿಯುತ್ತೀರಿ ಎಂದು ಹೇಳಿದಂತೆ ನನಗನ್ನಿಸುತ್ತಿತ್ತು. ಅದು ಅವರ ಭಾಷಣದುದ್ದಕ್ಕೂ ಸ್ಪಷ್ಟವಾಗಿ ಕೇಳಿ ಬರು ತ್ತಿತ್ತು. ಮೊನ್ನೆ ಇಬ್ರಾಹಿಂರವರು ಪ್ರಸ್ತಾಪ ಮಾಡುತ್ತಾ ಒಬ್ಬ ಪರಿಜನ ಮಹಿಳೆ ಮಂತ್ರಿಯಾದರೆ ಅವರ ಮೇಲೆ ದೋಷಾರೋಪಣೆ ಹೊರಿಸಿ, ಮಂತ್ರಿ ಮಂಡಲದಿಂದ ವಜಾ ಮಾಡುವಂತೆ ಸಹಾಯ ಮಾಡಿದಿರಿ, ಅಲ್ಪಸಂಖ್ಯಾತ ವರ್ಗಕ್ಕೆ ಸೇರಿದ ಮಂತ್ರಿಯೊಬ್ಬರನ್ನು ವಜಾ ಮಾಡಿಸಿದಿರಿ. ಈಗ ಹಿಂದುಳಿದ ವರ್ಗಕ್ಕೆ ಸೇರಿದ ಮಂತ್ರಿಯೊಬ್ಬರ ಬೆನ್ನು ಹತ್ತಿದ್ದೀರಿ ಎಂದು ಹೇಳಿದರು. ನಾನು ಅಂತಹ ಕೆಲಸ ಮಾಡಲಿಲ್ಲವೆಂದು ಹೇಳುತ್ತಾರೆ. ಆದರೆ, ನಮ್ಮ ಅನಿಸಿಕೆ, ನಮ್ಮ ಸಂಶಯಕ್ಕೆ ಪರಿಹಾರ ಒದಗಿಸಬೇಕೆಂದು ಸ್ಪಷ್ಟೀಕರಣ ಕೇಳುತ್ತಿದ್ದೇವೆ. ಈ ಒಂದು ಪಟ್ಟಿಯನ್ನು ಸದನದ ಮುಂದೆ ಇಟ್ಟರೆ ಉಳಿದ ಎಲ್ಲ ಸದಸ್ಯರ ಮನಸ್ಸಿನಲ್ಲಿನ ಸಂಶಯಕ್ಕೆ ಶಾಶ್ವತವಾದಂತ ಪರಿಹಾರವನ್ನು ಕಂಡುಹಿಡಿದಂತಾ ಗುತ್ತದೆನ್ನುವುದು ನನ್ನ ಭಾವನೆ.

ಇನ್ನು ವರ್ಕ್‌ಚಾರ್ಜ್ ನೌಕರರನ್ನು ಹಂತಹಂತವಾಗಿ ಖಾಯಂ ಮಾಡಬೇಕೆನ್ನುವ ವಾದವನ್ನು ಮುಂದಿಟ್ಟರು. ಯಾವ ಯಾವ ಅಧಿಕಾರಿ ಎ.ಇ. ಆಗಿರಬಹುದು, ಜೆ.ಇ. ಆಗಿರಬಹುದು, ಎಸ್.ಇ. ಆಗಿರಬಹುದು ತನ್ನ ಮನಸ್ಸಿಗೆ ಬಂದವರನ್ನೇ ನೇಮಕಾತಿ ಮಾಡಿಕೊಂಡು ಹೋಗಿದ್ದಾರೆ. ಈ ರೀತಿ ನೇಮಕಾತಿ ಮಾಡಿರುವಾಗ ನೇಮಕಾತಿ ನಿಯಮದಂತೆ ಮಾಡಿದ್ದಾರೆಯೆ ? ಹರಿಜನ ಗಿರಿಜನರಿಗೆ ೧೮ರಷ್ಟು, ಬ್ಯಾಕ್‌ವರ್ಡ್ ಕ್ಲಾಸ್‌ಗೆ ೨೦ರಷ್ಟು ಬ್ಯಾಕ್‌ವರ್ಡ್ ಟ್ರೈಬ್ಸ್‌ಗೆ ೧೦ ರಷ್ಟು ಸ್ಪೆಷಲ್ ಗ್ರೂಪ್‌ಗೆ ಇಷ್ಟು ಎಂದು ನೇಮಕಾತಿ ಮಾಡಬೇಕಾಗುತ್ತದೆ. ಇದನ್ನು ಪಾಲಿಸಿದ್ದಾರೆಯೆ? ಒಂದೇ ಜಾತಿಗೆ ಸೇರಿದವರನ್ನು ನೇಮಕಾತಿ ಮಾಡಿ ಹೋಗಿದ್ದಾರೆ. ಪರಿಸ್ಥಿತಿ ಹೀಗಿರುವಾಗ ಖಾಯಂ ಆಗಿ ಹೇಗೆ ಮಾಡುತ್ತೀರಿ? ಇದರ ಬಗ್ಗೆ ಸರಿಯಾದ ವಿವರಣೆ ಕೊಡಬೇಕೆಂದು ಹೇಳುತ್ತೇನೆ.

ಮಾನ್ಯ ಅಧ್ಯಕ್ಷರೇ, ತಮ್ಮ ಮೂಲಕ ಲೋಕೋಪಯೋಗಿ ಇಲಾಖೆಯ ಸಚಿವರಲ್ಲಿ ವಿನಂತಿಸಿ ಕೊಳ್ಳುವುದೇನೆಂದರೆ ತಾವು ಕಟ್ಟಡ ಮತ್ತು ಸಂಪರ್ಕ ಇಲಾಖೆಯ ಮೇಲ್ವಿಚಾರಣೆಯನ್ನು ಹೊಂದಿದ್ದೀರಿ. ಮಲೆನಾಡಿನ ಸಂಪರ್ಕಸಾಧನಗಳ ಬಗ್ಗೆ, ಅಲ್ಲಿಯ ಪರಿಸರದ ಬಗ್ಗೆ ತಾವು ಮಲೆನಾಡಿನಲ್ಲಿಯೇ ಹುಟ್ಟಿ ಬೆಳೆದವರಾದ್ದರಿಂದ ಮಲೆನಾಡಿನ ಸಮಸ್ಯೆಗಳು ಪೂರ್ಣ ಅರಿವು ತಮಗೆ ಇದೆ. ಮಲೆನಾಡಿನ ಸಮಸ್ಯೆಗಳು ಸಹ್ಯಾದ್ರಿಯಷ್ಟು ಎತ್ತರವಾಗಿದ್ದು, ಅರಬ್ಬೀ ಸಮುದ್ರದಷ್ಟು ಆಳವಾಗಿವೆ. ಆಳವಾದಂತ ಸಮಸ್ಯೆಗಳನ್ನು ಬಿಡಿಸಲಿಕ್ಕೆ ತಾವು ಸಾಮರ್ಥ್ಯ ಹೊಂದಿದ್ದೀರಿ. ಮಲೆನಾಡಿನಲ್ಲಿ ಸಂಪರ್ಕ ರಸ್ತೆಗಳನ್ನು ಕಲ್ಪಿಸುವಾಗ ತನ್ನದೇ ಆದಂತ ವ್ಯವಸ್ಥೆಯನ್ನು ಮಾಡಬೇಕಾಗುತ್ತದೆ.ಬಹಳ ವರ್ಷಗಳಿಂದ ಮಲೆನಾಡಿನ ಸದಸ್ಯರು 'ಮಲೆನಾಡು ಅಭಿವೃದ್ಧಿ ನಿಗಮ' ರಚಿಸಬೇಕೆಂದು ಹೇಳಿಕೊಂಡು ಬಂದಿದ್ದೇವೆ. ಆ ಒಂದು ನಿಗಮವನ್ನು ರಚಿಸದೇ ಹೋದರೆ ಸಂಪರ್ಕ ಸಾಧನಗಳನ್ನು ವ್ಯವಸ್ಥಿತ ರೀತಿಯಲ್ಲಿ ಮಾಡುವುದಕ್ಕಾಗುವುದಿಲ್ಲ ಎನ್ನುವ ಅಂಶವನ್ನು ತಮ್ಮಗಮನಕ್ಕೆ ತರಬಯಸುತ್ತೇನೆ. ಮಲೆನಾಡನ್ನು ಬಿಟ್ಟರೆ, ಕರಾವಳಿ ಪ್ರದೇಶದ ಸಮಸ್ಯೆಗಳು ವಿಶಿಷ್ಟವಾದ ಸಮಸ್ಯೆಗಳು. ಸಮುದ್ರದ ಕೊರೆತ ಬೇರೆ. ಕರಾವಳಿ ಪ್ರದೇಶಗಳಲ್ಲಿ ಚಿಕ್ಕ ನೀರಾವರಿ ಯೋಜನೆಯನ್ನು ಮಾಡುವುದಕ್ಕೆ ಬರುವುದಿಲ್ಲ. ಕಾರ್‌ಲ್ಯಾಂಡ್ ಮಾಡಬೇಕಾಗುತ್ತದೆ. ಇದಕ್ಕಾಗಿ ಹೇರಳಹಣವನ್ನು ಖರ್ಚು ಮಾಡಬೇಕಾಗುತ್ತದೆ. ಕಾರ್‌ಲ್ಯಾಂಡ್ ಯೋಜನೆಯನ್ನು ಮಾಡುವುದಕ್ಕೆ ಯಾವ ರೀತಿಯ ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದೀರಿ? ಗ್ರಾಮೀಣ ಭಾಗಗಳಿಗೆ ಸಂಪರ್ಕ ಕಲ್ಪಿಸುವಂತ ಯೋಜನೆಯನ್ನು ಏನಾದರೂ ಹಾಕಿಕೊಂಡಿದ್ದೀರಾ? ನಮ್ಮ ಭಾಗದಲ್ಲಿ ಗ್ರಾಮೀಣ ಭಾಗಗಳಿಗೆ ಸಂಪರ್ಕ ಕಲ್ಪಿಸಬೇಕಾದರೆ ಚಿಕ್ಕ ಚಿಕ್ಕ ಕಾಲು ಸಂಕಗಳನ್ನು ನಿರ್ಮಾಣ ಮಾಡಬೇಕಾಗುತ್ತದೆ. ಈ ದೃಷ್ಟಿಯಿಂದ ಒಂದು ಸಮಗ್ರ ಯೋಜನೆಯನ್ನು ಮಾಡಬೇಕಾಗುತ್ತದೆಂದು ಹೇಳುತ್ತೇನೆ. ಹಿಂದೆ ನಮ್ಮಲ್ಲಿ ಮೀನುಗಾರಿಕೆ ರಸ್ತೆಗಳೆಂದು ತಾವು ಮಾಡಿದ್ದಿರಿ. ಸಾರ್ವಜನಿಕರು ನಮಗೆ ರಸ್ತೆಗಳು ಬೇಕೆಂದು ಕೇಳುವಂತ ಸಾಮರ್ಥ್ಯವು ಕೂಡ ಇಲ್ಲದಂಥ ಕಾಲದಲ್ಲಿ ಮೀನುಗಾರಿಕೆ ರಸ್ತೆಗಳು ಬಂದವು, ಇವುಗಳು ಬರಬರುತ್ತಾ ಮೀನುಗಾರಿಕೆಯ ಹೆಸರಿನಲ್ಲಿ ಅಡಿಕೆ ತೋಟಗಳ ರಸ್ತೆಗಳಾಗಿವೆ. ಮೀನುಗಾರಿಕೆ ರಸ್ತೆಗಳನ್ನು ಕೂಡ ಲೋಕೋಪಯೋಗಿ ಫಂಡಿನಿಂದ ಮಾಡುತ್ತೀರಿ ಇವುಗಳನ್ನು ವ್ಯವಸ್ಥಿತವಾಗಿ ಇಡುವುದಕ್ಕೆ ಯಾವ ರೀತಿ ಕಾರ್ಯಕ್ರಮ ಹಾಕಿಕೊಂಡಿದ್ದೀರಿ. ಇವತ್ತು ಮಲೆನಾಡಿನ ಅಭಿವೃದ್ಧಿ ಕಾರ್ಯಕ್ರಮಗಳನ್ನು ತೀವ್ರರೀತಿಯಲ್ಲಿ ತೆಗೆದುಕೊಳ್ಳಬೇಕು. ಭೀಕರವಾದ ಮಳೆಯಿಂದ ಬಹಳ ತೊಂದರೆಗೆ ಒಳಗಾಗಬೇಕಾಗುತ್ತದೆ, ಸಮುದ್ರದ ಕೊರೆತದಿಂದ ತೊಂದರೆಗೆ ಒಳಗಾಗಬೇಕಾಗುತ್ತದೆ. ಕುಮಟಾದಲ್ಲಿ ಉಪ ವಿಭಾಗವನ್ನು ತೆರೆದಿದ್ದೀರಿ, ಟೆಂಡರ್ ಕರೆದರೂ ಯಾರೂ ಬರುವುದಿಲ್ಲ. ಆ ಭಾಗದ ಕೆಲಸ ಕಾರ್ಯಗಳನ್ನು ಇಲಾಖೆಯ ಮೂಲಕವೇ ತೀವ್ರಗತಿಯಿಂದ ಮಾಡದೇ ಹೋದರೆ ಸಮುದ್ರದ ಕೊರೆತದಿಂದ ಇಡೀ ಕರಾವಳಿ ಪ್ರದೇಶದ ಮೇಲೆ ದುಷ್ಪರಿಣಾಮ ಉಂಟಾಗುತ್ತದೆ. ಮೀನುಗಾರಿಕೆ ಉದ್ಯಮ ನಮ್ಮ ರಾಜ್ಯದಲ್ಲಿ ಹೆಚ್ಚು ವಿನಿಮಯ ತಂದುಕೊಡುವಂತ ಉದ್ಯಮ. ಯಾಂತ್ರಿಕ ದೋಣಿಗಳನ್ನು ಕೇಳಿದಾಗ ಜಾಗ್ರತೆ ವಹಿಸಬೇಕು. ಯಾಂತ್ರಿಕ ದೋಣಿಗಳನ್ನು ಯಾರಿಗೆ ಕೊಟ್ಟರೆ ಲಾಭ ಬರುವಂತ ವೃತ್ತಿಯಾಗುತ್ತದೆಂಬುದನ್ನು ಯೋಚನೆ ಮಾಡಬೇಕು. ಈ ಉದ್ಯಮದಲ್ಲಿ ಟಾಟಾ ಮತ್ತು ಬಿರ್ಲಾರವರು ಬಂಡವಾಳ ಹೂಡುವಂತ ಸಂಭವ ಇದೆ. ಈ ಭಾರಿ ಉದ್ಯಮಿಗಳು ಬಂಡವಾಳ ಹೂಡಿದರೆ, ಈ ವೃತ್ತಿಯನ್ನು ಅವಲಂಬಿಸಿರುವಂತ ಸಾವಿರಾರು ಬಡ ಕುಟುಂಬಗಳು ಸಂಕಟಕ್ಕೆ ಗುರಿಯಾಗುವುದಲ್ಲದೆ, ಶೋಷಣೆಗೆ ಒಳಗಾಗುತ್ತಾರೆಂಬ ಅಂಶವನ್ನು ಮಾನ್ಯ ಮಂತ್ರಿಗಳ ಗಮನಕ್ಕೆ ತರುತ್ತೇನೆ. ಇದೇ ಸದನದಲ್ಲಿ ಉಳುವವನೇ ಭೂಮಿಯ ಒಡೆಯ ಎಂದು ಹೇಳುವಂತ ಶಾಸನ ತಂದಿದ್ದೇವೆ. ಅದೇರೀತಿ ಮಳೆ ಗಾಳಿ ಎನ್ನದೇ ಬೆವರು ಸುರಿಸಿ, ಸಮುದ್ರದಲ್ಲಿ ಮುಳುಗಿ ಮೀನು ಹಿಡಿಯುವಂತ ಮೀನುಗಾರರೇ ದೋಣಿಯ ಒಡೆಯರು ಎನ್ನುವಂತ ಶಾಸನವನ್ನು ತರುವಂತ ಪ್ರಸಂಗ ಬಂದರೂ ಬರಬಹುದು. ನಿಮ್ಮ ಅಧಿಕಾರಿಗಳಲ್ಲಿ ಬಹಳ ಅನುಭವಿಕ ಅಧಿಕಾರಿಗಳು ಇದ್ದಾರೆ. ಅದನ್ನು ನಾನು ಪ್ರಶ್ನಿಸುವುದಿಲ್ಲ. ಮೀನುಗಾರಿಕೆ ಕಾಲೇಜಿನಿಂದ ಹೊರಗೆ ಬರುವಂತವರಿಗೆ ಪ್ರಾಯೋಗಿಕ ಜ್ಞಾನ ಇದೆಯೋ ಎನ್ನುವ ಸಂಶಯ ಬರುತ್ತಿದೆ. "ಅದು ನೋಡು ಮೀನುಗಾರಿಕೆ ಕಾಲೇಜು, ಡಿಗ್ರಿ ಪಡೆದವರೆಲ್ಲಾ ಬಹಳ ನಾಜೋಕು, ಆಫೀಸಿನಲ್ಲಿದ್ದವರ ಕುರ್ಚಿಗಳು ಭದ್ರ, ಇವರ ಮುಖ ನೋಡಲಿಲ್ಲ ಭೀಕರ ಸಮುದ್ರ" ಬಹಳ ನೊಂದು ಈ ಮಾತನ್ನು ಮಾನ್ಯ ಮೀನುಗಾರಿಕೆ ಮಂತ್ರಿಯವರಲ್ಲಿ ಹೇಳುತ್ತಿದ್ದೇನೆ. ಅವರಿಗೆ ಬಲೆ ಅಂದರೇನು ಗೊತ್ತಿಲ್ಲ, ಯಾಂತ್ರಿಕ ದೋಣಿ ಅಂದರೇನೂ ಗೊತ್ತಿಲ್ಲ, ಮೀನುಗಾರರ ಸಮಸ್ಯೆಗಳು ಗೊತ್ತಿಲ್ಲ, ಡಿಗ್ರಿ ಪಡೆದಿರಬಹುದು. ಗೋಲ್ಡ್ ಮೆಡಲಿಸ್ಟ್ ಆಗಿರಬಹುದು, ಆದರೆ, ಇವರಿಗೆ ಪ್ರಾಯೋಗಿಕ ಜ್ಞಾನ ಎಷ್ಟರಮಟ್ಟಿಗೆ ಇದೆಎಂದು ಕೇಳುತ್ತೇನೆ,

ಅವರಿಗೆ ಆಗಾಗ ಇನ್‌ಸರ್ವೀಸ್ ಟ್ರೈನಿಂಗ್ ಅವಶ್ಯಕತೆ ಬಹಳ ಇದೆಯೆಂದು ನಾನು ಭಾವಿಸಿದ್ದೇನೆ. ತಾವು ಇದರ ಬಗ್ಗೆ ಸೂಕ್ತವಾದ ಕ್ರಮ ಕೈಗೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ. ಇನ್ನು ಬಂದರಿಗೆ ಸಂಬಂಧಪಟ್ಟಂತೆ ಈ ಕಾರವಾರ ಬಂದರನ್ನು ನೀವು ಮತ್ತು ಲೋಕೋಪಯೋಗಿ ಇಲಾಖಾ ಸಚಿವರು ಅಭಿವೃದ್ಧಿಯ ನಿಟ್ಟಿನಲ್ಲಿ ತ್ವರಿತಗತಿಯಲ್ಲಿ ಕ್ರಮ ಕೈಗೊಂಡಿದ್ದೀರಿ ಅದಕ್ಕೆ ನನ್ನ ಧನ್ಯವಾದಗಳು. ಮಂಗಳೂರು ನೈಸ್ ಬಂದರು ಅಲ್ಲದೇ ಇದ್ದರೂ ಸಹ ಅಲ್ಲಿಯ ರಾಜಕೀಯ ಮುಖಂಡರ ಪ್ರಭಾವದ ಒತ್ತಡದಿಂದಾಗಿ ಅದು ಕೇಂದ್ರ ಸರ್ಕಾರದಿಂದ ಮನ್ನಣೆ ಪಡೆದು ಸರ್ವಋತು ಬಂದರಾಗಿದೆ. ಇವೊತ್ತು ಕಾರವಾರದ ಬಗ್ಗೆ ವರದಿ ತರಿಸಿ ನೋಡಿದರೆ ಇದಕ್ಕೆ ದೊಡ್ಡ ಚಾರಿತ್ರಿಕ ಹಿನ್ನೆಲೆ ಇದೆ. ಈ ಬಗ್ಗೆ ದೊಡ್ಡ ದೊಡ್ಡ ತಜ್ಞರು ತಮ್ಮ ಪ್ರಶಂಸೆ ವ್ಯಕ್ತಪಡಿಸಿದ್ದಾರೆ. ಇದು ಇಡೀ ವಿಶ್ವದಲ್ಲೇ ಐದನೇ ಸ್ಥಾನ ಪಡೆಯು ಬಹುದಾದ ಸಾಮರ್ಥ್ಯ ಪಡೆದಿದೆ ಅಂಥ ಹೇಳಿದರೂ ಕೂಡ ಕೇಂದ್ರ ಸರ್ಕಾರ ಅಲ್ಲಿಂದ ಇಲ್ಲಿಯವರೆಗೂ ಅದರ ಅಭಿವೃದ್ಧಿ ಬಗ್ಗೆ ಕಡೆಗಣಿಸಿದೆ, ಕೇಂದ್ರ ಸರ್ಕಾರದ ಒಂದು ಬಡ್ಜೆಟ್‌ನಿಂದ ಅಭಿವೃದ್ಧಿ ಮಾಡಲಿಕ್ಕೆ ಸಾಧ್ಯವಿಲ್ಲವೆಂದು ಹೇಳಿದರು, ಇನ್ನು ನಮ್ಮ ಸಂಪರ್ಕ ಮಂತ್ರಿಗಳು ಇದೇ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಆದರೂ ಕೂಡ ರಾಜ್ಯ ಸರ್ಕಾರ ತ್ವರಿತ ಅಭಿವೃದ್ಧಿಯ ಕಡೆಗೆ ಲಕ್ಷ್ಯ ಪೂರೈಸಿದ್ದಾರೆ, ನನಗೆ ತಿಳಿದಮಟ್ಟಿಗೆ ೧೪೮ ಲಕ್ಷ ರೂಪಾಯಿ ಈಗಾಗಲೇ ಖರ್ಚು ಮಾಡಿದ್ದೀರಿ. ಇನ್ನು ಬೇಕಾದಂಥ ೩ ಕೋಟಿ ೫೮ ಲಕ್ಷ ರೂಪಾಯಿಗಳ ಒಂದುವ್ಯವಸ್ಥೆಯನ್ನು ನಮ್ಮ ಮಾನ್ಯ ವಿತ್ತ ಸಚಿವರು ಮಾಡುತ್ತಾರೆಂದು ನಾನು ಭಾವಿಸಿದ್ದೇನೆ. ಇನ್ನು ಅದೇ ರೀತಿ ಡ್ಯಾನಿಡ, ಇಂಡೋ ಡ್ಯಾನಿಷ್ ಸಹ ಯೋಗದಿಂದ ಸ್ಥಾಪಿತ ವಾದುದಕ್ಕೆ ಅಸ್ತಿಭಾರ ಹಾಕಿ ಅದಕ್ಕೆ ತ್ವರಿತ ಗತಿಯಿಂದ ಅಭಿವೃದ್ಧಿ ಮಾಡಲಿಕ್ಕೆ ತಾವು ಎಲ್ಲಾ ವ್ಯವಸ್ಥೆ ಮಾಡಿಕೊಟ್ಟಿದ್ದೀರಿ. ಅದಕ್ಕೆ ತಮಗೆ ಧನ್ಯವಾದಗಳನ್ನು ಅರ್ಪಿಸುತ್ತೇನೆ. ಈ ಬೇಡಿಕೆಯಲ್ಲಿ ಭಾಗವಹಿಸಿ ನನ್ನ ಅಭಿಪ್ರಾಯವನ್ನು ವ್ಯಕ್ತ ಮಾಡಲಿಕ್ಕೆ ಅವಕಾಶ ಮಾಡಿಕೊಟ್ಟ ಸಭಾಧ್ಯಕ್ಷರಿಗೆ ನನ್ನ ಕೃತಜ್ಞತೆಯನ್ನು ಅರ್ಪಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಹೆಚ್. ಡಿ. ದೇವೇಗೌಡ.— ಅಧ್ಯಕ್ಷರೇ, ಮಾನ್ಯ ನಾಯಕ್ ಅವರು ಆ ರೀತಿ ಹೇಳುವಾಗ ನಾನು ಒಂದು ಮಾತು ಹೇಳಬೇಕಾಗುತ್ತದೆ. ನಾನು ಹರಿಜನ ಗಿರಿಜನರ ಬಗ್ಗೆ ರಿಸರ್ವೇಷನ್ ಇಡಬಾರದು ಅಂಥ ಹೇಳಲಿಲ್ಲ. ನನ್ನ ಭಾಷಣ ತಾವು ಚೆನ್ನಾಗಿ ಅರ್ಥಮಾಡಿಕೊಂಡಿದ್ದೀರಾ ಎಂದು ಕಾಣುತ್ತದೆ, ನಾನು ಯಾವುದೇ ಹಂತದಲ್ಲೂ ೧೮ ಪರ್ಸೆಂಟ್ ರಿಸರ್ವೇಷನ್ ಕಡಿಮೆ ಇದ್ದರೆ, ಎಲ್ಲಾ ಬ್ಯಾಕ್ ಲಾಗ್ ಅಪಾಯಿಂಟ್ ಮಾಡಬೇಕೆಂದು ಹೇಳಿದ್ದೇನೆ. ಅದು ಎಕ್ಸಿಕ್ಯುಟೀವ್ ಇಂಜಿನಿಯರ್ ಆಗಲಿ, ಅಸಿಸ್ಟೆಂಟ್ ಎಕ್ಸಿಕ್ಯುಟಿವ್ ಇಂಜಿನಿಯರ್ ಆಗಲಿ ಸೂಪರಿಂಟೆಂಡಂಟ್ ಇಂಜಿನಿಯರ್ ಆಗಲಿ, ಚೀಫ್ ಇಂಜಿನಿಯರ್ ಆಗಲಿ, ಯಾವುದೇ ಹಂತದಲ್ಲೂ ಈವನ್ ವರ್ಕ್‌ಚಾರ್ಜ್ ಎಸ್ಟಾಬ್ಲಿಷ್‌ಮೆಂಟ್‌ನಲ್ಲಿ ಬ್ಯಾಕ್‌ಲಾಗ್ ಒಂದೇ ಸಾರಿ ತುಂಬಿ ಅಂಥ ಹೇಳಿದ್ದೇನೆ. ಆದ್ದರಿಂದ, ವಿಷಯವನ್ನು ಮಿಕ್ಸ್ ಮಾಡುವುದು ಬೇಡ.

ಶ್ರೀ ಎಸ್. ವಿ. ನಾಯಕ್.— ಕೇಡರ್ ಅಂಡ್ ರೆಕ್ರೂಟ್‌ಮೆಂಟ್ ರೂಲ್ಸ್ ಕಟ್ಟುನಿಟ್ಟಾಗಿ ನಡೆಸಿಕೊಂಡುಬಂದರೆ ಸಾಕು ಅಂಥ ಹೇಳಿದೆ.

ಶ್ರೀ ಹೆಚ್. ಡಿ. ದೇವೇಗೌಡ.— ನಾನು ಮಾತನಾಡುವಾಗ ತಾವು ಇದ್ದಿರಿ ಎಂದು ಕಾಣುತ್ತದೆ. ಕೇಡರ್ ಅಂಡ್ ರೆಕ್ರೂಟ್‌ಮೆಂಟ್ ರೂಲ್ಸ್ ವ್ಯಾಪ್ತಿಯಲ್ಲಾದರೂ ತೆಗೆದುಕೊಂಡು ಬನ್ನಿ. ಹಾಗೆ ಅಡಹಾಕ್ ಮೆಜರ್ಸ್‌ನಲ್ಲಿ ಬೇಕಾದರೂ ಮಾಡಿ, ಯಾವುದೇ ಹಂತದಲ್ಲಾದರೂ ಆ ಬ್ಯಾಕ್‌ಲಾಗಾ ತುಂಬಬೇಕೆಂದು ಹೇಳಿದ್ದೇನೆ. ಆ ರೀತಿ ಬ್ಯಾಕ್‌ಲಾಗ್ ತುಂಬಬೇಕಾದರೆ ಕಮ್ಯುನಿಟಿ ವೈಸ್ ಪಟ್ಟಿ ಮಾಡಿ ತುಂಬಿ, ಮೇಜರ್ ಇರಿಗೇಷನ್‌ನಲ್ಲಿ ಯಾವ ಯಾವ ಅಧಿಕಾರಿಗಳು ಎಲ್ಲೆಲ್ಲಿ ಕೆಲಸ ಮಾಡಿದ್ದಾರೆ ಅದನ್ನು ಸಭೆಯ ಮುಂದೆ ಇಡಿ. ನಾನು ೧೯೭೮ರಿಂದ ಈ ತಹಲ್‌ವರೆಗೆ ಆಪಾದನೆ ಮಾಡಲಿಕ್ಕೆ ಹೋಗಿಲ್ಲ ಅಂಥ ಹೇಳಿದೆ. ಈ ಸರ್ಕಾರ ಬಂದು ಎರಡು ವರ್ಷ ಆಯಿತು. ನಾನು ಬಾಯಿ ಮುಚ್ಚಿಕೊಂಡಿದ್ದೇನೆ. ೨೬ನೇ ಫೆಬ್ರುವರಿ ೧೯೭೮ರಲ್ಲಿ ರಾಜಕೀಯ ಪಕ್ಷದ ಅಧ್ಯಕ್ಷನಾಗಿ ಸೋತಮೇಲೆ ಈ ಸೀಟಿಗೆ ಬಂದು ಕುಳಿತಿದ್ದೇನೆ. ನಾನು ಈ ಜಾಗದಲ್ಲಿ ಮೌನಿಯಾಗಿ, ತಾಳ್ಮೆಯಿಂದ ಕುಳಿತಿದ್ದೇನೆ. ಆ ಗುರು, ಈ ಗುರು, ಅಂದರೆ ಯಾವ ಶಿಷ್ಯರು ಇಲ್ಲ, ಆ ಜಾಗದಲ್ಲಿ ಹತ್ತಾರು ಜನ ಬದಲಾವಣೆಯಾದರು. ಜನ ತಿರಸ್ಕಾರ ಮಾಡಿ, ಈ ಜಾಗ ಕೊಟ್ಟಿದ್ದಾರೆ, ನಾನು ಈ ಜಾಗದಲ್ಲಿ ಕುಳಿತುಕೊಂಡಿದ್ದೇನೆ. ಅದರ ಬಗ್ಗೆ ವ್ಯಾಖ್ಯಾನ ಬೇಡ. ನಾನು ಮಂತ್ರಿ ಅಥವಾ ಮುಖ್ಯ ಮಂತ್ರಿಗಳ ಮೇಲೆ ಆಪಾದನೆ ಮಾಡುವುದಿಲ್ಲ ಅಂಥ ಹೇಳಿ

ದ್ದೇನೆ. ನಾನು ಇಲಾಖೆಯಲ್ಲಿ ನಡೆಯುತಕ್ಕ ತಾರತಮ್ಯಗಳ ಬಗ್ಗೆ ಹೇಳಿದ್ದೇನೆ ಹೊರತು ಯಾವ ವ್ಯಕ್ತಿಯ ಮೇಲೆ ಆರೋಪ ಮಾಡಲಿಕ್ಕೆ ಹೋಗಿಲ್ಲ. ಒಂದು ವೇಳೆ ಏನಾದರೂ ನನ್ನ ಕ್ಷೇತ್ರಕ್ಕೆ ಆಗಿರುವ ಕೆಲಸದ ವಿಷಯದ ಬಗ್ಗೆ ಬಂದಾಗ ಚರ್ಚೆ ಮಾಡಿರುತ್ತೇನೆ. ನಾನು ಯಾವುದೇ ವ್ಯಕ್ತಿಯ ಬಗ್ಗೆ ಹೇಳಲಿಕ್ಕೆ ಹೋಗಿಲ್ಲ. ತಾವು ಏನಾದರೂ ಹೇಳುವುದಾದರೆ, ಯಾವುದೇ ತರಹ ನ್ಯಾಯಾಂಗ ವಿಚಾರಣೆ ಮಾಡಿ, ಸದನದ ಮೂಲಕ ತನಿಖೆ ಮಾಡಿ I am prepared to face it. I am not a coward

ಶ್ರೀ ಎಸ್. ಎಸ್. ಮಹಾಜನ್ ಶೆಟ್ಟಿ (ಹುಕ್ಕೇರಿ).— ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಲೋಕೋಪಯೋಗಿ ಇಲಾಖೆಯ ಮಂತ್ರಿಗಳು ಮಂಡಿಸಿರತಕ್ಕ ಬೇಡಿಕೆಯನ್ನು ವಿರೋಧಿಸುತ್ತೇನೆ. ಇದು ಲೋಕೋಪಯೋಗಿ ಖಾತೆಯಲ್ಲಿ, ಓಕೋಪಯೋಗಿ ಖಾತೆ ಎಂದು ಹೇಳಬೇಕಾಗಿದೆ. ಏಕೆಂದರೆ ಈ ಖಾತೆಯವರು ಏನು ಕೆಲಸ ಮಾಡುತ್ತಿಲ್ಲ. ಇವೊತ್ತು ಯಾವುದೇ ಹಳ್ಳಿಯಲ್ಲೂ ಹೊಸ ರಸ್ತೆ ಕೆಲಸ ಆಗಿಲ್ಲ. ಇನ್ನು ಬ್ರಿಡ್ಜ್‌ಗಳ ಬಗ್ಗೆ ನಾಲ್ಕಾರು ವರ್ಷಗಳಿಂದ ಕೇಳುತ್ತಿದ್ದೇವೆ, ಆದರೂ ಕೂಡ ಒಂದು ಬ್ರಿಡ್ಜ್‌ನ್ನು ಕಟ್ಟಿಸಿಕೊಡುತ್ತಿಲ್ಲ. ಇಂಥ ಕೆಲಸ ಲೋಕೋಪಯೋಗಿ ಇಲಾಖೆ ಖಾತೆಯಲ್ಲಿ ನಡೆಯುತ್ತಿದೆ, ಇನ್ನು ನಮ್ಮ ಭಾಗದ ರಸ್ತೆಗಳಲ್ಲಿ ಬಸ್ಸುಗಳು ಓಡಾಡಬೇಕಾದರೆ ಬಸ್ಸುಗಳು ಡ್ಯಾನ್ಸ್ ಮಾಡಿಕೊಂಡು ಹೋಗುತ್ತವೆ. ಒಂದು ಬಸ್ಸಿನಲ್ಲಿ ನಾವೇನಾದರೂ ಪ್ರಯಾಣ ಮಾಡಿದರೆ, ನಾವು ಪ್ರಯಾಣ ಮಾಡಿದಂಥ ಬಸ್ಸು ಮತ್ತೆ ಅದು ಹೊರಡುವುದಿಲ್ಲ, ಅದು ಕೆಟ್ಟು ನಿಂತಿರುತ್ತದೆ. ಆ ರೀತಿ ಕೆಟ್ಟು ಹೋಗತಕ್ಕ ಬಸ್ಸುಗಳಿಗೆ ಖರ್ಚು ಮಾಡತಕ್ಕ ಹಣವನ್ನು ರಸ್ತೆ ರಿಪೇರಿಗೆ ಖರ್ಚು ಮಾಡಿದರೆ ರಸ್ತೆಗಳು ಚೆನ್ನಾಗಿರುತ್ತವೆ. ಬಸ್ಸುಗಳು ಕೆಟ್ಟು ಹೋಗುವುದಕ್ಕೆ ಅವಕಾಶವಿರುವುದಿಲ್ಲ. ಈ ಬಗ್ಗೆ ಲೋಕೋಪಯೋಗಿ ಇಲಾಖೆ ಗಮನ ಹರಿಸಲಿಕ್ಕೆ ಹೋಗುವುದಿಲ್ಲ, ನಮ್ಮ ಮಂತ್ರಿಗಳನ್ನು ನಮ್ಮ ಭಾಗಕ್ಕೆ ಕರೆದುಕೊಂಡು ಹೋಗಿ ರಸ್ತೆಗಳನ್ನು ತೋರಿಸಬೇಕೆಂದು ಬಹಳ ಆಸೆಯನ್ನು ಇಟ್ಟುಕೊಂಡಿದ್ದೆ. ಅವರು ಬಂದು ನೋಡಿದ್ದರೆ ಒಳ್ಳೆಯ ಕೆಲಸವಾದರೂ ಆಗುತ್ತಿತ್ತು. ಆದರೆ ಅವರು ಬರಲಿಕ್ಕೆ ಆಗುತ್ತಿಲ್ಲ. ಅವರಿಗೆ ಏನು ಕೆಲಸ ಇದೆಯೋ ನನಗೆ ಗೊತ್ತಾಗುತ್ತಿಲ್ಲ. ಇನ್ನು ಕರ್ನಾಟಕ ಸರ್ಕಾರದ ಭೂಪಟದಲ್ಲಿ ಇವರಿಗೆ ಕೊಡಗು, ದಕ್ಷಿಣ ಕನ್ನಡ, ಶಿವಮೊಗ್ಗ ಅಷ್ಟು ಮಾತ್ರ ಕಾಣುತ್ತದೆಯೋ ಹೊರತು ನಮ್ಮ ಬೆಳಗಾಂ ಹುಕ್ಕೇರಿ ತಾಲ್ಲೂಕು ಕಾಣುತ್ತಿಲ್ಲ. ನಾವು ಶಾಸಕರಾಗಿ ಬಂದು ನಾಲ್ಕೂವರೆ ವರ್ಷವಾಯಿತು, ಇಷ್ಟು ವರ್ಷಗಳಲ್ಲಿ ನನ್ನ ಕ್ಷೇತ್ರಕ್ಕೆ ಮೂರೂವರೆ ಲಕ್ಷ ರೂಪಾಯಿ ಬಡ್ಜೆಟ್ ವರ್ಕ್ಸ್ ಕೊಟ್ಟಿದ್ದಾರೆ.

ಶ್ರೀ ಸಿ. ಎಂ. ಇಬ್ರಾಹಿಂ.— ಕೆಲವು ಕಡೆ ೫೦ ಲಕ್ಷ ರೂಪಾಯಿ ಕೆಲಸವಾಗಿದೆ.

ಶ್ರೀ ಎಸ್. ಎಸ್. ಮಹಾಜನಶೆಟ್ಟಿ.— ನನ್ನ ಕ್ಷೇತ್ರದ್ದು ನಾನು ಹೇಳಬೇಕಾಗಿದೆ. ಈಗ ಮೊನ್ನೆ ಸಿಲ್ವರ್ ಜ್ಯೂಬಿಲಿ ವರ್ಕ್ಸ್‌ನಲ್ಲಿ ಜನರಲ್ ಆಗಿ ೫ಲಕ್ಷ ರೂಪಾಯಿ ಕೊಟ್ಟಿದ್ದಾರೆ. ಆದರೆ ವರ್ಷದ ಡ್ಜೆಟ್‌ನಲ್ಲಿ ಕೊಡಬೇಕಾದಂಥ ಹಣವನ್ನು ನಾಲ್ಕೂವರೆ ವರ್ಷದಲ್ಲಿ ಕೇವಲ ಮೂರೂವರೆ ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದಾರೆಂದರೆ ಅದು ಎಷ್ಟು ಮಲತಾಯಿ ಧೋರಣೆ ಎಂಬುದನ್ನು ನಾನು ಸರ್ಕಾರಕ್ಕೆ ಕೇಳುತ್ತಿದ್ದೇನೆ. ನನ್ನ ತಾಲೂಕಿನಲ್ಲಿ ಹಿರಣ್ಯಕೇಷಿ ಎಂದು ಇದೆ. ಅಲ್ಲಿ ಒಂದು ಬ್ರಿಡ್ಜ್ ಇದೆ. ಅದು ಮಳೆಗಾಲದಲ್ಲಿ ಮುಳುಗಡೆಯಾಗುತ್ತದೆ. ಈ ಬಗ್ಗೆ ಕಳೆದ ೩–೪ ವರ್ಷದಿಂದಲೂ ನಾನು ಹೇಳುತ್ತಲೇ ಬರುತ್ತಿದ್ದೇನೆ. ಈ ಬ್ರಿಡ್ಜನ್ನು ಎತ್ತರ ಮಾಡಿ ಎಂದು; ಆದರೆ ಸರ್ಕಾರದವರು ಇದುವರೆಗೂ ಅದನ್ನು ಎತ್ತರ ಮಾಡಿ ಕೊಟ್ಟಿಲ್ಲ. ತಾಲೂಕು ಪ್ಲೇಸ್‌ಗಳಿಗೆ ಮಳೆಗಾಲದಲ್ಲಿ ಬಸ್ಸುಗಳು ಹೋಗಬೇಕಾದರೆ ಈ ಬ್ರಿಡ್ಜ್ ಮುಳುಗಡೆಯಾದಾಗ ಸುಮಾರು ೧೦ ಮೈಲಿ ಸುತ್ತಿಕೊಂಡು ಹೋಗಬೇಕಾಗುತ್ತದೆ. ಇದರಿಂದಾಗಿ ಪ್ರತಿಯೊಬ್ಬ ಪ್ರಯಾಣಿಕನೂ ಕೂಡ ಸುಮಾರು ೨ ರೂಪಾಯಿ ಅಥವಾ ೨.೫೦ ರೂಪಾಯಿಗಳನ್ನು ಜಾಸ್ತಿ ದಂಡ ತೆರಬೇಕಾಗುತ್ತದೆ. ಇದುವರೆಗೆ ಜನರು ಕೊಟ್ಟಿರತಕ್ಕ ಹಣದಲ್ಲೆ ಹೊಸದಾಗಿ ಒಂದು ಬ್ರಿಡ್ಜ್‌ನ್ನೇ ಕಟ್ಟಬಹುದಿತ್ತು. ಈ ಕೆಲಸವನ್ನು ಮಾಡಬೇಕೆಂಬ ಮನಸ್ಸು ನಮ್ಮ ಸರ್ಕಾರಕ್ಕೆ ಇಲ್ಲವೆಂದು ಕಾಣುತ್ತದೆ. ಆದ್ದರಿಂದ, ಈ ಬ್ರಿಡ್ಜ್‌ನ್ನು ಎತ್ತರಿಸುವ ಕಡೆಗೆ ಸರ್ಕಾರದವರು ಗಮನಹರಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಮಾನ್ಯ ಅಧ್ಯಕ್ಷರೆ, ನಮ್ಮ ತಾಲ್ಲೂಕು ಬಹಳ ಹಿಂದುಳಿದ ತಾಲ್ಲೂಕು. ನಮ್ಮ ಕಡೆ ಸಿ.ಡಿ. ವರ್ಕ್ಸ್ ಮಾಡುವುದಕ್ಕೆ ಯಾರೂ ಕೂಡ ಬರುತ್ತಿಲ್ಲ. ನಮ್ಮ ಕಡೆ ರಸ್ತೆಗಳು ಬಹಳ ಕೆಟ್ಟ ಪರಿಸ್ಥಿತಿಯಲ್ಲಿವೆ. ಆದ್ದರಿಂದ ಸರ್ಕಾರದವರು ಹೆಚ್ಚು ಹಣವನ್ನು ಈ ಬಾಬಿಗೆ ಒದಗಿಸಬೇಕೆಂದು ಕೇಳಿಕೊಳ್ಳುತ್ತೇನೆ. ಮೆಟೀರಿಯಲ್ಸ್‌ನ್ನು ತೆಗೆದುಕೊಳ್ಳುವ ಸಲುವಾಗಿ ೬೦ ಪರ್ಸೆಂಟ್ ಮಾಡಿ ಕೂಲಿಗೆ ೪೦ ಪರ್ಸೆಂಟ್ ಮಾಡಿ

ದರೆ ಮಾತ್ರ ಈ ಸಿ.ಡಿ. ವರ್ಕ್ಸ್ ಪ್ರತಿಯೊಂದು ಹಳ್ಳಿಗಳಲ್ಲೂ ಚೆನ್ನಾಗಿ ಆಗುತ್ತದೆ. ಸರ್ಕಾರದವರು ಇದನ್ನು ವಿಚಾರ ಮಾಡಿ ಈ ಕೆಲಸವನ್ನು ತೆಗೆದುಕೊಳ್ಳಬೇಕು. ಮಾನ್ಯ ಮಂತ್ರಿಗಳು ಒಮ್ಮೆ ನಮ್ಮ ಭಾಗಕ್ಕೆ ಬಂದು ಸ್ವಲ್ಪ ತಿರುಗಾಡಿದರೆ ಅದು ಎಷ್ಟು ಹಿಂದುಳಿದಿದೆ ಎಂಬುದು ಗೊತ್ತಾಗಿ ಈ ವರ್ಷವಾದರೂ ಸಪ್ಲಿಮೆಂಟರಿ ಬಜೆಟ್‌ನಲ್ಲಿ ರೋಡ್ಸ್ ಮತ್ತು ಬ್ರಿಡ್ಜಸ್ ತೆಗೆದುಕೊಳ್ಳುತ್ತಾರೆಂದು ನಾನು ಅಂದುಕೊಂಡಿದ್ದೇನೆ.

ಮಾನ್ಯ ಅಧ್ಯಕ್ಷರೇ, ನಾನು ಹೆಚ್ಚು ಮಾತನಾಡುವುದಕ್ಕೆ ಹೋಗದೆ, ಇಷ್ಟು ಹೊತ್ತು ಮಾತನಾಡಲು ಅವಕಾಶ ಮಾಡಿಕೊಟ್ಟಿದ್ದಕ್ಕೆ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಆನಂದಕುಂದ ಹೆಗ್ಡೆ (ಬ್ರಹ್ಮಾವರ).—ಮಾನ್ಯ ಅಧ್ಯಕ್ಷರೆ, ಮಾನ್ಯ ಮಂತ್ರಿಗಳು ಸಭೆಯ ಮುಂದೆ ಮಂಡಿಸಿರತಕ್ಕ ಬೇಡಿಕೆಗಳನ್ನು ಸ್ವಾಗತಿಸುವುದರೊಂದಿಗೆ ಕೆಲವು ಸಲಹೆ ಮತ್ತು ವಿಮರ್ಶೆಗಳನ್ನು ಮಾಡಬೇಕೆಂದು ನಾನು ನಿಂತಿದ್ದೇನೆ. ನಮ್ಮ ಲೋಕೋಪಯೋಗಿ ಖಾತೆಯ ಹೆಸರು ಬಹಳ ಅರ್ಥವುಳ್ಳದ್ದು. ನಮ್ಮ ರಾಜ್ಯದಲ್ಲಾಗಲೀ ನಮ್ಮ ರಾಷ್ಟ್ರದಲ್ಲಾಗಲಿ ಅಥವಾ ಈ ಸದನದಲ್ಲಾಗಲೀ, ಲೋಕೋಪಯೋಗಿ ಖಾತೆ ಬಹಳ ಪ್ರಮುಖವಾದ ಖಾತೆ. ಮಾನ್ಯ ಕಾಗೋಡು ತಿಮ್ಮಪ್ಪನವರು ಲೋಕೋಪಯೋಗಿ ಖಾತೆ ಸಚಿವರಾದಾಗ, ಇವರು ಬಹಳ ಹಿರಿಯ ಶಾಸಕರಾಗಿದ್ದುಕೊಂಡು ಇದರ ಒಳಹೊರಗಿನ ಎಲ್ಲ ಅನುಭವಗಳನ್ನೂ ಹೊಂದಿರುವುದರಿಂದ, ಇವರು ಬಹಳ ದಕ್ಷತೆಯಿಂದ ಕಾರ್ಯವನ್ನು ನಿರ್ವಹಿಸುತ್ತಾರೆಂದು ನಾವು ಅಂದುಕೊಂಡಿದ್ದೆವು. ನಿರೀಕ್ಷೆ ಅಥವಾ ಅನುಭವದಿಂದ ಹೇಳುವುದಾದರೆ ಅವರಿಗೆ ಮನಸ್ಸು ಇರಬಹುದು. ಆದರೆ ಆ ಮಾರ್ಗವನ್ನು ಮಾತ್ರ ಅವರು ಹಿಡಿದಿಲ್ಲವೆಂದು ನಮಗೆ ಅನಿಸುತ್ತಿದೆ. ಇದಕ್ಕೆ ಅವರೊಬ್ಬರೇ ಕಾರಣವಲ್ಲ ಯಾವುದೇ ಒಂದು ರಾಜ್ಯ ಅಥವಾ ದೇಶವನ್ನು ಕಟ್ಟಬೇಕಾದರೆ ಯಾವರೀತಿ ಕಟ್ಟಬೇಕು ಎನ್ನುವ ಬಗ್ಗೆ ಕೌಟಿಲ್ಯನು ರಾಜ್ಯ ಶಾಸ್ತ್ರದಲ್ಲಿ ಒಂದು ಮಾತನ್ನು ಹೇಳಿದ್ದಾನೆ. ಅದು ಏನೆಂದರೆ ಎಲ್ಲ ಹಂತಗಳಲ್ಲೂ ನಡೆಯುವ ಪ್ರಯತ್ನದ ಮೂಲಕ ಮಾತ್ರ ಆಡಳಿತವನ್ನು ನಡೆಸುವುದಕ್ಕೆ ಸಾಧ್ಯವಾಗುತ್ತದೆ, ಇಲ್ಲದೇ ಹೋದರೆ ಸಾಧ್ಯವಿಲ್ಲ ಎಂದು. ಇದು ನನಗೆ ಅನುಭವ ಇದೆ. ಆದರೆ ನೀವು ಏನು ಹೇಳುತ್ತಿದ್ದೀರಿ ಎಂದರೆ ಉದ್ದೇಶ ಒಳ್ಳೆಯದಿದ್ದರೂ ಕಾರ್ಯ ಸಾಧನೆಯಾಗುತ್ತಿಲ್ಲ ಅದೆಲ್ಲಕ್ಕಿಂತಲೂ ಉತ್ತಮವಾದ ವಿಷಯವೆಂದರೆ ಸಾಮಾನ್ಯವಾಗಿ ಹೇಳುವುದು, ಉದ್ದೇಶ ಬದಲಾವಣೆಯಾದರೆ ಅದರ ಗತಿ ಬದಲಾವಣೆಯಾಗುತ್ತದೆ. ಗತಿ ಬದಲಾವಣೆಯಾದರೆ ಅದರ ಪರಿಣಾಮ ಕೂಡ ಬದಲಾಗಲೇಬೇಕು. ಬೇರೆ ಬೇರೆ ಹಂತದಲ್ಲಿ ಈ ಅಪೇಕ್ಷಿತ ಉದ್ದೇಶವನ್ನು ಅನುಸರಿಸಲಿಕ್ಕೆ ಸಾಧ್ಯವಾಗುತ್ತಿಲ್ಲ. ಕಡಿಮೆ ವೆಚ್ಚದಲ್ಲಿ ಹೆಚ್ಚು ಸೌಲಭ್ಯಗಳನ್ನು ನಮ್ಮ ಸರ್ಕಾರದವರು ಜನರಿಗೆ ಕೊಡುವ ಸಾಧ್ಯತೆಗಳು ಬಹಳ ಕಡಿಮೆ ಎಂಬುದಕ್ಕೆ ಒಂದು ಉದಾಹರಣೆಯನ್ನು ಕೊಡಲಿಕ್ಕೆ ಇಚ್ಛೆಪಡುತ್ತೇವೆ. ಒಂದು ಕಡೆ ಒಂದು ಸರ್ಕಲ್ಲನ್ನು ನಿರ್ಮಿಸುವ ಕಡೆ ಒಂದು ದೊಡ್ಡ ಬಂಡೆಗಲ್ಲು ಇತ್ತು. ಅದನ್ನು ನೋಡಲು ಬಂದಿದ್ದ ಜೂನಿಯರ್ ಇಂಜಿನಿಯರ್, ಅಸಿಸ್ಟೆಂಟ್ ಇಂಜಿನಿಯರ್, ಎಕ್ಸಿಕ್ಯೂಟಿವ್ ಇಂಜಿನಿಯರ್‌ಗಳೆಲ್ಲಾ ಸೇರಿಕೊಂಡು ಪರಸ್ಪರ ಮಾತನಾಡುತ್ತಾ ಈ ಬಂಡೆಯನ್ನು ಈ ಸ್ಥಳದಿಂದ ಬೇರೆ ಕಡೆಗೆ ಸಾಗಿಸಲು ಒಂದು ಸಾವಿರ ರೂಪಾಯಿ ಖರ್ಚು ಬೀಳಬಹುದೆಂದು ಅಂದಾಜು ಮಾಡಿ ಅವರಿಗೆ ಸಂಪರ್ಕವಿದ್ದಂಥ ಒಬ್ಬ ಕಂಟ್ರಾಕ್ಟರನಿಗೆ ಆ ಬಂಡೆಗಲ್ಲನ್ನು ಸಾಗಿಸುವುದಕ್ಕೆ ಹೇಳುತ್ತಿದ್ದರು, ಅವರು ಮಾತನಾಡುತ್ತಿದ್ದ ಸಂದರ್ಭದಲ್ಲಿ ಅವರ ಪಕ್ಕದಲ್ಲೇ ನಿಂತಿದ್ದ ಒಬ್ಬ ರೈತ ಏನು ಹೇಳಿದ ಎಂದರೆ ಸ್ವಾಮಿ, ನನಗೆ ೧೦೦ರೂ.ಗಳನ್ನು ಕೊಟ್ಟರೆ ಈ ಬಂಡೆಗಲ್ಲನ್ನು ಸಾಗಿಸಿಕೊಡುತ್ತೇನೆ ಎಂದು ಹೇಳಿದ. ಈ ಇಂಜಿನಿಯರ್‌ಗಳಿಗೆ ಬಹಳ ಆಶ್ಚರ್ಯವಾಯಿತು. ಆಗ ಅವನ ಮಾತಿಗೆ ಅವರು ಒಪ್ಪಿದರು. ಆಗ ಈ ರೈತ ಏನು ಮಾಡಿದ ಎಂದರೆ ಆ ಬಂಡೆ ಪಕ್ಕದಲ್ಲೇ ಒಂದು ದೊಡ್ಡ ಹೊಂಡವನ್ನು ತೆಗೆದು ಅದರಲ್ಲಿ ಈ ಬಂಡೆಯನ್ನು ಉರುಳಿಸಿ ಅದರಮೇಲೆ ಮಣ್ಣು ಮುಚ್ಚಿದ. ಇದು ಬಹಿರಂಗವಾಗಿ ನಡೆದ ವಿಚಾರ. ನೀವು ಯಾವುದೇ ನಿರ್ಣಯ ಕಳುಹಿಸುವಾಗ, ಅಂದಾಜು ಮಾಡುವಾಗ ಅಥವಾ ಕಾಮಗಾರಿಯನ್ನು ತೆಗೆದುಕೊಳ್ಳುವಾಗ ಅದು ವಸ್ತು ನಿಷ್ಟವಾಗಿರಬೇಕು. ಏಕೆಂದರೆ, ರಸ್ತೆಯನ್ನಾಗಲೀ, ತಳಹದಿಯನ್ನಾಗಲಿ, ಕಲ್ವರ್ಟ್ಸ್ ಆಗಲಿ, ತೆಗೆದುಕೊಳ್ಳುವಾಗ ಅವುಗಳ ಸ್ವಭಾವವನ್ನು ಗುರ್ತಿಸಿ ಕೆಲಸ ಮಾಡಬೇಕೆಂದು ಹೇಳಬಯಸುತ್ತೇನೆ. ಉದಾಹರಣೆಗೆ ಹೇಳುವುದಾದರೆ ನಾನು ಮದ್ರಾಸ್‌ನಲ್ಲಿರುವಾಗ ನಮ್ಮ ಜಿಲ್ಲೆಯ ಒಂದು ರಸ್ತೆ ಹೇಗಿತ್ತು ಎಂದರೆ ರಸ್ತೆಯ ಮೇಲೆ ೧೪೦ ಇಂಚು ಮಳೆ ಆದರೂ ಒಂದು ತೊಟ್ಟು ನೀರೂ ಕೂಡ ರಸ್ತೆಯಮೇಲೆ ನಿಲ್ಲುತ್ತಿರಲಿಲ್ಲ. ಕಾರಣ ರಸ್ತೆಗಳ ಮಧ್ಯಭಾಗದಲ್ಲಿ ಎಲ್ಲಾದರೂ ಸಣ್ಣ ಸಣ್ಣ ಹೊಂಡಗಳು ಬಿದ್ದರೆ ಅವುಗಳನ್ನು ಬೋಲ ಸರ್ ಮತ್ತು

ಮಣ್ಣನ್ನು ಹಾಕಿ ರಸ್ತೆಯಿಂದ ಸ್ವಲ್ಪ ಎತ್ತರವಾಗಿ ಮಾಡುತ್ತಿದ್ದರು. ಇದರಿಂದಾಗಿ ನೀರು ನಿಲ್ಲುತ್ತಿರಲಿಲ್ಲ. ಸ್ವಾಮಿ, ತಾವು ಇವತ್ತು ನಮ್ಮ ಗ್ರಾಮಾಂತರ ಪ್ರದೇಶಕ್ಕೆ ಬಂದು ನೋಡಿದರೆ ಗೊತ್ತಾಗುತ್ತದೆ. ರಸ್ತೆಯಮೇಲೆ ಬಹಳಷ್ಟು ಹೊಂಡಗಳು ಬಿದ್ದಿವೆ. ಮಳೆಗಾಲದಲ್ಲಿ ಆ ಹೊಂಡಗಳಲ್ಲಿ ನೀರು ತುಂಬಿಕೊಂಡು ಅಪಘಾತಗಳಾಗುತ್ತವೆ. ಎತ್ತಿನ ಗಾಡಿಗಳು ರಸ್ತೆಯಲ್ಲಿ ಹೋಗುವಾಗ ಚಕ್ರಕ್ಕೆ ಸಿಕ್ಕಿ ಕಲ್ಲುಗಳು ಮೇಲೆದ್ದಾಗ ಅವುಗಳ ಮೇಲೆ ಮೋಟಾರು ವಾಹನಗಳು ಓಡಾಡಿ ಟೈರುಗಳಿಗೆ ಹೊಡೆತ ಬೀಳುತ್ತದೆ. ಆ ರಸ್ತೆಯಲ್ಲಿ ಸುಮಾರು ೪ ಲಕ್ಷ ವಾಹನಗಳು ಓಡಾಡುತ್ತಿದ್ದು ರಸ್ತೆಗಳು ಹಾಳಾಗಿರುವುದರಿಂದ ಸುಮಾರು ೫೦ ಕೋಟಿ ರೂ.ಗಳ ಬಿಡಿಭಾಗಗಳನ್ನು ಕೊಳ್ಳಬೇಕಾಗಿದೆ. ಇಷ್ಟನ್ನು ಕೊಳ್ಳಬೇಕಾದರೆ ಸಾರ್ವತ್ರಿಕವಾಗಿ ನಮ್ಮ ರಾಜ್ಯಕ್ಕೆ ಪ್ರತ್ಯಕ್ಷ ಮತ್ತು ಅಪ್ರತ್ಯಕ್ಷವಾಗಿ ಆಗತಕ್ಕ ನಷ್ಟವನ್ನು ತಾವು ಲೆಕ್ಕ ಹಾಕಬೇಕು. ರಸ್ತೆಗಳನ್ನು ರೂಪಿಸುವಾಗ ವಾಹನಗಳಿಗೆ ಧಕ್ಕೆ ಆಗದ ರೀತಿಯಲ್ಲಿ ಅವುಗಳ ಸ್ವಭಾವವನ್ನು ರೂಪಿಸಬೇಕು. ನಮ್ಮ ಉತ್ತರ ಕನ್ನಡ ಮತ್ತು ದಕ್ಷಿಣ ಕನ್ನಡ ಜಿಲ್ಲೆಯ ಕರಾವಳಿ ರಸ್ತೆಗಳು ಬಹಳವಾಗಿ ಹಾಳಾಗುತ್ತಿವೆ. ಈ ರಸ್ತೆಗಳ ರಿಪೇರಿಗಾಗಿ ಸರ್ಕಾರದವರು ಹೆಚ್ಚು ಹಣವನ್ನು ಇಡುವುದಿಲ್ಲ. ಅಲ್ಲದೆ ಕಾಮಗಾರಿಗಳನ್ನು ಮಾಡುವಾಗಲೂ ಕೂಡ ಹೆಚ್ಚು ದಕ್ಷತೆ, ಆಸಕ್ತಿ ವಹಿಸಿ ಕೆಲಸ ಮಾಡುತ್ತಿಲ್ಲವೆಂಬುದು ಎಲ್ಲರಿಗೂ ಗೊತ್ತಿದೆ. ನನಗೆ ಗೊತ್ತಿರುವಂತೆ ಕಾಂಕ್ರೀಟ್ ರಸ್ತೆಗಳಿಗೆ ೧೦೦ ವರ್ಷ, ಡಾಮರ್ ರಸ್ತೆಗಳಿಗೆ ೧೫ ವರ್ಷ, ಜೆಲ್ಲಿ ರಸ್ತೆಗಳಿಗೆ ೮-೧೦ ವರ್ಷಗಳ ಆಯಸ್ಸು ಇರುತ್ತದೆ. ಇಷ್ಟು ವರ್ಷ ಬಾಳಿಕೆ ಬರಬೇಕಾದರೆ ಅವುಗಳನ್ನು ಮಾಡುವ ಗುಣಮಟ್ಟವನ್ನು ಅವಲಂಬಿಸಿರುತ್ತದೆ. ಆದರೆ ೧೫-೨೦ ವರ್ಷಗಳಲ್ಲಿ ಕಾಂಕ್ರೀಟ್ ರಸ್ತೆಗಳು, ೪-೫ ವರ್ಷಗಳಲ್ಲಿ ಡಾಮರ್ ರಸ್ತೆಗಳು ಮತ್ತು ಮಾಡಿದ ಮೂರನೇ ವರ್ಷವೇ ಜೆಲ್ಲಿ ರಸ್ತೆಗಳನ್ನು ರಿಪೇರಿ ಮಾಡಬೇಕಾಗಿದೆ. ಸಾಮಾನ್ಯವಾಗಿ ಇದು ಎಲ್ಲ ಕಡೆಗಳಲ್ಲೂ ನಡೆಯುತ್ತಿದೆ. ಇದರಲ್ಲಿ ಇನ್ನೊಂದು ಬಹು ಮುಖ್ಯವಾದ ವಿಚಾರ ಎಂದರೆ, ರಸ್ತೆಗಳನ್ನು ರಿಪೇರಿ ಮಾಡುವಾಗ ಹಿಂದಿನ ಫರ್ಲಾಂಗ್‌ನಿಂದ ಮುಂದಿನ ಫರ್ಲಾಂಗ್‌ಗೆ ಜೆಲ್ಲಿಯನ್ನು ತೆಗೆದುಕೊಂಡು ಹೋಗುವ ಪದ್ಧತಿ ಇರುವುದನ್ನು ತಪ್ಪಿಸಿ ಹಣ ಉಳಿತಾಯ ಮಾಡುವ ಕಡೆ ಗಮನ ಕೊಡಬೇಕು, ಏಕೆಂದರೆ ಈ ಕೆಲಸದಲ್ಲಿ ಎರಡೂ ಕಡೆಯವರು ಶಾಮೀಲಾಗಿರುತ್ತಾರೆ. ಕಂಟ್ರಾಕ್ಟರ್‌ಗಳ ಪವಿತ್ರ ಮೈತ್ರಿಯಿಂದ ಒಳ್ಳೆಯ ರಸ್ತೆಗಳಾಗುತ್ತದೆ. ಅಪವಿತ್ರ ಮೈತ್ರಿಯಿಂದ ಕೆಟ್ಟ ರಸ್ತೆಗಳಾಗುತ್ತವೆ. ಅದರ ಪರಿಣಾಮ ವಾಹನಗಳ ಮೇಲಾಗುತ್ತದೆ. ತನ್ಮೂಲಕ ತೆರಿಗೆದಾರನ ಮೇಲೆ, ರಾಜ್ಯದ ಆರ್ಥಿಕ ಪರಿಸ್ಥಿತಿಯಮೇಲೆ ಹೊಣೆ ಬೀಳುತ್ತದೆ. ಆದ್ದರಿಂದ, ಇದರ ಬಗ್ಗೆ ಸರ್ಕಾರದವರು, ದೀರ್ಘವಾದ, ಸ್ಥೂಲವಾದ ಚಿಂತನೆಯನ್ನು ಎಲ್ಲ ಹಂತಗಳಲ್ಲೂ ಮಾಡಿದರೆ ಮಾತ್ರ ಅಪೇಕ್ಷಿತ ಅಥವಾ ನಿರೀಕ್ಷಿಸಿದ ಫಲಿತಾಂಶ; ಮತ್ತು ದೇಶಕ್ಕೆ ಆರ್ಥಿಕ ಉಳಿತಾಯವಾಗುತ್ತದೆ. ಇದಕ್ಕೆ ದಕ್ಷತೆ ಎಂದು ಹೇಳುತ್ತೇವೆ. ಇಲ್ಲದಿದ್ದರೆ ಅದಕ್ಷತೆ ಎಂದು ಹೇಳಬೇಕಾಗುತ್ತದೆ.

ಈ ಕಾರಣಕ್ಕಾಗಿ ತಾವು ಸ್ವಲ್ಪಮಟ್ಟಿಗೆ ಎಳೆ ಎಳೆಯಾಗಿ ಸೂಕ್ಷ್ಮದ ಹಂತದಲ್ಲಿ ಹೋಗಬೇಕು. ಅದನ್ನು ಗುರುತಿಸಬೇಕು. ಜೊತೆಯಲ್ಲಿ ಕಳೆದ ೧೦ ವರ್ಷಗಳಲ್ಲಿ ತಾವು ೧೦ ರಿಂದ ೧೨ ಸಾವಿರ ಕಿಲೋಮೀಟರ್ ತಾಲ್ಲೋಕ್‌ಬೋರ್ಡ್ ಗ್ರಾಮಾಂತರ ಪ್ರದೇಶದ ರಸ್ತೆಗಳನ್ನು ತೆಗೆದುಕೊಂಡಿದ್ದೀರಿ. ಈಗ ಪರಿಸ್ಥಿತಿ ಏನಾಗಿದೆ. ಅದಕ್ಕೆ ತಂದೆತಾಯಿಗಳು ಇಲ್ಲ ತಾಲ್ಲೋಕ್‌ಬೋರ್ಡಿನ ಹಣ ಕಡಿಮೆ ಇದೆ. ಅವರಿಗೆ ಸಾಧ್ಯವಾಗುತ್ತಿಲ್ಲವೆಂದು ಅವರು ತಮಗೆ ಬಿಟ್ಟುಕೊಟ್ಟರು. ಅನಂತರ ಅವು ನಿಷ್ಕ್ರಿಯೆಯಾಗಿವೆ. ಅದೆಲ್ಲ ಅನಾಥ ಸ್ಥಿತಿಯಲ್ಲಿದೆ. ನಮಗೆಂತೂ ಏನೂ ಆದಹಾಗೆ ಇಲ್ಲ. ಬಂಜೆ ಬಾಳೆಗಿಡವನ್ನು ಸುತ್ತಿಬಂದಂತಾಗಿದೆ. ಸ್ವಾಮಿ ನಮ್ಮ ಜಿಲ್ಲೆಯಲ್ಲಿ ಹೊಸದಾಗಿ ಅವಶ್ಯಕ ಸೇತುವೆಗಳು ಕಟ್ಟುವಾಗ ಬ್ರಿಟೀಷರ ಕಾಲದಲ್ಲಿ ಇದ್ದಂಥ ಕಬ್ಬಿಣದ ಸೇತುವೆಗಳು ಇವೆ. ಆದು ಈವತ್ತಿಗೂ ಅವಶ್ಯಕತೆಯ ಸಾರಿಗೆ ದೃಷ್ಟಿಯಿಂದ ರಸ್ತೆಗಳಿಗೆ ಸಾಕಗದ ದೃಷ್ಟಿಯಿಂದ, ರಸ್ತೆಗಳನ್ನು ಅಗಲ ಮಾಡುವ ದೃಷ್ಟಿಯಿಂದ, ಹೊಸ ಸೇತುವೆಗಳನ್ನು ಕಟ್ಟಬೇಕಾಗಿರುವುದರಿಂದ, ಹೊಸ ಕಲ್‌ವರ್ಟ್‌ಗಳನ್ನು ಕಟ್ಟಬೇಕಾಗಿರುವುದರಿಂದ ಆ ಕಬ್ಬಿಣದ ಸೇತುವೆಗಳು, ನೂರಾರು ವರ್ಷಗಳ ಕಾಲ ಬರತಕ್ಕಂಥ ಸೇತುವೆಗಳನ್ನು ತೆಗೆದು ಅಲ್ಲಲ್ಲೇ ಇಟ್ಟಿದ್ದೀರಿ. ಅದು ನಿಷ್ಕ್ರಿಯೆಯಾಗಿರುತ್ತವೆ. ಮಲೆನಾಡು ಪ್ರದೇಶದಲ್ಲಿ ಅದರಲ್ಲೂ ಕಾರವಾರ ಜಿಲ್ಲೆಯಲ್ಲಿ ಒಂದು ಗ್ರಾಮಕ್ಕೆ ೫-೬ ತೋಡುಗಳು ಒಂದು ನದಿಗೆ ೧೦ ಉಪನದಿಗಳು, ತೋಡುಗಳು ಶಾಖೆಗಳು ಇದೆ. ಅದಕ್ಕೆ ನಿರುಪಯೋಗವಾಗಿರತಕ್ಕಂಥ ಕಬ್ಬಿಣದ ಸೇತುವೆಗಳನ್ನು ಉಪಯೋಗಿಸಿದರೆ ಅನೇಕ ಗ್ರಾಮಗಳಿಗೆ ನಿತ್ಯ ಅವಶ್ಯಕತೆಯನ್ನು ಪೂರೈಸಲು ಸಾಧ್ಯವಾದಂತಾಗುತ್ತದೆ. ಅದರಲ್ಲೂ ಮಳೆಗಾಲದಲ್ಲಿ ೪-೬ ಮೈಲಿಗಳು ಸುತ್ತಿಕೊಂಡು ಬರತಕ್ಕಂಥವರಿಗೆ, ಶಾಲಾಮಕ್ಕಳಿಗೆ, ರೋಗಿಗಳನ್ನು

ಆಸ್ಪತ್ರೆಗೆ ತೆಗೆದುಕೊಂಡು ಹೋಗುವುದಕ್ಕೆ ಅನುಕೂಲವಾಗುತ್ತದೆ. ನಿಮ್ಮ ದೃಷ್ಟಿಯಲ್ಲಿ ನಮ್ಮ ಜಿಲ್ಲೆಯಲ್ಲಿ ಸೇತುವೆ ಇದೆ ಎಂದು ಹೇಳಿದರೂ ಕೂಡ ಅದು ನಿರುಪಯುಕ್ತವಾಗಿರುತ್ತದೆ. ಜನರು ಗ್ರಾಮಾಂತರ ಪ್ರದೇಶದ ಅವಶ್ಯಕತೆಗೆ ಅನುಗುಣವಾಗಿ ಅದನ್ನು ಖರ್ಚು ಇಲ್ಲದೆ ಮಾಡಬಹುದು. ಇದನ್ನು ಮಾಡಿದರೆ ಒಂದು ಸಹಾಯ ಮಾಡಿದಂತಾಗುತ್ತದೆ. ಆದರೆ ನಿರುಪಯುಕ್ತವಾಗಿರುವ ನಿಷ್ಕ್ರಿಯೆಯಾಗಿರತಕ್ಕಂಥ ೧೦-೧೫ ಕಬ್ಬಿಣದ ಸೇತುವೆಗಳನ್ನು ಕಿತ್ತುಹಾಕಿರುವುದು ಅಲ್ಲಲ್ಲೇ ಕಂಡು ಬರುತ್ತಿದೆ. ಅದರಲ್ಲೂ ಒಳ್ಳೆಯವುಗಳನ್ನು ಗುರುತಿಸಿ ಅದನ್ನು ಬಳಸಿದರೆ ಅದರಿಂದ ಹೆಚ್ಚಿನ ಉಪಯೋಗವಾಗುತ್ತದೆಂದು ನನ್ನ ಅನುಭವ. ಅವನ್ನು ಉಪಯೋಗಕ್ಕೆ ಬರುವಂತೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ನಮ್ಮ ಮೀನುಗಾರಿಕೆ ವಿಷಯದಬಗ್ಗೆ ಹೇಳುವುದಾದರೆ ವಿಶೇಷವಾಗಿ ನಮ್ಮ ಸಮುದ್ರವು ಬಹಳ ಆಳವಾಗಿಯೂ ವಿಶಾಲವಾಗಿಯೂ ಇದೆ. ನಮ್ಮ ಸೌಭಾಗ್ಯಕ್ಕೆ ಈ ದೇಶದ ವೈಶಿಷ್ಟ್ಯ ಏನೆಂದರೆ ದಕ್ಷಿಣಾಭಿಮುಖವಾಗಿ ಕರಾವಳಿಯನ್ನು ಹೊಂದಿರತಕ್ಕಂಥವರು ನಾವು. ಕರ್ನಾಟಕ ಕರಾವಳಿ ಸುಮಾರು ಐದು ಸಾವಿರ ಕಿಲೋಮೀಟರ್ ಕರಾವಳಿಯಲ್ಲಿ ನಮ್ಮ ರಾಜ್ಯಕ್ಕೆ ಮುನ್ನೂರು ಕಿಲೋಮೀಟರ್ ಇದೆ. ಇವರಲ್ಲಿ ಸಂಪ್ರದಾಯ ಮೀನುಗಾರಿಕೆ ಮೊದಲು ಇದ್ದಿತು. ಇತ್ತೀಚೆಗೆ ಆಧುನೀಕರಣ ಮೀನುಗಾರಿಕೆ ಇದೆ. ಸಮುದ್ರ ಗರ್ಭ ಬಹಳ ಸಂಪತ್ತು ಉಳ್ಳದ್ದಾದಾಗಿರುತ್ತದೆ. ಪರಿಣಾಮವಾಗಿ ಇದನ್ನು ರತ್ನಾಕರ ಎಂದು ಕರೆದಿದ್ದಾರೆ. ಈಗ ಹೇಳು ನಾಣ್ಯಗಳು. ಪ್ರತಿಯೊಂದು ಮನುಷ್ಯನ ಅವಶ್ಯಕತೆ ಪೂರೈಸುವ ಸಲುವಾಗಿ ತನಮೂಲಕ ಕುಬೇರ ಎಂದು ಹೇಳಬಹುವುದು. ತಿರುಪತಿ ತಿಮ್ಮಪ್ಪನಿಗೆ ಪದ್ಮಾವತಿ ಕಲ್ಯಾಣಕ್ಕಾಗಿ ಸಾಲವನ್ನು ಕೊಟ್ಟಿದ್ದಾನೆ ಸ್ವಾಮಿ. ಸಮುದ್ರದ ಆಳದಲ್ಲಿ ನಿದಿ ಇದೆ. ಗೋವಿಂದರಾಜು ಮೇಲೆ ಕುಳಿತಿದ್ದಾನೆ, ಕೆಳಗೆ ಡಬ್ಬಿ ಇಟ್ಟಿದ್ದಾರೆ, ಆದ್ದರಿಂದ ಇನ್ನೂ ಸಾಲ ತೀರಿಲ್ಲ. ಅದು ಇರಲಿ, ಅಂತು ಮೀನುಗಾರಿಕೆಯಲ್ಲಿ ನಿರ್ವಹಿಸಿದಂಥ ಪಾತ್ರ ಏನೇನು ಸಾಲದು. ವಹಿಸಿದಂಥ ಆಸಕ್ತಿ ಏನು ಸಾಲದು ಏತಕ್ಕೆಂದರೆ ಯಾಂತ್ರಿಕ ಮೀನುಗಾರಿಕೆ, ಸಂಪ್ರದಾಯ ಮೀನುಗಾರಿಕೆ ಎಂದು ಎರಡು ಬಾಗಗಳಾಗಿ ವಿಭಾಗಿಸಿದ್ದಾರೆ. ಸಂಪ್ರದಾಯಿಕ ಮೀನುಗಾರಿಕೆಗಿಂತ ಯಾಂತ್ರಿಕ ಮೀನುಗಾರಿಕೆ ಬಹಳ ಉಪಯೋಗವಿದೆ. ಸಂಪ್ರದಾಯಿಕ ಮೀನುಗಾರಿಕೆಯನ್ನು ನಿಯಂತ್ರಿಸಿದರೂ ಕೂಡ ಯಾಂತ್ರಿಕ ಮೀನುಗಾರಿಕೆ ವ್ಯವಸ್ಥೆ ಇನ್ನೂ ಪರಿಣಾಮಕಾರಿಯಾಗಿ ಕೆಲಸ ಮಾಡುತ್ತಿಲ್ಲ. ಇದು ಏನಾಗಿದೆ ಎಂದರೆ ಸಂಪ್ರದಾಯಿಕ ಮೀನುಗಾರಿಕೆ ಮೀನು ಸಿಕ್ಕುತ್ತಿಲ್ಲ ಇದರಿಂದ ಮೀನಿನ ಬರ ಅನುಭವಿಸುತ್ತಿದ್ದೇವೆ. ಇನ್ನೊಂದು ಸಮಸ್ಯೆ ಏನೆಂದರೆ ಮೀನಿಗೆ ಮೂರು ತಿಂಗಳಕಾಲ ವಿರಾಮಬೇಬೇಕಾಗುತ್ತದೆ. ಅದು ಮೊಟ್ಟೆ ಇಟ್ಟು ಮರಿ ಹಾಕಿ ಬೆಳೆಯಲಿಕ್ಕೆ ಬಿಡಬೇಕು. ಬೆಳೆದ ನಂತರ ಹಿಡಿದರೆ ಹೆಚ್ಚು ಬರುತ್ತದೆ. ಆಹಾರವೂ ಆಗುತ್ತದೆ. ಈಗ ಏನಾಗಿದೆ ಎಂದರೆ ಆ ಕಾಲದಲ್ಲಿ ಹಿಡಿಯುತಕ್ಕಂಥದ್ದು ಇರುತ್ತದೆ. ಅದನ್ನು ಕಾಯಿದೆಯ ಮೂಲಕ ನಿಯಂತ್ರಿಸಬೇಕಾದ್ದು ಬಹಳ ಅವಶ್ಯಕತೆ ಇದೆ. ಕಾಯಿದೆಯನ್ನು ಪರಿಣಾಮಕಾರಿಯಾಗಿ ಬಳಸತಕ್ಕಂಥದ್ದು ಬಹಳ ಅವಶ್ಯಕತೆ ಇದೆ. ಜೊತೆಯಲ್ಲಿ ಸಮುದ್ರದ ಮೀನುಗಾರಿಕೆಯೂ ಕೂಡ ಬಹಳ ಮಿತವಾಗಿ ಹೋಗುತ್ತಿದೆ. ೨-೩-೪ ನೂರು ಮೈಲಿದೂರ ಮೀನುಗಾರಿಕೆ ಮಾಡುತ್ತಿಲ್ಲ. ಸಮುದ್ರದಡಿಯಲ್ಲಿ ಆಳವಾಗಿ ಹೋಗುತ್ತಿಲ್ಲ. ಆಳದಲ್ಲಿ ಬೇಕಾದಷ್ಟು ಜೀವಿಗಳು ಇದಾವೆ. ಮೀನುಗಳು ಇದಾವೆ. ನಿಮ್ಮ ಸಮೀಕ್ಷೆಯಲ್ಲಿ ನಿಯಂತ್ರಣ ಯಂತ್ರಗಳನ್ನು ಸ್ಟೀಮರ್‌ಗಳನ್ನು ಹಡಗಿನಲ್ಲಿಟ್ಟು ಬಿಟರೆ ಅಲ್ಲಿ ಬದಕಿನ ಹೋರಾಟ ಚೀರಾಟ ಎಷ್ಟೋ ಪ್ರಮಾಣದಲ್ಲಿ ಇರುತ್ತವೆ. ಅಷ್ಟು ಸಂಪತ್ತು ಸಮುದ್ರದ ಗರ್ಭದಲ್ಲಿ ಇದೆ. ಅದನ್ನು ಹಿಡಿಯುವ ಪ್ರಯತ್ನ ಮಾಡುತ್ತಿಲ್ಲ. ವಿದೇಶಿಯವರು ಎರಡು ಸಾವಿರ, ಮೂರು ಸಾವಿರ, ನಾಲ್ಕು ಸಾವಿರ ಮೈಲಿಗಳ ದೂರ ಬಂದು ವಾರಗಟ್ಟಲೇ ಇದ್ದು ಮೀನು ಹಿಡಿದು ಉಪಯೋಗವನ್ನು ಪಡೆಯುತ್ತಿದ್ದಾರೆ. ಅದರ ಬೆಲೆಯನ್ನೂ ಕೂಡ ಪಡೆಯುತ್ತಿದ್ದಾರೆ. ಇದರಲ್ಲಿ ಮೀನುಗಾರಿಕೆಯಲ್ಲಿ ತಾವು ಒಂದು ಮಾತನ್ನು ಹೇಳಿದ್ದೀರಿ. ಇದು ಪರಸ್ಪರ ವಿರುದ್ಧವಾದ ವಿಚಾರವಾಗಿದೆ. ರಾಜ್ಯದ ಕಡಲಿ ಉತನ್ನಗಳ ನಿರ್ಯಾತದಿಂದ ವಾರ್ಷಿಕವಾಗಿ ೧೫ ಕೋಟಿ ರೂಪಾಯಿಗಳ ವಿದೇಶಿ ವಿನಿಮಯವನ್ನು ಗಳಿಸುವ ಸ್ಥಿತಿಗೆ ಬಂದಿದೆ. ೧೯೮೦-೮೧ ರಲ್ಲಿ ೧೧.೪೩ ಕೋಟಿ ರೂ. ವಿದೇಶಿ ವಿನಿಮಯ ಗಳಿಕೆಯಾಗಿದ್ದು, ೧೯೮೧-೮೨ ರಲ್ಲಿ ಅದು ೧೩.೦೨ ಕೋಟಿ ರೂ. ಆಗಿತ್ತು. ನಿರ್ಯಾತಗೊಂಡ ಉತ್ಪನ್ನಗಳ ಪ್ರಮಾಣದಲ್ಲಿ ಇಳಿಮುಖವಾಗಿದ್ದರೂ, ವಿದೇಶಿ ಮಾರುಕಟೆಗಳಲ್ಲಿ ಗಳಿಸಿದ ಉನ್ನತ ಘಟಕ ಮೌಲ್ಯದಿಂದಾಗಿ ವಿದೇಶಿ ವಿನಿಮಯ ಹೆಚ್ಚಾಗಿ ಲಭ್ಯವಾಯಿತು, ಎಂದು ಹೇಳಿರುತ್ತೀರಿ. ಇದರ ಅರ್ಥ ಮೀನು ಹಿಡಿದ

ಪ್ರಮಾಣದಲ್ಲಿ ಪಡೆದದ್ದು ಅಲ್ಲ. ವಿದೇಶಿ ವಿನಿಮಯದ ಬೆಲೆ ಹೆಚ್ಚಾದುದರಿಂದ ವಿದೇಶಿ ವಿನಿಮಯ ದಿಂದ ಆದುದು. ೧೫ ಕೋಟಿ ರೂಪಾಯಿಗಳ ಸಮತೋಲವನ್ನು ಉಳಿಸಿಕೊಳ್ಳಲು ಆಗಲಿಲ್ಲ. ಮೂರು ವರ್ಷಗಳಿಂದ ಪ್ರಗತಿಯನ್ನು ಸಾಧಿಸಲಾಗಲಿಲ್ಲ. ಜೊತೆಯಲ್ಲಿ ೧ ಲಕ್ಷ ೬೦ ಸಾವಿರ ಟನ್ ಮೀನು ಉತ್ಪಾದನೆಯಾಗಿದೆ ಎಂದು ಹೇಳಿದ್ದೀರಿ. ಇವರಲ್ಲಿ ಕಾರ್ಪೊರೇಷನ್ ನಿಗಮದ್ದು ೬ ನೂರು ಟನ್ ಸಂಸ್ಕರಣ ಮಾಡುತ್ತಿದೆ. ಕಳೆದ ೧೦ ವರ್ಷಗಳಿಂದ ಈ ನಿಗಮ ನಷ್ಟದಲ್ಲಿ ಇದೆ. ಶೀತಲೀಕರಣ ಕ್ರಮಗಳೂ ಇದ್ದುದು ಕೂಡ ಸಮರ್ಪಕವಾಗಿ ಆಗಲಿಲ್ಲ. ಇದರ ಪರಿಣಾಮವಾಗಿ ಹಲವಾರು ಕಡೆಗಳಲ್ಲಿ ಶೀತಲೀಕರಣ ಮೀನಿನ ಬೇಡಿಕೆ ಇದೆ. ಇದನ್ನು ಸಮರ್ಪಕವಾಗಿ ನಿರ್ವಹಿಸದೆ ಇರುವುದರಿಂದ ಈ ನಿಗಮವು ವರ್ಷ ವರ್ಷವೂ ನಷ್ಟದಲ್ಲಿ ಹೋಗುತ್ತಿದೆ. ಒಂದು ಲಕ್ಷ ಅರವತ್ತು ಸಾವಿರ ಟನ್ ಮೀನನ್ನು ಹಿಡಿಯುತ್ತಿದ್ದರೂ ಇದರಲ್ಲಿ ನಿಯಂತ್ರಣ ಮಾಡುವುದು ಕಡಿಮೆ. ಇನ್ನು ಉಳಿವ ಮೀನುಗಳನ್ನು ಕೂಡ ಮಾರಾಟ ಮಾಡುವ ವ್ಯವಸ್ಥೆಯಲ್ಲಿ ಬಹಳಷ್ಟು ದೋಷವಿದೆ. ಮೀನು ಗಾರಿಕೆ ಬಂದರುಗಳಲ್ಲಿ ನಾನು ಹೇಳಿದ್ದೇನೆ, ಮಂಗಳೂರು, ಮಲ್ಪೆ, ಕಾರವಾರ ಅವೆಲ್ಲ ಮೀನುಗಾರಿಕೆ ಬಂದರುಗಳಾಗಿವೆ. ನಮ್ಮ ರಾಜ್ಯದಲ್ಲಿ ಸಂಪ್ರದಾಯ ಮೀನುಗಾರಿಕೆ ಸಮಸ್ಯೆಯನ್ನು ಅರ್ಥಮಾಡಿ ಕೊಂಡಿಲ್ಲ. ರಂಪಣಬಲೆ, ಓಡುಬಲೆ, ಪಟ್ಟುಬಲೆ, ಸಂಪ್ರದಾಯಿಕ ದೋಣಿಗಳು ಇದ್ದು ಬಂದರುಗಳಲ್ಲಿ ಅವು ಬಂದರುಗಳಲ್ಲಿ ನಿಲ್ಲುವುದಕ್ಕೆ ಆಗುವುದಿಲ್ಲ. ಇವರು ಉಪ್ಪುಂದ ಸಾವುಂದ, ಬಟ್ಕಲ್ ಕದಡಿ ಮಟದ್ದು ಈ ಬೇರೆ ಬೇರೆ ಸ್ಥಳಗಳಲ್ಲಿ ಅವರು ಮೀನುಗಳನ್ನು ಎಳೆಯುವುದು. ಗಂಗುವಳ್ಳಿಯಲ್ಲಿ ಮೀನುಗಳನ್ನು ಎಳೆಯುತ್ತಾರೆ, ಹೀಗೆ ಎಳೆದ ಕೂಡಲೇ ಏನು ಆಗುತ್ತದೆ ಎಂದರೆ ಅವುಗಳನ್ನು ಶೀತಲೀಕರಣ, ಸಮೀಕರಣ ವ್ಯವಸ್ಥೆಯಲ್ಲಿದಕಾರಣ ಅವರು ಸಾಹುಕಾರರಿಗೆ ಆಗಿಂದಾಗ್ಗೆ ಕೊಡತಕ್ಕಂಥ ಇರುತ್ತದೆ. ಬಹಳ ದಿವಸಗಳು ಅದನ್ನು ಇಡುವುದಕ್ಕೆ ಆಗುವುದಿಲ್ಲ. ದೊಡ್ಡ ಪ್ರಮಾಣದಲ್ಲಿ ಹಿಡಿದಂಥ ಮೀನುಗಳನ್ನು ಶೀತಲೀಕರಣ ಇಲ್ಲದಿದ್ದರೆ, ಅವು ಕೊಳೆತುಹೋಗುತ್ತದೆ. ಆದ್ದರಿಂದ ಅವುಗಳನ್ನು ಆಕೂಡಲೇ ಕೊಡಬೇಕಾಗುತ್ತದೆ. ಇದರಿಂದಾಗಿ ಒಂದು ಲಕ್ಷ ಟನ್ ಮೀನಿನ ವ್ಯವಹಾರ ಮಧ್ಯ ವರ್ತಿಗಳ ಕೈಯಲ್ಲಿ ಇದೆ. ಇದರಿಂದ ಬೆಲೆಯನ್ನೂ ಸಹ ಕಳೆದುಕೊಳ್ಳುತ್ತಿದೆ. ಉತ್ಪಾದನೆ ಬಂದರೂ ಕೂಡ ಎಲ್ಲ ಮಧ್ಯವರ್ತಿಗಳ ಪಾಲಾಗುತ್ತಿದೆ. ಆದ್ದರಿಂದ ಮೀನುಗಾರಿಕೆ ವ್ಯವಸ್ಥೆಯನ್ನು ಇಷ್ಟು ವ್ಯವಸ್ಥೆಗೊಳಿಸಿದ್ದೇವೆಂದು ಹೇಳಿದರೂ ಕೂಡ ಪರಿಣಾಮಕಾರಿಯಾಗಿ ಆಗಿಲ್ಲ.

ಇನ್ನು ಮೀನುಮಾರಾಟಗಾರರು ಎಂದು ಏನು ಹೇಳುತ್ತೇವೆ, ಇವರಲ್ಲಿ ಬಹುತೇಕ ಹೆಂಗಸರು, ಹುಡುಗರು ಇರುತ್ತಾರೆ. ಅವರು ಪೇಟೆಯಲ್ಲಿ ಹಿಡಿದಿರತಕ್ಕಂಥ ಮೀನುಗಳನ್ನು ಸೈಕಲ್‌ನಲ್ಲಿ, ಹೋಗುವವರ ಗಾಡಿಗಳಲ್ಲಿ ಹಿಂದೆ ಮುಂದೆ ಕುಳಿತುಕೊಂಡು ಸಂತೆ ಸಂತೆಗಳಲ್ಲಿ ತೆಗೆದುಕೊಂಡು ಹೋಗಿ ಮಾರಾಟ ಮಾಡುತ್ತಾರೆ.

೩-೩೦ ಪಿ.ಎಂ,

ಅದಕ್ಕೆ ಅಧಿಕೃತ ವ್ಯವಸ್ಥೆ ಮಾಡಿಲ್ಲ. ಅವರದೇ ಆದ ಮೀನುಗಾರರ ಮಾರಾಟ ಸಹಕಾರ ಸಂಘಗಳನು ಮಾಡುವುದರ ಮೂಲಕ ಇಂಥಿಂಥಾ ಊರುಗಳಲ್ಲಿ ಇಂಥಿಂಥಾ ವಾರ ಇಂಥಿಂಥಾ ಕಡೆಗಳಲ್ಲಿ ಇಳಿದು ಮಾರುವುದು ಎಂದುಒಂದು ಮಾರ್ಗವನ್ನು ನಿಶ್ಚಯಿಸಿ, ಜಿಲ್ಲೆಗಳಲ್ಲಿ ಮೀನುಗಳನ್ನು ಹಿಡಿಯುವ ಕೇಂದ್ರ ಗಳನ್ನು ಆರಂಭಿಸಿ ಹೋಲಿಕೆ ಮಾಡಿದರೆ ಮೀನುಗಾರರು ಈಗ ಇದ್ದುದಕ್ಕಿಂತ ಲಾಭ ಮಾರಾಟದಲ್ಲಿ ಅವರ ಉತ್ಪಾದನೆ ಹೆಚ್ಚಾಗುತ್ತದೆ, ಇದನ್ನು ಮೊದಲು ಗುರುತಿಸಿಕೊಳ್ಳಬೇಕು. ಏಕೆಂದರೆ ಮೀನು ಹಿಡಿದರೂ ಅದು ಬಳಕೆಯಾಗಿ ಅದರ ಉತ್ಪಾದನೆ ಆ ವರ್ಗಕ್ಕೆ ಸಿಗುವಂತಾದರೆ ಅನುಕೂಲವಾಗುತ್ತದೆ. ಮೀನು ಹಿಡಿದು ಸಮುದ್ರದಿಂದ ಮೇಲೆ ಹಾಕಿದರೆ ಅದಕ್ಕೆ ಮಾರುಕಟ್ಟೆ ಇಲ್ಲದೇಹೋದರೆ ಸ್ವಲ್ಪ ಸಮಯದಲ್ಲೇ ಗೊಬ್ಬರವಾಗುತ್ತದೆ. ಸರಿಯಾದ ಸಮಯಕ್ಕೆ ಉಪಯೋಗಿಸದೆ ಹೋದರೆ ಅದು ಗೊಬ್ಬರವಾಗುತ್ತದೆ. ಹಿಡಿದ ಮೀನಿಗೆ ಬೆಲೆ ಸಿಗಬೇಕು. ಜೊತೆಗೆ ನಮ್ಮಲ್ಲಿ ಹಿಡಿದ ಮೀನನ್ನು ಶೇಖ ರಣೆ ಮಾಡಲು ಶೀತಲೀಕರಣ ವ್ಯವಸ್ಥೆ ಇಲ್ಲದಿರುವ ಕಾರಣ ನಮ್ಮ ಶೀತಲೀಕರಣ ಅವ್ಯವಹಾರ ತೊಡ ಕಿನಲ್ಲಿದೆ ಎಂಬ ನಿದರ್ಶನಗಳಿವೆ. ಶೀತಲೀಕರಣ ಕೇಂದ್ರದಲ್ಲಿ ೫೦೦ ರೂಪಾಯಿಗಳನ್ನು ಕೊಟ್ಟಿದ್ದರೆ ಅಲ್ಲಿ ೫೧ ರೂಪಾಯಿಗಳಿಗೆ ರಶೀತಿ ಇರುತ್ತದೆ. ಈ ರೀತಿ ಅವ್ಯವಹಾರ ನಡೆಯುತ್ತಿದ್ದರೆ ನಷ್ಟವಾಗು ತ್ತದೆ. ಮತ್ತೆ ಹಾಳ ಸಮುದ್ರದ ಮಧ್ಯದಲ್ಲಿಯೇ ವ್ಯಾಪಾರ ಮಾಡಿ ಬಿಡುತ್ತಾರೆ. ಕೇರಳ ಮತ್ತು ಮಹಾರಾಷ್ಟ್ರದಲ್ಲಿ ಮೀನುಗಾರರಿಗೆ ಕಷ್ಟವಾಗುತ್ತದೆಂದು ಸಹಾಯಧನ ಇಟ್ಟಿದ್ದಾರೆ, ಯಾರು

ಯಾಂತ್ರಿಕ ದೋಣಿಗಳನ್ನು ಹೊಂದಿದ್ದಾರೆ ಅವರು ಡೀಸಲ್ ತುಂಬಿಕೊಂಡು ಹಾಳ ಸಮುದ್ರದಲ್ಲಿ ಮೀನು ಹಿಡಿಯುತ್ತಾರೆ. ಮೀನು ಸಿಗಲಿ ಸಿಗದಿರಲಿ ಅವನು ಡೀಸಲ್ ಖರ್ಚು ಮಾಡುತ್ತಾನೆ. ಒಂದೊಂದು ಸಾರಿ ಇನ್ನೂರು ಮುನ್ನೂರು ರೂಪಾಯಿಗಳ ಡೀಸಲ್ ತುಂಬಿಸಿಕೊಂಡು ಆಳಸಮುದ್ರದಲ್ಲಿ ಹೋಗಿ ಮೀನು ಹಿಡಿಯುತ್ತಾರೆ. ಇವರಿಗೆಲ್ಲಾ ಸಹಾಯಧನ ಕೊಡುವ ವ್ಯವಸ್ಥೆಯನ್ನು ಮಹಾರಾಷ್ಟ್ರದವರು ಮತ್ತು ಕೇರಳದವರು ಮಾಡಿದ್ದಾರೆ. ಕರ್ನಾಟಕರಾಜ್ಯದಲ್ಲಿ ಮಾತ್ರ ಸಮರ್ಪಕವಾದ ರೀತಿಯಲ್ಲಿ ಮಾಡಿಲ್ಲ. ಮೀನುಗಾರರು ಹೋಗುವುದಾಗಲೀ ಬರುವುದಾಗಲೀ ವಿಕೃತ ಅನಾಹುತಕ್ಕೆ ಒಳಪಡುವುದಾಗಲೀ ಅವರ ದೈನಂದಿನ ಚಟುವಟಿಕೆಗಳನ್ನು ಗುರುತಿಸಿ ಸರಳವಾದ ಸಕಾಲಿಕವಾದ ಪದ್ಧತಿ ಇಲ್ಲ. ಇದು ಅಗತ್ಯ ಮೀನುಗಾರರನ್ನು ಹೆಚ್ಚುವರಿ ಮಾಡುವ ದೃಷ್ಟಿಯಿಂದ ಅದನ್ನು ಸಾಧಿಸಬೇಕು. ನಾನು ಆಗಲೇ ಹೇಳಿದ್ದೇನೆ, ಕೆಲವು ಕಡೆಗಳಲ್ಲಿ ಮೀನುಗಾರರ ಸಹಕಾರಸಂಘಗಳಿವೆ. ಅವು ನಾನಾ ರೀತಿಯ ಕಾರಣಗಳಿಂದ ಸಮರ್ಪಕವಾಗಿ ನಡೆಯುತ್ತಿಲ್ಲ. ಇದರಲ್ಲಿ ಏನಾಗಿದೆ ಅಂದರೆ ೬೦ದಿವಸ ಮೀನು ಕೊಡದಿದ್ದರೆ ಅವನ ದೋಣಿಗೆ ಸಹಾಯಧನಸಿಗುವುದಿಲ್ಲ. ಸಹಾಯಧನ ಸಿಗುವುದಕ್ಕೆ ಸಕ್ರಿಯವಾದ ಸಹಕಾರಸಂಘ ಸಂಸ್ಥೆಗಳು ಕಾರ್ಯ ನಿರ್ವಹಿಸಬೇಕು. ಬೇರೆ ಸಹಕಾರಸಂಘಗಳಲ್ಲಿದೆ. ಅದೇ ಗ್ರಾಮದಲ್ಲಿ ಪಟಾರದಲ್ಲಿ ಅವರ ಸಮಾಜದಿಂದಲೇ ಸಹಾಯಧನ ಸಿಗುವಹಾಗೆ ಮಾಡಬೇಕು.

ಇನ್ನು ಬಂದರುಗಳ ವಿಷಯದಲ್ಲಿ ಹೇಳುವುದಾದರೆ ಮಂಗಳೂರಿನಲ್ಲಿ ಕೇಂದ್ರ ಸರ್ಕಾರದ ಬಂದರು ಇದೆ, ರಾಜ್ಯಸರ್ಕಾರದ ಬಂದರೂ ಇದೆ ಈಗ ಪುನರ್‌ಘಟಿತ ವ್ಯವಸ್ಥೆಗೆ ಒಳಪಡುತ್ತಿದೆ ಅಂಗಾರುಕಟ್ಟೆ ಗಂಗೊಳ್ಳಿ ಇಂತಹ ಬಂದರುಗಳು ಇವೆ. ೧೯ ಬಂದರುಗಳಲ್ಲಿ ಒಂದನ್ನು ಕೇಂದ್ರಸರ್ಕಾರ ಹೊಣೆ ಹೊತ್ತರೆ, ಮೂರು ರಾಜ್ಯಸರ್ಕಾರ ತೆಗೆದುಕೊಂಡಿದೆ. ಉಳಿದ ೧೫ ಬಂದರುಗಳು ಏನಿವೆ ಅವು ನಿರಪರಾಧಿಗಳು. ಹಿನ್ನೀರಿನ ಹೊಳೆಗಳಿವೆ, ಇದರಲ್ಲಿ ಸಾಕಷ್ಟು ಸಾಗಾಟಗಳಿವೆ, ಕೆಲವು ಬಂದರುಗಳು ಒಳನಾಡಿನ ಸಾಗಾಟಗಳಿವೆ. ಇಲ್ಲಿ ಜೇಡಿಮಣ್ಣು, ಅಂಚು ತಯಾರು ಮಾಡುವ ಮಣ್ಣು, ಕಟ್ಟಿಗೆ ಸಾಗಿಸುವುದಕ್ಕೆ ಒಳನಾಡಿನಲ್ಲಿ ಹಿನ್ನೀರಿನ ಹೊಳೆಗಳು ಆಳವಾಗಿಲ್ಲ. ಎಷ್ಟೋ ಸಾರಿ ಸಮುದ್ರದ ಅಲೆಯನ್ನು ತಡೆದು ನಿಲ್ಲಿಸಬೇಕಾಗುತ್ತದೆ. ಆದ್ದರಿಂದ ಅದನ್ನು ಮಾಡಬೇಕು, ಆದ್ದರಿಂದ ನಮ್ಮ ಯಾಂತ್ರೀಕರಣ ಮೂಲಕವಾಗಿ ಅದನ್ನು ಆಳಮಾಡಬೇಕೆಂದು ಪ್ರತಿಸಲ ಮುಂಗಡಪತ್ರದಲ್ಲಿ ಹೇಳಿದ್ದೇನೆ. ಇದು ಪರಿಣಾಮಕಾರಿಯಾಗಿಲ್ಲ. ಕರ್ನಾಟಕರಾಜ್ಯದಲ್ಲಿ ದೋಣಿಗಳ ಜೊತೆಗೆ ಯಾಂತ್ರಿಕದೋಣಿಗಳು ೨ಸಾವಿರ ಇವೆ, ಅದರಲ್ಲಿ ಪರ್ಸಿನ್ ದೋಣಿ ಎಲ್ಲಾ ಕೂಡ ಇದೆ. ಅವುಗಳನ್ನು ನಿಲ್ಲಿಸುವುದಕ್ಕೆ ಕೂಡ ಸರಿಯಾದ ಸ್ಥಳವಿಲ್ಲ. ಹಿನ್ನೀರಿನ ಜಾಗವನ್ನು ನೀವು ಆಳ ಮಾಡಿದರೆ ಅವುಗಳು ಒಳಗೆ ಹೋಗುವ ವ್ಯವಸ್ಥೆ ಮಾಡಿದರೆ ಆತಂಕರಿಕ ಸಾಗಾಟ ಅಲ್ಲದೆ ಅವುಗಳನ್ನು ನಿಲ್ಲಿಸುವುದಕ್ಕೆ ವ್ಯವಸ್ಥೆ ಮಾಡಿದಂತಾಗುತ್ತದೆ. ಬಹಳ ಉಪಕಾರವಾಗಿದ್ದ ಕೇಂದ್ರಿಕೃತವಾದ ವ್ಯವಸ್ಥೆಯೊಂದಿತ್ತು. ಮಲ್ಪೆಯ ಒಂದು ದುರಂತದ ಕಾರಣದಿಂದ ಅದು ನಿಂತಿದೆ. ಇದನ್ನು ನಾನು ಬಹಳ ಸಾರಿ ಹೇಳಿದ್ದೇನೆ ಇದನ್ನು ನಿಮ್ಮ ಅಧಿಕಾರಿಗಳು ಗುರುತಿಸಿಕೊಳ್ಳುವ ಅವಶ್ಯಕತೆ ಇದೆ, ನಮ್ಮ ಜಿಲ್ಲೆಯಲ್ಲಿ ನೇತ್ರಾವತಿಯಿಂದ ಬೈಂದೂರ್‌ರವರೆಗೆ ಹಿನ್ನೀರಿನ ಸಾಗಾಟ ಯೋಜನೆಯನ್ನು ಕೇಂದ್ರಸರ್ಕಾರ ಒಪ್ಪಿದೆ. ಮಂತ್ರಿಮಂಡಲದ ಸಭೆಯಲ್ಲೂ ಕೂಡ ಅದು ಅಗತ್ಯವೆಂದು ಗುರುತಿಸಲಾಗಿದೆ ಅದು ಅಗತ್ಯವಾಗಿ ಆಗಬೇಕು. ನೆರೆ ನಿಯಂತ್ರಣ ಸಮತೋಲನ ಕಾಪಾಡುವಲ್ಲಿ ಇಡೀ ಅಂತರ್ ಜಿಲ್ಲಾ ಸಾಗಾಟದಲ್ಲಿ ಪ್ರಮುಖವಾದ ಪಾತ್ರವನ್ನು ನಿರ್ವಹಿಸಿ ಅದರಿಂದ ಉಪಯುಕ್ತವಿದೆ. ಅದನ್ನು ಅದಷ್ಟುಬೇಗ ಮಾಡುವುದರ ಬಗ್ಗೆ ವ್ಯವಸ್ಥೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಮೈಸೂರಿನಲ್ಲಿ ನಡೆದ ಮಂತ್ರಿಮಂಡಲದ ಸಭೆಯಲ್ಲಿ ಕೆಲವು ನಿರ್ಣಯಗಳನ್ನು ತೆಗೆದುಕೊಂಡದ್ದು ಇದೆ. ಈ ಮೊದಲು ಕೊಟ್ಟ ಕೆಲವು ಸಾಲಗಳನ್ನು ರಿಯಾಯಿತಿ ಮಾಡುತ್ತೇವೆಂದು ಜೊತೆಗೆ ಮೀನುಗಾರರ ರಸ್ತೆಗಳನ್ನು ಮಾಡಲು ೫೦ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದಾರೆ. ಇನ್ನೂ ಕಾರ್ಯಗತವಾಗಿಲ್ಲ. ಸಕಾಲದಲ್ಲಿ ಕಾರ್ಯಗತವಾಗಿಲ್ಲ, ಬಹುಶ ನಿಮ್ಮಲ್ಲಿ ಹೊಂದಾಣಿಕೆ ಇದೆಯೋ ಇಲ್ಲವೋ ಗೊತ್ತಿಲ್ಲ. ಇಂಗ್ಲೀಷ್ ಕನ್ನಡದಲ್ಲಿ ತಾಂತ್ರಿಕ ದೋಷವಿರಬೇಕು, ಅದರಲ್ಲಿ ಏನಾಗಬಹುದೆಂದು ನಮ್ಮ ಅನುಭವದಲ್ಲಿ ಬರುವುದು ಸಂಭವಕಡಿಮೆ. ಮೀನುಗಾರರು ಸಾಲ ಪಡೆದುಕೊಂಡು ದೋಣಿಗಳನ್ನು ಪಡೆದುಕೊಂಡಿದ್ದಾರೆ. ಪರ್ಸಿನ್ ದೋಣಿಗಳು ಯಾಂತ್ರಿಕದೋಣಿಗಳನ್ನು ಪಡೆದಿದ್ದಾರೆ. ಮೀನುಗಾರರು ಎಷ್ಟೋ ಸಾರಿ ಅಭಾವದಿಂದಾಗಿ ಅವರಿಗೆ ಸಕಾಲದಲ್ಲಿ ಸಾಲ ತೀರಿಸುವುದಕ್ಕೆ ಆಗದಿದ್ದುದರಿಂದ ಅವರಿಗೆ ೫ವರ್ಷ ಕಂತು ಇರುವುದನ್ನು ೭ ವರ್ಷ ಕಂತುಗಳಲ್ಲಿ ಕೊಡಲಿಕ್ಕೆ ಅವಕಾಶ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಸಮಯ ಕಡಿಮೆ ಇರುವುದರಿಂದ ಅಧ್ಯಕ್ಷರು ಬೆಲ್ ಹೊಡೆಯುತ್ತಿದ್ದಾರೆ, ನಾನು

ಮಾತನಾಡಲಿಕ್ಕೆ ಅವಕಾಶ ಕೊಟ್ಟ ಅಧ್ಯಕ್ಷರಿಗೆ ಕೃತಜ್ಞತೆಗಳನ್ನು ಸಲ್ಲಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು.—ಶ್ರೀ ಕೆ. ರಾಮಭಟ್, ಸದಸ್ಯರು ಬಂದಿಲ್ಲ. ಶ್ರೀಮತಿ ಅನಸೂಯ ಗಜಾನನ ಶರ್ಮ ಸದಸ್ಯರು ಬಂದಿಲ್ಲ. ಶ್ರೀ ಜಿ. ರಾಮೇಗೌಡ, ತಾವು ಭಾಷಣ ಶುರುಮಾಡಿ. ಈಗ ಸಮಯ ೩–೩೫ ನಿಮಿಷ ಪ್ರಾರಂಭ ಮಾಡಿ.

ಶ್ರೀ ಜಿ. ರಾಮೇಗೌಡ.—ನಾನು ಮಾತನಾಡುವುದೇ ಅಪರೂಪ.

ಅಧ್ಯಕ್ಷರು.—ಮಾತನಾಡುವುದು ಅಪರೂಪವಾದರೂ, ಮಾತನಾಡುವುದು ಜಾಸ್ತಿ.

ಶ್ರೀ ಜಿ. ರಾಮೇಗೌಡ.—ತಾವು ದಯಮಾಡಿ ಕೊಟ್ಟ ಕಾಲದಲ್ಲಿ ನನಗೆ ಹೇಳಲು ಎಷ್ಟು ಸಾಧ್ಯವೋ ಅಷ್ಟನ್ನು ಹೇಳಿ ಮುಗಿಸುತ್ತೇನೆ

ಅಧ್ಯಕ್ಷರು —ತಮ್ಮ ಕಡೆ ೧೧ ಜನ ಸದಸ್ಯರು ಮಾತನಾಡಬೇಕು, ಈ ಕಡೆ ೧೩ ಜನ ಮಾತನಾಡಬೇಕು. ನಾಳೆ ಮಂತ್ರಿಗಳು ಉತ್ತರ ಹೇಳಬೇಕಾಗಿದೆ. ಕಾಲ ನೋಡಿಕೊಂಡು ಮಾತನಾಡಿ.

ಶ್ರೀ ಜಿ. ರಾಮೇಗೌಡ (ದೊಡ್ಡಬಳ್ಳಾಪುರ).—ನನಗೆ ಒಂದು ಅರ್ಥವಾಗುವುದಿಲ್ಲ, ನೀವು ನಿಲ್ಲಿಸಿ ಅಂದಾಗ ನಾನು ನಿಲ್ಲಿಸುತ್ತೇನೆ. ಲೋಕೋಪಯೋಗಿ ಇಲಾಖೆಯಲ್ಲಿ ಬಹಳ ಚೆನ್ನಾಗಿ ಕೆಲಸ ಮಾಡುತ್ತಿದ್ದಾರೆಂದು ನನ್ನ ಅನುಭವದಲ್ಲಿತ್ತು. ಈಗಲೂ ಮಾಡುತ್ತಾರೆಂದು ಬಹಳ ಮಂದಿ ಹೇಳುತ್ತಾರೆ. ನನ್ನ ದುರಾದೃಷ್ಟವೋ ಏನೋ ನಮ್ಮ ತಾಲ್ಲೂಕಿನಲ್ಲಿ ಅಷ್ಟು ಒಳ್ಳೆಯ ಕೆಲಸ ನಡೆದಿಲ್ಲ. ಕಾರಣವೇನು ಅನ್ನುವುದನ್ನು ಮಾನ್ಯ ಸಚಿವರಾದ ಕಾಗೋಡುತಿಮ್ಮಪ್ಪನವರು ಹೇಳಬೇಕು. ನಮ್ಮ ತಾಲ್ಲೂಕಿನಲ್ಲಿ ಒಂದು ಜನರಲ್ ಆಸ್ಪತ್ರೆ ಕಟ್ಟಡ ನಡೆಯುತ್ತಿದೆ. ಅದು ತಿಂಗಳಿಗೊಂದಾವರ್ತಿ ನಿಂತುಹೋಗುತ್ತದೆ. ನಾನು ಹೋಗಿದ್ದಾಗ ಸಿಮೆಂಟ್ ಸಪ್ಲೈ ಇಲ್ಲ ಮುಂದಿನ ವಾರ ಬರುತ್ತದೆ, ಮುಂದಿನ ತಿಂಗಳು ಬರುತ್ತದೆ ಮುಗಿಸುತ್ತೇವೆಂದು ಹೇಳುತ್ತಾರೆ, ಬಹಳ ದಿವಸಗಳಾಯಿತು ಜನರಲ್ ಆಸ್ಪತ್ರೆ ಅದು ಯಾರದು ಅಲ್ಲ. ಸಾರ್ವಜನಿಕರಿಗೆ ಬಡವರಿಗೆ ಬೇಕಾದಂತಹ ಒಂದು ಆಸ್ಪತ್ರೆ. ನಮ್ಮ ಕಾಗೋಡುತಿಮ್ಮಪ್ಪನವರು ಹೆಚ್ಚಿಗೆ ಸಿಮೆಂಟ್ ಕೊಟ್ಟು ಅದನ್ನು ಮುಗಿಸಿ ನಿಮಗೆ ಒಳ್ಳೆಯದು ಆಗುತ್ತದೆ. ನೀವು ಇನ್ನೂ ಅನೇಕ ವರ್ಷಗಳು ಮಂತ್ರಿಗಳಾಗಿರುತ್ತೀರಿ. ನೀವು ಮಂತ್ರಿ ಅನಿಸಬೇಕಾದರೆ ಆ ಕೆಲಸ ಮಾಡಿ, ಇಲ್ಲದಿದ್ದರೆ ಯಾರೂ ಅನ್ನುವುದಿಲ್ಲ. ಆದ್ದರಿಂದ ಬಹಳ ವರ್ಷಗಳು ಮಂತ್ರಿಗಳಾಗಿರಬೇಕಾದರೆ ಇಂತಹ ಒಳ್ಳೆಯ ಕಾರ್ಯಗಳಿಗೆ ತಾವು ಸಾಕಷ್ಟು ಸಿಮೆಂಟ್ ಕೊಟ್ಟು ಕೆಲಸ ನಡೆಯುವ ಹಾಗೆ ಮಾಡಬೇಕು. ಈ ಸಿಮೆಂಟ್‌ನಲ್ಲಿಯೂ ಒಂದು ಸ್ವಾರಸ್ಯವಿದೆ. ಇದು ಮಾನ್ಯ ಮಂತ್ರಿಗಳ ಗಮನಕ್ಕೆ ಬಂದಿದೆಯೋ ಅಥವಾ ಇಲ್ಲವೋ ಗೊತ್ತಿಲ್ಲ, ಎತ್ತಿನಗಾಡಿಯಲ್ಲಿ ಬಂದ ಸಿಮೆಂಟ್ ಚೀಲಗಳ ಪೈಕಿ ಒಂದನ್ನು ತೂಕ ಹಾಕಿದರೆ ೬೦ ಕೆ.ಜಿ.ಗೆ ಬದಲು ೪೨ ಕೆ.ಜಿ. ಇರುತ್ತದೆ. ರೈಲಿನಲ್ಲಿ ಬರುವಾಗ, ಲಾರಿಯಲ್ಲಿ ಬರುವಾಗ ಎತ್ತಿನ ಗಾಡಿಯಲ್ಲಿ ಬರುವಾಗ ನೂರು ನೂರು ನೂರು ಗ್ರಾಮ್‌ಗಳಷ್ಟು ಉದುರಿ ಹೋಗುವ ಕಾರಣ ಈ ರೀತಿ ಕಡಿಮೆಯಾಗುತ್ತದೆ. ಇದನ್ನು ತಪ್ಪಿಸಲು ಆ ಚೀಲದೊಳಗೆ ಒಂದು ಪ್ಲಾಸ್ಟಿಕ್ ಚೀಲವನ್ನಾದರೂ ಹಾಕುವಂತೆ ತಾವು ಇದನ್ನು ತಯಾರು ಮಾಡುವವರಿಗೆ ಹೇಳಬೇಕು. ಚೀಲದಿಂದ ಸಿಮೆಂಟ್ ಸೋರಿ ಹೋಗುವುದರ ಜೊತೆಗೆ ಕೆಲವು ವ್ಯಾಪಾರಗಾರರು ಸಹ ಚಕಮುಕಿ ಮಾಡುತ್ತಾರೆ. ಅಂದರೆ ಪ್ರತಿ ಚೀಲದಿಂದ ಕಾಲು ಕೆ.ಜಿ. ಇಲ್ಲವೇ ಅರ್ಧ ಕೇಜಿ ಸಿಮೆಂಟ್ ತೆಗೆಯುತ್ತಾರೆ ಒಳಗಡೆ ಪ್ಲಾಸ್ಟಿಕ್ ಚೀಲ ಹಾಕಿದರೆ ಇದನ್ನೆಲ್ಲಾ ತಪ್ಪಿಸಬಹುದು, ಆದಕಾರಣ ತಾವು ಇದರ ಕಡೆಗೆ ಗಮನ ಕೊಡಬೇಕೆಂದು ಹೇಳುತ್ತೇನೆ.

ಇನ್ನು ಮಾನ್ಯ ಮಂತ್ರಿಗಳು ನಮ್ಮ ತಾಲ್ಲೂಕಿಗೆ ಬಂದಾಗ ಪ್ರವಾಸಿ ಬಂಗಲೆಯಲ್ಲಿ ಇಳಿದುಕೊಂಡು ಅಲ್ಲಿನ ಇಂಜಿನಿಯರ್‌ಗಳ ಹತ್ತಿರ ಮಾತನಾಡಿಕೊಂಡು ಹೊರಟು ಹೋಗುತ್ತಾರೆ. ಊರಿನೊಳಗಡೆ ಬಂದು ನೋಡುವುದಿಲ್ಲ. ಅಲ್ಲಿರುವ ತಾಲ್ಲೂಕ್ ಕಛೇರಿಯನ್ನು ಕಟ್ಟಿಸಿ ೧೫೦ ವರ್ಷಗಳಾಗಿದೆ. ಯಾವೊತ್ತು ಅದು ಬಿದ್ದು ಹೋಗುತ್ತದೋ ಗೊತ್ತಿಲ್ಲ. ಮಳೆ ಬಂದರೆ ಎಲ್ಲ ಕಡೆಯೂ ಸೋರುತ್ತದೆ. ನಾನು ಆ ಕಟ್ಟಡದೊಳಕ್ಕೆ ಹೋದಾಗ ಅದು ಬೀಳಬಾರದೆಂದು ನಾನು ದೇವರಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ.—ತಾವು ಮಾನ್ಯ ಖರ್ಗೆ ಅವರ ಹತ್ತಿರ ಇದನ್ನು ಹೇಳಿ.

ಶ್ರೀ ಜಿ. ರಾಮೇಗೌಡ.—ಅವರು ಈಶ್ವರ ಇದ್ದಂತೆ. ಅವರು ವರ ಕೊಟ್ಟರೂ ಕೊಡಬಹುದು ಅಥವಾ ಬಿಟ್ಟರೂ ಬಿಡಬಹುದು. ಆದರೆ ತಾವು ತಿರುಪತಿ ತಿಮ್ಮಪ್ಪ ಇದ್ದಂತೆ ತಾವು ತಿಗಡು ತಿಮ್ಮಪ್ಪ ಆಗಿದ್ದರೆ ಸಂತೋಷ. ನೀವು ಗಟ್ಟಿಯಾಗದಿದ್ದರೆ ನಮ್ಮ ಕೆಲಸವಾಗುತ್ತದೆ. ತಾವು ಸ್ವಲ್ಪ ಸಾರ್ವಜನಿಕ ಕೆಲಸಗಳಿಗೆ ಸಹಾಯ ಮಾಡಿ.

ಇನ್ನು ನ್ಯಾಯಾಂಗ ಕಸ್ಟಡಿಗೆ ಒಳಪಟ್ಟವರಿಗಾಗಿ ಇದ್ದಂಥ ೭ ಕೊಠಡಿಗಳು ಸಹ ಬಿದ್ದುಹೋಗಿರುವ ಕಾರಣ ಇವರುಗಳನ್ನು ದಿನವೂ ದೇವನಹಳ್ಳಿ ಕಳುಹಿಸಿಕೊಟ್ಟು ಕೇಸ್ ಇದ್ದಾಗಲೆಲ್ಲಾ ಮತ್ತೆ ಕರೆದುಕೊಂಡು ಬರಬೇಕಾಗಿದೆ. ಇದರಿಂದ ಪೋಲೀಸರಿಗೂ ಕಷ್ಟವಾಗುತ್ತಿದೆ. ಇದನ್ನು ಅವರು ತಮ್ಮ ಗಮನಕ್ಕೆ ಏತಕ್ಕೆ ತರಲಿಲ್ಲವೋ ನನಗೆ ಗೊತ್ತಿಲ್ಲ. ಅಲ್ಲಿರುವಂತಹ ಅನುಕೂಲ ಒಂದು ಜಾಗದಲ್ಲಿ ಮತ್ತೆ ಹೊಸದಾಗಿ ಕಟ್ಟಡ ಕಟ್ಟಬೇಕೆಂದು ಜಿಲ್ಲಾಧಿಕಾರಿ ಅವರು ಬಹಳ ಪ್ರಯತ್ನ ಮಾಡಿದರು. ಆದರೆ ಆ ಕೆಲಸ ಆಗಲಿಲ್ಲ. ಈಗ ಅದೇ ಜಾಗದಲ್ಲಿ ಕೆ.ಎಸ್.ಆರ್.ಟಿ.ಸಿ. ಅವರು ಬಸ್ಸ್ಟ್ಯಾಂಡ್ ಕಟ್ಟಡ ಕಟ್ಟಿಸುತ್ತಿದ್ದಾರೆ. ಹೀಗೆ ಎಲ್ಲ ಕೆಲಸಗಳೂ ನಮ್ಮ ತಾಲ್ಲೂಕ್‌ನಲ್ಲಿ ಫಸ್ಟ್ ಗೇರ್‌ನಲ್ಲಿಯೇ ಹೋಗುತ್ತಿವೆ. ಥರ್ಡ್ ಗೇರ್‌ನಲ್ಲಿ ಹೋಗುತ್ತಿಲ್ಲ. ಅಲ್ಲಿ ಬಸ್ಸ್ಟ್ಯಾಂಡ್ ಕೆಲಸ ಸಹ ಸಿಮೆಂಟ್ ಇಲ್ಲವೆಂಬ ಕಾರಣದಿಂದ ಇನ್ನೂ ಮುಗಿದಿಲ್ಲ. ತಾಲ್ಲೂಕ್ ಕಛೇರಿ ಮುಂದೆ ನಾನು ಓದಿದ ಮಿಡಲ್ ಸ್ಕೂಲ್ ಇದೆ. ಅದನ್ನು ನೋಡಿದರೆ ನನಗೆ ಹೊಟ್ಟೆ ಉರಿಯುತ್ತದೆ. ಇದಕ್ಕೆ ಸೇರಿದಂತೆ ಇರುವ ಕಾಂಪೌಂಡ್ ಗೋಡೆಯನ್ನು ತೆಗಿಸಿಬಿಡಿ ಇಲ್ಲದಿದ್ದರೆ ಅದನ್ನು ರಿಪೇರಿಯಾದರೂ ಮಾಡಿಸಿ. ಮಾನ್ಯ ಚೆನ್ನಬಸಪ್ಪನವರು ಈ ಖಾತೆಯನ್ನು ನೋಡಿಕೊಳ್ಳುತ್ತಿದ್ದಾಗ ನಾನು ಅವರಿಗೆ ಇದನ್ನು ತೋರಿಸಿದೆ. ಆಗ ಅವರು ಅದನ್ನು ನೋಡಿ ಇದು ಈ ರೀತಿ ಇದ್ದರೆ ನಮ್ಮ ಸರ್ಕಾರಕ್ಕೇ ಅವಮಾನ, ಆದಕಾರಣ ಇದರ ರಿಪೇರಿಗೆ ೨೦ ಸಾವಿರ ಆಗಬಹುದು ಎಂದು ಕೂಡಲೇ ಅದನ್ನು ಸುಂದರಗೊಳಿಸಲು ಆರ್ಡರ್ ಮಾಡಿದರು. ನಂತರ ಅವರ ಅಧಿಕಾರ ಹೋಯಿತು, ಅವರು ಮನೆಗೆ ಹೋದರು, ಈಗ ಬೇರೆ ಜಾಗದಲ್ಲಿದ್ದಾರೆ. ಆದರೆ ಆ ಕಾಂಪೌಂಡ್ ಗೋಡೆ ಮಾತ್ರ ಅದೇರೀತಿ ಇದೆ ಆ ಸ್ಕೂಲ್ ಹೆಂಚಿನ ಮನೆಯಲ್ಲಿ ನಡೆಯುತ್ತಿದೆ. ಸಧ್ಯಕ್ಕೆ ಅದೇ ಸಾಕು. ಆರ್.ಸಿ.ಸಿ. ಕಟ್ಟಡ ಕಟ್ಟಲು ಹೊರಟರೆ ಎಷ್ಟುಕಾಲ ಆಗುತ್ತದೋ ಗೊತ್ತಿಲ್ಲ, ಆದ್ದರಿಂದ ಈಗಿರುವುದೇ ಸಾಕು. ನಾನು ಅಲ್ಲಿಯೇ ಓದಿದ್ದು. ನಂತರ ಮಂತ್ರಿ ಸಹ ಆದೆ, ಆದರೆ ಹೆಚ್ಚು ದಿವಸ ಇರಲಿಲ್ಲ. ಮುಖ್ಯವಾಗಿ ತಾವು ಕಾಂಪೌಂಡ್ ಗೋಡೆಯನ್ನು ಸರಿಮಾಡಿಸಿಕೊಡಿ.

ಇನ್ನು ಸರ್ಕಲ್ ಇನ್ಸ್‌ಪೆಕ್ಟರ್ ಮತ್ತು ಸಬ್ ಇನ್ಸ್‌ಪೆಕ್ಟರ್ ಮನೆಗಳನ್ನು ಕಟ್ಟಿಸಲು ಮಂಜೂರಾಗಿ ೩ ವರ್ಷಗಳಾಯಿತು. ಆದರೆ ಇನ್ನೂ ಮುಗಿದಿಲ್ಲ. ಈಗ ಆ ಕೆಲಸ ಭೂಮಿ ಮಟ್ಟಕ್ಕೆ ಬಂದಿದೆ. ಅರ್ಧ ಆಗಿರುವ ಕೆಲಸವನ್ನೆಲ್ಲಾ ನೋಡಿದರೆ ತಮ್ಮ ಜ್ಞಾಪಕ ಬರುತ್ತದೆ. ತಮ್ಮ ಜ್ಞಾಪಕ ಬರಲಿ ಎಂದು ತಾವು ಈ ರೀತಿ ಮಾಡದೆ ಜಾಗ್ರತೆ ಈ ಅರ್ಧ ಆಗಿರುವ ಕೆಲಸಗಳನ್ನು ಮುಗಿಸಿಕೊಡಿ. ನಾನು ಮಂತ್ರಿಯಾಗಿದ್ದಾಗ ಮತ್ತು ಮಂತ್ರಿಯಾಗದೇ ಇದ್ದಾಗ ಅವರಿಗೆ ಇವರಿಗೆ ಕೈಮುಗಿಯುವುದೇ ನನ್ನ ಕೆಲಸವಾಯಿತೇ ಹೊರತು ನಾನು ಯಾವುದಕ್ಕೂ ಆರ್ಡರ್ ಮಾಡಲಿಲ್ಲ. ಅನೇಕ ಸಲ ಕೈಮುಗಿದ ಮೇಲೆ ಒಂದು ಕೋರ್ಟ್ ಮಂಜೂರಾಯಿತು. ಆದರೆ ಈಗ ಕೆಲಸ ಮುಗಿಸಲು ಕಬ್ಬಿಣ ಇಲ್ಲ, ಸಿಮೆಂಟ್ ಇಲ್ಲ ಎಂದು ಹೇಳುತ್ತೀರಿ. ಮಾನ್ಯ ದೇವೇಗೌಡರು ಕಬ್ಬಿಣ ಅಪಾರವಾಗಿ ಬಂದು ಬಿದ್ದಿದೆ ಎಂದು ಹೇಳಿದರು ಆದರೆ ನಮ್ಮ ತಾಲ್ಲೂಕ್‌ಗೆ ಮಾತ್ರ ಒಂದು ಅಡಿ ಕಬ್ಬಿಣ ಸಹ ಬಂದಿಲ್ಲ. ತಾವು ಕಬ್ಬಿಣ ಮತ್ತು ಸಿಮೆಂಟ್ ಕೊಟ್ಟರೆ ಎಲ್ಲ ಕೆಲಸಗಳನ್ನು ಜಾಗ್ರತೆ ಮುಗಿಸಬಹುದು.

ಇನ್ನು ವಿಧಾನಸೌಧಕ್ಕೆ ಕಲ್ಲನ್ನು ಒದಗಿಸಿದಂಥ ಸ್ಥಳಗಳಾದ ದೇವನಹಳ್ಳಿ ಮತ್ತು ಚಿಕ್ಕಬಳ್ಳಾಪುರ ನಮ್ಮ ತಾಲ್ಲೂಕ್‌ಗೆ ಬಹಳ ಹತ್ತಿರದಲ್ಲಿವೆ. ಆದ್ದರಿಂದ ಇಟ್ಟಿಗೆ ಕಟ್ಟಡಕ್ಕೆ ಬದಲು ಕಲ್ಲಿನ ಕಟ್ಟಡ ಏತಕ್ಕೆ ಕಟ್ಟಿಸಬಾರದು? ಕಲ್ಲಿನ ಕಟ್ಟಡ ಕಟ್ಟಿಸಿದ ಕಡೆಯೂ ಅದಕ್ಕೆ ತಮ್ಮ ಅಧ್ವಾನದ ಕೆಲಸ ಗೊತ್ತಾಗಬಾರದೆಂದು ಈ ಬಣ್ಣ ಬಳಿಯುತ್ತಾರೆ. ಎರಡು ಕಲ್ಲುಗಳ ಮಧ್ಯ ಕಾಲು ಇಂಚುವರೆಗೆ ಸಿಮೆಂಟ್ ಹಾಕುತ್ತಾರೆ. ಅದೇ ಅಗ್ರಿಕಲ್ಚರಲ್ ಸೈನ್ಸ್ ಕಾಲೇಜ್ ಕಟ್ಟಡವನ್ನು ಸಹ ಕಲ್ಲಿನಲ್ಲಿಯೇ ಕಟ್ಟಿದ್ದಾರೆ. ನಾನು ಅಲ್ಲಿಗೆ ಭೇಟಿ ಕೊಟ್ಟು ನೋಡಿದ್ದೇನೆ. ಕಲ್ಲುಗಳು ಯಾವ ರೀತಿ ಕೂತಿವೆ ಎಂದರೆ ಮಧ್ಯ ಜಾಯಿಂಟ್ ಇರುವುದೇ ಕಾಣುವುದಿಲ್ಲ. ಇದರಿಂದ ಆ ಕಟ್ಟಡದ ಒಳಗಾಗಲೀ ಹೊರಗಾಗಲೀ ಸುಣ್ಣಬಣ್ಣ ಬಳಿಯುವ ಅಗತ್ಯವೇ ಇಲ್ಲ ಮತ್ತು ವಾರ್ಷಿಕ ರಿಪೇರಿ ಖರ್ಚೂ ಸಹ ಬರುವುದಿಲ್ಲ. ಅದೇ ನಿಮ್ಮ ಇಲಾಖೆಯಲ್ಲಿ ಈ ರೀತಿ ಇರುವುದಿಲ್ಲ. ಇಷ್ಟೊಂದು ಹೆಚ್ಚು ಕಡಿಮೆ ಆಗಲು ಕಾರಣವೇನು? ಸ್ಪೆಸಿಫಿಕೇಷನ್ ಸರಿಯಾಗಿ

ದೆಯೋ ಅಥವಾ ಇಲ್ಲವೇ ಎಂಬುದನ್ನು ಸರಿಯಾಗಿ ನೋಡುವಂತಹ ವ್ಯವಸ್ಥೆ ನಿಮ್ಮಲ್ಲಿ ಇಲ್ಲ. ಇನ್ನು ಮುಂದೆಯಾದರೂ ನಮ್ಮ ಭಾಗದಲ್ಲಿ ೧೦-೧೫ ಪರ್ಸೆಂಟ್ ಜಾಸ್ತಿ ಖರ್ಚಾದರೂ ಪೂರ್ತಾ ಕಲ್ಲಿನಲ್ಲಿಯೋ ಕಟ್ಟಡಗಳನ್ನು ಕಟ್ಟಿಸಿ. ಇದರಿಂದ ಮುಂದೆ ವಾರ್ಷಿಕ ರಿಪೇರಿ ಎಂದು ಕಳ್ಳ ಕೆಲಸ ಮಾಡುವುದಕ್ಕೆ ಅವಕಾಶವಿರುವುದಿಲ್ಲ. ನಾನು ಮತ್ತು ಮಾನ್ಯ ಮಂತ್ರಿಗಳು ಮೊದಲಿನಿಂದಲೂ ಸ್ನೇಹಿತರು. ಒಂದು ಸಲ ನಿಮ್ಮ ಮನೆಗೆ ಬಂದಾಗ ಊಟದ ಸಮಯವಲ್ಲದ ಕಾರಣ ಟೀ ಕುಡಿದು ಬಂದೆ ಆ ಸಮಯದಲ್ಲಿ ನಮ್ಮ ಊರಿನಲ್ಲಿ ೬ ಮೈಲಿಗಳ ರಸ್ತೆ ಒಂದನ್ನು ಮಾಡಿಸಿ ಕೊಡುವುದಾಗಿ ಹೇಳಿದಿರಿ. ಆದರೆ ಆ ಕೆಲಸ ವನ್ನು ನನ್ನನ್ನು ಹೇಳದೆ ಕೇಳದೆ ಬದಲಾಯಿಸಿದಿರಿ.

ಶ್ರೀ ಕಾಗೋಡು ತಿಮ್ಮಪ್ಪ.—ಇವರು ಬಂದು ಅಲ್ಲಿ ರಸ್ತೆಯಾಗಬೇಕೆಂದು ಹೇಳುತ್ತಾರೆ. ಮತ್ತೊಬ್ಬರು ಬಂದು ಅಲ್ಲಿ ಬೇಡ ಎಂದು ಹೇಳುತ್ತಾರೆ. ಅವರಿವರ ತಕರಾರಿನಲ್ಲಿ ಈ ರೀತಿ ಆಗಿದೆ.

ಶ್ರೀ ಜಿ. ರಾಮೇಗೌಡ.—ನನ್ನ ವಯಸ್ಸಿಗಾದರೂ ಗೌರವ ಬೇಡವೇ? ನಿಮ್ಮ ಬಳಿ ಅನೇಕ ಸಲ ತಿರುಗಿದ್ದಕ್ಕಾದರೂ ಗೌರವ ಕೊಡಿ. ನಾನು ಬರೆದುಕೊಟ್ಟಿದ್ದಕ್ಕೆ ಗೌರವ ಕೊಡಿ. ತಾವು ಯಾವ ಒಂದು ಕ್ರೂರ ದೃಷ್ಟಿಯಲ್ಲಿ ಆ ರಸ್ತೆಯನ್ನು ಅಲ್ಲಿಂದ ಬೇರೆ ಕಡೆಗೆ ಬದಲಾವಣೆ ಮಾಡಿದಿರಿ. ತಾವು ಬದಲಾವಣೆ ಮಾಡಿದ ಮೇಲೆ ನಾನು ನನ್ನ ಮಾನಮರ್ಯಾದೆಯೆಲ್ಲಾ ಬಿಟ್ಟು ಕೆಲಸವಾದರೆ ಸಾಕು ಎಂದು ತಮ್ಮ ಹತ್ತಿರ ಅನೇಕ ಸಲ ತಿರುಗಾಡಿದೆ. ಮೆಟ್ಟಿಲು ಹತ್ತಿ ಇಳಿದೆ. ಆಗ ತಾವು ನನಗೆ ಎಸ್.ಆರ್.ನಲ್ಲಿಯೊ ಅಥವಾ ಬೇರೆ ರೀತಿಯಿಂದಲೋ ಮಾಡಿಸಿಕೊಡುವುದಾಗಿ ಹೇಳಿದಿರಿ ತಾವು ಹೇಳಿದ್ದನ್ನು ನಂಬಿಕೊಂಡು ನಾನು ನಮ್ಮ ಊರಿನ ಅಸಿಸ್ಟೆಂಟ್ ಇಂಜಿನಿಯರ್ ಅವರನ್ನು ಹೋಗಿ ನೋಡಿದಾಗ ಅವರು ಈ ಬಗ್ಗೆ ಸರ್ಕಾರದಿಂದ ಯಾವ ವರ್ತಮಾನವೂ ಬಂದಿಲ್ಲ. ನಮ್ಮ ಪ್ರಾಣ ಏತಕ್ಕೆ ತಿನ್ನುತ್ತೀರಿ ಎಂದು ಕೇಳಿದರು.

ಶ್ರೀ ಕಾಗೋಡು ತಿಮ್ಮಪ್ಪ.—ಈಗ ತಾವು ಅಲ್ಲಿಗೆ ಹೋಗಬೇಡಿ. ಇಲ್ಲಿಯೇ ಆಗುತ್ತದೆ.

ಶ್ರೀ ಜಿ. ರಾಮೇಗೌಡ.—ಮಾನ್ಯ ಅಧ್ಯಕ್ಷರೇ, ತಾವೂ ಸಹ ಇದನ್ನು ಕೇಳಿಸಿಕೊಳ್ಳಿ. ಬಡವರಿಗೆ ಅನುಕೂಲವಾಗುವ ಕೆಲಸ ಮಾಡಿಸಿಕೊಡುತ್ತೇನೆಂದು ಹೇಳಿದ್ದಾರೆ. ಈಗಾಗಲೇ ನಮ್ಮ ಊರಿನ ರಸ್ತೆಗೆ ಟಾರ್ ಮಾಡಿಸಿಕೊಂಡಿದ್ದೇನೆ. ಆದರೆ ಅಲ್ಲಿಂದ ಮುಂದಕ್ಕೆ ಹೋಗುವ ರಸ್ತೆ ಮಣ್ಣಿನ ರಸ್ತೆ ಯಾಗಿದೆ. ಮಳೆಗಾಲದಲ್ಲಿ ಆ ರಸ್ತೆಯಲ್ಲಿ ಬಸ್‌ಗಳು ಓಡಾಡುವುದಕ್ಕಾಗುವುದಿಲ್ಲ. ಒಂದು ವೇಳೆ ಬಸ್ ಚಕ್ರಗಳೇನಾದರೂ ಮಣ್ಣಿನಲ್ಲಿ ಕೂತುಹೋದರೆ ನಿಮ್ಮ ಟ್ರಾಕ್ಟರ್ ತಂದು ಸ್ವಲ್ಪ ಬಸ್ ಎಳೆದುಕೊಡಿ ಎಂದು ರಾತ್ರಿ ಹನ್ನೊಂದು ಗಂಟೆ ಸಮಯದಲ್ಲಿ ಬಂದು ಕೇಳಿಕೊಳ್ಳುತ್ತಾರೆ. ಆಗ ನಾವು ಟ್ರಾಕ್ಟರ್ ತೆಗೆದುಕೊಂಡು ಹೋಗಿ ಸಹಾಯ ಮಾಡಬೇಕು. ಇಲ್ಲದಿದ್ದರೆ ಪ್ರಯಾಣಿಕರು ಅನ್ನ ನೀರು ಇಲ್ಲದೆ ತೊಂದರೆ ಪಡಬೇಕಾಗುತ್ತದೆ. ಅಂತಹ ಸಮಯದಲ್ಲಿ ಅವರಿಗೆಲ್ಲಾ ಅನ್ನ ಹಾಕುವ ವ್ಯವಸ್ಥೆ ಸಹ ನಮ್ಮಲ್ಲಿ ಇಲ್ಲ. ಆದ್ದರಿಂದ ನಮ್ಮ ನಿಮ್ಮ ಒಂದು ವಿಶ್ವಾಸದ ಮೇಲಾದರೂ ಈ ಕೆಲಸ ಮಾಡಿಕೊಡಿ. ಒಂದು ವೇಳೆ ವಿರೋಧಪಕ್ಷದವರು ಏನಾದರು ನಿಮ್ಮ ಮೇಲೆ ಅವಿಶ್ವಾಸ ನಿರ್ಣಯ ತಂದರೆ ಅದಕ್ಕೆ ನಾನು ರುಜು ಹಾಕುವುದಿಲ್ಲ. ಇಷ್ಟರ ಮೇಲೆ ಏನೂ ಹೇಳುವುದಕ್ಕಾಗುವುದಿಲ್ಲ. ದಯವಿಟ್ಟು ಆ ಕೆಲಸ ಮಾಡಿಕೊಡಿ.

ಈಗ ತಾವು ಷುಗರ್‌ಕೇನ್ ಸೆಸ್ ಅಂತ ವಸೂಲ್ಮಾಡುತ್ತಿದ್ದೀರಿ. ನಮ್ಮ ತಾಲ್ಲೂಕ್ ರೈತರು ಗೌರಿಬಿದನೂರು ಕಾರ್ಖಾನೆಗೆ ಸಹಸ್ರಾರು ಟನ್ ಕಬ್ಬನ್ನು ಬೆಳೆದು ತಂದುಕೊಡುತ್ತಾರೆ. ಇದರಿಂದ ನಿಮಗೆ ಬೇಕಾದಷ್ಟು ಸೆಸ್‌ಗಳು ಬರುತ್ತದೆ. ಆದುದರಿಂದ ಈ ಸೆಸ್ ದುಡ್ಡಿನಿಂದಲಾದರೂ ೫ ಮೈಲಿ ರೋಡನ್ನಾದರೂ ಮಾಡಿಕೊಡಿ ಎಂದು ಕೇಳುತ್ತೇನೆ. ಇನ್ನೊಂದು ವಿಷಯ ಏನೆಂದರೆ ಕೆಲವು ರೈತರು ಗಳು ಈ ಫ್ಯಾಕ್ಟರಿಗೆ ಏನು ಕಬ್ಬು ಕೊಟ್ಟಿದ್ದಾರೋ ಅವರಿಗೆ ದುಡ್ಡು ಕೊಟ್ಟಿಲ್ಲ. ಕೇಳಿದರೆ ಸರ್ಕಾರಕ್ಕೆ ಕೊಟ್ಟಿರುವುದು ಎಲ್ಲೂ ಹೋಗುವುದಿಲ್ಲ, ಬಡ್ಡಿಯೂ ಸೇರಿ ಬರುತ್ತದೆ ಎಂದು ಹೇಳುತ್ತಾರೆ ಹೋದರೆ ಅಸಲೂ ಸೇರಿ ಹೊರಟು ಹೋಗುತ್ತದೆ. ಆದರೆ ಈಗ ಆ ಕಾರ್ಖಾನೆಯನ್ನು ಸೂಪರ್‌ಸೀಡ್ ಮಾಡಿರು ವುದರಿಂದ ದುಡ್ಡು ಎಲ್ಲೂ ಹೋಗುವುದಿಲ್ಲ ಅನ್ನುವ ಒಂದು ನಂಬಿಕೆ ಇದೆ. ನಾನು ಮೊದಲೇ ಹೇಳಿದ ಹಾಗೆ ಅಲ್ಲಿಗೆ ೫ ಮೈಲಿ ರೋಡ್ ಆದರೂ ಮಾಡಿಕೊಡಿ, ಆದರೆ ಇನ್ನೂ ಒಂದು ಮೇಲಿ ರಸ್ತೆಯನ್ನು ಜಾಸ್ತಿ ಮಾಡಿಕೊಡಿ. ಎಷ್ಟೋ ಅನ್ಯಾಯ ಮಾಡಿದ್ದೀರಿ. ಇದು ಒಂದು ಮಾಡಿದರೆ ಏನಾಗುತ್ತದೆ, ಏನೂ ಆಗುವುದಿಲ್ಲ. ಎಷ್ಟೋ ಸಣ್ಣ ಸಣ್ಣ ಅನ್ಯಾಯಗಳು ನಿಮ್ಮ ಕಣ್ಣಿಗೇ ಕಾಣಿಸುವುದಿಲ್ಲ. ನಾನು ಹೇಳಿದ ಈ ಒಂದು ಕೆಲಸವನ್ನು ಮಾಡಿಕೊಟ್ಟರೆ ತುಂಬಾ ಉಪಕಾರ ಮಾಡಿಕೊಟ್ಟಂತಾಗುತ್ತದೆ.

ಇನ್ನು ಈ ಪೋಲೀಸ್ ಪೇದೆಗಳಿಗೆ ಬೆಂಗಳೂರಿನಲ್ಲಿ ಮಾಗಡಿ ರೋಡ್‌ನಲ್ಲಿ, ಜಾರುಕಲ್ಲು ಬಂಡೆಯಲ್ಲಿ, ಆನಂದರಾವ್ ಸರ್ಕಲ್‌ನಲ್ಲಿ, ಆಡುಗೋಡಿಯಲ್ಲಿ ಕ್ವಾರ್ಟರ್ಸ್‌ನ್ನು ಕಟ್ಟಿಸಿಕೊಟ್ಟಿದ್ದೀರಿ. ಅವರೆಲ್ಲರಿಂದಲೂ ಒಬೊಬ್ಬರಿಂದಲೂ ನೀರಿನ ತೆರಿಗೆ ೫½ ರೂಪಾಯಿಯನ್ನು ತೆಗೆದುಕೊಳ್ಳುತ್ತಿದ್ದೀರಿ ಅದು ನಿಮ್ಮ ಖಾತೆಗೆ ಬರುತ್ತದೆ, ಆದರಿಂದ ಹೇಳುತ್ತಿದ್ದೇನೆ. ನೀವು ನೀರು ಕೊಡುತ್ತೀರಿ, ಗಾಳಿ ಕೊಡುತ್ತೀರಿ ಸಮಯ ಬಂದರೆ ತಲೆಮೇಲೆ ಕಲ್ಲು ಹಾಕುತ್ತೀರಿ. ನಿಮಗೆ ಇರುವಂಥಾ ಅಧಿಕಾರ ಯಾವ ಮಂತ್ರಿಗಳಿಗೂ ಇಲ್ಲ. ನಿಮ್ಮ ಅಧಿಕಾರವನ್ನು ಸರಿಯಾಗಿ ಉಪಯೋಗಿಸಿ ಇಲ್ಲದಿದ್ದರೆ ಮಹಾಪಾಪ ಆಗುತ್ತದೆ. ಅವರು ಈ ವಾಟರ್‌ಸಪ್ಲೈಗಾಗಿ ೫–೩೦ ರೂಪಾಯಿ ಏನು ಕಟ್ಟುತ್ತಿದ್ದಾರೆ ದಯವಿಟ್ಟು ವಾಪಸ್ಸು ಕೊಡುವ ಹಾಗೆ ಮತ್ತು ನಾಳೆ ತಿಂಗಳಿಂದ ಅವರಿಗೆ ಸರಿಯಾಗಿ ನೀರು ಬರುವ ಹಾಗೆ ಮಾಡಿಕೊಡಬೇಕು ಎಂದು ಹೇಳುತ್ತೇನೆ.

ಇನ್ನು ನಿಮ್ಮಲ್ಲಿ ಪೆಲ್ ಕ್ರೀಟಿಂಗ್ ಮಾಡುತ್ತೀರಿ ಸ್ಟೇಟ್ ಹೈವೇ ಲೆವಲ್‌ನಲ್ಲಿ ಅದನ್ನು ೧½ ಫರ್ಲಾಂಗ್ ಇಲ್ಲವೇ ಎರಡು ಫರ್ಲಾಂಗ್ ಮಾಡುತ್ತೀರಿ. ನ್ಯಾಷನಲ್ ಹೈವೇನಲ್ಲಿ ಮೈಲಿಗಟ್ಟಲೆ ಮಾಡುತ್ತೀರಿ. ತಮಗೆ ಒಂದು ಗಾದೆ ಹೇಳಬೇಕಾದರೆ ಮಾಡಿದವರ ಪಾಪ ಆಡಿದವರ ಬಾಯಲ್ಲಿ ಅಂತ ನೀವು ನೀವು ಮಾಡಿದ್ದೀರಾ. ಆದುದರಿಂದ ನಾನು ಹೇಳುವುದೇನೆಂದರೆ ವರ್ಷಕ್ಕೆ ಸ್ಟೇಟ್ ಲೆವೆಲ್ ಈ ಪೆಲ್ ಕ್ರೀಟಿಂಗ್ ಕೆಲಸವನ್ನು ಕೊನೇಪಕ್ಷ ೨–೩ ಮೈಲಿಯಾದರೂ ಮಾಡಿಸಿಕೊಡಬೇಕು ಎಂದು ಕೇಳುತ್ತೇನೆ. ಇನ್ನು ಕೆಲವು ಕಡೆಯಲ್ಲಿ ಕರ್ವ್ ರೋಡ್ಸ್ ಇದೆ ಆದರ ಕಡೆಗೂ ಸಹ ತಾವು ಗಮನ ಕೊಡಬೇಕು. ನಾನು ಈಗ ಡ್ರೈವ್ ಮಾಡುವುದನ್ನು ಬಿಟ್ಟುಬಿಟ್ಟೆ. ಏತಕ್ಕೆಂದರೆ ನನಗೆ ಈಗಲೇ ೬೫ ವರ್ಷವಾಗಿದೆ ಈ ಕರ್ವ್ಸ್‌ನಲ್ಲಿ ಏನಾದರೂ ಡ್ರೈವ್ ಮಾಡಿ ಕಾರಿನ ಒಂದು ಕಂಟ್ರೋಲ್ ತಪ್ಪಿ ಹೋದರೆ ಕಷ್ಟವಾದೀತು ಎಂದು ಬಿಟ್ಟುಬಿಟ್ಟೆ. ಕಾರಣ ನನಗೆ ಇನ್ನೂ ಸ್ವಲ್ಪ ದಿವಸ ಬದುಕಬೇಕೆಂಬ ಆಸೆ ಇರುವುದರಿಂದ ನನಗೆ ಸಾಯುವುದಕ್ಕೆ ಇಷ್ಟವಿಲ್ಲವಾದ್ದರಿಂದ ಕಾರಿನ ಡ್ರೈವ್ ಮಾಡುವುದನ್ನು ಬಿಟ್ಟುಬಿಟ್ಟೆ. ತಮಗೆ ಹೇಳಬೇಕಾದರೆ ಮಲೆನಾಡಿನಲ್ಲಿರತಕ್ಕಂಥಾ ರೋಡ್‌ನಲ್ಲಾದರೂ ತಿರುಗಾಡಬಹುದು, ಬಯಲು ಸೀಮೆಯಲ್ಲಿ ತಿರುಗಾಡುವುದಕ್ಕಾಗುವುದಿಲ್ಲ. ಆದುದರಿಂದ ಬಯಲು ಸೀಮೆಯ ರಸ್ತೆಯನ್ನು ಚೆನ್ನಾಗಿ ಮಾಡಿಕೊಡಬೇಕು ಎಂದು ಹೇಳುತ್ತೇನೆ. ಇನ್ನು ಸ್ಟೇಟ್ ಹೈವೇನಲ್ಲಿರುವ ನಂದಿಯಿಂದ ಸೋಮಪುರದವರೆಗೂ ಯಶವಂತಪುರದಿಂದ ಹಿಂದೂಪುರದವರೆಗೂ ಟಾರ್ ರಸ್ತೆ ಏನು ಇದೆ ಅಲ್ಲಿ ೪–೪ ಇಂಚಾದರೂ ಪೆಲ್ ಕ್ರೀಟಿಂಗ್ ಕೆಲಸವನ್ನು ಮಾಡಿಸಿ ಕೊಡಬೇಕೆಂದು ಹೇಳುತ್ತೇನೆ. ನಮ್ಮ ಜಿಲ್ಲೆಯಲ್ಲಿ ತಾವು ಪೆಲ್ ಕ್ರೀಟಿಂಗ್ ಕೆಲಸ ಮಾಡಿಕೊಡುತ್ತಾರೆಂದು ನಾನು ಎರಡೂ ಕಡೆಯೂ ಸಸಿ ನೆಡಿಸಿದ್ದೇನೆ. ಈ ಎರಡೂ ಕೆಲಸಗಳನ್ನೂ ಮಾಡಿಕೊಡುತ್ತಾರೆಂದು ನಾನು ನಂಬಿದ್ದೇನೆ.

ಇನ್ನು ಇಂಟಗ್ರೇಟೆಡ್ ರೂರಲ್ ಕಮ್ಯೂನಿಕೇಷನ್ ಪ್ರೋಗ್ರಾಂ ಏನು ಇದೆ ಇದರಲ್ಲಿ ತಾವು ಬಹಳ ಅನ್ಯಾಯ ಮಾಡಿದ್ದೀರಿ. ಏತಕ್ಕೆಂದರೆ ತಾವು ನಮ್ಮ ತಾಲ್ಲೂಕಿಗೆ ಈ ಬಗ್ಗೆ ದುಡ್ಡೂ ಕೊಡುವುದಿಲ್ಲ. ನೀವು ಹೇಳುತ್ತೀರಿ ನಮ್ಮ ಹತ್ತಿರ ಬೇಕಾದಷ್ಟು ದುಡ್ಡು ಇದೆ"ಎಂದು, ನಮ್ಮ ತಾಲ್ಲೂಕಿಗೆ ನೋಡಿದರೆ ದುಡ್ಡೇ ಕೊಟ್ಟಿಲ್ಲಾ. ಅಲ್ಲದೆ ಮಿನಿಮಮ್ ನೀಡ್ಸ್ ಪ್ರೋಗ್ರಾಂನಲ್ಲೂ ಸಹ ಅದನ್ನೂ ಮಾಡಿಕೊಟ್ಟಿಲ್ಲಾ. ಆ ಬಗ್ಗೆ ನಾರ್ಮ್ಸ್ ಏನು ಇದೆ ಅದರ ಪ್ರಕಾರವಾದರೂ ನಮ್ಮ ಕಡೆ ರಸ್ತೆ ಕೆಲಸಗಳನ್ನು ಮಾಡಿಸಿಕೊಡಿ ಎಂದು ಕೇಳುತ್ತೇನೆ. ಅಲ್ಲಿ ಕಾರಿನಲ್ಲಿ ಹೋದರೆ ಅಲ್ಲಿರುವ ಕೆಂಪು ಮಣ್ಣಿನಲ್ಲಿ ಒಳಗಡೆ ಇರುವ ಕಲ್ಲುಗಳು ಮೇಲಕ್ಕೆ ಎದ್ದು ಎದ್ದು ಡಬ ಡಬ ಅಂತ ಬಂದು ಬೀಳುತ್ತದೆ. ತಾವು ನಮ್ಮ ತಾಲ್ಲೋಕಿಗೆ ಒಂದು ಸಾರಿ ಬಂದು ನೋಡಿದರೆ ಅಲ್ಲಿರುವ ಅವ್ಯವಸ್ಥೆ ಏನೆಂದು ಗೊತ್ತಾಗುತ್ತದೆ.

ಶ್ರೀ ಕಾಗೋಡು ತಿಮ್ಮಪ್ಪ.—ನೀವು ಕರದೇ ಇಲ್ಲ.

ಶ್ರೀ ಜಿ. ರಾಮೇಗೌಡ.—ನಾವು ಎಷ್ಟೋ ಸಲ ಕರೆದಿದ್ದೇವೆ. ನೀವು ಬಂದಿಲ್ಲಾ. ನೀವು ಬಂದು ನೋಡಿದರೆ ಅಲ್ಲಿರುವ ಇಂಟರ್‌ಕನೆಕ್ಟೆಡ್ ರಸ್ತೆಗಳ ಅವ್ಯವಸ್ಥೆ ಏನು ಅನ್ನುವುದು ಗೊತ್ತಾಗುತ್ತದೆ ಆದುದರಿಂದ ಮಿನಿಮಮ್ ನೀಡ್ಸ್ ಪ್ರೋಗ್ರಾಂನಲ್ಲಾದರೂ ಕೂಡ ದಯೆವಿಟ್ಟು ಇನ್ನೊಂದು ಊರಿಗೆ ಈ ಕೆಲಸವನ್ನು ಮಾಡಿಕೊಡಿ ಎಂದು ನಾನು ಸಲಹೆ ಮಾಡುತ್ತೇನೆ ೧೦೦೦ ರಿಂದ ೧೫೦೦ ರವರೆಗೂ ಪ್ರಜಾಸಂಖ್ಯೆಯು ಗ್ರಾಮಗಳಿವೆ ಕೊಡುವುದಕ್ಕೆ ಸಾಧ್ಯವಾದರೆ ಅದನ್ನಾದರೂ ಕೊಡಿ ಈ ಐಸಿಆರ್‌ಪಿ ಪ್ರೋಗ್ರಾಂನಲ್ಲಿ ಎಲ್ಲಾ ರಸ್ತೆಗಳನ್ನೂ ರಿಪೇರಿ ಮಾಡುವುದಕ್ಕೆ ಸಾಧ್ಯ ಇದೆ. ಅದರಲ್ಲಿ ಕೆಲವು ರಸ್ತೆಗಳನ್ನು ಮಾಡಿದ್ದೀರಿ. ದೊಡ್ಡ ದೊಡ್ಡ ಕಲ್‌ವರ್ಟ್ಸ್ ಮತ್ತು ಬ್ರಿಡ್ಜಸ್ ಇನ್ನೂ ಹಾಗೆಯೇ ಇದೆ. ಅಲ್ಲಿ

ಕಾರಿನಲ್ಲಿ ಹೋಗುವುದಕ್ಕಾಗುವುದಿಲ್ಲ. ರಸ್ತೆ ರಿಪೇರಿಗೆ ೫೦ ಸಾವಿರ, ಒಂದು ಲಕ್ಷ ಅಥವಾ ೧½ ಲಕ್ಷ ಆಗಬಹುದು ಹೆಚ್ಚೇನೂ ಆಗುವುದಿಲ್ಲ. ಕೋಟಿಗಟ್ಟಲೆ ದುಡ್ಡು ಇರುವಾಗ ಇದೇನೂ ಹೆಚ್ಚಲ್ಲ. ಮಾನ್ಯ ಹಣಕಾಸಿನ ಮಂತ್ರಿಗಳಾದ ಶ್ರೀ ವೀರಪ್ಪಮೊಯ್ಲಿ ಸಾಹೇಬರು ತಮ್ಮ ಬಡ್ಜೆಟ್ ಭಾಷಣದಲ್ಲಿ ನಮ್ಮದು ಅಧಿಕ ರಾಜಸ್ವ ರಾಜ್ಯ ಎನ್ನುವ ಮಾತನ್ನು ಹೇಳಿದ್ದಾರೆ. ನಮಗೇನೂ ದುಡ್ಡಿಗೆ ಅಭಾವ ಇಲ್ಲ ಹೀಗೆ ಹೇಳಿರುವಾಗ ತಾವೇಕೆ ಖರ್ಚು ಮಾಡಬಾರದು ಗತಿ ಇಲ್ಲವೇ ? ನೀವು ಬೇರೆಯದಕ್ಕೆ ತೆಗೆದುಕೊಂಡು ಸಿಕ್ಕಾಪಟ್ಟೆ ಖರ್ಚು ಮಾಡುತ್ತಿರುವಾಗ, ನ್ಯಾಷನಲ್ ಹೈವೇ ಲೆವೆಲ್‌ನಲ್ಲಿ ಮೈಲಿಗಟ್ಟಲೆ ರಸ್ತೆ ತೆಗೆದು ಕೊಂಡು ಕೋಟಿಗಟ್ಟಲೆ ಖರ್ಚು ಮಾಡುತ್ತಾ ಇರುವಾಗ ೫೦ ಸಾವಿರ ಲಕ್ಷ ಖರ್ಚು ಮಾಡಿ ಈ ಕೆಲಸ ವನ್ನು ಮಾಡಿಸಿಕೊಡದೇ ಹೋದರೆ ಏನು ಪ್ರಯೋಜನ ಅವರಿಗೆ ಎಷ್ಟು ತೊಂದರೆಯಾಗುತ್ತದೆ ಅನ್ನುವುದನ್ನಾದರೂ ತನ್ನು ಗಮನಕ್ಕೆ ತೆಗೆದುಕೊಂಡು ಆ ಕೆಲಸಗಳನ್ನು ಮಾಡಿಸಿಕೊಡಿ. ನಮ್ಮ ಕಡೆ ಮಾಡಬೇಕಾಗಿರುವ ಬ್ರಿಡ್ಜಸ್ ಕೆಲಸಗಳನ್ನು ತೆಗೆದುಕೊಳ್ಳುವುದಕ್ಕೆ ಅಲ್ಲಿ ಅಸಿಸ್ಟೆಂಟ್ ಎಕ್ಸಿಕ್ಯೂಟೀವ್ ಇಂಜನೀಯರ್ ನನ್ನನ್ನು ಕರೆದು ಅವರು ಹೇಳಿದ್ದಾರೆ ನಿಮ್ಮನ್ನು ಕರೆಸಿಕೊಳ್ಳಿ ಎಂದು ಹೇಳಿ ನನ್ನ ಕೈಯ್ಯಲ್ಲಿ ಬರೆಸಿಕೊಳ್ಳುತ್ತಾರೆ. ರುಜು ಮಾಡುವುದು ಇಷ್ಟ ಇಲ್ಲದಿದ್ದರೂ ಕೂಡ ಬಲವಂತ ಮಾಡಿಸಿ ಆ ಕಾಗದಕ್ಕೆ ರುಜು ಮಾಡಿಸಿಕೊಳ್ಳುತ್ತಾರೆ. ಆಮೇಲೆ ಆ ಕಾಗದ ಎಲ್ಲಿಗೆ ಹೋಗುತ್ತದೋ ಗೊತ್ತಿಲ್ಲ. ಮಾನ್ಯ ಮಂತ್ರಿಗಳು ಮೊದಲು ಒಂದು ಕೆಲಸಕ್ಕೆ ಅಪ್ಪಣೆ ಕೊಟ್ಟಿದ್ದಾರೆ. ಅದೇರೀತಿ ನಮ್ಮ ರುಜು ಇಲ್ಲದೆ ಎಸ್ ಆರ್ ತೆಗೆದುಕೊಳ್ಳಬಾರದು. ಈ ಎಸ್ ಆರ್ ನಲ್ಲಿ ರೂರಲ್ ಕಮ್ಯೂನಿಕೇಷನ್ ಪ್ರೋಗ್ರಾಂನಲ್ಲಿ ನಮ್ಮ ತಾಲ್ಲೂಕಿನಲ್ಲಿ ಯಾವ ಯಾವ ಕೆಲಸಗಳನ್ನು ಮಾಡಿಕೊಡಬೇಕೋ, ಯಾವ ಯಾವ ಕೆಲಸಗಳು ಅರ್ಧಮರ್ಧವಾಗಿರುತ್ತದೋ ಅದನ್ನು ಮಾಡಿಕೊಡಿ, ನಾನು ಇನ್ನು ಇದಕ್ಕಿಂತ ಹೆಚ್ಚು ಹೇಳುವುದಿಲ್ಲ. ಸಾಮಾನ್ಯವಾಗಿ ನಾನು ಸುಳ್ಳು ಹೇಳುವುದಿಲ್ಲ. ಒಂದು ವೇಳೆ ಸುಳ್ಳು ಹೇಳಿದರೂ ಸಹ ನಿಜದ ತಲೆಮೇಲೆ ಹೊಡೆದ ಹಾಗೆ ಹೇಳುತ್ತೇನೇ ವಿನಾ ಚೌಕಾಸಿ ಮಾಡುವುದಿಲ್ಲ. ನೀವು ದೊಡ್ಡ ಮನಸ್ಸು ಮಾಡಿದರೆ ನಮ್ಮ ತಾಲ್ಲೂಕಿಗೆ ಏನಾದರೂ ಸಹಾಯವಾಗುತ್ತದೆ, ಅದನ್ನಾದರೂ ಮಾಡಿ.

ಶ್ರೀ ಕಾಗೋಡು ತಿಮ್ಮಪ್ಪ.—ಪ್ರತಿಯೊಂದು ತಾಲ್ಲೂಕಿಗೂ ಕೂಡ ೧ ಲಕ್ಷ ೭೫ ಸಾವಿರ ರೂಪಾಯಿ ಕೊಟ್ಟಿದ್ದೇವೆ. ಮಾನ್ಯ ಸದಸ್ಯರು ಯಾವ ರಸ್ತೆಯನ್ನು ತೆಗೆದುಕೊಳ್ಳಬೇಕು ಎಂದು ಹೇಳುತ್ತಾರೋ ಅದನ್ನು ತೆಗೆದುಕೊಳ್ಳುತ್ತೇವೆ. ಆದರೆ ಹೊಸದಾಗಿ ರಸ್ತೆಗಳನ್ನು ತೆಗೆದುಕೊಳ್ಳುವುದಕ್ಕಾಗುವುದಿಲ್ಲ. ಯಾವುದು ೨-೩ನೇ ಸ್ಟೇಜ್‌ನಲ್ಲಿರುವ ರಸ್ತೆಗಳನ್ನು ತೆಗೆದುಕೊಳ್ಳುತ್ತೇವೆ. ಈ ೧ ಲಕ್ಷ ೭೫ ಸಾವಿರ ರೂಪಾಯಿ ಅಂತ ಏನು ಹೇಳುತ್ತೇವೋ ಅದರಲ್ಲೂ ಈ ರಸ್ತೆಗಳನ್ನು ತೆಗೆದುಕೊಳುತ್ತೇವೆ. ಜೊತೆಗೆ ಎನ್ ಆರ್ ಇ ಪಿ ನಲ್ಲೂ ಏನು ಹಣ ಇದೆ ಅದನ್ನೂ ಸೇರಿಸಿ ಆ ರಸ್ತೆಗಳನ್ನು ಮಾಡುವುದಕ್ಕೆ ಸಾಧ್ಯ ವಾಗುತ್ತದೆ

ಶ್ರೀ ಜಿ. ರಾಮೇಗೌಡ.—ಈಗ ಹೇಳಿದ ವಿಚಾರವನ್ನೂ ಕೂಡ ಮಾನ್ಯ ಅಧ್ಯಕ್ಷರು ಗಮನಿಸ ಬೇಕು. ಮೊದಲು ಒಂದು ಮಾತು ಕೊಟ್ಟಿದ್ದಾರೆ. ಈಗ ಮಾತು ಕೊಟ್ಟಿದ್ದರಲ್ಲಿ ೬ ಮೈಲಿಯಾದರೂ ರಸ್ತೆ ಕೆಲಸ ತೆಗೆದುಕೊಳ್ಳಬಹುದು ಅಂತ ಹೇಳಿದ್ದಾರೆ. ಈ ಒಂದು ರಸ್ತೆಯನ್ನು ೧ ಲಕ್ಷ ೭೫ ಸಾವಿರ ರೂಪಾಯಿಯ ಹಣದಲ್ಲಾದರೂ ಮಾಡಿಸಿಕೊಡುತ್ತೇನೆಂದು ಹೇಳಿದಕ್ಕೆ ಅವರಿಗೆ ನನ್ನ ಧನ್ಯವಾದಗಳನ್ನು ಅರ್ಪಿಸುತ್ತೇನೆ.

೪-೦೦ ಪಿ. ಎಂ.

ಮಾನ್ಯ ಬಂಗಾರಪ್ಪನವರು ಮಂತ್ರಿಗಳಾಗಿದ್ದಾಗ ಈ ಗ್ಯಾಂಗ್‌ಮನ್‌ಗಳನ್ನು ಖಾಯಂ ಮಾಡು ತ್ತೇವೆಂದು ಹೇಳಿದ್ದರು, ಇದರ ಬಗ್ಗೆ ಕ್ಯಾಬಿನೆಟ್ ಡಿಸಿಷನ್ ಆಯಿತ್ತು. ಗ್ರಹಚಾರ ದುರಾದೃಷ್ಟವಶಾತ್ ನಾವು ಮಾಡಿದಂಥ ರೆಸಲ್ಯೂಷನ್ ಹೋಯಿತು, ಗವರ್ನಮೆಂಟ್ ಹೋಯೀತು, ನಮ್ಮ ಲೀಡರ್ ಹೋದರು ಏನೂ ಆಗಲಿಲ್ಲ.

ಶ್ರೀ ಕಾಗೋಡು ತಿಮ್ಮಪ್ಪ.—ಹಿಂದೆ ತೀರ್ಮಾನ ಆಗಿದ್ದುದು, ವರ್ಕ್‌ಚಾರ್ಜ್‌ನಲ್ಲಿ ಕೆಲಸ ಮಾಡುತ್ತಾ ಇದ್ದವರು, ಯಾರು ೧೯೭೮ನೇ ಇಸವಿಗಿಂತ ಹಿಂದೆ ೧೦ ವರ್ಷ ವರ್ಕ್ ಚಾರ್ಜ್‌ನಲ್ಲಿ ಕೆಲಸ ಮಾಡಿದ್ದರೋ ಅಂಥವರನ್ನು ರೆಗ್ಯುಲರೈಸ್ ಮಾಡುತ್ತೇವೆಂದು ಹೇಳಿದ್ದೆವು ಆದರ ಪ್ರಕಾರ ಬ್ಯಾಚ್ ಪ್ರಕಾರ ರೆಗ್ಯುಲರೈಸ್ ಮಾಡುತ್ತಿದ್ದೇವೆ. ಈಗಾಗಲೇ ಸುಮಾರು ೭-೮ ಸಾವಿರ ಜನ ರೆಗ್ಯುಲರೈಸ್

ಆಗಿರಬಹುದು. ಮಾನ್ಯ ಸದಸ್ಯರು ಹೇಳುವ ರೀತಿಯಲ್ಲಿ ನಾವು ಗ್ಯಾಂಗ್‌ಮನ್‌ಗಳನ್ನು ಖಾಯಂ ಮಾಡುತ್ತೇವೆನ್ನುವಂಥ ತೀರ್ಮಾನ ಮಾಡಿರಲಿಲ್ಲ.

ಶ್ರೀ ಜಿ ರಾಮೇಗೌಡ.—ನೀವು ಮಾಡಿದ್ದರೆ ಬಹಳ ಸಂತೋಷ. ಏಕೆಂದರೆ ಅವರು ಬಹಳ ಬಡವರು, ಅವರಿಗೆ ದಿನಗೂಲಿ ೭ ರಿಂದ ೯ ರೂಪಾಯಿಗಳವರೆಗೆ ಕೊಡುತ್ತಿದ್ದು ಅದನ್ನು ಕೊಡುತ್ತಿದ್ದರೋ ಇಲ್ಲವೋ ಅಥವಾ ಅವರನ್ನು ಬಾಯಿ ಚಪ್ಪರಿಸುವ ಹಾಗೆ ಮಾಡಿದ್ದೀರೋ ನಮಗೆ ಗೊತ್ತಿಲ್ಲ, ನಾವು ಹೇಳುವವರು ನೀವು ಮಾಡುವವರು. ಅದೇನೋ ಗಾದೆ ಹೇಳುತ್ತಾರೆ, ಹೇಳುವವರಿಗೆ ಏಳು ಆಣೆ, ಕೇಳುವವರಿಗೆ ೧೨ ಆಣೆಯಂತೆ, ಹಾಗೆ ಆಗಿದೆ.

ಇನ್ನು ನಮ್ಮಲ್ಲಿರುವ ಟ್ರಾವಲರ್ಸ್ ಬಂಗಲೆ ಬಗ್ಗೆ ಎರಡು ಮಾತುಗಳನ್ನು ಹೇಳುತ್ತೇನೆ. ಇದು ನಿಮ್ಮ ಸರ್ಕಾರದವರು ಕಟ್ಟಿದ್ದಲ್ಲ. ಯಾರೋ ಯೂರೋಪಿಯನ್ನರು ಆಕಸ್ಮಾತ್ ಬಂದು ಇಲ್ಲಿ ನೆಲೆಸಿದ್ದಾಗ್ಗೆ ಕಟ್ಟಿದ್ದುದು. ಇದಕ್ಕೆ ಸುಮಾರು ೧೧೮ ವರ್ಷವಾಗಿದೆ. ನಮ್ಮ ಹಿಂದಿನ ಮಹಾರಾಜರು ಇಲ್ಲಿಗೆ ಬರುತ್ತಾರೆಂದಾಗ ಗೋಡೆಗೆ ಸುಣ್ಣಬಣ್ಣ ಬಳಿಸುತ್ತಿದ್ದರು. ಇದರಲ್ಲಿ ಉಪಯೋಗ ಮಾಡಿರತಕ್ಕ ಟೀಕ್ ಮರವನ್ನು ತಾವು ನೋಡಬೇಕು, ಇಂಥ ಟೀಕನ್ನು ತಾವು ತೆಗೆದುಕೊಂಡು ಹೋದರೂ ಚಿಂತೆಯಿಲ್ಲ, ಇದಕ್ಕೆ ಒಂದು ಒಳ್ಳೆಯ ರೂಫನ್ನು ಹಾಕಬೇಕು. ಒಂದು ಒಳ್ಳೆಯ ರೂಫ್ ಹಾಕಿ, ನಾನೂ ಒಂದು ದಿನ ಆನಂದದಿಂದ ನಿದ್ದೆ ಮಾಡುವ ಹಾಗೆ ಮಾಡಬೇಕು, ಇದು ನಿಮ್ಮ ಜವಾಬ್ದಾರಿ.

ಶ್ರೀ ಕಾಗೋಡು ತಿಮ್ಮಪ್ಪ.—ನಾನು ಬಂದಾಗ ಈ ವಿಚಾರವನ್ನು ತಾವು ಹೇಳಲಿಲ್ಲವಲ್ಲಾ.

ಶ್ರೀ ಜಿ. ರಾಮೇಗೌಡ.—ನೀವು ಪ್ರತ್ಯಕ್ಷವಾಗಿಯೇ ನೋಡಿದ್ದೀರಿ, ಎಲ್ಲವನ್ನೂ ಹೇಳುತ್ತಾ ಹೋದರೆ ತಾವು ಬೇಜಾರುಮಾಡಿಕೊಳ್ಳಬಹುದು ಎಂದು ಸ್ವಲ್ಪ ಹಿಂದು ಮುಂದು ನೋಡಿದೆ. ದೊಡ್ಡಬಳ್ಳಾಪುರ ಬಹಳ ಚಿಕ್ಕದು, ನೋಡುವುದಕ್ಕೆ ಬಹಳ ಒಳ್ಳೆಯ ಜಾಗ ಅಲ್ಲಿದೆ, ಜನರ ಶಬ್ಧ ಇಲ್ಲ, ಗಾಡಿಗಳ ಶಬ್ಧ ಇಲ್ಲ, ತಾವೂ ಸಹ ಫೈಲುಗಳನ್ನು ನೋಡುವುದಕ್ಕೆ ನಂದಿಗೆ ಹೋಗುವುದಕ್ಕಿಂತ ಇಲ್ಲಿಗೆ ಬರಬಹುದು. ನಿಮ್ಮ ಕಾಲದಲ್ಲಿ ಈ ಕೆಲಸವನ್ನು ಮಾಡಿಕೊಟ್ಟರೆ ಉಪಕಾರವಾಗುತ್ತದೆ.

ಇನ್ನೊಂದು ವಿಚಾರ, ಘಾಟಿ ಸುಬ್ರಹ್ಮಣ್ಯ ದೇವಸ್ಥಾನ ನಮಗೆ ಬಹಳ ಹತ್ತಿರವಾಗಿವೆ, ಇದು ಬಹಳ ಪವರ್‌ಫುಲ್ ದೇವರು. ನೀವು ಸಹ ಬಂದು ಪೂಜೆ ಮಾಡಿಸಿದರೆ ಇನ್ನೂ ೧೫ ವರ್ಷ ಮಂತ್ರಿಗಳಾಗಿ ಮುಂದುವರಿಯುತ್ತೀರಿ.

ಶ್ರೀ ಎಂ, ಮಲ್ಲಪ್ಪ.—ತಾವೇಕೆ ಈ ದೇವರನ್ನು ಪೂಜೆ ಮಾಡಲಿಲ್ಲ ?

ಶ್ರೀ ಜಿ. ರಾಮೇಗೌಡ.—ನಾನೂ ಪೂಜೆ ಮಾಡಿದೆ, ಆದರೆ ಇಲ್ಲಿ ಒಂದು ಪ್ರಸಂಗ ಜ್ಞಾಪಕಕ್ಕೆ ಬರುತ್ತಿದೆ, ಅಧ್ಯಕ್ಷರು ಅಪ್ಪಣೆ ಕೊಟ್ಟರೆ ಇಲ್ಲಿ ಅದನ್ನು ಹೇಳುತ್ತೇನೆ. ದ್ರೌಪದಿ ಸೀರೆಯನ್ನು ಕೈಯಲ್ಲಿ ಹಿಡಿದುಕೊಂಡು ಕೃಷ್ಣ, ಕೃಷ್ಣ ಎಂದು ಕೂಗಿಕೊಂಡರೂ ಕೃಷ್ಣ ಬರಲಿಲ್ಲ, ಕೊನೆಗೆ ಸೀರೆಯನ್ನು ಕೈಬಿಟ್ಟು ಕೃಷ್ಣ ಎಂದಾಗ ಶ್ರೀಕೃಷ್ಣ ಅವಳ ಮಾನವನ್ನು ಕಾಪಾಡಿದ. ಆ ರೀತಿಯಾಗಿ ನಾನು ದೇವರನ್ನು ಪೂಜೆ ಮಾಡಲಿಲ್ಲ, ಅಧಿಕಾರದ ಕುರ್ಚಿಯ ಆಸೆ ಇಟ್ಟುಕೊಂಡು ನಾನು ಪೂಜೆ ಮಾಡಲಿಲ್ಲ, ಇದು ಬಹಳ ಹಳೆಯ ಕಾಲದ ದೇವರು, ಸ್ವಲ್ಪ ಭಕ್ತಿ ಇರಬೇಕು, ಭಕ್ತಿ ಇಲ್ಲದೇ ಹೋದರೆ ಏನೂ ಆಗುವುದಿಲ್ಲ. ಬರೀ ನಾಮಕಾವಸ್ತೆ ಪೂಜೆಯಾಗುತ್ತದೆ. ಎಲ್ಲಾ ಅಧ್ವಾನವಾಗುತ್ತದೆ, ರೋಡುಗಳೂ ಆಗುವುದಿಲ್ಲ. ಇನ್ನೊಂದು ವಿಷಯವನ್ನು ಇಲ್ಲಿ ನಾನು ಹೇಳಬೇಕಾಗಿದೆ, ಮಾಕಳಿಯಿಂದ ಘಾಟಿ ದೇವಸ್ಥಾನದವರೆಗೆ ಒಂದು ರಸ್ತೆ ಇದೆ, ಅದು ಬಹಳ ವಕ್ರ ಪಕ್ರವಾಗಿದೆ, ಇಲ್ಲಿ ಕಾರುಗಳಾಗಲೀ ಗಾಡಿಗಳಾಗಲೀ ಓಡಾಡುವುದು ಬಹಳ ಕಷ್ಟವಾಗಿದೆ ಈ ದೇವಸ್ಥಾನದಿಂದ ಸರ್ಕಾರಕ್ಕೆ ಸುಮಾರು ೨೫ ಸಾವಿರ ರೂಪಾಯಿಗಳ ಟ್ಯಾಕ್ಸ್ ಬರುತ್ತದೆ, ಇದನ್ನಾದರೂ ಇಲ್ಲಿ ಉಪಯೋಗ ಮಾಡಿದರೆ ತಾವೂ ಸುಲಲಿತವಾಗಿ ಹೋಗಬಹುದು ಜನರೂ ಹೋಗಬಹುದು. ಈ ರಸ್ತೆ ಬಹಳ ದೂರ ಏನೂ ಇಲ್ಲ ಕೇವಲ ನಾಲ್ಕು ಮೈಲಿಯಾಗುತ್ತದೆ, ಒಂದು ಲಕ್ಷ ರೂಪಾಯಿಗಳನ್ನು ಇದಕ್ಕೆ ಕೊಟ್ಟರೆ ಸಾಕು. ತಾವು ಎಲ್ಲಾ ಮಾಡುತ್ತೇನೆಂದು ಹೇಳುತ್ತೀರಿ ಆದರೆ ಮರೆತುಬಿಡುತ್ತೀರಿ ನಾನು ಹೆಚ್ಚಾಗಿ ಒತ್ತಾಯ ಮಾಡುವುದಕ್ಕೆ ಹೋಗುವುದಿಲ್ಲ, ಒತ್ತಾಯ ಎಷ್ಟು ಇರಬೇಕೋ ಅಷ್ಟು ಇರಬೇಕು, ಜಾಸ್ತಿ ಮಾಡಬಾರದು ಮಾಡಿರಿ ಬಿಡಿರಿ, ಹೆಚ್ಚಾಗಿ ನಿಮ್ಮನ್ನು ನಾವು ಕೇಳುವುದಕ್ಕಾಗುವುದಿಲ್ಲ. ನೀವು ಮಾಡುತ್ತೇನೆಂದು ಹೇಳಿ, ಮಾಡದಿದ್ದರೆ ಅದು ನಿಮಗೆ ಅವಮಾನವಾಗುತ್ತದೆಂದು ತಿಳಿದುಕೊಳ್ಳಬೇಕು.

ಇನ್ನು ಮೀನುಗಾರಿಕೆಯ ಬಗ್ಗೆ ಎರಡು ಮಾತುಗಳನ್ನು ಹೇಳುತ್ತೇನೆ. ಇದರ ಖಾತೆಯ ಮಂತ್ರಿಗಳು ನನ್ನ ಸ್ನೇಹಿತರು, ನನ್ನಷ್ಟೇ ತೂಕ ಇರುವವರು, ನನ್ನಷ್ಟೇ ನಿಧಾನ, ನನ್ನಷ್ಟೇ ಶಾಂತಿ, ನನ್ನಷ್ಟೆ ಸದ್ಗುಣವುಳ್ಳವರು.

ಅಧ್ಯಕ್ಷರು.—ಅವರು ನಿಮಗಿಂತ ಎತ್ತರ ಇದ್ದಾರೆ.

ಶ್ರೀ ಜಿ. ರಾಮೇಗೌಡ.—ಎತ್ತರ ಇದ್ದರು ನನ್ನಷ್ಟೆ ತೂಕ ಇದ್ದಾರೆ. ನನಗೆ ಮೀನು ಎಂದರೆ ಬಹಳ ಆಸೆ. ನಮ್ಮ ಟೌನ್‌ನಲ್ಲಿ ಸುಮಾರು ೫೦ ಸಾವಿರ ಜನ ಇದ್ದಾರೆ ನಮ್ಮಲ್ಲಿ ಮೀನು ಸಿಕ್ಕುವುದು ಒಣಗಿದ್ದು ಮಾತ್ರ. ಒಳ್ಳೆಯ ಮೀನನ್ನು ತಿನ್ನದಿದ್ದರೆ ಕಾಲರ ಬರುತ್ತದೆ. ಆದ್ದರಿಂದ ತಾವು ನಮ್ಮಲ್ಲಿ ಒಂದು ಮೀನು ಮರಿಗಳ ಕೇಂದ್ರವನ್ನು ಮಾಡಿಸಿಕೊಡಬೇಕು. ದಯವಿಟ್ಟು ತಮ್ಮ ಉತ್ತರದಲ್ಲಿ ತಾವು ದೊಡ್ಡಬಳ್ಳಾಪುರಕ್ಕೆ ಒಂದು ಮೀನು ಮರಿಗಳನ್ನು ಸಾಕುವ ಕೇಂದ್ರವನ್ನು ಮಾಡಿಸಿಕೊಡುತ್ತೇನೆಂದು ಆಶ್ವಾಸನೆಯನ್ನು ಕೊಡಬೇಕು, ಇದರಿಂದ ನಾನು ತಮಗೆ ತುಂಬಾ ಅಭಾರಿಯಾಗಿರುತ್ತೇನೆ. ನಮ್ಮಲ್ಲಿ ಮೀನಿನ ಸಪ್ಲೈ ಆಗುವುದಿಲ್ಲ. ಇಲ್ಲಿಂದ ನಮ್ಮ ದೊಡ್ಡಬಳ್ಳಾಪುರಕ್ಕೆ ಸುಮಾರು ೨೨ ಮೈಲಿಯಾಗುತ್ತದೆ, ದಿನ ಒಂದಕ್ಕೆ ಸುಮಾರು ನೂರಾರು ಕೆ.ಜಿ. ಮೀನು ಖರ್ಚಾಗುತ್ತದೆ. ಮಾನ್ಯ ಅಧ್ಯಕ್ಷರು, ಮಾಂಸ ತಿನ್ನುತ್ತಾರೋ ಇಲ್ಲವೋ ಗೊತ್ತಿಲ್ಲ, ಆದರೆ ಮೀನು ಮಾತ್ರ ಬಹಳ ಒಳ್ಳೆಯದು, ಎಲುಬುಗಳು ಇರುವುದಿಲ್ಲ. ಮಾಂಸದ ಬೆಲೆ ತಮಗೆ ಗೊತ್ತಿದೆ, ಒಂದು ಕೆ.ಜಿ.ಗೆ ೨೫ ರೂಪಾಯಿಗಳು ಆಗಿದೆ. ಕೋಳಿಯನ್ನು ತಿನ್ನೋಣ ಎಂದರೆ ಅದೂ ಸಹ ೧೨ ರಿಂದ ೧೦ ರೂಪಾಯಿಗಳವರೆಗೆ ಆಗಿದೆ. ಪುಕ್ಕ ತೆಗೆದಿದ್ದುದು ೧೮ ರೂಪಾಯಿಗಳ ಮೇಲೆ ಆಗುತ್ತದೆ. ಇದೆಲ್ಲಾ ಜಾಸ್ತಿಯಾಗಿರುವಾಗ ಮೀನು ತಿನ್ನುವವರಿಗೆ ಅನುಕೂಲ ತಾವು ಮಾಡಿಕೊಡಬೇಕು. ದೊಡ್ಡ ಬಳ್ಳಾಪುರದ ಹತ್ತಿರ ಮೆಳ್ಳೆಕೋಟೆ ಸಂತೆ ನಡೆಯುತ್ತದೆ. ಅಲ್ಲಿ ಸುಮಾರು ಎರಡು ಸಾವಿರ ಹಂದಿಗಳು ಖರ್ಚಾಗುತ್ತವೆ. ಇದೂ ಸಹ ಕೆ.ಜಿ. ಒಂದಕ್ಕೆ ೧೪ ರೂಪಾಯಿಗಳ ವರೆಗೆ ಹೋಗಿದೆ. ತಮಗೂ ಗೊತ್ತಿದೆ. ಈ ಮೀನು, ಮತ್ಸ್ಯ ಏನು ಇದೆ ಇದು ಬಹಳ ಶ್ರೇಷ್ಟವಾದದು, ಇದಕ್ಕೆ ಕೊಬ್ಬು ಇರುವುದಿಲ್ಲ. ಬಹಳ ರುಚಿಯಾಗಿರುತ್ತದೆ, ಹೆಣ್ಣುಮಕ್ಕಳಿಗ ಇದರ ಅಡಿಗೆ ಮಾಡುವುದು ಬಹಳ ಸುಲಭ. ಏನಾದರ ಮಾಡಿ ತಾವು ಇಲ್ಲಿಂದ ದೊಡ್ಡಬಳ್ಳಾಪುರಕ್ಕೆ ವಾರಕ್ಕೊಂದು ಸಾರಿಯಾದರೂ ಮೀನಿನ ಸಪ್ಲೈ ಮಾಡುವ ವ್ಯವಸ್ಥೆ ಮಾಡಿದರೆ ಬಹಳ ಉಪಕಾರ ಮಾಡಿದಂತಾಗುತ್ತದೆ. ಮಾನ್ಯ ಲಿಂಗಾರೆಡ್ಡಿಯವರು ಮಂತ್ರಿಗಳಾಗಿದ್ದಾಗ ಅವರು ಬರೀ ಶ್ರೀನಿವಾಸಪುರಕ್ಕೆ ಓಡಾಡಿ ಕುಡಿಯುವ ನೀರು ಇಲ್ಲದಿರುವ ಕಡೆಯಲ್ಲಿ ಮೀನುಗಳನ್ನು ಸಾಕಲು ವ್ಯವಸ್ಥೆ ಮಾಡಿದರು. ನೀವು ಹಾಗೆ ಮಾಡಬೇಡಿ. ಆರು ತಿಂಗಳವರೆಗೆ ಯಾವ ಕೆರೆಯಲ್ಲಿ ನೀರು ಇರುತ್ತದೆಯೋ ಅಂಥ ಕಡೆ ಒಂದು ಕೆ. ಜಿ. ಮೀನಿನ ಮರಿಗಳನು ಬಿಟ್ಟರೆ ಒಳ್ಳೆಯದಾಗುತ್ತದೆ. ನಿಮ್ಮ ಇಲಾಖೆಯಲ್ಲಿರುವ ಅಧಿಕಾರಿಗಳು ಮೇಲಿನವರು ಬಹಳ ಒಳ್ಳೆಯವರು ಇದ್ದಾರೆ ಆದರೆ ಚಿಕ್ಕ ಚಿಕ್ಕವರು ಯಾರು ಇದ್ದಾರೆ ಇವರೇ ಸ್ವಲ್ಪ ಕಡತ ಜಾಸ್ತಿ ಮಾಡುತ್ತಾರೆ. ನೂರು ಮೀನಿನ ಮರಿಗಳನ್ನು ಕೆರೆಗಳಲ್ಲಿ ಬಿಟ್ಟು ಸಾವಿರ ಮರಿಗಳನ್ನು ಬಿಟ್ಟಿದ್ದೇವೆಂದು ಲೆಕ್ಕ ಬರೆದು ಕೊಂಡು ಹೋಗುತ್ತಾರೆ. ದಯಮಾಡಿ ತಾವು ಈ ಕಡೆ ಮನಸ್ಸು ಮಾಡಬೇಕು. ಒಂದೊಂದು ಕಡೆ ಮೀನಿನ ಮರಿಗಳು ಜಾಸ್ತಿಯಾಗಿ ಒಳ್ಳೆಯ ಉತ್ಪಾದನೆಯಾಗುತ್ತದೆ ಇನ್ನು ಕೆಲವು ಕಡೆ ಮೀನುಗಳು ಮೀನಿನ ಮರಿಗಳನ್ನೇ ತಿನ್ನುತ್ತವೆ ಇದರಿಂದಾಗಿ ಕೆರೆಗಳಲ್ಲಿ ಮೀನುಗಳು ಕಡಿಮೆಯಾಗುತ್ತವೆ. ಆದ್ದರಿಂದ ಅದು ಕಡಿಮೆಯಾಗಿದೆ ಎಂದು ಹೇಳುತ್ತೇನೆ ಅದನ್ನು ನೀವು ನಂಬಬೇಕು. ಬರಗಾಲ ದೇಶದಲ್ಲಿ ಇರುವವರು ನಾವು ; ಇಲ್ಲಿ ನದಿಗಳು ಇಲ್ಲ, ಸರೋವರಗಳು ಇಲ್ಲ ; ಕೆರೆಕುಂಟೆಗಳು, ಬಾವಿಗಳು ಇವೆ ; ಅವುಗಳಲ್ಲಿ ಮೀನು ಮರಿಗಳನ್ನು ಬಿಟ್ಟರೆ ನಿಮ್ಮಂತಹವರು ಯಾವಾಗಲಾದರೂ ಬಂದರೆ ಪ್ರೈ ಮಾಡುವುದಕ್ಕೆ ಅನುಕೂಲವಾಗುತ್ತದೆ. ಅದನ್ನು ತಿಂದರೆ ನಿಮ್ಮ ಮನಸ್ಸೂ ಕೂಡ ಸಮಾಧಾನವಾಗಿ ಇರುತ್ತದೆ. ಆದ್ದರಿಂದ ಈ ಬಗ್ಗೆ ವ್ಯವಸ್ಥೆ ಮಾಡಬೇಕು ಎಂದು ಹೇಳುತ್ತೇನೆ. ನಮ್ಮ ಕಬ್ಬನ್ ಪಾರ್ಕ್ ಮತ್ತು ಲಾಲ್‌ಬಾಗ್‌ನಲ್ಲಿ ಕೂಡ ಮೀನುಗಳನ್ನು ಮಾರುತ್ತಾರೆ. ಹಾಗೆಯೇ ಬೇರೆ ಬೇರೆ ಕಡೆಗಳಲ್ಲೆಲ್ಲಾ ಮೀನು ಮಾರಾಟ ಮಾಡುವುದಕ್ಕೆ ಏರ್ಪಾಟು ಮಾಡಿದರೆ ಮೀನು ತಿನ್ನುವ ಜನರು ನಿಮ್ಮನ್ನು ದಿನವೂ ನೆನೆಸಿ ಕೊಳ್ಳುತ್ತಾರೆ. ಮಾನ್ಯ ಅಧ್ಯಕ್ಷರು ಬೆಲ್ ಹೊಡೆದಮೇಲೆ ನಾನು ಮಾತನಾಡುತ್ತಾ ಹೋಗುವುದು ನ್ಯಾಯವಲ್ಲ; ಆದ್ದರಿಂದ ಇಷ್ಟು ಮಾತ್ರ ಹೇಳಿ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಡಿ. ಮಂಚೇಗೌಡ (ಮದ್ದೂರ್). — ಸನ್ಮಾನ್ಯ ಸಭಾಪತಿಯವರೇ, ನಾನು ಈ ಮರಾಮತ್ ಇಲಾಖೆಗೆ ಸಂಬಂಧಪಟ್ಟ ಬೇಡಿಕೆಗಳನ್ನು ಸಮರ್ಥಿಸುತ್ತಾ ಕೆಲವು ವಿಷಯಗಳನ್ನು ಈ ಸಭೆಯ ಮುಂದಿಡಲು ಇಚ್ಛೆಪಡುತ್ತೇನೆ. ಮೊದಲನೆಯದಾಗಿ ಮಾನ್ಯ ದೇವೇಗೌಡರು ಈ ಇಲಾಖೆಯ ಬೇಡಿಕೆಗಳ ಬಗ್ಗೆ ಬಹಳ ಸವಿಸ್ತಾರವಾಗಿ ಮಾತನಾಡಿದ್ದಾರೆ. ಅದರಲ್ಲಿ ಕೆಲವು ವಿಷಯಗಳು ನಿಜವಾಗಿಯೂ ಕೂಡ ನಾವೆಲ್ಲರೂ ಒಪ್ಪತಕ್ಕಂಥ ವಿಷಯವಾಗಿವೆ. ಈ ಕ್ವಾಲಿಟಿ ಕಂಟ್ರೋಲ್ ಬಗ್ಗೆ ಅವರು ಹೇಳಿರತಕ್ಕಂಥ ಮಾತುಗಳು ಏನಿವೆ ಅದನ್ನು ಎಲ್ಲರೂ ಒಪ್ಪಲೇಬೇಕು. ಅವರಾದರೂ ಕೂಡ ಅವರ ಅನುಭವದ ಆಧಾರದ ಮೇಲೆ ಆ ಬಗ್ಗೆ ಅವರ ಅಭಿಪ್ರಾಯವನ್ನು ಈ ಸಭೆಯ ಮುಂದೆ ಇಟ್ಟಿದ್ದಾರೆ. ಸರ್ಕಾರದವರು ಈ ಮೈನ್‌ಟೆನೆನ್ಸ್ ಆಫ್ ರೋಡ್ಸ್ ವಿಚಾರದಲ್ಲಿ ೪ ತರಹದ ಕ್ಲಾಸಿಫಿಕೇಷನ್ಸ್ ಮಾಡಿದ್ದಾರೆ. ನಿಜವಾಗಿಯೂ ಕೂಡ ಒಳ್ಳೆಯ ಉದ್ದೇಶದಿಂದ ಆ ಕ್ಲಾಸಿಫಿಕೇಷನ್ಸ್ ಮಾಡಿದ್ದಾರೆ. ಹಾಗೂ ಅದಕ್ಕೆ ಹಣವನ್ನು ಒದಗಿಸಿದ್ದಾರೆ, ಇದರಲ್ಲಿ ಎಲ್ಲಾ ಕಡೆ ಹಣ ದುರುಪಯೋಗವಾಗುತ್ತಾ ಇದೆಯೆಂದು ಹೇಳುವುದಕ್ಕಾಗುವುದಿಲ್ಲ. ಎಲ್ಲೋ ಕೆಲವು ಕಡೆ ಮಾತ್ರ ಹಣ ದುರುಪಯೋಗವಾಗುತ್ತಾ ಇದೆ. ಬಹಳಷ್ಟು ಕಡೆ ಒಳ್ಳೆಯ ಅಧಿಕಾರಿಗಳು ಇದ್ದಾರೆ, ಅವರು ನಿಷ್ಠೆಯಿಂದ ನಡೆದುಕೊಳ್ಳುತ್ತಾರೆ. ಹಣವನ್ನು ಯಾವ ಉದ್ದೇಶಕ್ಕಾಗಿ ಒದಗಿಸಿದ್ದಾರೋ ಆ ಉದ್ದೇಶಕ್ಕೆ ಅದನ್ನು ಸರಿಯಾದ ರೀತಿಯಲ್ಲಿ ಖರ್ಚು ಮಾಡುತ್ತಿದ್ದಾರೆ. ಈ ಬಗ್ಗೆ ಒಂದು ಉದಾಹರಣೆಯನ್ನು ಕೊಡುವುದಾದರೆ, ನಮ್ಮ ಮಂಡ್ಯ ಡಿವಿಜನ್ ಏನಿದೆ ಇದಕ್ಕೆ ಏನು ಹಣ ಒದಗಿಸಿದ್ದಾರೆ ಅದನ್ನು ರಿಪೇರಿ ವಗೈರೆ ಕೆಲಸಕಾರ್ಯಗಳಿಗೆ ಸರಿಯಾದ ರೀತಿಯಲ್ಲಿ ಖರ್ಚು ಮಾಡಿದ್ದಾರೆ. ಅದಕ್ಕೆ ಒದಗಿಸಿದಂತಹ ಹಣ ವೇಸ್ಟ್ ಆಗಿಲ್ಲ. ಆದರೆ ನಾವು ತಿರುಗಾಡತಕ್ಕಂಥ ವಿಲೇಜ್ ರೋಡ್‌ಗಳು ಏನಿವೆ ಅದಕ್ಕೆ ಒದಗಿಸಿರತಕ್ಕಂಥ ಹಣದಲ್ಲಿ ಸ್ವಲ್ಪ ಪೋಲಾಗುತ್ತಾ ಇದೆ. ಅದನ್ನು ಕಂಡುಹಿಡಿಯುವುದಕ್ಕೆ ಸಾಧ್ಯವಾಗುತ್ತಾ ಇಲ್ಲ. ಇದಕ್ಕೆ ಮಾನ್ಯ ಮಂತ್ರಿಯವರಾಗಲೀ, ಇಲಾಖೆಯ ದೊಡ್ಡ ದೊಡ್ಡ ಅಧಿಕಾರಿಗಳಾಗಲೀ ಜವಾಬ್ದಾರರು ಎಂದು ನಾನು ಹೇಳುವುದಕ್ಕೆ ಸಿದ್ಧವಾಗಿಲ್ಲ. ಅದಕ್ಕಿಲ್ಲಿ ಈ ಹಣವನ್ನು ಉಪಯೋಗಿಸುವಾಗ ಯಾವ್ಯಾವ ರಸ್ತೆಗಳು ದುರಸ್ತಿಯಾಗಿದೆ, ಯಾವ್ಯಾವ ರಸ್ತೆಗಳು ದುರಸ್ತಿಯಾಗಿಲ್ಲ, ಯಾವ್ಯಾವ ಭಾಗದಲ್ಲಿ ಆಗಿದೆ ಮತ್ತು ಯಾವ್ಯಾವ ಭಾಗದಲ್ಲಿ ಆಗಿಲ್ಲ ಎಂಬ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳು ಇನ್ಸ್‌ಪೆಕ್ಟ್ ಮಾಡಿದರೆ ಬಹುಶಃ ಅದಕ್ಕೆ ಏನು ಹಣ ಒದಗಿಸಿದ್ದಾರೆ ಅದೆಲ್ಲಾ ಸರಿಯಾದ ರೀತಿಯಲ್ಲಿ ಖರ್ಚಾಗುತ್ತದೆ. ಮತ್ತು ಆ ರಸ್ತೆಗಳನ್ನು ಒಳ್ಳೆಯ ರೀತಿಯಲ್ಲಿ ಅಭಿವೃದ್ಧಿ ಮಾಡಿದ ಹಾಗೆ ಕೂಡ ಆಗುತ್ತದೆ. ಈ ಬಗ್ಗೆ ಮಾನ್ಯ ದೇವೇಗೌಡರು ಏನೊಂದು ಅಭಿಪ್ರಾಯವನ್ನು ವ್ಯಕ್ತಪಡಿಸಿದರು ಅದು ಸುಳ್ಳಾಗುವುದಿಲ್ಲ, ಅದು ನಿಜವಾಗುತ್ತದೆ. ನಮ್ಮ ರಾಜ್ಯದಲ್ಲಿ ಇವತ್ತಿನ ದಿವಸ ಸುಮಾರು ೬೪,೦೦೦ ಕಿಲೋಮೀಟರ್‌ಗಳಷ್ಟು ಉದ್ದದ ರಸ್ತೆಗಳು ಇವೆ. ಅದರಲ್ಲಿ ಹತ್ತರಲ್ಲಿ ಒಂದು ಭಾಗದಷ್ಟು ರಸ್ತೆಗಳು ನಮ್ಮ ಮಂಡ್ಯ ಜಿಲ್ಲೆಯಲ್ಲೇ ಇದೆ. ಅದಕ್ಕೆ ಕಾರಣಗಳು ಉಂಟು. ೧೯೫೬ರ ವೇಳೆಗೆ ನಮ್ಮ ಮಂಡ್ಯ ಜಿಲ್ಲೆಯಲ್ಲಿ ೪೨೪೫ ಕಿಲೋಮೀಟರ್‌ಗಳಷ್ಟು ರಸ್ತೆ ನಿರ್ಮಾಣವಾಗಿತ್ತು. ಅದು ಒಳ್ಳೆಯ ರೀತಿಯಲ್ಲಿ ದುರಸ್ತಿ ಕೂಡ ಆಗಿತ್ತು, ಅಲ್ಲಿಂದೀಚೆಗೆ ಸುಮಾರು ೨೪ ವರ್ಷಗಳ ಅವಧಿಯನ್ನು ತೆಗೆದುಕೊಂಡರೆ, ಇತ್ತೀಚೆಗೆ ಕೇವಲ ೧೭೨೩ ಕಿಲೋಮೀಟರ್‌ಗಳಷ್ಟು ರಸ್ತೆಯನ್ನು ಮಾಡಿದ್ದಾರೆ. ಆದರೆ ಇವತ್ತಿನ ದಿವಸ ಒಟ್ಟು ೫೯೬೭ ಕಿಲೋಮೀಟರ್‌ಗಳಷ್ಟು ಉದ್ದದ ರಸ್ತೆ ಏನಿದೆ ಅದೆಲ್ಲಾ ಬಹಳ ಚಿಂತಾಜನಕ ಸ್ಥಿತಿಯಲ್ಲಿ ಇದೆ. ಹಿಂದೆ ಅಲ್ಲಿ ಒಂದು ಸ್ಟ್ಯಾಚ್ಯುಟರಿ ಬೋರ್ಡ್ ಕೂಡ ಇತ್ತು. ಮಂಡ್ಯ ಜಿಲ್ಲೆಯ ಒಬ್ಬರು ಎಗ್ಸಿಕ್ಯುಟಿವ್ ಇಂಜಿನಿಯರ್ ಇದ್ದರು, ಒಬ್ಬರು ಅದಕ್ಕೆ ಛೇರ್‌ಮನ್ ಆಗಿದ್ದರು, ಖಾಸಗೀ ಜನರು ಕೂಡ ಸದಸ್ಯರಾಗಿದ್ದರು. ಆ ಕಾಲದಲ್ಲಿ ಬಹುಶಃ ೪ ಸಾವಿರ ಚಿಲ್ಲರೆ ಕಿಲೋಮೀಟರ್‌ಗಳಷ್ಟು ರಸ್ತೆಗಳನ್ನು ಕೆಲವೇ ವರ್ಷಗಳಲ್ಲಿ ನಿರ್ಮಾಣ ಮಾಡಿದರು ಈಗ ಅದರ ಪರಿಸ್ಥಿತಿ ಏನಾಗಿದೆ ಎಂಬುದನ್ನು ತಮ್ಮ ಗಮನಕ್ಕೆ ತಂದರೆ ಬಹುಶಃ ತಾವೆಲ್ಲಾ ಆಶ್ಚರ್ಯ ಪಡುತ್ತೀರಿ. ಈಗ ಷುಗರ್ ಕೇನ್ ಬೆಳೆಯತಕ್ಕಂಥ ಪ್ರದೇಶದಲ್ಲಿ ೬೬೬೭ ಕಿಲೋಮೀಟರ್‌ಗಳಷ್ಟು ರಸ್ತೆ ಇದೆ. ಅದಕ್ಕೆ ಏನು ಹಣ ವೆಚ್ಚ ಮಾಡಿದ್ದಾರೆ ಎಂಬುದನ್ನು ಅವಲೋಕಿಸಿದ್ದೇ ಆದರೆ ತಾವು ಕೂಡ ವ್ಯಥೆ ಪಡುತ್ತೀರಿ. ೧೯೭೫–೭೬ರಲ್ಲಿ ಪಾಂಡವಪುರ ಷುಗರ್ ಫ್ಯಾಕ್ಟರಿ ಏರಿಯಾ ಮತ್ತು ಮಂಡ್ಯ ಷುಗರ್ ಫ್ಯಾಕ್ಟರಿ ಏರಿಯಾ– ಇದೆಲ್ಲಾ ಸೇರಿ ೫ ಲಕ್ಷ ೮೪ ಸಾವಿರ ರೂಪಾಯಿಗಳನ್ನು ಒದಗಿಸಿದ್ದಾರೆ, ಅಂದರೆ ಅದು ಒಟ್ಟು ಖರ್ಚು ಮಾಡಿರತಕ್ಕಂಥ ಹಣವಾಗಿದೆ. ಕಳೆದ ಸಾರಿ ಅಂದರೆ ೧೯೮೧–೮೨ಕ್ಕೆ ತೆಗೆದುಕೊಂಡರೆ ಕೇವಲ ೨ ಲಕ್ಷ ಮಾತ್ರ ಒದಗಿಸಿದ್ದಾರೆ ಹಾಗೂ ಖರ್ಚು ಮಾಡಿದ್ದಾರೆ. ಇದನ್ನು ನೋಡಿದರೆ ರಸ್ತೆಗಳ ಸ್ಥಿತಿ ಯಾವ ರೀತಿ ಆಗಿರಬೇಕು ಎಂಬುದನ್ನು ತಾವು ಊಹಿಸುವುದಕ್ಕೆ ಸಾಧ್ಯವಿದೆ. ನಮ್ಮ ಮಂಡ್ಯ ಡಿವಿಜನ್

ರಸ್ತೆಗಳಿಗೆ ಕಳೆದ ಸಾರಿ ೭೪ ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದಾರೆ. ಅದೇ ರೀತಿಯಾಗಿ ೧೯೮೦–೮೧ರಲ್ಲಿ ೪೧ ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದಾರೆ. ಸಿ ಅಂಡ್ ಡಿ ಗ್ರೂಪ್‌ಗೆ ಸೇರಿದಂತಹ ರಸ್ತೆಗಳಿಗೆ ೭೦-೭೫ ಲಕ್ಷ ಕೊಟ್ಟಿದ್ದಾರೆ. ಅದಕ್ಕಿಂತ ಹೆಚ್ಚು ವಿಸ್ತೀರ್ಣ ಇರತಕ್ಕಂಥ ರಸ್ತೆಗಳಿಗೆ ವಿ.ಸಿ. ಏರಿಯಾದಲ್ಲಿ ೨ ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದಾರೆ. ಇದರಲ್ಲಿ ರಸ್ತೆಗಳನ್ನು ಯಾವ ರೀತಿ ದುರಸ್ತಿ ಮಾಡುವುದಕ್ಕೆ ಸಾಧ್ಯ? ನಮ್ಮ ಮಂಡ್ಯ ಜಿಲ್ಲೆಯಲ್ಲಿ ೩ ಸಕ್ಕರೆ ಕಾರ್ಖಾನೆಗಳು ಇವೆ. ಅಲ್ಲೆಲ್ಲಾ ದೊಡ್ಡ ಪ್ರಮಾಣದಲ್ಲಿ ರಸ್ತೆಗಳು ನಿರ್ಮಾಣವಾಗಿದೆ.

ಈ ರಸ್ತೆಗಳನ್ನು ತಾವು ಒಳ್ಳೆಯ ಪರಿಸ್ಥಿತಿಯಲ್ಲಿಡದೆ ಹೋದರೆ ಬಹುಶಃ ರೈತರ ಸ್ಥಿತಿ ಚಿಂತಾಜನಕವಾಗುತ್ತದೆ. ಇವತ್ತು ರೈತರು ಒಂದು ಗಾಡಿಯನ್ನು ಕೊಳ್ಳಬೇಕಾದರೆ ಆರು ಸಾವಿರ ರೂಪಾಯಿಗಳನ್ನು ಕೊಡಬೇಕು, ಮರದ ಗಾಡಿಯನ್ನು ಕೊಳ್ಳಬೇಕಾದರೆ ಮೂರುವರೆ ಸಾವಿರ ರೂಪಾಯಿಗಳನ್ನು ಕೊಡಬೇಕು, ಎತ್ತುಗಳನ್ನು ಕೊಳ್ಳಲು ನಾಲ್ಕರಿಂದ ಐದು ಸಾವಿರ ರೂಪಾಯಿಗಳನ್ನು ಕೊಡಬೇಕಾಗಿದೆ. ರೈತ ಒಂದು ಎಕರೆಯ ಕಬ್ಬನ್ನು ಬೆಳೆಯಬೇಕಾದರೆ ಸುಮಾರು ಹತ್ತು ಸಾವಿರ ರೂಪಾಯಿಗಳ ಬಂಡವಾಳವನ್ನು ಹೂಡಬೇಕಾಗಿದೆ, ಬೆಳೆದಂಥ ಕಬ್ಬನ್ನು ಕಾರ್ಖಾನೆಗೆ ಸಾಗಿಸಲು ೫೦ ರಿಂದ ೧೦೦ ರೂಪಾಯಿಗಳವರೆಗೆ ಲಂಚ ಕೊಡದೆ ಇದ್ದರೆ ಯಾವ ಲಾರಿಯಾದರೂ ಸಹ ಬರುವುದಿಲ್ಲ. ಆದ್ದರಿಂದ ಈ ರಸ್ತೆಗಳನ್ನು ಮೊದಲು ತಾವು ಸರಿಯಾದ ರೀತಿಯಲ್ಲಿ ರಿಪೇರಿ ಮಾಡಿಸುವ ವ್ಯವಸ್ಥೆಯನ್ನು ಮಾಡಿಸಬೇಕು. ಆಂಧ್ರ ಪ್ರದೇಶದಲ್ಲಿ ಮತ್ತು ತಮಿಳುನಾಡಿನಲ್ಲಿ ಇದರ ಬಗ್ಗೆ ಯಾವ ರೀತಿಯ ಒಂದು ವ್ಯವಸ್ಥೆ ಮಾಡಿದ್ದಾರೆ ಎನ್ನುವುದನ್ನು ತಾವು ಹೋಲಿಸಿ ನೋಡಬೇಕು. ಆಂಧ್ರಪ್ರದೇಶದಲ್ಲಿ ಪರ್ಚೇಸ್ ಟ್ಯಾಕ್ಸ್ ಎಂದು ಏನು ಕಲೆಕ್ಟ್ ಮಾಡುತ್ತಿದ್ದಾರೆ ಅದರ ಅರ್ಧಭಾಗವನ್ನು ಅವರು ಡೆವಲಪ್‌ಮೆಂಟ್ ಕೌನ್ಸಿಲ್‌ಗೆ ಕೊಡುತ್ತಾರೆ. ಜಿಲ್ಲಾ ಪರಿಷತ್ತಿನಲ್ಲಿ ಸಕ್ಕರೆ ಕಾರ್ಖಾನೆಯ ಪತಿಯಿಂದ ಒಬ್ಬ ಪ್ರತಿನಿಧಿ ಇರುತ್ತಾನೆ ಮತ್ತು ಸರ್ಕಾರದಿಂದ ನಾಮಕರಣ ಮಾಡಿದಂಥ ಒಬ್ಬ ಸದಸ್ಯರು ಇರುತ್ತಾರೆ ಇವರು ರಸ್ತೆಗಳ ದುರಸ್ತಿ ಕಾರ್ಯದ ಬಗ್ಗೆ ಹೆಚ್ಚಿನ ನಿಗ ಕೊಟ್ಟು ಕೆಲಸ ಮಾಡಿಸಿಕೊಳ್ಳುತ್ತಾರೆ, ತಮಿಳುನಾಡಿನಲ್ಲಿ ಒಂದು ಟನ್ ಕಬ್ಬಿಗೆ ಐದು ರೂಪಾಯಿಗಳ ಸೆಸ್ಸನ್ನು ಕಲೆಕ್ಟ್ ಮಾಡುತ್ತಾರೆ. ಅದನ್ನು ಅವರು ರಸ್ತೆಯ ನಿರ್ಮಾಣ ಕಾರ್ಯಕ್ಕೇ ಮೀಸಲಾಗಿಡುತ್ತಾರೆ. ಮತ್ತು ರಸ್ತೆಯ ಕಾರ್ಯಗಳು ಸುಲಲಿತವಾಗಿ ನಡೆಯುವಂತೆ ನೋಡಿಕೊಳ್ಳುತ್ತಾರೆ, ನಮ್ಮಲ್ಲಿಯೂ ಸಹ ೧೯೫೪ ರವರೆಗೆ ಇದೇ ಪದ್ಧತಿ ಇತ್ತು, ೧೯೫೪ ರಲ್ಲಿ ಸರ್ಕಾರದವರು ಒಂದು ಕಾನೂನನ್ನು ಮಾಡಿ ಎಲ್ಲಾ ಹಣವನ್ನು ಕನ್‌ಸಾಲಿಡೇಟೆಡ್ ಫಂಡ್‌ಗೆ ಹಾಕುವಂಥ ವ್ಯವಸ್ಥೆ ಮಾಡಿದರು ಈ ಒಂದು ಆರ್ಡರ್ ಅಥವಾ ಪ್ರಯೋಗ ರೈತರ ಈ ಒಂದು ದುಸ್ಥಿತಿಗೆ ಕಾರಣವಾಯಿತು. ಸರ್ಕಾರದವರು ನಮ್ಮ ೬.೮೦ ಪೈಸೆಯನ್ನು ರೈತರಿಗೆ ಒಂದು ಟನ್‌ಗೆ ಇನ್ಸೆಂಟೀವ್ ಪ್ರೈಸ್ ಎಂದು ಪರ್ಚೇಸ್ ಟ್ಯಾಕ್ಸನ್ನು ಕಬ್ಬಿಗೆ ಬಿಲ್ ಕೊಡುವಾಗ ಕೊಡುತ್ತಿದ್ದಾರೆ. ಇದು ಯಾವ ಪ್ರಯೋಜನವನ್ನೂ ರೈತರಿಗೆ ಉಂಟುಮಾಡಲಿಲ್ಲ. ಆದ್ದರಿಂದ ಆಂಧ್ರಪ್ರದೇಶದಲ್ಲಿರುವಂತೆ, ತಮಿಳುನಾಡಿನಲ್ಲಿರುವಂತೆ ಪರ್ಚೇಸ್ ಟ್ಯಾಕ್ಸನ ಅರ್ಧ ಭಾಗವನ್ನು ರಸ್ತೆಗಳಿಗೋಸ್ಕರ ಏನು ಕೊಡುತ್ತಿದ್ದಾರೋ ಅದೇ ರೀತಿಯಲ್ಲಿ ತಾವು ಇಲ್ಲಿಯೂ ಹಣವನ್ನು ಮೀಸಲಾಗಿಟ್ಟು ರೈತರಿಗೆ ಅನುಕೂಲವಾಡುವ ರೀತಿಯಲ್ಲಿ ಕಾನೂನನ್ನು ಮಾಡಬೇಕು ಎಂದು ನಾನು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ. ಮಂಡ್ಯ ಜಿಲ್ಲೆಯಲ್ಲಿ ಕಬ್ಬು ಬೆಳೆಯುತಕ್ಕ ರೈತರ ಸಂಕಷ್ಟ ಇದರಿಂದ ನಿವಾರಣೆ ಯಾಗುತ್ತದೆ. ಇದು ಮಾಡದೇ ಹೋದರೆ ತಾವು ಈ ಸ್ಥಿತಿಯನ್ನು ಮುಂದುವರೆಸಿದರೆ ರೈತರು ಕಬ್ಬನ್ನು ಕಾರ್ಖಾನೆಗಳಿಗೆ ಸರಬರಾಜು ಮಾಡಲಿಕ್ಕಾಗುವುದಿಲ್ಲ. ರೈತರಿಗೆ ಬಹಳ ತೊಂದರೆಯಾಗುತ್ತದೆ. ಇನ್ನೊಂದು ವಿಷಯವನ್ನು ನಾನು ಇಲ್ಲಿ ಪ್ರಸ್ತಾಪ ಮಾಡಬೇಕಾಗಿದೆ. ೧೯೮೧–೮೨ ರಲ್ಲಿ ಮಂಡ್ಯ ಜಿಲ್ಲೆಯಿಂದ ಸಕ್ಕರೆ ಕಾರ್ಖಾನೆಗಳ ಮುಖಾಂತರ ಪರ್ಚೇಸ್ ಟ್ಯಾಕ್ಸ್ ೩ ಕೋಟಿ ೮ ಲಕ್ಷ ರೂಪಾಯಿಗಳ ಆದಾಯ ಸರ್ಕಾರಕ್ಕೆ ಬಂದಿದೆ. ಸೆಂಟ್ರಲ್ ಟ್ಯಾಕ್ಸ್‌ನಿಂದ ೬.೧ ಕೋಟಿ ರೂಪಾಯಿಗಳು, ಜೊತೆಗೆ ಡಿಸ್ಟಿಲರಿಯಿಂದ ೨.೧೫ ಕೋಟಿ ರೂಪಾಯಿಗಳು, ಒಟ್ಟು ೧೫ ಕೋಟಿ ರೂಪಾಯಿಗಳಿಗೂ ಕಡಿಮೆ ಇಲ್ಲದ ಆದಾಯ ನಮ್ಮ ಜಿಲ್ಲೆಯಿಂದ ಸರ್ಕಾರದ ಬೊಕ್ಕಸಕ್ಕೆ ಬಂದಿದೆ. ಇಷ್ಟೊಂದು ಉತ್ಪತ್ತಿ ನಮ್ಮ ಜಿಲ್ಲೆಯಿಂದ ಇರುವಾಗ ಕಬ್ಬು ಬೆಳೆಯುತಕ್ಕ ರೈತರಿಗೆ ಅನುಕೂಲ ಮಾಡಿ ಕೊಡತಕ್ಕದ್ದು ನಮ್ಮೆಲ್ಲರ ಕರ್ತವ್ಯ ಎಂದು ನಾನು ಹೇಳಬೇಕಾಗಿದೆ. ಮಾನ್ಯ ಮಂತ್ರಿಗಳು ಇದಕ್ಕೆ ಹಿಂದುಮುಂದು ನೋಡದೆ ಇದಕ್ಕೋಸ್ಕರ ಒಂದು ಕಮಿಟಿ ಮಾಡಿ, ಅದರಲ್ಲಿ ಸರ್ಕಾರದ ಸದಸ್ಯರೊಬ್ಬರನ್ನು ನಾಮಕರಣ ಮಾಡಿ ಆ ಡಿವಿಷನ್ನಿನ ಎಕ್ಸಿಕ್ಯೂಟೀವ್ ಇಂಜಿನಿಯರ್ ಮತ್ತು ವಿ.ಸಿ. ಇಂಜನಿಯರ್ ಮತ್ತು ಸಕ್ಕರೆ ಕಾರ್ಖಾನೆಯ ಪ್ರತಿನಿಧಿಯೊಬ್ಬರನ್ನು ಸೇರಿಸಿ ($\frac{1}{2}$ ಅರ್ಧ) ಭಾಗ ಹಣವನ್ನು ಇದಕ್ಕೆ ಕೊಟ್ಟು

ರಸ್ತೆಗಳ ಕಾರ್ಯವನ್ನು ಸರಿಯಾಗಿ ನೋಡಿಕೊಳ್ಳುವ ವ್ಯವಸ್ಥೆ ಮಾಡಬೇಕು ಎಂದು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

ಇದೇ ಸಂದರ್ಭದಲ್ಲಿ ಬೆಂಗಳೂರು–ಮೈಸೂರು ರಸ್ತೆಯ ಬಗ್ಗೆ ಒಂದೆರಡು ಮಾತುಗಳನ್ನು ನಾನು ಹೇಳಬೇಕಾಗಿದೆ. ಪ್ರತಿನಿತ್ಯವೂ ಈ ರಸ್ತೆಯಲ್ಲಿ ಒಂದೆರಡು ಸಾವು ಸಂಭವಿಸುತ್ತಿರುತ್ತವೆ. ಅನೇಕ ವರ್ಷಗಳಿಂದ ಇದರ ಬಗ್ಗೆ ಸರ್ಕಾರದ ಗಮನಕ್ಕೆ ನಾವು ತಂದಿದ್ದರೂ ಏನೊಂದೂ ಕಾರ್ಯಕ್ರಮ ತೆಗೆದು ಕೊಂಡಂತೆ ಕಾಣಲಿಲ್ಲ. ಈ ರೋಡನ್ನು ತಾವು ಡಬ್ಬಲ್ ರೋಡನ್ನಾಗಿ ಮಾಡಿದ್ದರೆ ಸಂಭವಿಸತಕ್ಕ ಸಾವುಗಳನ್ನು ನಿಲ್ಲಿಸಬಹುದು ಎಂದು ನಾನು ಹೇಳುತ್ತೇನೆ. ಬಹುಶಃ ತಮಿಳುನಾಡಿನ ಈ ರಸ್ತೆಯ ಮೂಲಕ ನಾವು ಹೋಗಬೇಕು, ಕೇರಳಕ್ಕೂ ಈ ರಸ್ತೆಯ ಮೂಲಕವೇ ಹೋಗಬೇಕು. ಇದು ಮುಖ್ಯವಾದ ರಸ್ತೆಯಾಗಿದೆ. ಈ ರಸ್ತೆಯನ್ನು ತಾವು ಅಗಲ ಮಾಡದಿದ್ದರೆ ಮತ್ತು ಇರತಕ್ಕ ಕರ್ವ್ಸನ್ನು ಕಡಿಮೆ ಮಾಡದಿದ್ದರೆ ಈ ರೀತಿಯ ಸಾವು ನೋವುಗಳು ಸಂಭವಿಸುತ್ತಲೇ ಇರುತ್ತವೆ. ಈ ರಸ್ತೆಯಲ್ಲಿ ಟ್ರಾಫಿಕ್ ಬಹಳ ಜಾಸ್ತಿ ಇದೆ. ಆದ್ದರಿಂದ ಸರ್ಕಾರದವರು ಇದಕ್ಕೇನಾದರೂ ಪರಿಹಾರವನ್ನು ಕಂಡು ಹಿಡಿಯದಿದ್ದರೆ ಬಹುಶಃ ಜನರಿಗೆ ಬಹಳ ತೊಂದರೆಯಾಗುತ್ತದೆ.

ಮತ್ತೊಂದು ವಿಷಯ ಮದ್ದೂರು ಬಳಿ ಶಿಂಷಾ ನದಿಗೆ ಕಟ್ಟಿರತಕ್ಕ ಸೇತುವೆ ಅನೇಕ ವರ್ಷಗಳ ಹಿಂದೆ ನಿರ್ಮಾಣವಾಗಿ ಅದು ಈಗ ಬಹಳ ಅಪಾಯದ ಸ್ಥಿತಿಯಲ್ಲಿದೆ. ಸೇತುವೆ ಹೋದಲ್ಲಿ ನದಿಯಲ್ಲಿ ಪ್ರವಾಹ ಬಂದಾಗ ಎಲ್ಲಾ ಸಂಪರ್ಕಗಳು ಕಡಿದು ಹೋಗುತ್ತವೆ. ಇದರ ಬಗ್ಗೆ ರಾಜ್ಯ ಸರ್ಕಾರದವರು ಕೇಂದ್ರ ಸರ್ಕಾರಕ್ಕೆ ಬರೆದರೂ ಸಹ ಇನ್ನೂ ಪ್ರಯೋಜನವಾಗಿಲ್ಲ, ಹೇಗಾದರೂ ಮಾಡಿ ಇವರಿಂದ ಹಣ ಪಡೆದು ಸೇತುವೆಯನ್ನು ನಿರ್ಮಾಣ ಮಾಡಬೇಕು.

ಕೆಲವು ಕೆಲಸಗಳು ನಮ್ಮ ಕ್ಷೇತ್ರದಲ್ಲಿ ೭೯–೮೦ರ ಬಡ್ಜೆಟ್ಟಿನಲ್ಲಿದ್ದು ಮಾನ್ಯ ಮಂತ್ರಿಗಳು ಅವುಗಳನು ೮೨–೮೩ರಲ್ಲಿ ತೆಗೆದುಕೊಳ್ಳಬೇಕು ಎಂದು ಆರ್ಡರ್ ಮಾಡಿದರೂ ಶಿಂಶಾ ಸೇತುವೆ, ಕನಿಹಳ್ಳ ಸೇತುವೆ ಕೆಲಸಗಳು ನಡೆದೇ ಇಲ್ಲ ೮೨–೮೩ರ ಬಡ್ಜೆಟ್ಟಿನಲ್ಲಿ ಈ ಕೆಲಸಗಳು ಇಲ್ಲವೇ ಇಲ್ಲ. ಎಸ್ಟಿಮೇಟ್ ಆಗಿ ಕೆಲಸಗಳನ್ನು ತೆಗೆದುಕೊಳ್ಳಿ ಎಂದು ಮಂತ್ರಿಗಳು ಹುಕುಂ ಕೊಟ್ಟಿದ್ದರೂ ಸಹ ೮೨–೮೩ರ ಬಡ್ಜೆಟ್ಟಿನಲ್ಲಿ ಇವು ಹೇಗೆ ಮಾಯವಾದವೋ ತಿಳಿಯದಾಗಿದೆ. ಈ ರೀತಿಯಾದರೆ ಜನಗಳಿಗೆ ಬಹಳ ತೊಂದರೆಯಾಗುತ್ತದೆ. ೧೦ ವರ್ಷಗಳ ಹಿಂದೆ ಬಡ್ಜೆಟ್ಟಿನಲ್ಲಿ ಸೇರಿದಂಥ ಕೆಲಸಗಳನ್ನು ಸರ್ಕಾರದವರು ತೆಗೆದುಕೊಳ್ಳದೇ ಹೋದರೆ ಇದು ಸರ್ಕಾರದ ತಪ್ಪು ಎಂದು ನಾನು ಹೇಳಬೇಕಾಗಿದೆ.

ರೀ ಆರ್ಗನೈಸೇಷನ್ ಆಫ್ ಸಬ್ ಡಿವಿಷನ್ಸ್ ಬಗ್ಗೆ ಮಾನ್ಯ ದೇವೇಗೌಡರೂ ಹೇಳಿದ್ದಾರೆ. ಮದ್ದೂರಿನ ಬಹುಭಾಗದ ಕೆಲಸ ಕೆರಗೋಡು ಸಬ್ ಡಿವಿಷನ್‌ಗೆ ಸೇರಿದೆ. ಇದನ್ನು ಕೊಪ್ಪ ಬೆಸಗರಹಳ್ಳಿಗೆ ಷಿಫ್ಟ್ ಮಾಡಿ ಎಲ್ಲಾ ಜನಗಳು ನೇರವಾಗಿ ಹೋಗಿ ತಮ್ಮ ಕಷ್ಟ ಸುಖಗಳನ್ನು ಹೇಳಿಕೊಳ್ಳುವ ಹಾಗೆ ಮಾಡಬೇಕು. ಇಲ್ಲದೇ ಹೋದರೆ ಅವರು ಸುಮಾರು ೨೫ ಮೈಲಿ ದೂರ ಹೋಗಬೇಕಾಗುತ್ತದೆ. ತಾವು ಈ ಕೆಲಸ ಮಾಡಿದರೆ ಬಡವರಿಗೆ ರೈತರಿಗೆ ಅನುಕೂಲವಾಗುತ್ತದೆ. ಇನ್ನೊಂದು ವಿಚಾರವನ್ನು ನಾನು ಇಲ್ಲಿ ಹೇಳಬೇಕಾಗಿದೆ. ತಾವು ಇಂಜಿನಿಯರ್‌ಗಳನ್ನು ಪೋಸ್ಟ್ ಮಾಡುವಾಗ ಸ್ಥಳೀಯರನ್ನು ಅವರ ಜಿಲ್ಲೆಯಲ್ಲಿ ಪೋಸ್ಟ್ ಮಾಡಬಾರದು. ಏಕೆಂದರೆ ಇದು ಒಳ್ಳೆಯ ಸಂಪ್ರದಾಯವಾಗುವುದಿಲ್ಲ, ಅನೇಕ ರೀತಿಯಲ್ಲಿ ಜನರಿಗೆ ತೊಂದರೆಯಾಗುತ್ತದೆಯೇ ವಿನಹ ಅನುಕೂಲವಾಗುವುದಿಲ್ಲ. ನಮಗೂ ಬಿಕ್ಕಟ್ಟು ಸ್ಥಳೀಯರನ್ನೇ ಹಾಕಿದರೆ ಇವರು ದುಡ್ಡನ್ನು ಕೊಳ್ಳೆ ಹೊಡೆಯುವುದಲ್ಲದೆ ಜನಗಳಿಗೂ ತೊಂದರೆ ಮಾಡುತ್ತಾರೆ. ಈ ದೃಷ್ಟಿಯಿಂದ ಬೇರೆ ತಾಲ್ಲೂಕಿನವರನ್ನು, ಬೇರೆ ಜಿಲ್ಲೆಯವರನ್ನು ಬೇರೆ ಬೇರೆ ತಾಲ್ಲೂಕಿಗೆ ಪೋಸ್ಟ್ ಮಾಡಿದರೆ ಅಲ್ಲಿಯ ಕೆಲಸ ಕಾರ್ಯಗಳು ಸರಿಯಾಗಿ ನಡೆಯುತ್ತವೆ. ಇದರ ಬಗ್ಗೆ ತಾವು ಒಂದು ಸುತ್ತೋಲೆಯನ್ನು ಹೊರಡಿಸಿದರೂ ಚಿಂತೆಯಿಲ್ಲ, ಇದನ್ನು ತಪ್ಪಿಸಬೇಕೆಂದು ನಾನು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

ಸರ್ಕಾರದವರು ರಸ್ತೆಗಳನ್ನು ಬಹಳ ಕಡೆಯಲ್ಲಿ ಮಾಡಿದ್ದಾರೆ. ಐಸಿಆರ್‌ಸಿ ರಸ್ತೆ ವಿಲೇಜ್ ರಸ್ತೆ ಗಳನ್ನು ಕೂಡ ಮಾಡಿದ್ದಾರೆ. ಆದರೆ ದುರಸ್ಥಿ ಕಾರ್ಯ ಮಾತ್ರ ಸ್ಥಗಿತವಾಗಿದೆ. ನಮ್ಮ ವಿಸಿ ಏರಿಯಾ ದಲ್ಲಿ ಕೆಲವು ರಸ್ತೆಗಳನ್ನು ಅನೇಕ ವರ್ಷಗಳ ಹಿಂದೆ ಮಾಡಿದ್ದಾರೆ, ರಿಪೇರಿ ಇಲ್ಲದೆ ಕಾರುಗಳಾಗಲೀ, ಗಾಡಿ ಗಳಾಗಲೀ ಓಡಾಡುವಂತಿಲ್ಲ. ಎಲ್ಲಾ ರಸ್ತೆಗಳು ನಮ್ಮ ಏರಿಯಾದಲ್ಲಿ ರಿಪೇರಿಯಿಲ್ಲದೆ ಕೆಟ್ಟುಹೋಗಿವೆ.

ನಮ್ಮ ಜಿಲ್ಲೆಯಲ್ಲಿ ೩ ಸಕ್ಕರೆ ಕಾರ್ಖಾನೆಗಳು ಇದ್ದು ಹೆಚ್ಚಿನ ಆದಾಯ ಇವುಗಳಿಂದ ಸರ್ಕಾರಕ್ಕೆ ಬರುತ್ತಿದೆ. ಸಕ್ಕರೆ ಕಾರ್ಖಾನೆಗಳಿರುವ ರಾಜ್ಯಗಳಲ್ಲಿ ಇದು ಎರಡನೆಯದು. ಇಲ್ಲಿ ಪ್ರಯಾಣದ ಒತ್ತಡ ಜಾಸ್ತಿಯಾಗಿದೆ. ಈ ಒತ್ತಡವನ್ನು ಕಡಿಮೆ ಮಾಡಬೇಕಾದರೆ ಸುಸಜ್ಜಿತವಾದ ರಸ್ತೆಗಳು ಆಗಬೇಕು. ಇರುವ ರಸ್ತೆಗಳಿಗೆ ದುರಸ್ತಿಕಾರ್ಯ, ಮತ್ತು ಒಳ್ಳೆಯ ರಸ್ತೆಗಳನ್ನು ಮಾಡುವ ಕಡೆಗೆ ಸರ್ಕಾರದವರು ಗಮನ ಕೊಡಬೇಕು. ಇದಕ್ಕೆ ಹಿಂದೆ ಸರ್ಕಾರದವರು ಪರ್ಚೇಸ್ ಟ್ಯಾಕ್ಸ್ ಏನು ಇತ್ತು ಅದರಲ್ಲಿ ಇಂತಿಷ್ಟು ಭಾಗವನ್ನು ರಸ್ತೆಗಳಿಗೋಸ್ಕರ ಉಪಯೋಗ ಮಾಡಿ ಸರಿಯಾದ ರಸ್ತೆಗಳನ್ನು ಮಾಡಿಸಬೇಕು ಎಂದು ಹೇಳಿ, ಅಧ್ಯಕ್ಷರು ಇಷ್ಟು ಮಾತನಾಡಲಿಕ್ಕೆ ಅವಕಾಶ ಕೊಟ್ಟಿದ್ದಕ್ಕಾಗಿ ವಂದಿಸಿ ಮತ್ತು ಮಂರವಂತ ಇಲಾಖೆಯ ಬೇಡಿಕೆಗಳಿಗೆ ನನ್ನ ಬೆಂಬಲವನ್ನು ಸೂಚಿಸಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

† ಶ್ರೀಮತಿ ಅನಸೂಯ ಗಜಾನನ ಶರ್ಮಾ (ಅಂಕೋಲ).—ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಲೋಕೋಪಯೋಗಿ ಸಚಿವರು ನಮ್ಮ ಜಿಲ್ಲೆಯ ಉಸ್ತುವಾರಿ ಸಚಿವರೂ ಕೂಡ ಆಗಿದ್ದಾರೆ. ಅವರು ಮಲೆನಾಡಿನವರೇ ಆಗಿದ್ದಾರೆ. ಆದರೂ ಪಠಣ, ಮನನ, ನಿಧಿಧ್ಯಾಸ, ಶ್ರವಣ ಅಂತ ಮೇಲೆಮೇಲೆ ನಮ್ಮ ತೊಂದರೆಗಳನ್ನು ಅವರ ಕಿವಿಮೇಲೆ ಹಾಕುತ್ತಿದ್ದರೆ ಅವುಗಳು ಪರಿಹಾರವಾಗಬಹುದು ಎಂಬ ದೃಷ್ಟಿಯಿಂದ ನಾಲ್ಕು ಮಾತುಗಳನ್ನು ಹೇಳಬಯಸುತ್ತೇನೆ.

ನಮ್ಮ ಜಿಲ್ಲೆ ಮಲೆನಾಡು, ಸ್ವಾತಂತ್ರ್ಯ ಬಂದು ಇಷ್ಟು ವರ್ಷಗಳಾದರೂ ಸಹಿತ ನಮ್ಮ ಜಿಲ್ಲೆಯಲ್ಲಿ ಮಳೆಗಾಲ ಬಂತೂ ಅಂದರೆ ಪರಿಸ್ಥಿತಿ ಯಾವ ರೀತಿಯಲ್ಲಿ ಇರುತ್ತದೆ ಎನ್ನುವುದನ್ನು ಸ್ವಲ್ಪದರಲ್ಲಿ ಹೇಳುವುದಕ್ಕೆ ಬಯಸಿದ್ದೇನೆ. ಈಗ ಈ ವರ್ಷ ನಮ್ಮ ಜಿಲ್ಲೆಯಲ್ಲಿ ಎಷ್ಟು ಮಳೆ ಆಗಬೇಕೋ ಅಷ್ಟು ಮಳೆ ಸಕಾಲದಲ್ಲಿ ಆಗಲಿಲ್ಲ. ಆದರೂ ಮಳೆಗಾಲದಲ್ಲಿ ಎಂತಹ ಪರಿಸ್ಥಿತಿ ಉಂಟಾಗಿ ತೊಂದರೆಗಳು ಹೇಗೆ ಬರುತ್ತವೆ ಎಂದರೆ ಮನುಷ್ಯನ್ನು ತಲೆಯ ಮೇಲೆ ಸಾಮಾನುಗಳನ್ನು ಹೊತ್ತುಕೊಂಡು, ರೋಗಿಗಳನ್ನು ತಲೆಮೇಲೆ ಹೊತ್ತುಕೊಂಡು ಕಟ್ಟಿಗೆ ಸಂಕದಮೇಲೆ ಮನುಷ್ಯ ಹೋಗುತ್ತಾನೆ. ಆದರೆ ಎಮ್ಮೆ, ಆಕಳು ಮೊದಲಾದ ಪ್ರಾಣಿಗಳನ್ನು ಹೊಳೆ ದಾಟಸಬೇಕಾಗಿದ್ದರೆ ಪ್ರಾಣಿಗಳ ಕುತ್ತಿಗೆಗೆ ದೊಡ್ಡ ಬಳ್ಳಿ ಕಟ್ಟಿಕೊಂಡು ಮನುಷ್ಯ ಮುಂದೆ ಹೋಗಬೇಕು, ಕುತ್ತಿಗೆಗೆ ಬಳ್ಳಿ ಕಟ್ಟಿಸಿಕೊಂಡ ಪ್ರಾಣಿಗಳು ನದಿಯೊಳಗೆ ಈಜಾಡಿ ನೀರನ್ನು ದಾಟಿ ಬರಬೇಕು, ಇಂತಹ ಒಂದು ಪರಿಸ್ಥಿತಿ ನಮ್ಮ ಜಿಲ್ಲೆಯಲ್ಲಿದೆ.

ಈಗ ಒಂದು ಪ್ರೈವೇಟ್ ಮಲೆನಾಡಿಗಾಗಿ ಒಂದು ಸಮಿತಿಯನ್ನು ಮಾಡಬೇಕೆಂದು ಬರುತ್ತಿದೆ. ನಿಜವಾಗಿಯೂ ಇಂತಹ ಒಂದು ಸಮಿತಿ ಆಗುವುದು ಅತ್ಯಗತ್ಯವಾಗಿದೆ. ಸ್ವಾತಂತ್ರ್ಯ ಬಂದು ಇಷ್ಟು ವರ್ಷಗಳಾದರೂ ನಮ್ಮ ಜಿಲ್ಲೆಯಲ್ಲಿ ಹಳ್ಳಿಗಳಿಗೆ ಸರ್ವಋತು ರಸ್ತೆಗಳಿಲ್ಲ. ವಾಹನ ಸಂಪರ್ಕ ವ್ಯವಸ್ಥೆಗಳಿಲ್ಲ. ಮೇಲಾಗಿ ಮಳೆಗಾಲ ಬಂತೆಂದರೆ ಅವರಿಗೆ ಹೊರಜಗತ್ತಿನ ಸಂಪರ್ಕ ಕಡಿದುಹೋಗುವಂತಹ ಪರಿಸ್ಥಿತಿ ಇದೆ. ರಸ್ತೆ ಮತ್ತು ಕಾಲುಸಂಕಗಳು ಮತ್ತು ಸೇತುವೆಗಳು ಆಗಬೇಕಾಗಿದೆ. ಅಂಕೋಲಾದಲ್ಲಿ ಗಂಗಾವಳಿ ನದಿ ಹರಿಯುತ್ತದೆ. ಆದರಿಂದಾಗಿ ದೊಡ್ಡದೊಡ್ಡ ಸೇತುವೆಗಳು ಆಗುವುದು ಅಗತ್ಯ ಇದೆ. ನಮ್ಮ ರಾಜ್ಯ ಸರ್ಕಾರದಿಂದ ಈ ಸೇತುವೆಗಳನ್ನು ಮಾಡಲಿಕ್ಕೆ ಆಗುತ್ತದೆಯೋ ಇಲ್ಲವೋ ಕೇಂದ್ರ ಸರ್ಕಾರವನ್ನಾದರೂ ಕೇಳಿಕೊಂಡು ಗಂಗಾವಳಿ ನದಿಗೆ ರಾಮನಗುಳ್ಳದ ಹತ್ತಿರ ಒಂದು ಸೇತುವೆ, ಮಂಜುಗಣಿ ಹತ್ತಿರ ಒಂದು ಸೇತುವೆ ಆಗುವಂತೆ ಮಾಡಬೇಕಾದದು ಅತ್ತಿ ಅಗತ್ಯವಾಗಿದೆ. ಹಡಗು ಎನ್ನುವುದು ಗಂಗಾವಳಿ ಹತ್ತಿರ ಇರತಕ್ಕಂಥ ಒಂದು ಊರು. ಅಲ್ಲಿ ನದಿ ಊರನ್ನು ಹಲವಾರು ವರ್ಷಗಳಿಂದ ಕೊರೆದು ಕೊರೆದು ಇವತ್ತು ಐವತ್ತು ಎಕರೆ ಜಮೀನು ನೀರ ಪಾಲಾಗಿದೆ. ಉಪ್ಪುನೀರು ಗದ್ದೆಯೊಳಗೆ ಹೋಗಿ ರೈತರ ಜಮೀನು ಹಾಳಾಗಿ ಎಷ್ಟೋ ಜನ ರೈತರು ಊರು ಬಿಟ್ಟು ಹೋಗುವ ಪ್ರಸಂಗ ಬಂದಿದೆ. ಅನೇಕರು ವಲಸೆ ಹೋಗುತ್ತಿದ್ದಾರೆ ಮತ್ತು ಅನೇಕರು ಈಗಾಗಲೇ ವಲಸೆ ಹೋಗಿದ್ದಾರೆ. ಹೀಗಿರುವಾಗ ಉಪ್ಪು ನೀರು ಗದ್ದೆಗೆ ಬರದಂತೆ ಗೋಡೆ ಕಟ್ಟಿಕೊಡುವಂತಹ ಒಂದು ಮುಖ್ಯವಾದ ಕೆಲಸ ಆಗಬೇಕಾಗಿದೆ, ನಮ್ಮ ಜಿಲ್ಲೆಯಲ್ಲಿ ದೊಡ್ಡ ದೊಡ್ಡ ಯೋಜನೆಗಳು ಬಂದು ಕಾಡನ್ನು ಕಡಿದು ಮಳೆ ಸಕಾಲದಲ್ಲಿ ಬರುವುದು ಅನಿಶ್ಚಿತವಾದೆ, ಅದರಿಂದಾಗಿ ಬಡ ರೈತರಿಗೆ ತುಂಬಾ ಕಷ್ಟವಾಗಿದೆ. ಬಿತ್ತಿದ ಬೀಜಗಳು ಸಣ್ಣ ಸಣ್ಣ ಸಸಿಗಳಾಗಿದ್ದು ಮಳೆ ಬಾರದೆ ಕೆಂಪಾಗಿ ಹಾಳಾಗಿವೆ. ಚಿಕ್ಕ ಹಾಗೂ ಮಧ್ಯಮ ನೀರಾವರಿ ಯೋಜನೆಗಳನ್ನು ಮಾಡಿಕೊಡುವುದು ಅತ್ಯಗತ್ಯವಾಗಿದೆ. ಮಳೆಯನ್ನು ಅವಲಂಬಿಸಿ ಕೃಷಿ ಜನರು ವ್ಯವಸಾಯದ ದಂಧೆ ಮಾಡುವಂಥ ಜಿಲ್ಲೆ ನಮ್ಮದು, ಆದ್ದರಿಂದ ಮಳೆಯನ್ನೇ ಅವಲಂಬಿಸಿ ಬೆಳೆ ಬೆಳೆಯುವುದಕ್ಕೆ ಕಷ್ಟವಾಗುತ್ತದೆ. ನೀರಾವರಿ ಬಗ್ಗೆ ವಿಶೇಷವಾದಂತಹ

ಯಾವುದಾದರು ಒಂದು ಯೋಜನೆಯನ್ನು ನಮ್ಮ ಜಿಲ್ಲೆಯಲ್ಲಿ ತರಬೇಕಾಗಿದೆ. ಅದರಲ್ಲೂ ಬಡಜನರು ಹೆಚ್ಚಾಗಿರತಕ್ಕಂಥ ಅಂಕೋಲಾ ಕ್ಷೇತ್ರಕ್ಕೆ ಮೊದಲ ಪ್ರಾಶಸ್ತ್ಯ ಸಿಗಬೇಕು. ಇನ್ನು ನಮ್ಮ ರಾಜ್ಯದ ಹೈವೇ ಅದು ಕೂಡ ತೀರಾ ಕೆಟ್ಟುಹೋಗಿದೆ. ನಾನು ಅಸೆಂಬ್ಲಿಯಲ್ಲಿ ಒಂದು ಪ್ರಶ್ನೆಯನ್ನು ಕೂಡ ಹಾಕಿದ್ದೇನೆ. ಬಾಳೆಗುಳಿ, ಕತ್ರಿಯಿಂದ ಎಲ್ಲೂ ಮಾರದವರೆಗೆ ರಸ್ತೆ ಪೂರ್ಣ ಹಾಳಾಗಿದೆ ವಾಹನ ಸಂಚಾರಕ್ಕೆ ಕಷ್ಟವಾಗಿದೆ ಆ ರಸ್ತೆಯನ್ನು ಕೂಡ ಬೇಗ ರಿಪೇರಿ ಮಾಡಬೇಕು. ರಿಪೇರಿ ಎಂದರೆ ಸರಿಯಾದ ರಸ್ತೆಯೇ ಆಗಬೇಕು.

ಇನ್ನು ಅಂಕೋಲಾದಲ್ಲಿ ಐ ಬಿ. ಮಂಜೂರಾಗಿದ್ದರೂ ಕೂಡ ಕೆಲಸ ಮಾತ್ರ ಇನ್ನೂ ಚಾಲೂ ಆಗಿಲ್ಲ. ಅಂಕೋಲಾದಲ್ಲಿ ಉಳಿದುಕೊಳ್ಳುವುದಕ್ಕೆ ಬೇರೆ ಒಳ್ಳೆಯ ಹೋಟೇಲುಗಳು ಕೂಡ ಇಲ್ಲ. ಜನರಿಗೆ ಇದರಿಂದ ತುಂಬಾ ತೊಂದರೆಯಾಗಿದೆ. ಅಂಕೋಲಾದಲ್ಲಿ ಕೋರ್ಟು ಇದೆ. ಯಲ್ಲಾಪುರದಲ್ಲಿ ಕೋರ್ಟು ಇದೆ. ಆದರೆ ಸ್ವಂತ ಕಟ್ಟಡ ಇಲ್ಲ. ಕಟ್ಟಡ ಆಗುವುದು ಅತೀ ಅವಶ್ಯಕವಿದೆ. ಯಲ್ಲಾಪುರದಲ್ಲಿ ಕಛೇರಿ ಮುರಿದುಬೀಳುವ ಸ್ಥಿತಿಯಲ್ಲಿದೆ. ಅಲ್ಲಿ ಕಚೇರಿ ಕಟ್ಟಡ ಆಗುವುದು ಅಗತ್ಯವಾಗಿದೆ. ಅಂಕೋಲಾ ದಲ್ಲಿ ಒಂದು ವೈಶಿಷ್ಟ್ಯ ಎಂದರೆ ಉಪ್ಪು ನೀರು ಗದ್ದೆಗೆ ಬಂದು ರೈತರ ಬೆಳೆ ಹಾಳಾಗುವುದು. ಇದೊಂದು ದೊಡ್ಡ ಸಮಸ್ಯೆಯಾಗಿವೆ ಬೆಳಂಬಾರ್, ಹಾರವಾಡ, ಕೇಣಿಗಳಲ್ಲಿ ಈ ಸೀಮಿನ ಯೋಜನೆಯ ಕೆಲಸ ತೀವ್ರಗತಿಯಿಂದ ಆಗಲೇ ಬೇಕಾಗಿದೆ.

ಇನ್ನು ಮೀನುಗಾರಿಕೆ ಬಗ್ಗೆ ಒಂದೆರಡು ಮಾತುಗಳನ್ನು ಹೇಳಬೇಕಾಗಿದೆ. ಅಂಕೋಲಾ ತಾಲೂಕಿನ ಕೇಣಿಯಲ್ಲಿ, ಅದು ಮೀನುಗಾರಿಕೆಗೆ ಒಳ್ಳೆಯ ಬಂದರಾಗಿದ್ದರೂ ಕೂಡ ಶಿಲ್ಟು ತುಂಬಿ, ಸಮುದ್ರಗಳಿಂದ ಬರತಕ್ಕಂಥ ಹಡಗುಗಳು ಮುಂದಕೆ ಬರುವುದಕ್ಕೆ ಆಗುವುದಿಲ್ಲ. ಅಲ್ಲಿ ಶಿಲ್ಟು ತೆಗೆಯುವುದಕ್ಕೆ ಈಗಾಗಲೇ ಅರ್ಜಿಯನ್ನು ಕೂಡ ಕೊಟ್ಟಿದ್ದೇನೆ. ಆದರೆ ಆ ಕೆಲಸ ಮಾತ್ರ ಇದುವರೆಗೂ ಆಗಿಲ್ಲ. ಅಲ್ಲಿ ಕೆಸರು, ಹೂಳು ತುಂಬಿರುವುದನ್ನು ತೆಗೆದು ಮೀನುಗಾರರಿಗೆ ಒಳ್ಳೆಯ ಬಂದರನ್ನಾಗಿ ಆದಷ್ಟು ಬೇಗ ಮಾಡಿಕೊಡಬೇಕೆಂದು ಅಧ್ಯಕ್ಷರ ಮುಖಾಂತರ ನಾನು ಕೇಳಿಕೊಳ್ಳುತ್ತೇನೆ. ಹಾರವಾಡದಲ್ಲಿ ಕೂಡ ಇದೇ ರೀತಿಯಲ್ಲಿ ತೊಂದರೆಯಾಗಿದೆ. ಇವೆಲ್ಲವನ್ನೂ ಆದಷ್ಟು ಬೇಗ ಮಾಡಿಕೊಟ್ಟರೇನೇ ಮೀನು ಗಾರರಿಗೆ ಅನುಕೂಲವಾಗುತ್ತದೆ. ಮತ್ತೊಂದು ವಿಚಾರ ಹೇಳಬೇಕೆಂದರೆ ಅಂಕೋಲದಲ್ಲಿ ಹಾರವಾಡ ದಲ್ಲಿ ಒಬ್ಬ ಯಾರ್ಡ್ ಆಫೀಸರ್ ಇದ್ದಾರೆ. ಅವರಿಂದಾಗಿ ಅಲ್ಲಿನ ಮೀನುಗಾರರಿಗೆ ತುಂಬಾ ತೊಂದರೆ ಯಾಗಿದೆ. ಆದ್ದರಿಂದ ದಯಮಾಡಿ ಅವರನ್ನು ಅಲ್ಲಿಂದ ಆದಷ್ಟು ಬೇಗನೆ ವರ್ಗ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಈ ಬಗ್ಗೆ ನಾನು ಅರ್ಜಿಯನ್ನು ಕೂಡ ಕೊಟ್ಟಿದ್ದೇನೆ. ಮಾನ್ಯ ಪಿ.ಡಬ್ಲ್ಯು.ಡಿ. ಸಚಿವರು ನಮ್ಮ ಜಿಲ್ಲೆಯವರೇ ಆಗಿದ್ದು ನಮ್ಮ ಜಿಲ್ಲೆಯ ಸಮಸ್ಯೆಗಳು ಹೆಚ್ಚಿನದಾಗಿ ಅವರಿಗೆ ಗೊತ್ತಿದೆ. ಆದರೂ ಕೂಡ ಕೆಲವು ಒಂದೆರಡು ವಿಷಯಗಳನ್ನು ಹೇಳಿದ್ದೇನೆ. ಇನ್ನೂ ಒಂದೆರಡು ವಿಷಯಗಳನ್ನು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ. ನಮ್ಮ ಜಿಲ್ಲೆಯಲ್ಲಿ ರಸ್ತೆಗಳನ್ನು ಮಾಡಬೇಕಾದರೆ ಆ ಜಾಗದಲ್ಲಿರತಕ್ಕಂಥ ಮರಗಳನ್ನು ಕಡಿದು ರಸ್ತೆಮಾಡಬೇಕಾಗುತ್ತದೆ. ಇದು ಬಾಕಿ ಜಿಲ್ಲೆಗಳಿಗಿಂತ ಮುಖ್ಯವಾಗಿ ಇರತಕ್ಕಂಥ ಒಂದು ದೊಡ್ಡ ಸಮಸ್ಯೆ. ಈ ಬಗ್ಗೆ ಕೂಡ ಮಾನ್ಯ ಸಚಿವರು ಅರಣ್ಯ ಖಾತೆಯವರೊಡನೆ ವ್ಯವಹಾರ ನಡೆಸಿ ಮರಗಳನ್ನು ಕಡಿದು ರಸ್ತೆ ಮಾಡುವ ವಿಷಯದಲ್ಲಿ ಸರ್ಕಾರದ ವತಿಯಿಂದ ತ್ವರಿತ ಕ್ರಮಗಳು ಆಗುವ ಹಾಗೆ ನೋಡಬೇಕು. ಅಲ್ಲದೆ, ಎಷ್ಟೋ ಕಡೆಗಳಲ್ಲಿ ರಸ್ತೆ ಗಳಾಗಿದ್ದರೂ ಕೂಡ ರಸ್ತೆಗಳ ಮೇಲೆ ಗಿಡಮರಗಳು ಇರುವುದರಿಂದ ವಾಹನ ಸಂಚಾರಕ್ಕೆ ತೊಂದರೆ ಯಾಗಿದೆ. ಇದರಿಂದಾಗಿ ರಸ್ತೆ ಮಾಡಿದರೂ ಕೂಡ ಜನರಿಗೆ ಎಷ್ಟು ಉಪಯೋಗ ಆಗಬೇಕೋ ಅಷ್ಟು ಆಗುತ್ತಿಲ್ಲ. ಈ ದಿಸೆಯಲ್ಲಿ ಮಾನ್ಯ ಸಚಿವರು ತೀವ್ರ ಕ್ರಮ ಕೈಗೊಂಡು ಬಡ ಜನರಿಗೆ ಆಗತಕ್ಕಂಥ ತೊಂದರೆಗಳನ್ನು ದೂರಮಾಡಬೇಕು. ಅದೇ ರೀತಿ ರಸ್ತೆ, ಕಾಲು ಸೇತುವೆಗಳು, ಸೇತುವೆಗಳು ಇವುಗಳನ್ನು ಯಾವುದಾದರೂ ಒಂದು ವಿಶೇಷ ಯೋಜನೆ ಮಾಡಿ ತೀವ್ರಗತಿಯಿಂದ ಅದನ್ನು ಕಾರ್ಯ ರೂಪಕ್ಕೆ ತಂದು ನಮ್ಮ ಜಿಲ್ಲೆಯ ಬಡ ಜನರ ಸಂಕಷ್ಟಗಳನ್ನು ದೂರಮಾಡುವ ದಿಸೆಯಲ್ಲಿ ಕಾರ್ಯ ಕ್ರಮಗಳನ್ನು ಕೈಗೊಳ್ಳಬೇಕೆಂದು ಮತ್ತೊಮ್ಮೆ ಒತ್ತಾಯ ಪೂರ್ವಕವಾಗಿ ಕೇಳಿಕೊಂಡು ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† SRI P. F. RODRIGUES (Mangalore).—Sir, while supporting the demands of the Ministries of the Public Works Department as well as

Ports and Fisheries, I wish to make a few suggestions in respect of these two Ministries, As far as my constituency is concerned, there is a great demand to avoid the congestion in the roads. The Executive Engineer and the Superintending Engineer of the PWD who are there in Mangalore, I find them today sitting in officers gallery have prepared a Sub-way Plan at the Hampanakatta Junction in order to avoid the traffic congestion.. It is exactly this point which takes the entire traffic that gets into the city of Mangalore. There is no other way to get into the city other than this point. Therefore, one can just imagine the amount of traffic that is getting into the city and getting out of the city. It is exactly at this place, there are five pedestrians crossings. Taking into consideration this grave situation these two good officers have prdpared a sub-way plan at the Hampankatta junction which is pending with the Government. I request the Hon. Minister for Public Works Department to give a very serious consideration to this. The harbour which is located just at the outskirts of the city and the other developments that are taking place in and around have had a terrific impact on the city of Mangalore. In about five to six years, it is anybody's guess what would be the city of Mangalore. I request the Government to take timely action about this and see that the sub-way plan prepared by these two good officers is implemented early. The estimated cost of the project is about Rs. 16 lakhs. I was also informed that the Mangalore City Corporation was also prepared to give a part of the material to this project besides giving certain amount of money in spite of the fact that the sub-way plan comes under the National Highway Roads. I would earnestly request the Government to bestow a very serious attention to this and see that the project is completed at the earliest.

Another problem in my constituency is the necessity of a court complex. You illusteious predecessor late Mr, B. V. Baliga was the originator of the scheme. It is about 25 years ago the scheme was contemplated. This year we saw laying of foundation stone. My only prayer is this, 'let not be a happy beginning and unhappy ending. Let the work start'. One has to only see the situation in Civil Courts and Magistrates Courts. There is not even a room to keep the property involved in the criminal cases. There is no room for the lawyers to pass the time. There is no accomodation for the witnesses to stand. The workload of all these courts has increased very much. The necessity of a court building is an imperative need. My only request to the Government is to see that the long felt need of the legal fraternity as well as well as of the litigant public may

be met earlier. These are the two suggestions that I am making as far as the Public works Department is concerned.

Next I come to my pet subject Ports and Fisheries. I am coming from the coastal district of Mangalore. I have had the good fortune of seeing the rivers, sea and what not, and also, of course, the good fortune of testing fish. My learned friend the hon. Member Sri G. Ramegowda explained the importance of fish as to how useful it is for all of us. It is absolutely right since the five ingredients that are necessary for human body are found only in fishr It is a food for all including poor ones. It is easily digestable also. It is a natural wealth God has given us. Plenty of fish is available in 189 Kms. length of sea. To-day, by the introduction of these purseines we have been able to go a little deeper than hitherto. In this connection, I would like to suggest that there should be Fisheries Ports at every important place. As far as my district is concerned, the Mangalore Port, the Malpe Port and Kundapur Port are the three ports where fishing activities are carried out. In between these ports there is nothing. Sir, fish is a perishable commodity. After fishing it will have to be put on the deck and then come back to the shore exposing it to the sun Thus, the proces of decaying becomes faster. Therefore, I would like to suggest to the Government to have more and more fisheries ports so that fish is brought quickly to the shore, preserved and good fish is made available to the people. Sir, I remember that there was a proposal to have a fisheries port in Mangalore for which the Government of India was to give assistance. I do not know further wnat happened to that proposal. No activities are taking place for its construction I only request the Government to bestow serious attention to my suggestion of establishing more and more fisheries harbours not only in Mangalore but throughout the coastal area of Karnataka. Sir, now I refer to the Malpe harbour. When I speak about it, I speak with remorse. The said harbour was constructed at a cost of Rs. 4.62 crores. It was felt necessary to have a Project Site Office The Project Site office was set up and it was functioning well. Of late, it came to my notice that this projeci site office is going to be shifted from Malpe to Bangalore. This matter was taken up in a meeting of the Committee on Estimates, The Chairman of the Committee is also present here. The Special Secretary of the Department who appeared before the Estimates Committee was Put a specific question as to whether there was a proposal to shift this Project Site office from Malpe to Bangalore, He categorically replied to the Committee that there was no such proposal.

You must stop it at that. I followed it up by means of a letter addressed to the Minister. "I heard that this project site is going to be shifted from Malpe to Bangalore. Please do not do it in the interest of the harbour." With all that, today I find that the project site has been entirely shifted from Malpe to Bangalore I would like to ask as to what is the work turned out after this shifting is made ? So far as Mangalore harbour is concerned, to day there is a pitiable sight. The Estimates Committee had gone there. Un-authorised sheds have come up in the harbour It has become such an ugly site now. Was this harbour constructed at a cost of Rs. 4.26 crores for this purpose ? Sir, I am given to understand that there is an idea to get the Prime Minister of our country to declare this harbour open. I am afraid that if the Prime Minister comes to this place to declare it open, what a sight for her ? Further, mere construction of harbour is not sufficient. Infrastructural facilities will have to be provided. Who is going to look after it ? I personally feel that all those people who are working in this project site office at Bangalore are being paid for not having turned out any work. I earnestly appeal to the Hon'ble Minister to please shift this office from Bangalore back to Malpe in the interest of this harbour. in the interest of Fisheries department and in the interest of the State of Karnataka. If, for any reason, the offices are not ready to go and work there in Malpe, please change the officers and post officers there who are anxious to go and work there. There are very good officers in the Fisheries department and they will go and work in Malpe. In the interest of Fisheries department, this is a must and this must be done as early as possible,

Another aspect I wish to touch is that the Fish is the national wealth. Fish should be caught and brought out of the sea-shore as food for the people. My suggestion is that please arrange to transport the fish so caught to interior places. There was a move to transport fish right upto Delhi. There was a very good market in Delhi and the people were interested to buy fish in Delhi. The Railways have also undertaken to trsnsport fish to Delhi. Please see that Fish is transported to Delhi and it is made available to those people who are in need of it. I was given to understand that the Karnataka State Fisheries Development Corporation which is incharge of Fish, had sent its officers to the Middle East to explore the possibilities of sending fish to Middle East. I do not know as to what happened further. Whether the officers had gone there or whether they have come back with the proposals ? All these details are not found in the report. There is a very good demand

for fish in the Middle East and the people of my district who had gone there have expressed that there is a very good demand for fish and they have also requested to supply fish to those places. They are trying to get at this Fish. So, there is another source of income to the Government by selling Fish to the Middle East and thereby we can earn a lot of money.

Another point I would like to mention here is about the sea-coast. This sea-coast has been a matter of regret and I am sorry for the people because of the soil erosion that is taking place. The constituency of my friend Sri B. Bhasker Shetty had the misfortune of soil erosion. So many houses have been destroyed. There is a lot of money available with the Government of India for this purpose to prevent this soil erosion. I understand that the State of Kerala has sucked the maximum amount of money from the Centre and have prevented the erosion on coastal line of Kerala, Why not we do it Why not we get money from the Government of India and try to build houses for the people who are living by the sea-shore. Who are those people ? They are the poor fishermen who have to earn their livelyhood by the river side So, my another request is that please try to suck as much money as possible from the Government of India and prevent this soil erosion which is taking place on the coastal line.

I learn that eventhough the Cabinet has decided that the Old Mangalore port should be retained by Karnataka there is a move to hand over this port to the Government of India. If this is true, it should not be encouraged. It should be struck immediately because the old Mangalore port is not only taking in export and import of goods, but also intimately connected with the fisheries; We have spent lakhs of Rupees on this old port of fisheries and if it is handed over to the Government of India to be manned by Panambur harbour, certainly there will be trouble for this poor fishermen and the petty traders. Under no circumstances, the Mangalore port should be handed over to the Government of India.

Sir, now I come to ports. It is a matter ot pride and joy that today the Government have developed a natural harbour, the god given harbour, Karwar. The civil works are in progress. Please complete it as early as possible so that the harbour can be of absolute use not only to the State of Karnataka but also to the country, Sir, in Karwar, there is a river and the Government have introduced two L. C. Ts. to cross it Before introduciug these LCTs, wooden bridges were there and at the time of the introduction of these two L. C. Ts. the officialdom came with the proposal saying

that the new bridge is coming up in the year 1982 and that it is not proper to sink lakhs of Rupees on these L. C. Ts Notwithstanding this proposal, two L. C. Ts. were introduced. Now it has become a boon to the people to go to Goa and to return from that place. It has increased the traffic and helped the people to a very great extent. Though the year 1982 is fact approaching the end, the prospects of the bridge being completed is nowhere near, The two L. C. Ts. which are there are in sufficient. If for any reason, one L. C. T. goes out of order, then the whole traffic will have to be manned by one L. C. T. only. I request that one more L. C. Ts may be introduced. I am sure that the cost of Rs. 12 lakhs of these two L. C. Ts, which have already been introduced, has been made good and today the department must be making a profit out of this traffic that is going across the river. I understand that the total income daily is about Rs. 3,000 to 4,000 There cannot be any loss. This is a service oriented matter and hence I request the Hon'ble Minister to give thought to this introduction of another L. C. T. so that it may be of benefit to the people.

Sir, another sad thing that occurs to my mind is the working of this department. Last year also, I had made a reference in my speech about this department. But notwithstanding what I said, the state of affairs still continues. Now, we have got a State Port Officer and he has been put in-charge for the last two to three years ? Why ? Why are you making this in charge arrangements ? If he is an incapable officer, send him away. Let us not have any in capable officer. If he is capable and if we satisfies all the norms why should he not be made independent ? Is it correct that the Government should make an officer in-charge for so many years ? A disgruntled labour is always dangerous.

5-00 P. M.

The last point is in respect of inland fisheries. Inland fisheries also requires to be developed and if the inland fisheries are to be developed, certain infrastructural facilities will have to be made available. We have got so many breeding farms. But unfortunately he Officers have no quarters to stay in. They have to stay some kilometers away from these breeding farms. So please do construct houses for these Officers so that they can remain close by and give better attention to these farms. After all if you give the quarters, you deduct 10% of their salary, It is not going to be a loss to the Government. I earnestly request the hon. Minister to think about the Housing scheme for these Officers so that they may be able to pay better attention, Sir, you

have already rung the Bell. do not want to take more time and I conclude by thanking you for having given me an opportunity t speak. Thank you.

ಶ್ರೀ ಹೆಚ್. ಗಂಗಾಧರನ್. (ಚಾಮರಾಜ).—ಮಾನ್ಯ ಅಧ್ಯಕ್ಷರೇ, ಯಾವುದೇ ರಾಜ್ಯದ ಪ್ರಗತಿಯ ದೃಷ್ಟಿಯಿಂದ, ಮಾನವನ ನಾಗರೀಕ ದೃಷ್ಟಿಯಿಂದ ಲೋಕೋಪಯೋಗಿ ಇಲಾಖೆ ಮತ್ತು ಅದರ ಕೆಲಸಗಳು (ಸಾಧನೆಗಳು) ಬಹಳ ಪ್ರಾಮುಖ್ಯವಾದವು ಎಂದು ತಿಳಿದುಕೊಂಡು ಈ ಇಲಾಖೆ ನಡೆದುಕೊಂಡು ಬಂದ ದಾರಿಯಲ್ಲಿ ಕೆಲವು ಅಂಶಗಳನ್ನು ಪ್ರಸ್ತಾಪಿಸುತ್ತೇನೆ. ಕರ್ನಾಟಕ ರಾಜ್ಯದಲ್ಲಿ ೧೯೭೧ ರಿಂದ ೧೯೮೧ರವರೆಗೆ ರವರೆಗೆ ಏನು ಸಾಧನೆ ಮಾಡಿದ್ದೇವೆಂಬುದನ್ನು ನೋಡಿದರೆ ಬಹುಶ ಆಮೆಗಿಂತ ಸ್ವಲ್ಪ ವೇಗವಾಗಿ ಹೋಗಿದ್ದೇವೆಂದು ಕಾಣುತ್ತದೆ. ಆ ಅವಧಿಯಲ್ಲಿ ನಾವು ಸಾಧಿಸಿರುವ ಸಾಧನೆ ಏನೆಂದರೆ ೧೫೪೯೬ ಕಿಲೋಮೀಟರ್ ರಸ್ತೆ ಮಾಡಿದ್ದೇವೆ. ಆ ಲೆಕ್ಕ ತೆಗೆದುಕೊಂಡರೆ ದಾಮಾಷ್ಟಾ ವರ್ಷಕ್ಕೆ ೧೫೨೦ ಕಿಲೋಮೀಟರ್ ರಸ್ತೆಯನ್ನು ಮಾಡಿದ ಹಾಗೆ ಆಗುತ್ತದೆ. ಇದರಲ್ಲಿ ರಾಷ್ಟ್ರೀಯ ಹೆದ್ದಾರಿ ೧೦ ವರ್ಷಗಳಲ್ಲಿ ಮಾಡಿರತಕ್ಕದ್ದು ೬೯ ಕಿಲೋಮೀಟರ್. ಅಂದರೆ ವರ್ಷಕ್ಕೆ ೭೦ ಕಿಲೋಮೀಟರ್ ಆಯಿತು. ರಾಜ್ಯದ ಹೆದ್ದಾರಿ ೧೦ ವರ್ಷಗಳಲ್ಲಿ ಮಾಡಿರುವುದು ೧೧೧೯ ಕಿಲೋಮೀಟರ್, ಅಂದರೆ ವರ್ಷಕ್ಕೆ ೧೧೧ ಕಿಲೋಮೀಟರ್. ಗ್ರಾಮಾಂತರ ಪ್ರದೇಶಗಳಿಗಾಗಿ ಮಾಡಿರತಕ್ಕ ರಸ್ತೆ ೧೦ ವರ್ಷಗಳಲ್ಲಿ ೧೫೨೪೮ ಕಿಲೋಮೀಟರ್‌ಗಳು ಅಂದರೆ ವರ್ಷಕ್ಕೆ ೧೫೨೫ ಕಿಲೋಮೀಟರ್‌ಗಳ ಈ ಪ್ರಕಾರ ರಸ್ತೆಗಳನ್ನು ಮಾಡುತ್ತಾ ಹೋದರೆ ಇಡೀ ರಾಜ್ಯದ ಎಲ್ಲ ಗ್ರಾಮಗಳಿಗೂ ಸಂಪರ್ಕವಾಗಿ ರಸ್ತೆ ಸೌಲಭ್ಯಗಳನ್ನೊದಗಿಸಲು ಎಷ್ಟು ಕಾಲವನ್ನು ತೆಗೆದುಕೊಳ್ಳುತ್ತೀರಿ? ಐದು ಪಂಚವಾರ್ಷಿಕ ಯೋಜನೆಗಳು ಮುಗಿದ ನಂತರ ೬ನೇ ಪಂಚ ವಾರ್ಷಿಕ ಯೋಜನೆಯಲ್ಲಿ ೬೬ ಕೋಟಿ ರೂಪಾಯಿಗಳನ್ನು ಖರ್ಚು ಮಾಡುವ ಯೋಜನೆ ಇದೆ. ಅಂದಾಗ ವರ್ಷಕ್ಕೆ ೧೩ ಕೋಟಿ ರೂಪಾಯಿಗಳಂತೆ ಖರ್ಚು ಮಾಡಿ ಏನು ಸಾಧನೆ ಮಾಡುತ್ತೀರಿ? ತಮ್ಮ ಲೆಕ್ಕದ ಪ್ರಕಾರ ಈ ರಾಜ್ಯದಲ್ಲಿರತಕ್ಕ ೨೬೮೭೧ ಹಳ್ಳಿಗಳ ಪೈಕಿ ೭೪೪೮ ಹಳ್ಳಿಗಳಿಗೆ ಸರ್ವಋತು ರಸ್ತೆ ಇದೆ. ಅಂದರೆ ಒಟ್ಟು ರಸ್ತೆಯಲ್ಲಿ ಶೇಕಡ ೨೭ರಷ್ಟು ೫೯೩೨ ಹಳ್ಳಿಗಳಿಗೆ ಫೇರ್ ವೆದರ್ ರಸ್ತೆ ಇದೆ ಅಂದರೆ ಶೇಕಡ ೨೨ರಷ್ಟು ಇದೆ. ೧೧೪೫೧ ಹಳ್ಳಿಗಳಿಗೆ ಕಚ್ಚಾಡ ರಸ್ತೆ ಇದೆ. ಅಂದರೆ ಶೇಕಡ ೪೩ರಷ್ಟು. ೨೦೪೦ ಹಳ್ಳಿಗಳಿಗೆ ಸೈಕಲ್ ಇರಲಿ ಮನುಷ್ಯರು ಕೂಡ ಹೋಗುವುದಕ್ಕೆ ಸಾಧ್ಯವಿಲ್ಲ ರಸ್ತೆಗಳು ಸಂಪರ್ಕವಾಗಿಲ್ಲ. ಇಷ್ಟಿದ್ದರೂ ನಿಮ್ಮ ಯೋಜನೆ ಎಷ್ಟರಮಟ್ಟಿಗೆ ಇದೆ ಎಂದರೆ ೭೪೪೮ ಹಳ್ಳಿಗಳು ಹೋದರೆ ೧೯೪೨೩ ಹಳ್ಳಿಗಳಿಗೆ ಸರ್ವಋತು ರಸ್ತೆಗಳನ್ನು ಸಿದ್ಧಗೊಳಿಸಬೇಕೆಂಬ ಯೋಜನೆ ಇದೆ. ಇದಕ್ಕಾಗಿ ವರ್ಷಕ್ಕೆ ತೆಗೆದುಕೊಳ್ಳತಕ್ಕದ್ದು ೧೫೦ ಹಳ್ಳಿಗಳು. ಈ ರೀತಿ ವರ್ಷಕ್ಕೆ ೧೫೦ ಹಳ್ಳಿಗಳಿಗೆ ಮಾತ್ರ ಸರ್ವಋತು ಸೌಲಭ್ಯವನ್ನು ಕಲ್ಪಿಸುತ್ತಾ ಹೋದರೆ ಕರ್ನಾಟಕ ರಾಜ್ಯದಲ್ಲಿ ಉಳಿದಿರತಕ್ಕ ೧೯೪೨೩ ಹಳ್ಳಿಗಳಿಗೆ ರಸ್ತೆಯನ್ನು ಮಾಡಿ ಕೊಡಬೇಕಾದರೆ ೧೩೦ ವರ್ಷಗಳು ಆಗುತ್ತವೆ. ಇದರಲ್ಲಿ ಎಷ್ಟು ಜನರೇಷನ್ ಆಗುತ್ತದೆ ? ಇಂಥ ಒಂದು ಪ್ರಮುಖವಾದ ಕಾರ್ಯಕ್ರಮದಲ್ಲಿ ಕೂಡ ನಾವು ಹಿಂದುಳಿದಿದ್ದೇವೆ. ಇದಕ್ಕೆ ಸರ್ಕಾರವನ್ನು ದೂಷಿಸಬೇಕೋ ಅಥವಾ ಯಾರನ್ನು ದೂಷಿಸಬೇಕೆಂಬುದು ತಿಳಿಯದಾಗಿದೆ. ಇವತ್ತು ಸರ್ಕಾರದಲ್ಲಿ ಹಣ ಇಲ್ಲವೆಂದು ಹೇಳುತ್ತೀರಿ. ಆದರೆ ಕೊಟ್ಟಂತಹ ಹಣವನ್ನು ಸರಿಯಾಗಿ ವಿನಿಯೋಗ ಮಾಡದೆ ಇರುವ ಅನೇಕ ಪ್ರಸಂಗಗಳಿವೆ. ವಿನಿಯೋಗವಾಗಿದೆ ಎಂದು ಹೇಳಿದ ಹಣ ಕೂಡ ಸರಿಯಾಗಿ ಖರ್ಚಾಗದೆ ಇರುವ ಪ್ರಸಂಗಗಳು ಇವೆ. ಎಷ್ಟೋ ಸಾರಿ ಹಾಕಿದ ಜೆಲ್ಲಿ, ಬೇರೆ ಬೇರೆ ಬಿಲ್ಲುಗಳನ್ನು ಕೊಟ್ಟಿರುವುದು ಸರ್ಕಾರದ ಗಮನಕ್ಕೆ ಬಾರದೆ ಏನಿಲ್ಲ. ಜೆಲ್ಲಿ ಹಾಕದೆ ಬಿಲ್ಲುಗಳನ್ನು ಕೊಟ್ಟಿರತಕ್ಕ ನಿದರ್ಶನಗಳು ಇವೆ. ನಮ್ಮ ರಾಜ್ಯದಲ್ಲಿ ಮಾಡುವ ರಸ್ತೆಗಳಿಗೂ ತಮಿಳ್ನಾಡಿನಲ್ಲಿ ಮಾಡುವ ರಸ್ತೆಗಳಿಗೂ ಹೋಲಿಸಿದರೆ ೩ ವರ್ಷಗಳಿಗೊಮ್ಮೆ ನಾವು ರಸ್ತೆಗಳನ್ನು ಮಾಡುತ್ತಿರುತ್ತೇವೆ. ಅದೇ ತಮಿಳ್ನಾಡಿನಲ್ಲಿ ಒಂದು ಸಾರಿ ಮಾಡಿದ ರಸ್ತೆ ೧೦ ವರ್ಷಗಳವರೆಗೆ ರಿಪೇರಿ ಇಲ್ಲದೆ ಉಪಯೋಗಿಸುವಷ್ಟು ಚನ್ನಾಗಿರುತ್ತವೆ. ನಮ್ಮ ಇಂಜಿನಿಯರುಗಳಿಗೂ ಮತ್ತು ಅವರ ಇಂಜಿನಿಯರುಗಳಿಗೂ ಏನಾದರೂ ಬುದ್ಧಿಶಕ್ತಿಯಲ್ಲಿ ಕೊರತೆ ಇದೆಯೋ, ನಮ್ಮವರು ಅವರಿಗಿಂತ ಬುದ್ಧಿಶಕ್ತಿಯಲ್ಲಿ ಕಡಿಮೆ ಇದ್ದಾರೆಯೋ ಎಂಬ ಪ್ರಶ್ನೆಯನ್ನು ಇಡಬೇಕಾಗಿದೆ. ಇಷ್ಟೆಲ್ಲ ಅನ್ಯಾಯವಾಗುತ್ತಿದ್ದರೂ ಹೆಚ್ಚು ಹಣ ಖರ್ಚಾಗುವ ಸೆಲ್‌ಕ್ರೇಟ್ ರಸ್ತೆಗಳನ್ನು ಅನೇಕ ಕಡೆಗಳಲ್ಲಿ ಮಾಡಿಸುತ್ತಿದ್ದಾರೆ. ವಿಧಾನ ಸೌಧದ ಸುತ್ತ ಮುತ್ತ ವರ್ಷಕ್ಕೊಂದು ಸಾರಿ ಈ ರೀತಿ ರಸ್ತೆಗಳನ್ನು ಮಾಡತಕ್ಕ ಪರಿಸ್ಥಿತಿ ಇದೆ. ಮೈಸೂರು ನಗರದಲ್ಲಿ ಕೂಡ ಅದೇ ರೀತಿ

ಆಗುತ್ತಿದೆ. ಈ ಬಾಬಿನಲ್ಲಿ ಎಷ್ಟು ಅಪವ್ಯಯವಾಗುತ್ತಿದೆ ಎಂಬ ಕಡೆಗೆ ಸರ್ಕಾರ ಗಮನ ಕೊಡುತ್ತಿದೆಯೆ ? ಸರ್ಕಾರ ಒದಗಿಸತಕ್ಕ ಹಣದಲ್ಲಿ ರಾಜ್ಯದ ಎಲ್ಲ ಕಡೆಯ ರಸ್ತೆಗಳನ್ನು ಮಾಡಿಸುತ್ತಿದೆಯೋ ಅಥವಾ ಬೇರೆ ಕಡೆಯ ಹಣವನ್ನು ಇದಕ್ಕೆ ಒದಗಿಸುವ ಯೋಚನೆಯನ್ನು ಮಾಡಿದೆಯೋ ಮಾಡುತ್ತದೆಯೋ ? ಇದರ ಬಗ್ಗೆ ಖಚಿತವಾಗಿ ತಿಳಿಸಬೇಕೆಂದು ಹೇಳುತ್ತೇನೆ. ಮಾನ್ಯ ದೇವೇಗೌಡರು, ಕೆಲವು ಅಧಿಕಾರಿಗಳನ್ನು ಸಸ್ಪೆನ್‌ಷನ್‌ನಲ್ಲಿಟ್ಟಿರುವ ವಿಚಾರವನ್ನು ಪ್ರಸ್ತಾಪ ಮಾಡಲು ದೀರ್ಘ ಕಾಲವನ್ನು ಉಪಯೋಗಿಸಿಕೊಂಡಿದ್ದಾರೆ. ಇದರಿಂದ, ನಾವು ಕೇವಲ ಕೆಲವು ಜನರ ಸಮಸ್ಯೆಗಳಿಗಾಗಿ ದೀರ್ಘ ಕಾಲವನ್ನು ಉಪಯೋಗಿಸುತ್ತೇವೆಂಬ ದುಃಖ ಇದೆ. ಆದರೆ ಈ ಇಲಾಖೆಯಲ್ಲಿ ಇದು ಸರ್ವೇ ಸಾಮಾನ್ಯ. ಯಾವುದಾದರೂ ಸಂದರ್ಭಗಳು ಒದಗಿಬಂದಾಗ ಅಧಿಕಾರಿಗಳನ್ನು ವರ್ಗ ಮಾಡುವುದು, ಸಸ್ಪೆನ್‌ಷನ್‌ನಲ್ಲಿಡುವುದು ಇವೆಲ್ಲಾ ಇಲಾಖೆಯಲ್ಲಿ ಸಾಮಾನ್ಯವಾಗಿ ನಡೆಯತಕ್ಕ ಕೆಲಸಗಳು. ಇವುಗಳ ಬಗ್ಗೆ ಹೆಚ್ಚು ಪ್ರಸ್ತಾಪ ಮಾಡುವ ಅಗತ್ಯವಿಲ್ಲವಾದರೂ ಕೂಡ ಒಂದು ಕಾರಣದಿಂದ ಈ ಮಾತನ್ನು ಪ್ರಸ್ತಾಪ ಮಾಡಬೇಕಾಗಿದೆ. ಸಸ್ಪೆನ್‌ಷನ್‌ನಲ್ಲಿಡುವುದರಲ್ಲಿ ತಾರತಮ್ಯ ತೋರಿಸಿದ್ದಾರೆಂಬುದು ಖಚಿತವಾದ ವಿಷಯ. ಸಸ್ಪೆನ್‌ಷನ್‌ನಲ್ಲಿಟ್ಟಿರತಕ್ಕ ಇಲಾಖಾ ನೌಕರರಿಗೆ ರೋಡ್ ಗೊತ್ತಿರಲಿಲ್ಲವೆಂದು ಕಾಣುತ್ತದೆ. ನ್ಯಾಷನಲ್ ಹೈವೇಸ್, ಸ್ಟೇಟ್ ಹೈವೇಸ್ ಇರುವಾಗ ಅದನ್ನು ಬಿಟ್ಟು ಡಿಸ್ಟ್ರಿಕ್ ಬೋರ್ಡ್ ರಸ್ತೆಯನ್ನು ಹಿಡಿದುಕೊಂಡು ಏತಕ್ಕೆ ಹೋದರು ಎಂದು ಗೊತ್ತಿಲ್ಲ. ಸ್ಟೇಟ್ ಹೈವೇಗೆ ಪ್ರಾವಿಷನ್ ಮಾಡಿದ್ದರೆ ಸಸ್ಪೆನ್‌ಷನ್ ರಿವೋಕ್ ಆಗುತ್ತಿತ್ತು. ಸಸ್ಪೆನ್‌ಷನ್ ಮಾಡುವುದಕ್ಕೆ ಕಾರಣ ಇರಲಿ, ಇಲ್ಲದಿರಲಿ, ಫೆಬ್ರುವರಿ, ಮಾರ್ಚ್, ಏಪ್ರಿಲ್‌ನಲ್ಲಿ ಅಧಿಕಾರಿಗಳನ್ನು ಸಸ್ಪೆನ್‌ಷನ್‌ನಲ್ಲಿಟ್ಟರೆ ದೇಶಕ್ಕೆ ಅಭಿವೃದ್ಧಿಯಾಗುತ್ತದೆ. ರಸ್ತೆಗಳು ಆಗಿರಲಿ, ಆಗದಿರಲಿ ಮಾರ್ಚ್ ತಿಂಗಳೊಳಗೆ ಎಲ್ಲ ಬಿಲ್ಲುಗಳು ಪಾಸ್ ಆಗುವುದು ಸರ್ವೇ ಸಾಮಾನ್ಯ. ಅಲ್ಲಿ ಆಗತಕ್ಕ ಪರಿಸ್ಥಿತಿಯನ್ನು ನೋಡಿದರೆ, ಜಾತ್ರೆ ಸಂತೆಗಳೋಪಾದಿಯಲ್ಲಿ ಲೋಕೋಪಯೋಗಿ ಇಲಾಖೆಯ ಕಛೇರಿಗಳಲ್ಲಿ ಎಲ್ಲ ಬಿಲ್ಲುಗಳು ಪಾಸ್ ಆಗುತ್ತಿರುತ್ತವೆ, ಕೆಲವು ಬಿಲ್ಲುಗಳು ಏಪ್ರಿಲ್‌ನಲ್ಲೂ ಪಾಸ್ ಆಗುತ್ತಿರುತ್ತವೆ. ಇದರ ಕಡೆ ಸರ್ಕಾರ ಎಷ್ಟರಮಟ್ಟಿಗೆ ಗಮನ ಹರಿಸಿದೆ ಎಂದು ಕೇಳಬಯಸುತ್ತೇನೆ. ಇನ್ನು ನಿಮ್ಮ ಇಲಾಖೆಯವರು ಲಕ್ಷಾಂತರ ರೂಪಾಯಿಗಳ ಕೆಲಸವನ್ನು, ಟೆಂಡರ್ ಕರೆಯದೆ ಪೀಸ್ ವರ್ಕ್ ಮೇಲೆ ಮಾಡಿಸುತ್ತಿದ್ದಾರೆ. ಟೆಂಡರ್ ಕರೆದರೆ ಅರ್ಜಿಗಳು ಬರುವುದಿಲ್ಲವೆಂದು ಹೇಳುತ್ತಾರೆ. ಇಂಥ ನಿದರ್ಶನಗಳು ಶಾಸಕರ ಭವನ ಕಟ್ಟುವಾಗ ನಡೆದಿರುವುದನ್ನು ಕಾಣಬಹುದು. ದೊಡ್ಡ ದೊಡ್ಡ ಕೆಲಸಗಳನ್ನು ಪೀಸ್‌ವರ್ಕ್ ಮೇಲೆ ಏತಕ್ಕೆ ಮಾಡಿಸುತ್ತಾರೆ ? ಕೆಲಸಗಳಿಗೆ ಮೊದಲೇ ಹಣ ಮಂಜೂರಾಗಿದ್ದರೂ ಟೆಂಡರ್‌ಗಳನ್ನು ಕರೆಯದೆ ಇರಲು ಕಾರಣವೇನು ? ವ್ಯಾಪಾರದಲ್ಲಿ ಗಿಟ್ಟದೆ ಇರುವುದಕ್ಕೆ ಈ ರೀತಿ ಎಲ್ಲ ಮಾಡುತ್ತಿದ್ದಾರೆಯೆ ? ಇದನ್ನೆಲ್ಲ ಸರ್ಕಾರ ಗಮನಿಸಬೇಕಾಗುತ್ತದೆ. ನಾವು ಈ ಬಗ್ಗೆ ಪದೇ ಪದೇ ಹೇಳುತ್ತಿದ್ದೇವೆ. ಇದರಲ್ಲಿ ಬೇಕಾದಷ್ಟು ಅವ್ಯವಹಾರ ನಡೆಯುತ್ತಿದೆ. ಈ ಸಂದರ್ಭದಲ್ಲಿ ಮುಖ್ಯವಾಗಿ ಕೆಲವು ಅಂಶಗಳನ್ನು ಪ್ರಸ್ತಾಪಿಸುತ್ತೇನೆ. ೧೯೭೪ ರಿಂದ ೧೯೭೬ರವರೆಗೆ ಮೈಸೂರು ಡಿವಿಜನ್‌ನಲ್ಲಿ ೩೫೦೦ ಚೀಲ ಸಿಮೆಂಟ್ ರೈಲಿನಲ್ಲಿ ಹೋಗಿದೆ, ಹೋದುದಕ್ಕೆ ದಾಖಲೆ ಇದೆ, ಆದರೆ ಅದು ಯಾವ ದೇಶಕ್ಕೆ ಹೋಯಿತು ಎಂದು ಗೊತ್ತಿಲ್ಲ. ಆ ಬಗ್ಗೆ ಸರ್ಕಾರ ತನಿಖೆ ಮಾಡಿದ್ದು, ಇತ್ಯಾದಿ ಎಲ್ಲ ಕ್ರಮ ನಡೆದಿದೆ ವಿಜಿಲೆನ್ಸ್, ಸಿ.ಒ.ಡಿ. ಎಲ್ಲ ತನಿಖೆ ನಡೆಸಿದರೂ ಕೂಡ ಆ ಸಿಮೆಂಟ್ ಎಲ್ಲಿ ಹೋಯಿತು ಎಂಬುದು ಸಾರ್ವಜನಿಕರ ಗಮನಕ್ಕೆ ಬರಲಿಲ್ಲ.

ಸರ್ಕಾರ ಈ ಸದನದಲ್ಲಿ ಅದನ್ನು ಇಡಲಿಲ್ಲ. ಅದೇಕೆ ಎಂಬುದು ಗೊತ್ತಿಲ್ಲ. ಅದಕ್ಕೆ ಕಾರಣರಾದ ಅಧಿಕಾರಿಗಳ ಬಗ್ಗೆ ಸರ್ಕಾರ ಏನು ಕ್ರಮ ತೆಗೆದುಕೊಂಡಿದೆ? ಅವರಿಗೇನಾದರೂ ಪ್ರೊಮೋಷನ್ ಕೊಟ್ಟು ಚೀಫ್ ಇಂಜಿನಿಯರನ್ನಾಗಿ ಮಾಡಿದ್ದೀರಾ? ಅದರ ಬಗ್ಗೆ ವಿವರ ಕೊಟ್ಟಿಲ್ಲ. ಅದನ್ನು ಕೊಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ. ಮತ್ತು ಅವರನ್ನು ಸಸ್ಪೆನ್‌ಷನ್‌ನಲ್ಲಿಟ್ಟಿದ್ದಾಗ ಆ ಕಾಲದಲ್ಲಿ ಸಂಬಳ ಮತ್ತು ಇನ್‌ಕ್ರಿಮೆಂಟ್ ಎಷ್ಟು ಕೊಟ್ಟಿದ್ದೀರಿ? ಹಣ ಏನಾದರೂ ರಿಕವರಿ ಆಗಿದೆಯೆ? ಇದರ ಬಗ್ಗೆ ವಿವರಗಳನ್ನು ಸಭೆಯ ಮುಂದೆ ಇಡಬೇಕು. ಅದೇ ರೀತಿ ಬೆಂಗಳೂರಿನಲ್ಲಿರುವಂಥ ಕಮರ್ಷಿಯಲ್ ಟ್ಯಾಕ್ಸ್ ಬಿಲ್ಡಿಂಗ್ ಕಟ್ಟುವಾಗ ಮೂರನೇ ಅಂತಸ್ತನ್ನು ಕಟ್ಟುವಾಗಲೀ ನಾಲ್ಕನೇ ಅಂತಸ್ತಿನ ಹಣ ಕೊಟ್ಟಿದೆ. ಆದರೆ ಮೂರನೇ ಅಂತಸ್ತೇ ತಯಾರಾಗಲಿಲ್ಲ. ಕೆಲಸ ಮುಗಿದಿದೆ ಎಂದು ಹೆಚ್ಚು ಹಣ ಕೊಟ್ಟರು. ಹಣ ದುರುಪಯೋಗವಾದ ಬಗ್ಗೆ ತನಿಖೆಗೆ ಸಿ.ಒ.ಡಿ.ಗೆ ವಹಿಸಲಾಗಿತ್ತೋ ವಿಜಿಲೆನ್ಸ್‌ಗೆ ವಹಿಸಲಾಗಿತ್ತೋ ಗೊತ್ತಿಲ್ಲ. ಲೋಕೋಪಯೋಗಿ ಇಲಾಖೆಯಿಂದ ವಿಜಿಲೆನ್ಸ್‌ಗೆ ತನಿಖೆಗೆ ಹೋಗಿತ್ತು

ಎಂದು ತಿಳಿದುಬಂದಿದೆ. ವಿಜಿಲೆನ್ಸ್‌ಗೆ ಹೋಗಿದ್ದರೂ ಅವರು ವಿಜಿಲೆಂಟಾಗಿ ಕೆಲಸ ಮಾಡದೆ ಏತಕ್ಕೆ ತಡಮಾಡುತ್ತಿದ್ದಾರೆ ಎಂಬ ಬಗ್ಗೆ ತೀವ್ರ ಗಮನ ಹರಿಸಬೇಕು. ಈ ಅಕ್ರಮಕ್ಕೆ ಕಾರಣರಾದ ಅಧಿಕಾರಿಗಳ ಮೇಲೆ ಏನು ಕ್ರಮ ತೆಗೆದುಕೊಂಡಿದ್ದೀರಿ? ಅವರನ್ನು ಸಸ್ಪೆಂಡ್ ಮಾಡಿದ್ದೀರಾ ಅಥವಾ ಪ್ರೊಮೋಷನ್ ಕೊಟ್ಟಿದ್ದೀರಾ? ಹಣ ರಿಕವರಿಗೆ ಏನು ವ್ಯವಸ್ಥೆ ಮಾಡಿದ್ದೀರಿ? ವಿಜಿಲೆನ್ಸ್ ಕಮಿಷನ್ ವರದಿ ಅಥವಾ ಸಿ.ಒ.ಡಿ. ವರದಿ ಏನಿದೆ ಎಂಬುದನ್ನು ಸಭೆಯ ಮುಂದೆ ಇಡುತ್ತೀರಾ? ನಮ್ಮ ರಾಜ್ಯದಲ್ಲಿ ಒಂದು ಸಂಸ್ಥೆ ಸ್ಥಾಪನೆ ಮಾಡಿದರು. ಅದರ ಹೆಸರು ಕರ್ನಾಟಕ ಸ್ಟೇಟ್ ಡಿಸ್ಟ್ರಕ್ಷನ್ ಕಾರ್ಪೊರೇಷನ್ ಎಂದು. ನೀವು ಕನ್‌ಸ್ಟ್ರಕ್ಷನ್ ಕಾರ್ಪೊರೇಷನ್ ಎಂದು ಹೇಳಿದ್ದೀರಿ. ಆದರೆ ಅದು ನನ್ನ ದೃಷ್ಟಿಯಲ್ಲಿ ಡಿಸ್ಟ್ರಕ್ಷನ್ ಕಾರ್ಪೊರೇಷನ್. ಅಲ್ಲಿ ಎಷ್ಟರಮಟ್ಟಿಗೆ ವ್ಯವಹಾರ ನಡೆಯುತ್ತಿದೆ ಎಂಬುದನ್ನು ನೋಡಬೇಕು. ಅಲ್ಲಿ ಏಜೆನ್ಸಿ ಮೂಲಕ ಸ್ಟೀಲ್. ಸಿಮೆಂಟ್ ತರತಕ್ಕ ವ್ಯವಸ್ಥೆ ಇದೆ. ಶಿವಮೊಗ್ಗ ಸ್ಟೀಲ್ ಕಂಪೆನಿಯಲ್ಲಿ ಆ ಏಜೆನ್ಸಿಗೆ ಕೂಡ ಮಾಡಿರುವ ಸ್ಟೀಲ್ ೧೯.೫೭೦ ಮೆಟ್ರಿಕ್‌ಟನ್‌ಗಳು. ಆದರೆ ೨೧.೧೬೦ ಮೆಟ್ರಿಕ್‌ಟನ್ ಎಂದು ಬಿಲ್ ತಂದಿದ್ದಾರೆ. ಇನ್ನೊಮ್ಮೆ ೫.೫೪೦ ಮೆಟ್ರಿಕ್‌ಟನ್ ತೆಗೆದುಕೊಂಡಿದ್ದರೆ ಏಜೆನ್ಸಿ ಬಿಲ್ ತಂದಿರುವುದು ೬.೫೪೦ ಮೆಟ್ರಿಕ್‌ಟನ್ ಎಂದು. ೨೧-೧-೧೯೮೧ ರಲ್ಲಿ ಡೆಲಿವರಿ ಕೊಟ್ಟಿರುವುದು. ೧೯ ಮೆಟ್ರಿಕ್‌ಟನ್ ಡೆಲಿವರಿ ಕೊಟ್ಟು ೨೧ ಮೆಟ್ರಿಕ್‌ಟನ್ ಎಂದು ಬಿಲ್ ತರುತ್ತಾರೆ. ಹೀಗೆ ನೂರಾರು ಬಿಲ್‌ಗಳು ಕನ್‌ಸ್ಟ್ರಕ್ಷನ್ ಕಾರ್ಪೊರೇಷನ್‌ನಲ್ಲಿ ಬರುತ್ತಿವೆ. ಅಧಿಕಾರಿಗಳನ್ನು ಕೇಳಿದರೆ ಮ್ಯಾನೇಜಿಂಗ್ ಡೈರೆಕ್ಟರ್ ಹೇಳಿದ್ದಾರೆ, ಆದ್ದರಿಂದ ಬಿಲ್ ತಯಾರು ಮಾಡುತ್ತಿದ್ದೇವೆ ಎಂದು ಹೇಳುತ್ತಾರೆ. ಈ ರೀತಿ ಅಲ್ಲಿ ವ್ಯವಹಾರ ನಡೆಯುತ್ತಿದೆ. ಹುಣಸೂರಿನಲ್ಲಿರತಕ್ಕ ಪ್ಲೈವುಡ್ ಫ್ಯಾಕ್ಟರಿಯಲ್ಲಿ ೨೦.೨೫ ಸಾವಿರ ರೂಪಾಯಿ ಬೆಲೆಯ ಪ್ಲೈವುಡ್ ತೆಗೆದುಕೊಂಡಿದ್ದಾರೆ. ಅದನ್ನು ಯಾವ ಕಟ್ಟಡಕ್ಕೆ ಉಪಯೋಗ ಮಾಡಿದ್ದಾರೋ ಲೆಕ್ಕ ಇಲ್ಲ. ಅದು ಎಲ್ಲಿ ಹೋಗಿದೆಯೋ ಗೊತ್ತಿಲ್ಲ. ಅದರ ಬಗ್ಗೆ ಸರ್ಕಾರಕ್ಕೆ ಅನೇಕ ದೂರುಗಳು ಬಂದಿವೆ. ಅಧಿಕಾರಿಗಳು ಪ್ರತಿ ತಿಂಗಳು ೫ ಸಾವಿರ ರೂಪಾಯಿ ಮತ್ತು ಹತ್ತು ಸಾವಿರ ರೂಪಾಯಿಗಳನ್ನು ಇಂಜಿನಿಯರುಗಳಿಂದ, ಕಂಟ್ರಾಕ್ಟರುಗಳಿಂದ ಮತ್ತಿತರ ಸಿಬ್ಬಂದಿಗಳಿಂದ ವಸೂಲು ಮಾಡುತ್ತಿದ್ದಾರೆ. ಅದರ ಬಗ್ಗೆ ಸರ್ಕಾರಕ್ಕೆ ದೂರು ಬಂದಿದೆ. ಪತ್ರಿಕೆಗಳಲ್ಲಿ ಆ ವಿಷಯ ಪ್ರಕಟವಾಗಿದೆ. ನಾನೂ ಕೂಡ ಅದರ ಬಗ್ಗೆ ಕ್ರಮ ತೆಗೆದುಕೊಳ್ಳಬೇಕೆಂದು ವಿನಂತಿಸಿಕೊಂಡಿದ್ದೇನೆ. ಆದರೂ ಅದರ ಬಗ್ಗೆ ಏನು ಕ್ರಮ ತೆಗೆದುಕೊಂಡಿದ್ದಾರೋ ಗೊತ್ತಿಲ್ಲ. ಅಧಿಕಾರಿಗಳು ಸರ್ಕಾರದ ಸಿಮೆಂಟ್ ಮತ್ತು ಸ್ಟೀಲನ್ನು ಉಪಯೋಗ ಮಾಡಿಕೊಂಡು ತಮ್ಮ ಬಂಡವಾಳದಿಂದ ಸಂಸ್ಥೆ ಮಾಡಿಕೊಂಡು ಕರ್ನಾಟಕದಲ್ಲಿ ಒಂದು ಕಡೆ ಫ್ಯಾಕ್ಟರಿ ಮಾಡುತ್ತಿದ್ದಾರೆ. ಕರ್ನಾಟಕ ಕನ್‌ಸ್ಟ್ರಕ್ಷನ್ ಕಾರ್ಪೊರೇಷನ್ನಿನ ಅಧಿಕಾರಿಗಳು ಸ್ವತಃ ಅಲ್ಲಿ ಹೋಗಿ ಕೆಲಸ ಮಾಡುತ್ತಿದ್ದಾರೆ. ಸಂಬಳ ಮಾತ್ರ ಸರ್ಕಾರದಿಂದ ತೆಗೆದುಕೊಳ್ಳುತ್ತಿದ್ದಾರೆ. ಅಲ್ಲಿರತಕ್ಕ ಲಾರಿಗಳನ್ನು ಬಳಸಿಕೊಳ್ಳುತ್ತಿದ್ದಾರೆ. ಇದಕ್ಕೆ ಸರ್ಕಾರದ ಪೆಟ್ರೋಲು, ಡೀಸೆಲ್ ವಿನಿಯೋಗ ಆಗುತ್ತಿದೆ. ಇದರ ಜೊತೆಗೆ ಕನ್‌ಸ್ಟ್ರಕ್ಷನ್ ಕಾರ್ಪೊರೇಷನ್ನಿಗೆ ಅನಗತ್ಯವಾದ ಸ್ಪೇರ್‌ಪಾರ್ಟ್‌ಗಳನ್ನು ಮತ್ತಿತರ ವಸ್ತುಗಳನ್ನು ಕೊಂಡುಕೊಂಡು ಅಧಿಕಾರಿಗಳು ಕಮಿಷನ್ ಪಡೆದುಕೊಂಡ ನಿದರ್ಶನಗಳಿವೆ. ಅದನ್ನು ಇಲ್ಲಿ ಉಪಯೋಗ ಮಾಡಿಕೊಳ್ಳದೇ ಸಿಮೆಂಟ್ ಫ್ಯಾಕ್ಟರಿಗೆ ಉಪಯೋಗ ಮಾಡಿಕೊಳ್ಳಲಾಗಿದೆ ಎಂಬ ವಿಷಯ ಜನಜ್ಞನಿತವಾಗಿದೆ. ಎಲ್ಲಾ ಪತ್ರಿಕೆಗಳೂ ಪ್ರಕಟ ಮಾಡಿವೆ. ಸರ್ಕಾರ ಇದನ್ನು ಗಮನಿಸಿರಬಹುದು. ಮೈಸೂರಿನಲ್ಲಿ ಪತ್ರಿಕೆಯಲ್ಲಿ ಪ್ರಕಟವಾಗಿರುವುದನ್ನು ಮಾನ್ಯ ಮಂತ್ರಿಗಳಿಗೆ ಕಳುಹಿಸಿಕೊಟ್ಟಿದ್ದೇನೆ. ನಾನು ಆಗಲೇ ಹೇಳಿದ ಸಿಮೆಂಟ್ ಫ್ಯಾಕ್ಟರಿ ಗುಲ್ಬರ್ಗಾದಲ್ಲಿ ಆಗುತ್ತಿದೆ. ವಿಜಿಲೆನ್ಸ್‌ನವರು ತನಿಖೆ ಕಾರ್ಯವನ್ನು ಪ್ರಾರಂಭ ಮಾಡಿದರೆ ಅದು ಸ್ಥಗಿತವಾಗುತ್ತದೆ. ಇದಕ್ಕೆ ಯಾರ ಪ್ರಭಾವವಿದೆಯೋ ಗೊತ್ತಿಲ್ಲ. ಅಲ್ಲಿರತಕ್ಕ ಅಧಿಕಾರಿಗಳು ಹೇಳುತ್ತಾರೆ, ಏನೇ ಮಾಡಿದರೂ ಎರಡು ಲಕ್ಷ ರೂಪಾಯಿ ಖರ್ಚು ಮಾಡಿದರೆ ವಿಜಿಲೆನ್ಸ್ ಏನೂ ಮಾಡುವುದಿಲ್ಲ ಎಂದು. ಈ ಮಾತನ್ನು ಅಧಿಕಾರಿಗಳು ಘಂಟಾಘೋಷವಾಗಿ ಹೇಳುತ್ತಿದ್ದಾರೆ. ಅಲ್ಲಿ ನಡೆಯುತಕ್ಕ ಅವ್ಯವಹಾರಗಳನ್ನು ನ್ಯೂನಾತಿರೇಕಗಳನ್ನು ಯಾರಾದರೂ ಸಣ್ಣ ಪುಟ್ಟ ನೌಕರರು ಗಮನಕ್ಕೆ ತಂದರೆ ಅವರನ್ನು ಅಲ್ಲಿಂದ ವರ್ಗ ಮಾಡುತ್ತಾರೆ. ಅವ್ಯವಹಾರಗಳನ್ನು ಬಹಿರಂಗಪಡಿಸಿದ ಸಣ್ಣಪುಟ್ಟ ನೌಕರರನ್ನು ಮೈಸೂರಿನಿಂದ ಗುಲ್ಬರ್ಗಾಕ್ಕೆ ಟ್ರಾನ್ಸ್‌ಫರ್ ಮಾಡುವುದು, ಸಸ್ಪೆನ್‌ಷನ್‌ನಲ್ಲಿ ಇಡುವುದು, ಇಂಥ ದುಷ್ಕಾರ್ಯ ನಡೆಯುತ್ತಿದೆ. ಸಾರ್ವಜನಿಕರ ಹಣ ತಿಂದು ತೇಗುವವರು ಅವ್ಯವಹಾರ ಮಾಡಿಕೊಂಡು ಮುಂದುವರೆಯುತ್ತಿದ್ದಾರೆ. ಇದರ ಬಗ್ಗೆ ಏನು ಉತ್ತರ ಕೊಡುತ್ತೀರಿ? ಕನ್‌ಸ್ಟ್ರಕ್ಷನ್ ಕಾರ್ಪೊರೇಷನ್‌ನಲ್ಲಿ ಇಂಥ ಅವ್ಯವಹಾರಗಳು ನಡೆದಿರುವ ಕಾರಣ ೧೯೭೧ ರಲ್ಲಿ ನಂಜನಗೂಡಿನಲ್ಲಿ

ಪ್ರಾರಂಭವಾದ ಕಬಿನಿ ನದಿ ಸೇತುವೆ ಕಾರ್ಯ ಇನ್ನೂ ಮುಗಿದಿಲ್ಲ. ಅದು ಮುಗಿಯಲು ಇನ್ನೂ ಎಷ್ಟು ವರ್ಷಗಳಾಗುತ್ತದೋ ಗೊತ್ತಿಲ್ಲ. ಮಾನ್ಯ ಮಂತ್ರಿಗಳು ಭರವಸೆ ಕೊಟ್ಟಿದ್ದಾರೆ. ಆದರೂ ಅವರ ಕಾಲದಲ್ಲಿ ಆಗುತ್ತದೋ ಇಲ್ಲವೋ ಎಂಬ ಅನುಮಾನ ಇದೆ. ಇದರ ಬಗ್ಗೆ ತೀವ್ರ ಗಮನ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಈ ಅವ್ಯವಹಾರಗಳ ಬಗ್ಗೆ ತಾವು ಸರಿಯಾದ ತನಿಖೆ ನಡೆಸಲು ಅವಕಾಶ ಕೊಡದೇ ರಕ್ಷಣೆ ಕೊಟ್ಟರೆ ಸರ್ಕಾರದ ಅಥವಾ ಪ್ರಭಾವಿಗಳ ಕೈವಾಡ ಇದರಲ್ಲಿರಬಹುದೆಂಬ ಶಂಕೆ ಜನರಲ್ಲಿ ಬರುತ್ತದೆ. ಆದ್ದರಿಂದ ಈ ವಿಷಯ ಯಾವ ಹಂತದಲ್ಲಿದೆ ಎಂಬುದನ್ನು ಉತ್ತರ ಕೊಡುವಾಗ ದಯವಿಟ್ಟು ತಿಳಿಸಬೇಕೆಂದು ಕಳಕಳಿಯಿಂದ ಕೇಳಿಕೊಳ್ಳುತ್ತೇನೆ. ಸ್ವಾತಂತ್ರ್ಯಾನಂತರ ಒಂದು ಹೊಸ ಪ್ರವೃತ್ತಿ ನಮ್ಮ ಇಲಾಖೆಯಲ್ಲಿ ಪ್ರಾರಂಭವಾಯಿತು. ನಮ್ಮ ರಾಜ್ಯದಲ್ಲಿ ಯಾವುದೇ ಕೆಲಸವನ್ನು ಮಾಡಿಸಬೇಕಾದರೂ ಆಂಧ್ರ ಮತ್ತು ತಮಿಳುನಾಡಿನವರಿಗೆ ಕಂಟ್ರಾಕ್ಟ್ ಕೊಡುತ್ತೀರಿ. ೧೦೦ಕ್ಕೆ ನೂರರಷ್ಟು ಅವರಿಗೆ ಕೊಡುತ್ತಿದ್ದೀರಿ ಎಂದರೆ ತಪ್ಪಾಗಲಾರದು. ನೌಕರಿಯಲ್ಲಿ ಹರಿಜನರು ಎಷ್ಟಿದ್ದಾರೆ ಎಂದು ನಮ್ಮ ಮಿತ್ರರು ಕೇಳುತ್ತಿದ್ದರು. ಇರತಕ್ಕ ಕೆಲವು ನೌಕರಿಯಲ್ಲಿ ಕೇವಲ ೧೦–೨೦ ಜನರಿಗೆ ನೌಕರಿ ಕೊಟ್ಟರೆ ಆ ಸಮಾಜದ ಉದ್ಧಾರ ಆಗುವುದಿಲ್ಲ; ದೇಶದ ಉದ್ಧಾರ ಆಗುವುದಿಲ್ಲ. ಹರಿಜನ ಗಿರಿಜನರಿಗೆ ಕಂಟ್ರಾಕ್ಟ್ ಕೊಡುವಾಗ ಎಷ್ಟು ಪರ್ಸೆಂಟ್ ಕೊಟ್ಟಿದ್ದೀರಿ? ಎಷ್ಟು ಕೋಟಿ ರೂಪಾಯಿಗಳ ಕಂಟ್ರಾಕ್ಟ್ ಕೊಟ್ಟಿದ್ದೀರಿ? ಯಾರಿಗೂ ಕೊಟ್ಟಿಲ್ಲ ಎಂಬುದು ಎಲ್ಲರಿಗೂ ಗೊತ್ತಿರುವ ವಿಚಾರ. ಅದನ್ನು ಏತಕ್ಕೆ ಕೊಟ್ಟಿಲ್ಲ ಎಂಬುದನ್ನು ಹೇಳಿ. ಕರ್ನಾಟಕದವರಿಗಲ್ಲದೆ ಬೇರೆಯವರಿಗೆ ಏತಕ್ಕೆ ಕಂಟ್ರಾಕ್ಟ್ ಕೊಡುತ್ತೀರಿ ಎಂದು ಕೇಳಿದರೆ ಕನ್ನಡಿಗರು ಕೆಲಸ ಮಾಡುವುದಿಲ್ಲ. ಅವರು ಚೆನ್ನಾಗಿ ಕೆಲಸ ಮಾಡುತ್ತಾರೆ ಎಂದು ಹೇಳುತ್ತೀರಿ. ಇದು ನಿಮಗೆ ಅಧಿಕಾರಿಗಳು ಕೊಡುವ ಮಾಹಿತಿ. ಕನ್ನಡಿಗರು ಕಂಟ್ರಾಕ್ಟ್ ಕೆಲಸ ತೆಗೆದುಕೊಂಡರೆ ೧೦–೧೫ ಪರ್ಸೆಂಟ್ ಕಾಣಿಕೆ ಕೊಡುತ್ತಾರೆ, ಬೇರೆಯವರಾದರೆ ೪೦ ಪರ್ಸೆಂಟ್ ಕೊಡುತ್ತಾರೆಂದು ಅವರನ್ನು ಹೋಗಿ ಕರೆದುಕೊಂಡುಬಂದು ಕಂಟ್ರಾಕ್ಟ್ ಕೊಡತಕ್ಕ ಪರಿಸ್ಥಿತಿ ಬೆಳೆದುಬಂದಿದೆ. ಇದರ ಬಗ್ಗೆ ಸದನದ ಸಮಿತಿ ಮಾಡಿ ವಿಚಾರಣೆ ನಡೆಸಿ. ಈ ಕೆಲಸಕ್ಕೆ ಯಾವ ಅಧಿಕಾರಿಗಳು ಕಾರಣರಾಗಿದ್ದಾರೋ ಅವರು ಕನ್ನಡ ನಾಡಿನ ದ್ರೋಹಿಗಳು ಎಂದು ಹೇಳಬೇಕಾಗುತ್ತದೆ. ಶ್ರೀಮಾನ್ ರಾಜಗೋಪಾಲಾಚಾರಿಯವರು ಪಬ್ಲಿಕ್ ಎನಿಮಿ ನಂಬರ್–೧ ಎಂದು ಏನು ಹೇಳಿದ್ದಾರೆ ಅದೇರೀತಿ ಇವರು ದ್ರೋಹಿಗಳು. ಇದರ ಬಗ್ಗೆ ತೀವ್ರ ತನಿಖೆ ಮಾಡಬೇಕು. ಕನ್ನಡಿಗರೇನೂ ಸೋಮಾರಿಗಳಲ್ಲ. ಕಮಿಷನ್ ಕಡಿಮೆ ಕೊಡುತ್ತಾರೆಂದು ಹೊರಗಡೆಯವರಿಗೆ ಕಂಟ್ರಾಕ್ಟ್ ಕೆಲಸ ಕೊಡುತ್ತಿದ್ದಾರೆ. ಅನೇಕ ಬೃಹತ್‌ಕಾರ್ಯಗಳ ಕೆಲಸವನ್ನು ಬೇರೆಯವರಿಗೆ ವಹಿಸಿ ಕನ್ನಡಿಗರಿಗೆ ಕೂಲಿಯೂ ಸಿಗದಂತೆ ಮಾಡುವುದಕ್ಕೆ ಯಾವ ಅಧಿಕಾರಿಗಳು ಹೊಣೆಯಾಗಿದ್ದಾರೆ ಎಂಬ ಬಗ್ಗೆ ತನಿಖೆ ಮಾಡಿ ಮಾಹಿತಿ ಸಂಗ್ರಹಿಸಿ ಅದನ್ನು ಸದನದ ಮುಂದೆ ಇಡಬೇಕು. ಮತ್ತು ಇಂಥ ಪರಿಸ್ಥಿತಿ ಮುಂದುವರೆಯದಂತೆ ನೋಡಿಕೊಳ್ಳಬೇಕು ಎಂದು ಕಳಕಳಿಯಿಂದ ವಿನಂತಿಸಿಕೊಳ್ಳುತ್ತೇನೆ. ಇನ್ನು ನಮ್ಮ ಜಿಲ್ಲೆಯ ಕೆಲವು ಕಾರ್ಯಕ್ರಮಗಳ ಬಗ್ಗೆ ಕೆಲವು ಮಾತುಗಳನ್ನು ಹೇಳುತ್ತೇನೆ. ಮೈಸೂರಿನಲ್ಲಿ ಜಿಲ್ಲಾ ಕಚೇರಿಯನ್ನು ಬೇರೆ ಕಡೆಗೆ ಬದಲಾವಣೆ ಮಾಡಬೇಕೆಂಬ ಯೋಜನೆ ಇತ್ತು. ಆ ವಿಷಯ ಏನಾಯಿತು? ಅದನ್ನು ಕೈಬಿಟ್ಟಿದ್ದಾರೋ ಏನೋ ಅದರ ಬಗ್ಗೆ ತಿಳಿಸಬೇಕು. ೧೯೬೩ ರಲ್ಲಿ ಜನರಲ್ ಆಸ್ಪತ್ರೆ ಕಟ್ಟಡ ಪ್ರಾರಂಭವಾಯಿತು; ೯ ವರ್ಷಗಳು ಮುಗಿದರೂ ಕೂಡ ಇನ್ನು ಅರ್ಧ ಸ್ಥಿತಿಯಲ್ಲಿಯೇ ಇದೆ. ರೋಗಿಗಳಿಗೆ ಔಷದೋಪಚಾರ ಕೊಡತಕ್ಕ, ಸೌಲಭ್ಯ ಒದಗಿಸತಕ್ಕ ಆಸ್ಪತ್ರೆ ಕಟ್ಟಡಗಳಿಗೆ ಸಿಮೆಂಟ್ ಇಲ್ಲವೆ? ಕಬ್ಬಿಣ ಇಲ್ಲವೆ? ಸಿಮೆಂಟ್ ಏತಕ್ಕೆ ಕೊಡಲಿಲ್ಲ ಎನ್ನುವುದನ್ನು ತಾವು ತಿಳಿಸಬೇಕಾಗುತ್ತದೆ. ನ್ಯಾಯಾಲಯಗಳ ಕಟ್ಟಡಕ್ಕಾಗಿ ೨೨ ೪೫ ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದೀರಿ; ಇದುವರೆವಿಗೂ ಯಾವ ಕಾರ್ಯವನ್ನು ಮಾಡಿಲ್ಲ. ಇವತ್ತು ಡಿಸ್ಟ್ರಿಕ್ಟ್ ಬೋರ್ಡ್ ಕಟ್ಟಡ ಇದೆ; ಅದರಲ್ಲಿ ಲೋಕೋಪಯೋಗಿ ಇಲಾಖೆಗೆ ಸೇರಿದ ಕಛೇರಿಗಳು ಇವೆ. ಲೋಕೋಪಯೋಗಿ ಇಲಾಖೆಗೆ ಸಂಬಂಧಪಟ್ಟಂತೆ ಅನೇಕ ಇಲಾಖೆಗಳ ಸಮಗ್ರವಾದ ಒಂದು ಕಾರ್ಯಾಲಯದ ಕಟ್ಟಡವನ್ನು ಮೈಸೂರಿನಲ್ಲಿ ಕಟ್ಟಬೇಕೆಂದು ಮನವಿ ಮಾಡಿದ್ದೆವು; ಇದರ ಬಗ್ಗೆ ತಾವು ಗಮನ ಹರಿಸಿ; ಡಿಸ್ಟ್ರಿಕ್ಟ್ ಬೋರ್ಡ್ ಕಟ್ಟಡವನ್ನು ನ್ಯಾಯಾಂಗ ಇಲಾಖೆಗೆ ವಹಿಸಿಕೊಟ್ಟರೆ ಅನುಕೂಲವಾಗುತ್ತದೆ. ಈಗ ಹಾಲಿ ನ್ಯಾಯಾಲಯಗಳು ಇರತಕ್ಕ ಕಟ್ಟಡ ಕಿಷ್ಕಿಂದವಾಗಿದ್ದು; ಬಹಳ ತೊಂದರೆ ಇದೆ. ನ್ಯಾಯಾಲಯಗಳ ಕಟ್ಟಡ ಇಲ್ಲದೇ ಕೆಲವು ನ್ಯಾಯಾಧೀಶರವನ್ನು ನೇಮಿಸದೇ ಇರತಕ್ಕ ಪ್ರಸಂಗಗಳು ಇದೆ. ರೆಂಟ್ ಕಂಟ್ರೋಲ್‌ನಲ್ಲಿ ವರ್ಷಗಟ್ಟಲೆ ಕಾಯಬೇಕಾಗುತ್ತದೆ. ಈ ವಿಚಾರದಲ್ಲಿ ತಾವು ತೀವ್ರ ಗಮನಹರಿಸಬೇಕೆಂದು ವಿನಂತಿಸಿಕೊಳ್ಳುತ್ತೇನೆ.

ಮೈಸೂರು ನಗರದಲ್ಲಿ ಅರಣ್ಯ ಇಲಾಖೆಗೆ ಸಂಬಂಧಪಟ್ಟಂತೆ ಬಹು ಅಂತಸ್ತಿನ ಕಟ್ಟಡವನ್ನು ಕಟ್ಟಲಿಕ್ಕಾಗಿ ೨೨ ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದೀರಿ; ಇದುವರೆವಿಗೂ ಕಾರ್ಯ ಆರಂಭ ಮಾಡಿಲ್ಲ. ಇದಕ್ಕೆ ಕಾರಣ ಏನು ಎನ್ನುವುದನ್ನು ತಿಳಿಸಬೇಕು. ಕೊನೆಯದಾಗಿ ನುಗು ನದಿಗೆ ಸಂಗಮದ ಹತ್ತಿರ ೧೪ ಲಕ್ಷ ರೂಪಾಯಿಗಳ ಅಂದಾಜಿನಲ್ಲಿ ಒಂದು ಸೇತುವೆ ಕಟ್ಟುವ ಯೋಜನೆ ತಯಾರು ಮಾಡಿದ್ದರು; ಇದರ ಬಗ್ಗೆ ತಾವು ಗಮನಕೊಡಬೇಕೆಂದು ಹೇಳುತ್ತೇನೆ. ಇನ್ನು ನನ್ನ ಕ್ಷೇತ್ರಕ್ಕೆ ಸಂಬಂಧಪಟ್ಟ ಹಾಗೆ ಮೈಸೂರು ನಗರದ ಹತ್ತಿರ ಜಲಪುರಿ ರಸ್ತೆಯಿಂದ ಅಂದರೆ; ಜಲಪುರಿಯಿಂದ ಮಾಸಾಬಳ್ಳಿ, ಅರ್ಜನ ಮಾರ್ಗವಾಗಿ ಹೋಗತಕ್ಕಂಥ ರಸ್ತೆಯಲ್ಲಿ ಕಬಿನಿ ನದಿಗೆ ಅಡ್ಡಲಾಗಿ ಕಟ್ಟಬೇಕಾಗಿರುವ ಸೇತುವೆ. ಇದನ್ನು ಆದಷ್ಟು ಶೀಘ್ರವಾಗಿ ಮಾಡಿಸಿ ಕೊಡಬೇಕೆಂದು ಹೇಳಿ; ನನಗೆ ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಸಿ.ಎ. ಚಂದ್ರೇಗೌಡ (ಚಿಕ್ಕಮಗಳೂರು).– ಮಾನ್ಯ ಅಧ್ಯಕ್ಷರೇ, ಮಾನ್ಯ ಲೋಕೋಪಯೋಗಿ ಸಚಿವರು ಮತ್ತು ಬಂದರುಗಾರಿಕೆ ಸಚಿವರು ಮಂಡಿಸಿರತಕ್ಕಂಥ ಬೇಡಿಕೆಗಳನ್ನು ಸಂಪೂರ್ಣವಾಗಿ ಸ್ವಾಗತಿಸುತ್ತಾ ಕೆಲವು ವಿಚಾರಗಳನ್ನು ಪ್ರಸ್ತಾಪ ಮಾಡುವುದಕ್ಕೆ ಇಚ್ಛೆಪಡುತ್ತೇನೆ. ನಾನು ಲೋಕೋಪಯೋಗಿ ಇಲಾಖೆಯ ಬಡ್ಜೆಟ್ ಬಗ್ಗೆ ನಾಲ್ಕನೇ ಭಾರಿ ಮಾತನಾಡುತ್ತಿದ್ದೇನೆ. ಈ ಇಲಾಖೆ ಬಗ್ಗೆ ಅನೇಕ ಪ್ರಮುಖವಾದ ವಿಚಾರಗಳನ್ನು ಪ್ರಸ್ತಾಪ ಮಾಡಿದ್ದೇನೆ. ಇವತ್ತಿನವರೆಗೂ ಅನೇಕ ಕೆಲಸ ಕಾರ್ಯಗಳ ಬಗ್ಗೆ ಸರ್ಕಾರ ಗಣನೆಗೆ ತೆಗೆದುಕೊಂಡಿಲ್ಲವೆಂದು ವಿಷಾದದಿಂದ ಹೇಳಬೇಕಾಗಿದೆ. ಈ ಇಲಾಖೆ ಜನತೆಯ ಸಂಪರ್ಕವನ್ನು ಹೊಂದಿರುವಂತ, ಹಿಂದುಳಿದವರ ಅಭಿವೃದ್ಧಿಯನ್ನು ಮಾಡತಕ್ಕ ದೊಡ್ಡ ಇಲಾಖೆ. ಇಂಥ ಒಂದು ದೊಡ್ಡ ಇಲಾಖೆಗೆ ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದಂತೆ, ಬಡ್ಜೆಟ್ಟಿನ ಅರ್ಧ ಭಾಗದ ಹಣವನ್ನು ಕೊಟ್ಟರೂ ಕೂಡ ನಾವು ಏನು ನಿರೀಕ್ಷೆ ಮಾಡಿದ್ದೇವೋ ಆ ಕಾರ್ಯವನ್ನು ಮಾಡಿಲ್ಲವೆಂದು ಬಹಳ ವಿಷಾದದಿಂದ ಹೇಳಬೇಕಾಗಿದೆ. ಪ್ರತಿ ವರ್ಷವೂ ಬಡ್ಜೆಟ್ಟಿನಲ್ಲಿ ಮಂಜೂರಾದ ಕೆಲಸ ಕಾರ್ಯಗಳನ್ನು ತೆಗೆದುಕೊಳ್ಳದೇ ಒಂದಕ್ಕೆ ಮೂರರಷ್ಟು ಅಧಿಕ ಹಣ ಖರ್ಚು ಮಾಡತಕ್ಕ ಸಂದರ್ಭಗಳೇ ಉಂಟಾಗಿವೆ. ಈ ವರ್ಷ ೨೦,೦೦೦ ರೂಪಾಯಿನಲ್ಲಿ ಒಂದು ಕಿಲೋಮೀಟರ್ ಉದ್ದದ ರಸ್ತೆಯನ್ನು ಪೂರೈಸದೇ ಹೋದಲ್ಲಿ ಅದು ಮುಂದಿನ ವರ್ಷಕ್ಕೆ ೬೦,೦೦೦ ರೂಪಾಯಿಗಳಷ್ಟು ಜಾಸ್ತಿಯಾಗುತ್ತದೆ, ನಿಗಧಿಯಾದ ವೇಳೆಯಲ್ಲಿ ಕೈಗೊಂಡಂಥ ಕಾಮಗಾರಿಗಳನ್ನು ಮುಗಿಸದೇಹೋದರೆ ? ನಮ್ಮ ಕಾಲಾವಧಿಯಲ್ಲಿ ನಮ್ಮ ಕ್ಷೇತ್ರದ ಜನತೆಯ ಆಧ್ಯತೆಯನ್ನು ಈಡೇರಿಸುವುದಕ್ಕೆ ಸಾಧ್ಯವಾಗುವುದಿಲ್ಲ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ ೧೯೮೧-೮೨ರ ಬಡ್ಜೆಟ್ಟಿನಲ್ಲಿ ಸೇರಿಸಲಾದ ಕೆಲಸಕಾರ್ಯಗಳನ್ನು ಇನ್ನು ಪ್ರಾರಂಭ ಮಾಡಿಲ್ಲ. ಇವತ್ತು ೧೯೮೨-೮೩ನೇ ಸಾಲಿನ ಕಾಮಗಾರಿಗಳಿಗೆ ಅನುಮೋದನೆ ಕೊಡುತ್ತಿದ್ದೇವೆ. ೧೯೮೧-೮೨ನೇ ಸಾಲಿನ ಕೆಲಸ ಕಾರ್ಯಗಳನ್ನೇ ಪ್ರಾರಂಭ ಮಾಡದೇ ಇರುವಾಗ, ಈ ಕೆಲಸ ಕಾರ್ಯಗಳನ್ನು ಯಾವಾಗ ಪ್ರಾರಂಭ ಮಾಡುತ್ತೀರಿ ? ಕೊನೆಗೆ ಯಾವ ಕೆಲಸಗಳನ್ನು ತೆಗೆದುಕೊಳ್ಳದಂಥ ಸಂದರ್ಭಗಳು ಬರಬಹುದು. ಮಾನ್ಯ ಮಂತ್ರಿಯವರು ಬಹಳ ಉದಾರತೆಯಿಂದ ಎಲ್ಲಾ ಕ್ಷೇತ್ರಗಳಿಗೂ ೮-೧೦ ಲಕ್ಷ ರೂಪಾಯಿಗಳ ಸಿಲ್ವರ್ ಜ್ಯೂಬಿಲಿ ಕಾಮಗಾರಿಗಳೆಂದು ವಿಶೇಷವಾಗಿ ಕೊಟ್ಟಿದ್ದಾರೆ, ಅವು ಕೂಡ ಪ್ರಾರಂಭದ ಹಂತಕ್ಕೆ ಬಂದಿಲ್ಲ. ಎಸ್ಟಿಮೇಟ್ ಹಂತದಲ್ಲಿರಬಹುದು, ಇಲ್ಲವೇ ಸ್ಕ್ರೂಟಿನಿ ಹಂತದಲ್ಲಿರಬಹುದು, ಇಲ್ಲವೇ ಹಣಕಾಸಿನ ಇಲಾಖೆಯ ಒಪ್ಪಿಗೆಗೆ ಹೋಗಿರಬಹುದು, ಇಲ್ಲವೇ ಟೆಕ್ನಿಕಲ್ ಹಂತದಲ್ಲಿರಬಹುದು. ಪ್ರಾರಂಭ ಹಂತಕ್ಕೂ ಇನ್ನೂ ಬಂದಿಲ್ಲ. ಅಂದರೆ, ಎಷ್ಟರಮಟ್ಟಿಗೆ ಈ ಕಾಮಗಾರಿಗಳನ್ನು ನಮ್ಮ ಕಾಲಾವಧಿಯಲ್ಲಿ, ವರ್ಷದ ಕಾಲಾವಧಿಯಲ್ಲಿ, ಬಡ್ಜೆಟ್ಟಿನಲ್ಲಿ ಅಳವಡಿಸಿರತಕ್ಕಂಥ ಹಣವನ್ನು ಖರ್ಚು ಮಾಡಿ, ಕಾಮಗಾರಿಗಳನ್ನು ಮುಗಿಸುವುದಕ್ಕೆ ಸಾಧ್ಯವಾಗುತ್ತದೆಯೋ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಮಾನ್ಯ ಮಂತ್ರಿಯವರ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ.

ಮಾನ್ಯ ಮಂತ್ರಿಯವರು ಸಾಮಾನ್ಯ ಜನತೆಯ ಅಭಿವೃದ್ಧಿಯ ಬಗ್ಗೆ ಹೆಚ್ಚಿನ ಕಳಕಳಿಯುಳ್ಳವರೂ ನಮ್ಮ ಪುಣ್ಯಕ್ಕೆ ಮಲೆನಾಡಿನವರೇ ಆಗಿದ್ದಾರೆ, ಹಿಂದೆಯೂ ಕೂಡ ಮಲೆನಾಡಿನವರೇ ಲೋಕೋಪಯೋಗಿ ಮಂತ್ರಿಗಳಾಗಿದ್ದರು. ನಾವು ಅನೇಕ ಸಲ ಈ ಮನೆಯಲ್ಲಿ ಪ್ರಸ್ತಾಪ ಮಾಡಿದ್ದೇವೆ, ಮಲೆನಾಡಿಗೂ ಬಯಲು ಸೀಮೆಗೂ ಒಂದೇ ರೀತಿಯಾದ ಮೇಂಟೆನೇನ್ಸ್ ಗ್ರ್ಯಾಂಟ್ ಇಡಬೇಡಿ, ಮಲೆನಾಡಿನಲ್ಲಿ ಅಭಿವೃದ್ಧಿ ಕಾರ್ಯಗಳು ಬಹಳ ತೀವ್ರಗತಿಯಿಂದ ಕೈಗೊಳ್ಳಬೇಕಾಗುತ್ತದೆ. ಮಾನ್ಯ ಅಧ್ಯಕ್ಷರೇ, ತಮಗೆ

ಗೊತ್ತಿರುವಂತೆ ಮಲೆನಾಡಿನಲ್ಲಿ ಈ ವರ್ಷ ಮಾಡಿರತಕ್ಕಂಥ ರಸ್ತೆಗೆ ಆಸ್ಫಾಲ್ಟಿಂಗ್, ರೀಕೋಟಿಂಗ್, ಸಿಲ್ಕ್ ಕೋಟಿಂಗ್ ಇಷ್ಟನ್ನು ಮಾಡದೇ ಇದ್ದರೆ ? ಎರಡು ವರ್ಷಗಳೊಳಗೆ ಟಾರ್ ಹಾಕಿದ್ದರೆ ? ಜೆಲ್ಲಿ ಹಾಕಿದ್ದರೆ ? ಎನ್ನುವುದು ಕೂಡ ಗೊತ್ತಾಗುವುದಿಲ್ಲ. ೩೦೦ ಇಂಚು ಮಳೆ ಬೀಳುವಂಥ ಜಾಗಕ್ಕೂ ೧೦–೨೦ ಇಂಚು ಮಳೆ ಬೀಳುವಂಥ ಪ್ರದೇಶಕ್ಕೂ ಒಂದೇ ರೀತಿಯಾದ ಮೆಂಟೆನೇನ್ಸ್ ಗ್ರಾಂಟ್ ನೀಡಿದರೆ ಹೇಗೆ ಸಾಧ್ಯ ? "ಆನೆ ಹೊಟ್ಟೆಗೆ ಅರೆಕಾಸಿನ ಮಜ್ಜಿಗೆ" ಹಾಕಿದಂತೆ ಆಗುತ್ತದೆ. ಇದನ್ನು ಜಾಸ್ತಿ ಮಾಡಬೇಕೆಂದು ಒತ್ತಾಯಪೂರ್ವಕವಾಗಿ ಹೇಳುತ್ತೇನೆ.

ಇನ್ನು ಮಲೆನಾಡು ಅಭಿವೃದ್ಧಿಗೆ ಸಂಬಂಧಪಟ್ಟಂತೆ ದಕ್ಷಿಣ ಕನ್ನಡ ಜಿಲ್ಲೆ, ಶಿವಮೊಗ್ಗ ಜಿಲ್ಲೆ, ಹಾಸನ ಜಿಲ್ಲೆ, ಚಿಕ್ಕಮಗಳೂರು ಜಿಲ್ಲೆಗಳೂ ಸೇರಿದಂತೆ, ಬೃಹತ್ ಯೋಜನೆಗಳ ಜೊತೆಗೆ ಅನೇಕ ಸೇತುವೆಗಳು, ಸಣ್ಣಪುಟ್ಟ ರಸ್ತೆಗಳು, ಪಿಕಪ್‌ಗಳು ಮಾಡಬೇಕಾಗಿದೆ. ತಮಗೆ ಗೊತ್ತಿರುವಂತೆ ತಾಲೂಕು ಅಭಿವೃದ್ಧಿ ಮಂಡಲಿಗಳಲ್ಲಿ ಇರುವುದನ್ನು ಮೆಂಟೇನೆನ್ಸ್ ಮಾಡುವುದಕ್ಕೆ ಶಕ್ತಿ ಇಲ್ಲ, ಪಂಚಾಯಿತಿಗಳಿಗೂ ಕೂಡ ಶಕ್ತಿ ಇಲ್ಲ. ಒಂದು ವರ್ಷ ಜಲ್ಲಿ ಹಾಕಿ ಮತ್ತೊಂದು ವರ್ಷ ಟಾರ್ ಹಾಕುವುದರಿಂದ ಇನ್ನು ಹತ್ತು ವರ್ಷಗಳಾದರೂ ಮಲೆನಾಡಿನಲ್ಲಿ ಕಾಮಗಾರಿಗಳನ್ನು ಮುಗಿಸುವುದಕ್ಕಾಗುವುದಿಲ್ಲ. ಒಂದೇ ವರ್ಷದಲ್ಲಿ ಎಲ್ಲಾ ರೀತಿಯ ಕಾಮಗಾರಿಗಳನ್ನು ಮಾಡುವಂಥ ವ್ಯವಸ್ಥೆಯನ್ನು ಬಡ್ಜೆಟ್ಟಿನಲ್ಲಿ ಅಳವಡಿಸದೇ ಹೋದರೆ ಮಲೆನಾಡಿನ ಜನತೆಗೆ ಯಾವ ರೀತಿಯ ಉಪಯೋಗವೂ ಆಗುವುದಿಲ್ಲ. ೪೦ ವರ್ಷಗಳ ಹಿಂದೆ ಇದ್ದಂತೆ ಎತ್ತಿನ ಗಾಡಿಯಲ್ಲಿ ಹೋಗುವುದು ತಪ್ಪಿಲ್ಲ, ಕತ್ತೆಗಳ ಮೇಲೆ ಹೊರೆಯನ್ನು ಹೇರತಕ್ಕ ಪರಿಸ್ಥಿತಿಯನ್ನು ಮೂವತ್ತೈದು ವರ್ಷಗಳು ಕಳೆದರೂ ನೋಡುತ್ತಿದ್ದೇವೆ. ಆದಕ್ಕೋಸ್ಕರ ಸರ್ಕಾರದವರು ಮಲೆನಾಡಿನ ಜನತೆಗೆ ಸಾರಿಗೆ ಸಂಪರ್ಕವನ್ನು ಕಲ್ಪಿಸಿಕೊಡುವಂಥ ಯೋಜನೆಗಳನ್ನು ಜಾರಿಗೆ ತರಬೇಕೆಂದು ಹೇಳುತ್ತೇನೆ. ಸ್ವಾಮಿ. ಜಾಗರ್ ಮತ್ತು ಕಾಂಡ್ಯ ಎನ್ನುವ ಎರಡು ಹೋಬಳಿಗಳು, ಮಳೆ ಪ್ರಾರಂಭವಾದರೆ ಕನಿಷ್ಟ ೬ ತಿಂಗಳ ಕಾಲ ಯಾವ ಸಂಪರ್ಕವೂ ಇಲ್ಲದೇ ಇರುವಂಥ ಸ್ಥಿತಿಯಲ್ಲಿ ಇಂದಿಗೂ ಇವೆ. ಅವರಿಗೆ ಬೇಕಾದ ಸಾಮಾನುಗಳನ್ನು, ಔಷಧಿಗಳನ್ನು ೬ ತಿಂಗಳಿಗಾಗುವಷ್ಟು ಶೇಖರಣೆ ಮಾಡಿಟ್ಟುಕೊಳ್ಳಬೇಕಾಗಿದೆ. ಹಾಸ್ಟೆಲುಗಳಲ್ಲಿ ಇರತಕ್ಕ ವಿದ್ಯಾರ್ಥಿಗಳು ೬ ತಿಂಗಳ ಕಾಲ ತಂದೆ ತಾಯಿಗಳನ್ನು ನೋಡುವುದಕ್ಕಾಗುವುದಿಲ್ಲ. ಇವತ್ತಿಗೂ ಇಂಥ ಗ್ರಾಮಗಳು ಮಲೆನಾಡಿನಲ್ಲಿವೆ.

ಈ ರೀತಿ ಇರುವಾಗ ಮಲೆನಾಡಿನ ಆದ್ಯತೆಗಳನ್ನು ಕಡೆಗಣಿಸಲಿಕ್ಕೆ ಸಾಧ್ಯವಿಲ್ಲ, ಇದಕ್ಕೆ ಪ್ರತ್ಯೇಕವಾದಂಥ ಒಂದು ಯೋಜನೆಯನ್ನು ಹಾಕಿಕೊಂಡು ಬಡ್ಜೆಟ್ಟಿನಲ್ಲಿ ಹಣ ಅಳವಡಿಸಿಕೊಂಡು ಕಾಮಗಾರಿ ಕೆಲಸ ಮಾಡಬೇಕು. ರೂರಲ್‌ನಲ್ಲಿರತಕ್ಕವರು ಬೇರೆ ಏನೂ ಕೇಳುವುದಿಲ್ಲ. ಅವರು ನಮಗೆ ಒಂದು ರಸ್ತೆ ಮಾಡಿಸಿಕೊಡಿ, ಸೇತುವೆ ಕಟ್ಟಿಸಿಕೊಡಿ, ಒಂದು ಶಾಲೆ ಕಟ್ಟಿಸಿಕೊಡಿ ಎಂದು ಕೇಳುತ್ತಾರೆಯೇ ಹೊರತು, ಆಧುನಿಕವಾದಂಥಾದ್ದನ್ನು ಬೇರೆ ಏನೂ ಕೇಳಲಿಕ್ಕೆ ಇಷ್ಟಪಡುವುದಿಲ್ಲ, ತಾವೂ ಕೂಡ ಆ ಪ್ರದೇಶಗಳನ್ನು ನೋಡಿದ್ದೀರಿ. ಅಲ್ಲದೇ ತಾವು ಅದೇ ಪ್ರದೇಶದಿಂದ ಬಂದಿದ್ದೀರಿ ಆದ್ದರಿಂದ. ಮಾನ್ಯ ಮಂತ್ರಿಗಳು, ರೂರಲ್ ಭಾಗಕ್ಕೆ ಹೆಚ್ಚಿನ ಗಮನಹರಿಸಿ, ಉತ್ತಮ ಕಾರ್ಯ ಮಾಡಬೇಕು. ನಾವು ನಾಲ್ಕು ವರ್ಷದಿಂದಲೂ ಈ ಬಡ್ಜೆಟ್ ಪುಸ್ತಕದಲ್ಲಿ ಸ್ಪೆಷಲ್ ವರ್ಕ್ ಲಿಸ್ಟ್ ನೋಡುತ್ತಿದ್ದೇವೆ ಬಯಲು ಸೀಮೆಗೂ ಒಂದೇ ಹಣ, ಮಲೆನಾಡಿಗೂ ಒಂದೇ ಹಣವನ್ನು ಟೇಕನ್ ಓವರ್ ರಸ್ತೆ ಅಲ್ಲಿಗೆ ೧೫ ಕಿಲೋಮೀಟರ್ ಅಂದರೆ ಇಲ್ಲಿಗೂ ೧೫ ಕಿಲೋಮೀಟರ್. ಅವರಿಗೆ ಒಂದು ಸೇತುವೆ ಅಂದರೆ ನಮಗೂ ಒಂದು ಸೇತುವೆ, ಸ್ಪೆಷಲ್ ಗ್ರಾಂಟ್ಸ್ ಅವರಿಗೆ ೫ ಲಕ್ಷ ಅಂದರೆ ನಮಗೂ ೫ ಲಕ್ಷ, ಇವೊತ್ತು ಅರ್ಧ ಪಾವು ಅಕ್ಕಿ ಊಟ ಮಾಡತಕ್ಕವನಿಗೂ, ಎರಡು ಪಾವು ಅಕ್ಕಿ ಊಟ ಮಾಡತಕ್ಕವನಿಗೂ ಒಂದೇ ತರಹ ಊಟ ಹಾಕಿ ತೃಪ್ತಿ ಮಾಡಲಿಕ್ಕೆ ಆಗುತ್ತದಯೇ? ಆದ್ದರಿಂದ ನಮ್ಮ ಭಾಗಕ್ಕೆ ಹೆಚ್ಚು ಹಣ ಕೊಡುವ ಬಗ್ಗೆ ಪ್ರಿಯಾರಿಟಿ ಕೊಟ್ಟು ಕೆಲಸ ಮಾಡಿಸಬೇಕು ಇನ್ನು ಎಸ್ಟಿಮೇಟ್ ವಿಚಾರದ ಬಗ್ಗೆ ನಾನು ಮೊದಲಿನಿಂದಲೂ ಹೇಳುತ್ತಾ ಬಂದಿದ್ದೇನೆ. ತಾವು ಯಾವುದೇ ಕಾಮಗಾರಿ ಕೆಲಸವನ್ನು ಬಡ್ಜೆಟ್‌ನಲ್ಲಿ ಸೇರಿಸಬೇಕಾದರೆ, ಮೊದಲೇ ಎಸ್ಟಿಮೇಟ್ ಅಪ್ರೂವಲ್, ಡಿಪಾರ್ಟ್‌ಮೆಂಟಲ್ ಸ್ಯಾಂಕ್ಷನ್ ಟೆಕ್ನಿಕಲ್ ಸ್ಯಾಂಕ್ಷನ್, ಫೈನಾನ್ಸ್ ಕನ್‌ಕರೆನ್ಸ್ ತೆಗೆದುಕೊಂಡುಬಂದು ಬಡ್ಜೆಟ್ಟಿನಲ್ಲಿ ಸೇರಿಸಿ. ನಾನು ಇದರ ಬಗ್ಗೆ ಅನೇಕ ಕಮಿಟಿಗಳಲ್ಲಿ ಪ್ರಸ್ತಾಪ ಮಾಡಿದ್ದೇನೆ. ೧೯೪೮-೪೯ರ ಬಡ್ಜೆಟ್ ಕೆಲಸಗಳು ಇವತ್ತಿನವರೆಗೂ ಪ್ರಾರಂಭವಾಗಿಲ್ಲ, ಮೊದಲು ಎಸ್ಟಿಮೇಟೆಡ್ ಹಣ ೧ ಲಕ್ಷ ರೂಪಾಯಿ ಇರುತ್ತದೆ, ಇವೊತ್ತು ಅದು ರೀಎಸ್ಟಿಮೇಟ್ ಆದರೆ ೩ ಲಕ್ಷ ರೂಪಾಯಿ ಆಗುತ್ತದೆ. ಇದರಿಂದ ಸರ್ಕಾರದ ಬೊಕ್ಕಸಕ್ಕೆ ನಷ್ಟ ಬರುವ

ದಿಲ್ಲವೇ ? ಆಯಾ ವರ್ಷದ ಕಾಮಗಾರಿ ಕೆಲಸ ಆಯಾ ವರ್ಷಕ್ಕೆ ಆಗುವುದಕ್ಕೆ ಏರ್ಪಾಡು ಮಾಡ ಬೇಕು.

ಇನ್ನು ಷೆಡ್ಯೂಲ್ ಆಫ್ ರೇಟ್ಸ್ ವಿಚಾರ, ಹೇಳಬೇಕೆಂದರೆ, ಈ ಷೆಡ್ಯೂಲ್ ರೇಟನ್ನು ಸರಿಯಾದ ಮಾರ್ಕೆಟ್ ರೇಟಿಗೆ ಸರಿದೂಗುವಂತೆ ಮಾಡದೇ ಇದ್ದರೆ ಕಷ್ಟವಾಗುತ್ತದೆ. ಟೆಂಡರ್ ಕಾಲ್‌ಫರ್ ಮಾಡಿದಾಗ ಆತ ಕೊಡತಕ್ಕ ರೇಟಿಗೆ ಸರಿಯಾಗಿ ಕೆಲಸ ಮಾಡಲಿಕ್ಕೆ ಆಗುವುದಿಲ್ಲ, ತಾವು ಕೊಡತಕ್ಕ ರೇಟ್‌ನಿಂದ ಒಳ್ಳೆಯ ಕ್ವಾಲಿಟಿ ಕೆಲಸ ಆಗುವುದಿಲ್ಲ. ಇವೊತ್ತು ಒಂದು ಸಾವಿರ ಸೈಜುಕಲ್ಲಿಗೆ ಒಂದು ಸಾವಿರ ರೂಪಾಯಿ ಇದೆ. ತಾವು ಕೊಡತಕ್ಕದ್ದು ಅದರ ಮುಕ್ಕಾಲು ಭಾಗ. ಆತ ೨೫೦ ರೂಪಾಯಿ ನಷ್ಟ ಹೊಂದಿ ಒಳ್ಳೆಯ ಕ್ವಾಲಿಟಿ ಕೆಲಸ ಮಾಡಿಕೊಡಲಿಕ್ಕೆ ಸಾಧ್ಯವೇ ? ಇವೊತ್ತು ಹೆಂಚಿನ ಬೆಲೆ ಏನಿದೆ, ಅದರ ಮುಕ್ಕಾಲು ಭಾಗ ತಾವು ಕೊಡುತ್ತೀರಿ, ಅವರು ಒಳ್ಳೆಯ ಬಿಲ್ಡಿಂಗ್ ಕಟ್ಟಲಿಕ್ಕೆ ಹೇಗೆ ಸಾಧ್ಯವಾಗುತ್ತದೆ. ಸೇತುವೆ ಕಟ್ಟಲಿಕ್ಕೆ ಹೇಗೆ ಸಾಧ್ಯವಾಗುತ್ತದೆ. ಇವೊತ್ತು ರಸ್ತೆಗಳಿಗೆ ಒಳ್ಳೆಯ ಜೆಲ್ಲಿ ಹಾಕಿ, ಟಾರ್ ಹಾಕಿ ಅಂದರೆ ಹೇಗೆ ಮಾಡುತ್ತಾರೆ. ಷೆಡ್ಯೂಲ್ ರೇಟ್ ಹೆಚ್ಚು ಜಾಸ್ತಿ ಮಾಡ ಬೇಕಾದರೆ ಅದು ಮತ್ತೆ ಸರ್ಕಾರಕ್ಕೆ ಬರಬೇಕು, ಅದರಿಂದ ಅವರಿಗೆ ತೊಂದರೆಯಾಗುತ್ತದೆ. ಷೆಡ್ಯೂಲ್ ರೇಟ್ ಸ್ವಲ್ಪ ಜಾಸ್ತಿ ಮಾಡಬೇಕಾದರೂ ಸೂಪರಿಂಟೆಂಡೆಂಟ್ ಅವರ ಮಟ್ಟಕ್ಕೆ ಬಂದು ಹೋಗ ಬೇಕೆಂದರೂ ಒಂದು ವರ್ಷ ಕಳೆದುಹೋಗುತ್ತದೆ. ಈ ಷೆಡ್ಯೂಲ್ ರೇಟ್ ಏನಿದೆ ಅದನ್ನು ಆಯಾ ಸ್ಥಳಕ್ಕೆ ಅನುಗುಣವಾಗಿ ಇಡುವುದಕ್ಕೆ ಏರ್ಪಾಡು ಮಾಡಬೇಕು. ಇನ್ನು ಈ ಬಡ್ಜೆಟ್ಟಿನಲ್ಲಿ ಲಿಸ್ಟ್ ಮಾಡುವಾಗ ಎ, ಬಿ, ಸಿ, ಎಂಬುದಾಗಿ ಮೂರು ವರ್ಗ ಮಾಡುತ್ತಾರೆ, ಈ ಸಿ ಲಿಸ್ಟ್‌ನಲ್ಲಿ ಇರತಕ್ಕ ಕೆಲಸವೆಲ್ಲಾ ಹಾಗೆ ಮುಂದುವರೆಯುತ್ತಿರುತ್ತವೆ ಇವುಗಳನ್ನು ಪುಸ್ತಕದಲ್ಲಿ ಏತಕ್ಕೆ ಸುಮ್ಮನೆ ಸೇರಿಸು ತ್ತೀರಿ. ಸಿ ಲಿಸ್ಟ್‌ಗೆ ಪ್ರಿಯಾರಿಟಿ ಕೊಟ್ಟರೆ ಪರವಾಯಿಲ್ಲ, ಅದು ಹಾಗೆ ಇರ ವುದಾದರೆ ಸುಮ್ಮನೆ ಏತಕ್ಕೆ ಪುಸ್ತಕದಲ್ಲಿ ಸೇರಿಸುತ್ತೀರಿ. ಸಿ ಲಿಸ್ಟ್‌ನಲ್ಲಿರತಕ್ಕವುಗಳನ್ನು ಮುಂದಿನ ವರ್ಷವಾದರೂ ತೆಗದು ಕೊಳ್ಳಲಿಕ್ಕೆ ಅವಕಾಶ ಮಾಡಿಕೊಡಬೇಕು. ಇನ್ನು ನನ್ನ ಕ್ಷೇತ್ರದಲ್ಲಿರತಕ್ಕ ಕೆಲವು ಕಾಮಗಾರಿ ಬಗ್ಗೆ ವಿಷಾದದಿಂದ ಹೇಳಬೇಕಾಗಿದೆ. ನಮ್ಮ ಟೌನಿನ ಟೋಲ್‌ಗೇಟ್ ಪಕ್ಕದಲ್ಲಿ ಒಂದು ಸೇತುವೆ ಇದೆ, ಪ್ರಧಾನಿಯವರು ಆ ಕಡೆ ಪಾಸ್ ಆಗಬೇಕಾದರೆ ಆ ಸೇತುವೆ ಕಾರಣದಿಂದ ಅವರ ಪ್ರೋಗ್ರಾಮ್ ಕ್ಯಾನ್ಸಲ್ ಮಾಡಿ ಆ ಟೌನಿನಲ್ಲೇ ಉಳಿಯಬೇಕಾಯಿತು. ಇದರ ಎಸ್ಟಿಮೇಟ್ ಕಳುಹಿಸಿ ಸುಮಾರು ನಾಲ್ಕು ವರ್ಷವಾಗಿದೆ. ಈವರೆಗೂ ಇನ್ನೂ ಆಗಿಲ್ಲ, ಅಲ್ಲಿ ಏನೋ ಒಂದು ಪಿಲ್ಲರ್, ಡ್ರಮ್ ಇಟ್ಟು ಲಾರಿ ಅಲ್ಲಿ ಪಾಸ್ ಆಗಬೇಕಾದರೆ ನಿಧಾನವಾಗಿ ಹೋಗಬೇಕೆಂದು ಮಾಡಿರುತ್ತಾರೆ. ನಾನು ನ್ಯಾಷನಲ್ ಹೈವೇ, ಮೈನ್ ರೋಡ್ ಬಗ್ಗೆ ಹೇಳುತ್ತಿಲ್ಲ, ನಾನು ಏತಕ್ಕೆ ಹೇಳುತ್ತಿಲ್ಲ ಅಂದರೆ ಆ ರಸ್ತೆಗಳಲ್ಲಿ ಮಂತ್ರಿಗಳು, ಮುಖ್ಯಮಂತ್ರಿಗಳು, ಕಾರ್ಯದರ್ಶಿಗಳು ತಿರುಗುತ್ತಿರುತ್ತಾರೆ. ಅವರೇ ಅದನ್ನು ನೋಡಿ ಮಾಡಿಸಲಿ ಎಂದು ಬಿಟ್ಟಿದ್ದೇನೆ. ಕೊರನಾಡು ಸೇತುವೆ, ಮತ್ತು ರಸ್ತೆಯ ಬಗ್ಗೆ ಮೊನ್ನೆ ಪ್ರಸ್ತಾಪ ಮಾಡಿದ್ದೇನೆ. ಅನೇಕ ಜನ ದೊಡ್ಡದಾಗಿ ಟೀಕೆ ಮಾಡುತ್ತಿದ್ದಾರೆ, ಜಿಲ್ಲಾ ಮಂತ್ರಿಗಳು ಅಲ್ಲೇ ತಿರುಗುತ್ತಿದ್ದರು ನೀವು ಕಣ್ಣು ಮುಚ್ಚಿಕೊಂಡು ಕುಳಿತಿದ್ದೀರಾ ಎಂದು ಹೇಳುತ್ತಾರೆ ಇವೊತ್ತು ತಾವು ಅಲ್ಲಿ ಭದ್ರ ಪ್ರಾಜೆಕ್ಟ್ ಬರುತ್ತದೆ ಎಂದು ಹೇಳಬಹುದು, ಅದು ಆಗಬೇಕಾದರೆ ಮೊಮ್ಮಕ್ಕಳ ಕಾಲಕ್ಕೋ, ಅಥವಾ ಮರಿಮಕ್ಕಳ ಕಾಲಕ್ಕೋ. ಈಗ ೨೫ ಲಕ್ಷ ರೂಪಾಯಿ ಮಂಜೂರಾತಿ ದೊರಕಿ ಫೌಂಡೇಷನ್ ಹಾಕಿದೆ. ಅನೇಕ ಹಳ್ಳಿಗಳಿಗೆ ಓಡಾಡತಕ್ಕ ಪ್ರವಾಸಿಗರಿಗೆ ಅನುಕೂಲ ಮಾಡಿಕೊಡುವ ದೃಷ್ಟಿಯಿಂದ ಈ ಕೊರನಾಡು ಸೇತುವೆ ಮತ್ತು ರಸ್ತೆ ಕೆಲಸವನ್ನು ಮಾಡಬೇಕು. ತಾವು ಈ ಡ್ಯಾಮ್ ಬಂದು ಮುಳುಗಡೆ ಆಗುತ್ತದೆ ಎಂದು ಹೇಳುವುದಾದರೆ ಆಗ ನೋಡೋಣ ಇನ್ನು ಸಿಲ್ವರ್ ಜ್ಯೂಬಿಲಿ ವರ್ಕ್ಸ್ ವರ್ಕ್ಸ್‌ಗೆ ಸ್ಪೆಷಲ್ ಮಂಜೂರಾತಿ ಮಾಡಿದಿರಿ. ಆ ಬಗ್ಗೆ ಅನೇಕ ಸರ್ಕಲ್‌ಗಳಿಗೆ ಗ್ರ್ಯಾಂಟ್ಸ್ ರಿಲೀಸ್ ಆಗಿದೆ. ಹಾಸನ ಮತ್ತು ಚಿಕ್ಕಮಗಳೂರಿಗೆ ಗ್ರ್ಯಾಂಟ್ಸ್ ರಿಲೀಸ್ ಮಾಡಿಲ್ಲ ಅಂಥ ಕೇಳಿದ್ದೇನೆ. ಈ ಸಿಲ್ವರ್ ಜ್ಯೂಬಿಲಿ ವರ್ಕ್ಸ್, ಕಮಿಟ್‌ಮೆಂಟ್ ವರ್ಕ್ಸ್, ಬಿಟ್ಸ್ ಪೇಮೆಂಟ್ ಮಾಡ ತಕ್ಕದ್ದು ಮಾತ್ರ ಬಾಕಿ ಇದೆ. ಆ ಬಗ್ಗೆ ಫಂಡ್ ರಿಲೀಸ್ ಮಾಡಬೇಕೆಂದು ಕೇಳಿಕೊಳ್ಳುತ್ತೇವೆ. ಇನ್ನು ಚಿಕ್ಕಮಗಳೂರು ಬಸ್ ಸ್ಟ್ಯಾಂಡ್ ಬಳಿ ಓಪನ್ ಥಿಯೇಟರ್ ಆಗತಕ್ಕದ್ದು ಕಂಟ್ರ್ಯಾಕ್ಟರ್‌ಗೂ ಇಂಜಿನೀಯರ್‌ಗೂ ಸೆಟಲ್‌ಮೆಂಟ್ ಆಗದೆ, ಅದು ಹಾಗೆ ಉಳಿದಿದೆ. ಅವಕ್ಕೆ ಪಬ್ಲಿಕ್ ಕಾಂಟ್ರಿಬ್ಯೂಷನ್ ೫೦ ಪರ್ಸೆಂಟ್ ಕೊಟ್ಟಿದ್ದಾರೆ ಅವರಿಗೆ ಕೊಟ್ಟಿರತಕ್ಕ ಕಂಟ್ರ್ಯಾಕ್ಟ್ ಕ್ಯಾನ್ಸಲ್ ಮಾಡಿ ಓಪನ್ ಥಿಯೇಟರ್ ಹಾಗೆ ಉಳಿದಿದೆ. ಇವೊತ್ತು ಎಷ್ಟೋ ಕೋಟ್ಯಾಂತರ ರೂಪಾಯಿ ಕೆಲಸ ಮಾಡುತ್ತಿ

ದ್ದೀರಿ. ಸಾರ್ವಜನಿಕರಿಗೆ ಅನುಕೂಲವಾಗತಕ್ಕ ಈ ಸಣ್ಣ ಕೆಲಸ ಏತಕ್ಕೆ ಮಾಡುತ್ತಿಲ್ಲ, ಆದಷ್ಟು ಬೇಗ ಈ ಕಾರ್ಯ ಕೈಗೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ. ಇನ್ನು ಮೀನುಗಾರಿಕೆ ವಿಚಾರದಲ್ಲಿ ನಾನು ಹೆಚ್ಚು ಪ್ರಸ್ತಾಪ ಮಾಡಲಿಕ್ಕೆ ಹೋಗುವುದಿಲ್ಲ ನನ್ನ ಕ್ಷೇತ್ರದಲ್ಲಿ ಐಯ್ಯನಹಳ್ಳಿ ಮತ್ತು ಹಿರೇಕೊಳ್ಳ ಎರಡು ಟ್ಯಾಂಕ್ ಇದೆ ಮೀನು ಸಾಗಾಣಿಕೆಗೆ ಬೇಕಾದಷ್ಟು ಸೌಕರ್ಯ ಇದೆ. ನಾವು ಮಂಗಳೂರಿನಿಂದ ಬರತಕ್ಕ ಕೊಳಕಲು ಮೀನು ತಿನ್ನಬೇಕಾಗಿದೆ. ಅವರು ಹಿಂದಿನ ದಿವಸ ಹಿಡಿದ ಮೀನನ್ನು ಐಸ್‌ನಲ್ಲಿ ಇಟ್ಟು ಕಳುಹಿಸುತ್ತಾರೆ. ಅದು ಮಾರನೇ ದಿವಸ ನಮಗೆ ಸಿಕ್ಕುತ್ತವೆ, ಆ ಮೀನುಗಳನ್ನು ನಾವು ತಿನ್ನಬೇಕಾಗಿದೆ. ಅದು ಆಗಬಾರದು, ಸ್ಥಳೀಯ ಮೀನು, ಆ ಸ್ಥಳದಲ್ಲೇ ಸಿಕ್ಕುವ ಬಗ್ಗೆ ವ್ಯವಸ್ಥೆ ಮಾಡಬೇಕು. ಇವೊತ್ತು ಐಯ್ಯನಹಳ್ಳಿ ಮತ್ತು ಹಿರೇಕೊಳ್ಳ ಟ್ಯಾಂಕ್‌ನಲ್ಲಿ ಹೆಚ್ಚು ಮೀನುಗಳನ್ನು ಬಿಟ್ಟಿದ್ದಾರೆ. ಆದರೆ ನಾವು ನಿರೀಕ್ಷಿಸಿದ ಮಟ್ಟದಲ್ಲಿ ಬಿಟ್ಟಿಲ್ಲ. ಈ ಮೀನು ಸಾಗಾಣಿಕೆ ಬಗ್ಗೆ ಮಲೆನಾಡು ಏರಿಯಾದಲ್ಲೂ ಹೆಚ್ಚು ಮಾಡಬೇಕೆಂದು ಹೇಳುತ್ತಾ, ಮಾನ್ಯ ಲೋಕೋಪಯೋಗಿ ಇಲಾಖಾ ಮಂತ್ರಿಗಳು ಏನು ಬಡ್ಜೆಟ್ ಮಂಡಿಸಿದ್ದಾರೆ. ಅದನ್ನು ಸಂಪೂರ್ಣವಾಗಿ ಸ್ವಾಗತಿಸಿ ನಾನು ಏನು ಕೆಲವು ಸಲಹೆಗಳನ್ನು ಕೊಟ್ಟಿದ್ದೇನೆ ಅದು ಈ ವರ್ಷ ಕಾರ್ಯಗತ ಮಾಡುವ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಕ್ತ ನಿರ್ದೇಶನ ನೀಡಬೇಕೆಂದು ಕೇಳಿಕೊಂಡು ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಡಿ. ಟಿ. ಮಾಯಣ್ಣ (ಹುಲಿಯೂರು ದುರ್ಗ).—ಮಾನ್ಯ ಅಧ್ಯಕ್ಷರೆ, ಲೋಕೋಪಯೋಗಿ ಇಲಾಖೆ, ಮೀನುಗಾರಿಕೆ ಇಲಾಖೆ ಸಚಿವರುಗಳು ಸಭೆಯ ಮುಂದೆ ತಂದಿರತಕ್ಕ ಬೇಡಿಕೆಗಳನ್ನು ಸ್ವಾಗತಿಸಿ ಕೆಲವು ಸಲಹೆಗಳನ್ನು ಕೊಡಬಯಸುತ್ತೇನೆ. ೨ನೇ ಮಹಾಯುದ್ಧ ಕಳೆದ ಮೇಲೆ ನಮ್ಮ ರಾಜ್ಯದ ಒಳನಾಡಿನಲ್ಲಿ ಮೀನುಗಾರಿಕೆ ಪ್ರಾರಂಭವಾಯಿತು. ಈ ವಿಷಯದಲ್ಲಿ ಹೇಳುವುದಾದರೆ ಕೃಷ್ಣರಾಜಸಾಗರ, ಮಾರ್ಕೋನಹಳ್ಳಿ ರಿಸರ್ವಾಯರ್ ಮತ್ತು ಚಿತ್ರದುರ್ಗದಲ್ಲಿರತಕ್ಕ ಕೆರೆಗಳು ಎಲ್ಲ ಸೇರಿ ಒಳನಾಡು ಮೀನುಗಾರಿಕೆ ಪ್ರಾರಂಭವಾಯಿತು. ಆದರೆ ಈ ಇಲಾಖೆ ಅಷ್ಟು ಚೆನ್ನಾಗಿ ಅಭಿವೃದ್ಧಿ ಆಗಲಿಲ್ಲ. ಇತ್ತೀಚೆಗೆ ನಮ್ಮ ಕರ್ನಾಟಕ ರಾಜ್ಯ ಇಂಟಿಗ್ರೇಷನ್ ಆದ ಮೇಲೆ ಮೀನುಗಾರಿಕೆ ಅಭಿವೃದ್ಧಿಗೆ ಸ್ವಲ್ಪ ಮಟ್ಟಿನ ಗಮನ ಕೊಡುವುದಕ್ಕೆ ಪ್ರಾರಂಭ ಮಾಡಿದರು. ಇದರಿಂದಾಗಿ ಮೀನುಗಾರಿಕೆ ಚೆನ್ನಾಗಿ ಅಭಿವೃದ್ಧಿ ಆದಂತಾಗುತ್ತದೆಂದು ತಿಳಿದುಕೊಳ್ಳುವುದು ಸರಿಯಲ್ಲ. ನಾವು ಮೀನುಗಾರಿಕೆಯಲ್ಲಿ ಬಹಳವಾಗಿ ಹಿಂದುಳಿದಿದ್ದೇವೆ. ಆದ್ದರಿಂದ ನಾನು ತಮಗೆ ಹೇಳುವುದೇನೆಂದರೆ, ಇನ್ನಾದರೂ ಒಳನಾಡಿನ ಮೀನುಗಾರಿಕೆಗೋಸ್ಕರವೇ ಒಂದು ಇಲಾಖೆಯನ್ನು ಮಾಡಿ ಅವರಿಗೆ ಇದನ್ನು ವಹಿಸಬೇಕು. ನಮ್ಮ ಕರ್ನಾಟಕದಲ್ಲಿ ಮಲಪ್ರಭ, ಘಟಪ್ರಭ, ನಾರಾಯಣಪುರ ಆಲಮಟ್ಟಿ, ಕಬಿನಿ ಮುಂತಾದ ಅನೇಕ ದೊಡ್ಡ ದೊಡ್ಡ ಜಲಾಶಯಗಳಿವೆ. ಆದ್ದರಿಂದ ಇದಕ್ಕಾಗಿ ಒಂದು ಪ್ರತ್ಯೇಕವಾದ ಇಲಾಖೆಯನ್ನೇ ಮಾಡಿದರೆ ನಿಮ್ಮ ಮೀನುಗಾರಿಕೆ ಉದ್ಯಮ ಅಭಿವೃದ್ಧಿ ಆಗುತ್ತದೆ. ಸಾಮಾನ್ಯವಾಗಿ ಯಾವ ಕೆರೆಗಳೂ ಕೂಡ ೨-೩ ವರ್ಷದವರೆಗೆ ಒಣಗುವುದಿಲ್ಲ. ಆದ್ದರಿಂದ ಈ ಕೆರೆಗಳಲ್ಲಿ ಸರಿಯಾದ ವ್ಯವಸ್ಥೆ ಮಾಡಿ ಅಲ್ಲಿ ಅಧಿಕಾರಿಗಳು ಇಟ್ಟು ನಡೆಸುವುದಾದರೆ ಮೀನುಗಾರಿಕೆ ಚೆನ್ನಾಗಿ ಅಭಿವೃದ್ಧಿಯಾಗುತ್ತದೆ. ಕಾಡಾ ಯೋಜನೆಯಲ್ಲಿ ನೀವು ಮೀನು ಅಭಿವೃದ್ಧಿಗೆ ಕಾರ್ಯಕ್ರಮವನ್ನು ಹಾಕಿಕೊಂಡಿದ್ದೀರಿ. ಇದನ್ನನುಸರಿಸಿ ಇಂಗ್ಲೆಂಡ್ ಫಿಷರೀಸ್ ಏನಿದೆ ಅದಕ್ಕೆ ಒಂದು ಇಲಾಖೆಯನ್ನು ಮಾಡಿ ಒಬ್ಬ ಒಳ್ಳೆಯ ಡೈರೆಕ್ಟರನ್ನು ನೇಮಕ ಮಾಡಿದರೆ ಹಸಿರು ಕ್ರಾಂತಿ, ಹಾಲು ಕ್ರಾಂತಿಯ ರೀತಿಯಲ್ಲಿ ಮೀನಿನ ಕ್ರಾಂತಿಯೂ ಕೂಡ ಆಗುವುದಕ್ಕೆ ಕರ್ನಾಟಕದಲ್ಲಿ ಬೇಕಾದಷ್ಟು ಅನುಕೂಲಗಳಿವೆ. ಮೀನು ಮಾರಾಟಕ್ಕೆ ನಮ್ಮಲ್ಲಿ ಮಾರುಕಟ್ಟೆಗಳಿಲ್ಲ. ಯಾರಾದರೂ ಮೀನನ್ನು ಮಾರಾಟಕ್ಕೆ ತಂದರೆ ಬೆಂಗಳೂರು. ಮೈಸೂರು ಮುಂತಾದ ದೊಡ್ಡ ದೊಡ್ಡ ಪಟ್ಟಣಗಳಲ್ಲಿ ಬೀದಿಯ ಬದಿಯಲ್ಲಿ ಇಟ್ಟುಕೊಂಡು ಮಾರಾಟ ಮಾಡಬೇಕಾಗಿದೆ. ಇದನ್ನು ತಪ್ಪಿಸಲು ಒಳ್ಳೆಯ ಮಾರ್ಕೆಟ್ ವ್ಯವಸ್ಥೆಯನ್ನು ಮಾಡಿಕೊಡುವುದಲ್ಲದೆ ಮೀನು ಹಿಡಿಯುವವರಿಗೆ ಬೇಕಾದ ಬೋಟು, ಬಲೆ, ಮುಂತಾದ ಸೌಕರ್ಯಗಳನ್ನೂ ಒದಗಿಸಿಕೊಡಬೇಕು. ಈ ರೀತಿ ಮಾಡಿದರೆ ಅವರು ಹೆಚ್ಚು ಮೀನುಗಳನ್ನು ಹಿಡಿದುಕೊಡುತ್ತಾರೆ, ತನ್ಮೂಲಕ ರಾಜ್ಯಕ್ಕೆ ಹೆಚ್ಚಿನ ಆದಾಯ ಬರುತ್ತದೆ.

ಇನ್ನೊಂದು ವಿಚಾರ ಹೇಳುವುದಾದರೆ ಈಗ ಕೆಲವು ರಿಸರ್ವಾಯರ್ ಫಿಷಿಂಗ್ ಅಂತ ಮಾಡಿದ್ದೀರಿ. ನಮ್ಮ ಮೈಸೂರಿನ ರಿಸರ್ವಾಯರ್ ಏರಿಯಾದಲ್ಲಿ ಮೀನು ಮರಿಗಳನ್ನು ತಯಾರು ಮಾಡುತ್ತಾರೆ. ಅಲ್ಲಿ ಒಬ್ಬ ಸೂಪರಿಂಟೆಂಡೆಂಟ್ ಅಧಿಕಾರಿ ಇದ್ದಾನೆ. ಆದರೆ ಅವನಿಗೆ ಅಲ್ಲಿ ಸರಿಯಾದ ವ್ಯವಸ್ಥೆ ಇಲ್ಲ.

ಅವನಿಗೆ ಬೇಕಾದ ಸಿಬ್ಬಂದಿ ವರ್ಗ ಇಲ್ಲದೆ ತೊಂದರೆಯಾಗಿದೆ. ಒಂದು ಸಾರಿ ಅಲ್ಲಿ ಮೀನಿನ ಮರಿಗಳನ್ನು ಮಾಡಿಸಲು ಇಟ್ಟಿದ್ದ ಮೀನುಗಳನ್ನೆಲ್ಲಾ ಯಾರೋ ಕದ್ದುಕೊಂಡು ಹೋಗಿದ್ದಾರೆ. ಈ ಅಧಿಕಾರಿ ಸ್ಥಳದಲ್ಲೇ ಇದ್ದಿದ್ದರೆ ಈ ಮೀನುಗಳ ಕಳ್ಳತನವಾಗುತ್ತಿರಲಿಲ್ಲ. ಆದ್ದರಿಂದ ನನ್ನ ಸಲಹೆ ಏನೆಂದರೆ ಸ್ಥಳದಲ್ಲೇ ಅಧಿಕಾರಿಗಳು ಇರುವಂತೆ ವ್ಯವಸ್ಥೆ ಮಾಡಿಕೊಡಬೇಕು. ಈಗ ಅಲ್ಲಿ ಕಟ್ಟಡ ಇದ್ದರೂ ಕೂಡ ಅದಕ್ಕೆ ದೀಪದ ವ್ಯವಸ್ಥೆ ಇಲ್ಲ, ಆದ್ದರಿಂದ ಮೊದಲು ಅಲ್ಲಿಗೆ ದೀಪದ ವ್ಯವಸ್ಥೆ ಮಾಡಿಸಿಕೊಡಬೇಕು. ಸ್ವಾಮಿ, ನಮ್ಮ ತಾಲೂಕಿನಲ್ಲಿ ಸುಮಾರು ೫-೬ ಕೆರೆಗಳಿದ್ದು ಸುಮಾರು ೩-೪ ವರ್ಷದವರೆಗೂ ಒಣಗುವುದಿಲ್ಲ. ಉದಾಹರಣೆಗೆ ಹೇಳುವುದಾದರೆ, ಕುಣಿಗಲ್ ಕೆರೆ. ಮುತ್ತುರಾಯನ ಕೆರೆ, ದೀಪಾಂಬುಧಿ ಕೆರೆ, ಇವು ದೊಡ್ಡ ಕೆರೆಗಳು. ಈ ಕೆರೆಗಳನ್ನೂ ಕೂಡ ತಮ್ಮ ಇಲಾಖೆಗೆ ಸೇರಿಸಿಕೊಳ್ಳಬೇಕು ಇದರ ಜೊತೆಗೆ ಇನ್ನೂ ೧೦-೧೨ ಸಣ್ಣಪುಟ್ಟ ಕೆರೆಗಳಿವೆ. ಅವುಗಳೂ ಕೂಡ ೨-೩ ವರ್ಷದವರೆಗೆ ಒಣಗುವುದಿಲ್ಲ, ಅವುಗಳನ್ನೂ ತಮ್ಮ ಇಲಾಖೆಗೆ ತೆಗೆದುಕೊಂಡು ಅಲ್ಲಿ ದಕ್ಷ ಅಧಿಕಾರಿಗಳನ್ನಿಟ್ಟು ಮೀನುಗಾರಿಕೆಗೆ ಹೆಚ್ಚು ಗಮನ ಕೊಡಬೇಕು.

ಇನ್ನು ಪಿ.ಡಬ್ಲ್ಯೂ.ಡಿ. ಬಗ್ಗೆ ಹೇಳುವುದಾದರೆ ನಮ್ಮ ಮಾನ್ಯ ಮಂತ್ರಿಗಳು ಅನೇಕ ಕೆಲಸಗಳನ್ನು ನಮ್ಮ ತಾಲೂಕಿನಲ್ಲಿ ತೆಗೆದುಕೊಂಡಿದ್ದಾರೆ. ಚೌಡನ ಕಟ್ಟೆ ಹತ್ತಿರ ಮತ್ತು ಮಡಕೇನ ಹಳ್ಳಿ ಹತ್ತಿರ ಒಂದೊಂದು ಸೇತುವೆಗಳನ್ನು ಮಂಜೂರು ಮಾಡಿದ್ದಾರೆ. ಆದರೆ ಇದುವರೆಗೂ ಆ ಕೆಲಸ ಪ್ರಾರಂಭವಾಗಿಲ್ಲ. ಅದನ್ನು ಆದಷ್ಟು ಬೇಗ ಪ್ರಾರಂಭ ಮಾಡಬೇಕು. ಚನ್ನೇನಹಳ್ಳಿಗೆ ಹೋಗುವ ರಸ್ತೆಯಲ್ಲಿ ಕಿಲಾನ್ ಕೆರೆ ಮತ್ತು ಕೋಡಿ ಹಳ್ಳಿ ಕೆರೆಗೆ ಒಂದು ರಸ್ತೆ ಆಗಬೇಕು. ಹಿಂದೆ ಚನ್ನನ ಹಳ್ಳಕ್ಕೆ ಅಣೆಕಟ್ಟು ಕಟ್ಟುವಾಗ ಅದಕ್ಕೆ ಒಂದು ಕಾಲುವೆಯನ್ನು ಮಾಡಿದರು. ಆ ಕಾಲುವೆ ಈಗ ಬಹಳ ದುರವಸ್ಥೆಯಲ್ಲಿದೆ. ಮಾರ್ಕೊನಹಳ್ಳಿ ರಿಸರ್ವಾಯರ್‌ನ ವೇಸ್ಟೇಜ್ ನೀರು ಬಂದರೆ ೩-೪ ಅಡಿ ನೀರು ಸುಮಾರು ೩-೪ ತಿಂಗಳವರೆಗೂ ಹೋಗುತ್ತಿರುತ್ತದೆ. ಇದರಿಂದಾಗಿ ರೈತರು ವ್ಯವಸಾಯ ಮಾಡುವುದಕ್ಕೆ ಕಷ್ಟವಾಗುತ್ತದೆ. ಆದ್ದರಿಂದ ಈ ಸೇತುವೆಯನ್ನು ಮಂಜೂರು ಮಾಡಿ ಕಾರ್ಯಗತ ಮಾಡಿಸಿ ಕೊಡಬೇಕು. ತಮ್ಮ ಪಿ.ಡಬ್ಲ್ಯೂ.ಡಿ. ನಲ್ಲಿ ಪಿ.ಹೆಚ್.ಇ. ಮತ್ತು ಅರ್ಬನ್ ಡೆವಲಪ್‌ಮೆಂಟ್ ಡಿಪಾರ್ಟ್‌ಮೆಂಟ್‌ನ್ನು ಎರಡನ್ನೂ ಸೇರಿಸಿ ಒಂದು ಇಲಾಖೆಯನ್ನು ಮಾಡಬೇಕು. ಏಕೆಂದರೆ ಹಳ್ಳಿಗಾಡಿನಲ್ಲಿ ಗ್ರಾಮ ನೈರ್ಮಲ್ಯ ಮತ್ತು ನೀರಾವರಿ ಯೋಜನೆ ಕಾರ್ಯವನ್ನು ತೆಗೆದುಕೊಂಡಿದ್ದೀರಿ. ನಾನು ಹೇಳುವ ರೀತಿಯಲ್ಲಿ ತಾವು ಮಾಡುವುದಾದರೆ ಹಳ್ಳಿಗಳಲ್ಲಿ ಒಳಚರಂಡಿ ಮತ್ತು ಗ್ರಾಮ ನೈರ್ಮಲ್ಯ ಮಾಡುವುದಕ್ಕೆ ಅನುಕೂಲವಾಗುತ್ತದೆಂದು ಹೇಳಿ, ಇಷ್ಟು ಮಾತನಾಡಲು ಅವಕಾಶ ಕೊಟ್ಟಿದ್ದಕ್ಕೆ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

(ಮಾನ್ಯ ಉಪಾಧ್ಯಕ್ಷರು ಅಧ್ಯಕ್ಷ ಪೀಠವನ್ನಲಂಕರಿಸಿದರು)

ಶ್ರೀ ಕೆ. ನಾರಾಯಣಪ್ಪ (ದೇವನಹಳ್ಳಿ) —ಮಾನ್ಯ ಅಧ್ಯಕ್ಷರೇ, ಮಾನ್ಯ ಲೋಕೋಪಯೋಗಿ ಇಲಾಖೆಯ ಮಂತ್ರಿಗಳು ಸಭೆಯ ಮುಂದೆ ತಂದಿರತಕ್ಕ ಬೇಡಿಕೆಗಳನ್ನು ಅನುಮೋದಿಸುತ್ತಾ ಒಂದೆರಡು ಮಾತುಗಳನ್ನು ಹೇಳಬಯಸುತ್ತೇನೆ. ಮೊದಲನೆಯದಾಗಿ ಈ ಖಾತೆಗೆ ಇಟ್ಟಿರತಕ್ಕ ಹಣ ಏನೇನೂ ಸಾಲದು. ದೇಶದಲ್ಲಿ ರೈತರು ಅಭಿವೃದ್ಧಿಯಾಗಬೇಕಾದರೆ, ಹಳ್ಳಿಗಳ ಏಳಿಗೆ ಆಗಬೇಕಾದರೆ, ರಸ್ತೆಗಳು, ಸೇತುವೆಗಳು, ಕೆರೆಗಳು, ಕಾಲುವೆಗಳು, ಹೆಚ್ಚಿನ ರೀತಿಯಲ್ಲಿ ಆಗಬೇಕು. ಕೆರೆಗಳ ನೀರು ಕಾಲುವೆಗಳ ಮೂಲಕ ಕೊನೆಯ ಜಮೀನಿನವರೆಗೂ ಹೋಗಬೇಕು. ರೈತರು ಬೆಳೆದ ಹಣ್ಣುಂಪಲುಗಳಾಗಲಿ, ಆಹಾರ ಧಾನ್ಯಗಳಾಗಲಿ ಬೆಳೆದ ಸ್ಥಳದಿಂದ ಮನೆಗಳಿಗೆ ಅಥವಾ ಮಾರುಕಟ್ಟೆಗಳಿಗೆ ಸಾಗಿಸಲು ಮುಖ್ಯವಾಗಿ ರಸ್ತೆ ಸಾರಿಗೆ ಚೆನ್ನಾಗಿರಬೇಕು. ಕೆಲವು ತಾಲ್ಲೂಕುಗಳಲ್ಲಿ ರಸ್ತೆಗಳು ಊರಿನಿಂದ ಹೊರಗಡೆ ಇರುತ್ತವೆ. ಆದರೆ ಬೆಂಗಳೂರು, ತುಮಕೂರು, ಕೋಲಾರ ಮುಂತಾದ ಜಿಲ್ಲೆಗಳಲ್ಲಿ ಊರು ಮಧ್ಯ ಭಾಗದಲ್ಲೇ ರಸ್ತೆಗಳು ಹಾದುಹೋಗುತ್ತವೆ. ಇಷ್ಟು ಮಾಡಿದ್ದರೂ ಕೂಡ ರೈತರಿಗೆ ಸರಿಯಾದ ಸೌಕರ್ಯ ಆಗಿಲ್ಲ. ಈ ರಸ್ತೆಗಳನ್ನು ಮಾಡುವಾಗ ಕೇವಲ ಜೆಲ್ಲಿ ಮತ್ತು ಮಣ್ಣನ್ನು ಹಾಕಿ ಮಾಡಿರುತ್ತಾರೆ. ನೂರಾರು ವಾಹನಗಳು ಆ ರಸ್ತೆಗಳ ಮೇಲೆ ಓಡಾಡುವುದರಿಂದ ರಸ್ತೆಯ ಧೂಳೆಲ್ಲಾ ಮೇಲೆದ್ದು ಹೊಲಗಳಲ್ಲಿ ಇಟ್ಟಿರುವ ಬೆಳೆಗಳ ಮೇಲೆ, ಬೀಳುತ್ತದೆ. ಅದರಲ್ಲೂ ರೇಷ್ಮೆ ಬೆಳೆಯ ಮೇಲೆ ಬಿದ್ದಾಗ ಅದನ್ನು ತಿಂದ ಹುಳುಗಳು ಸತ್ತುಹೋಗುತ್ತವೆ. ಇದರಿಂದಾಗಿ ರೈತರು ಬಹಳ ನಷ್ಟವನ್ನು ಅನುಭವಿಸಬೇಕಾಗಿದೆ.

ಸ್ವಾಮಿ ನಮ್ಮ ಕಡೆ ನಾಲೆಗಳಾಗಲಿ, ನದಿಗಳಾಗಲಿ ಇಲ್ಲ. ಮಳೆ ಬಂದರೆ ಮಾತ್ರ ಕೆರೆಗಳಿಗೆ ನೀರು, ಅದನ್ನನುಸರಿಸಿ ಬೆಳೆಗಳನ್ನು ಬೆಳೆಯಬೇಕಾಗಿದೆ. ಮಳೆ ಬಂದರೆ ಬೆಳೆ, ಇಲ್ಲದೇ ಹೋದರೆ ಬೆಳೆಯೇ ಇಲ್ಲ. ನಾನು ಮೊದಲೇ ಹೇಳಿದಂತೆ ಈ ಕೆರೆಗಳ ನೀರು ಕಾಲುವೆಯ ಮುಖಾಂತರ ಕೊನೆಯ ಜಮೀನಿನವರೆಗೂ ಹೋಗದೆ ಇಟ್ಟ ಬೆಳೆಯಲ್ಲಿ ಮುಕ್ಕಾಲು ಭಾಗ ಬೆಳೆ ಹಾಳಾಗಿ ಹೋಗುತ್ತಿದೆ. ಇಂಥ ಸಂದರ್ಭದಲ್ಲಿ ತಾವು ಹೆಚ್ಚಿನ ಕಂದಾಯವನ್ನು ರೈತರ ಮೇಲೆ ಹಾಕಿದರೆ ಅವರಿಗೆ ಬಹಳ ತೊಂದರೆಯಾಗುತ್ತದೆ,

ಜೊತೆಗೆ ನಮ್ಮ ತಾಲ್ಲೂಕಿನಲ್ಲಿ ಅನೇಕ ಬಿ.ಟಿ.ಎಸ್. ಬಸ್ಸುಗಳು ಜಾಸ್ತಿ ಓಡಾಡುತ್ತವೆ. ನಮ್ಮ ತಾಲ್ಲೂಕಿನಲ್ಲಿ ವಿಶೇಷವಾಗಿ ಬಂಡೆಗಳು ಇರುವುದರಿಂದ ಕಲ್ಲು ಸಾಕಾಣಿಕೆ ಮಾಡತಕ್ಕಂಥವರು ಬೆಂಗಳೂರು ರಾಜಧಾನಿಯಲ್ಲಿರುವುದರಿಂದ ಪ್ರತಿದಿವಸ ನೂರಾರು ಲಾರಿಗಳಲ್ಲಿ ಕಲ್ಲುಗಳನ್ನು ಸಾಗಿಸುತ್ತಿರುತ್ತಾರೆ. ಜೊತೆಗೆ ನೂರಾರು ಲಾರಿಗಳು ಮರಳನ್ನು ಸಾಗಿಸುತ್ತಿರುವರು. ನಮ್ಮ ತಾಲ್ಲೂಕಿನ ರಸ್ತೆಗಳ ಮುಖಾಂತರವೇ ಸಾಗಾಣಿಕೆ ಮಾಡುತ್ತಿರುವುದರಿಂದ ರಸ್ತೆಗಳು ಬಹಳವಾಗಿ ಶಿಥಿಲವಾಗಿವೆ. ಈ ವರ್ಷದ ಬಡ್ಜೆಟ್‌ನಲ್ಲಿ ನಮ್ಮ ಕ್ಷೇತ್ರದ ಕಾಮಗಾರಿ ಕೆಲಸಗಳನ್ನು ಒಂದನ್ನೂ ಸೇರಿಸಿಲ್ಲ. ಯಾರು ನಮ್ಮ ಕ್ಷೇತ್ರದ ಶಾಸಕರು ಇಲ್ಲದ ಕಾರಣ ಎರಡು ವರ್ಷಗಳಿಂದ ಜನರಿಗೆ ಯಾವ ವಿಧವಾದ ಸೌಲಭ್ಯಗಳು ಸಿಗದೆ, ಜನರ ಮನಸ್ಸಿಗೆ ಅಸಮಾಧಾನಕರವಾದ ಸಂಗತಿಯುಂಟಾಗಿದೆ. ನಮ್ಮ ಕ್ಷೇತ್ರದಲ್ಲಿ ಅನೇಕ ಸೇತುವೆಗಳು ಆಗದೆ ಹಾಗೆಯೇ ನಿಂತು ಹೋಗಿದೆ. ಮೊನ್ನೆ ೧೧ನೇ ತಾರೀಖು ವಿಪರೀತವಾದ ಮಳೆ ಬಿದ್ದ ಕಾರಣ ಕೆರೆಕಟ್ಟೆಗಳು ಒಡೆದು ಹೋಗಿ ಕಟ್ಟೆಗಳ ಮೇಲೆಲ್ಲ ನೀರು ಹರಿದು ತೊಂದರೆಯುಂಟಾಯಿತು. ಅದನ್ನೆಲ್ಲ ಅಧಿಕಾರಿಗಳು ಕಂಟ್ರೋಲ್ ಮಾಡಿದ್ದಾರೆ. ಜೊತೆಗೆ ಅನೇಕ ಕೆರೆಗಳಲ್ಲಿ ಸಿಲ್ಟ್ ತುಂಬಿಕೊಂಡಿರುತ್ತದೆ. ಈ ಸಿಲ್ಟನ್ನು ತೆಗೆಯಲು ಹಿಂದೆ ಬುಲ್‌ಡೋಜರ್ ಸ್ಕೀಮ್ ಎಂದು ಇತ್ತು. ಈ ಸರಕಾರ ಬಂದಮೇಲೆ ಅದನ್ನು ನಿಲ್ಲಿಸಿರುತ್ತದೆ. ಈಗಲೂ ಕೂಡ ಆ ಸ್ಕೀಮನ್ನು ಜಾರಿಗೆ ತಂದು ಕೆರೆಗಳಲ್ಲಿ ತುಂಬಿರುವ ಸಿಲ್ಟನ್ನು ತೆಗೆಯಲು ಮಾನ್ಯ ಮಂತ್ರಿಗಳಲ್ಲಿ ಮನವಿ ಮಾಡಿಕೊಳ್ಳುತ್ತೇನೆ. ಎಲ್ಲ ಕೆರೆಗಳಲ್ಲೂ ಮಣ್ಣು ತುಂಬಿ ಹೋಗಿವೆ. ಕೆರೆಗಳಲ್ಲಿ ಬರತಕ್ಕಂಥ ದೊಂಗರೆಗಳಿಗಾಗಿ ಸೇತುವೆಗಳನ್ನು ಅಡ್ಡಕಟ್ಟೆ ಕಟ್ಟತಕ್ಕಂಥ ಯೋಜನೆ ಹಿಂದೆ ಇತ್ತು. ಈಗ ಆ ಯೋಜನೆಯನ್ನು ಕೈಬಿಟ್ಟಿದ್ದಾರೆ. ಕೆರೆಗಳಲ್ಲಿ ಮಣ್ಣು ತುಂಬಿರುವುದರಿಂದ ನೀರು ವಿಶೇಷವಾಗಿ ನಿಲ್ಲುತ್ತಿಲ್ಲ. ಇದರಿಂದ ಆರಂಭಕ್ಕೆ ನೀರು ಸಾಲದೆ ರೈತರು ಅನೇಕ ಕಷ್ಟನಷ್ಟಗಳನ್ನು ಅನುಭವಿಸುತ್ತಿದ್ದಾರೆ. ಕೆರೆಗಳಲ್ಲಿ ತುಂಬಿರುವ ಮಣ್ಣನ್ನು ತೆಗೆಸಿದರೆ ನೀರು ನಿಲ್ಲುವುದಕ್ಕೆ ಅವಕಾಶವಾಗುತ್ತದೆ. ಈ ಯೋಜನೆಯನ್ನು ಕೂಡ ಸರ್ಕಾರದವರು ತೆಗೆದುಕೊಳ್ಳಬೇಕೆಂದು ತಮ್ಮ ಮುಖಾಂತರ ಸರ್ಕಾರಕ್ಕೆ ಮನವಿ ಮಾಡಿಕೊಳ್ಳುತ್ತೇನೆ.

ಇನ್ನು ರಸ್ತೆಗಳ ವಿಚಾರದಲ್ಲಿ ಹೇಳುವುದಾದರೆ ಪಿ.ಡಬ್ಲ್ಯೂ.ಡಿ.ಗೆ ಸೇರಿ ಸುಮಾರು ೧೫ ವರ್ಷಗಳು ಆಗಿದ್ದರೂ ಕೂಡ ಇದುವರೆಗೆ ರಸ್ತೆಗಳ ರಿಪೇರಿ ಕಾರ್ಯಕ್ರಮ ತೆಗೆದುಕೊಂಡಿಲ್ಲ. ಬ್ರಿಡ್ಜ್‌ಗಳನ್ನು ಕಟ್ಟದೆ ಇರತಕ್ಕಂಥವು ೩-೪ ಹಾಗೆಯೇ ನಿಂತು ಹೋಗಿವೆ ರಸ್ತೆಗಳು ಇಲ್ಲದೆ ರೈತರು ತಿರುಗಾಡುವುದಕ್ಕೂ ಕೂಡ ಬಹಳ ಅನಾನುಕೂಲಗಳಾಗಿದೆ. ಇಂಥ ಸಂದರ್ಭದಲ್ಲಿ ನಮ್ಮ ಪುಣ್ಯಕ್ಕೆ ನಮ್ಮ ಸ್ನೇಹಿತರೆ ಆದಂಥವರು ಸಚಿವರಾಗಿ ಬಂದಿದ್ದಾರೆ. ಅವರಿಗೆ ನಮ್ಮ ತಾಲ್ಲೂಕಿನ ಎಲ್ಲ ವಿಷಯಗಳನ್ನು ಮನವರಿಕೆ ಮಾಡಿಕೊಂಡಿದ್ದೇನೆ. ಮೂವತ್ತು ವರ್ಷಗಳಿಂದ ಕೈಬಿಟ್ಟಿರತಕ್ಕಂಥ ವಿಷಯಗಳನ್ನು ತಿಳಿಸಿರುತ್ತೇನೆ ಅದನ್ನೆಲ್ಲ ಮಂಜೂರು ಮಾಡಿ ಬೆಂಗಳೂರಿಗೆ ಹತ್ತಿರವಾಗಿ ಇರತಕ್ಕಂಥ ಜಿಲ್ಲೆ ದೇವನಹಳ್ಳಿ ತಾಲ್ಲೂಕಿಗೆ ರಸ್ತೆಗಳ ಸಂಪರ್ಕವನ್ನು ಸುಧಾರಿಸಿಕೊಡಬೇಕೆಂದು ಹೇಳುತ್ತೇನೆ. ಜೊತೆಗೆ ಹೈಲೆವೆಲ್ ಕಾಸ್‌ವೇ ಮೂರು ನಾಲ್ಕು ಕಡೆ ಇರುತ್ತದೆ. ಇದರಿಂದ ಬರತಕ್ಕಂಥ ಎಲ್ಲ ನೀರು ಒಂದೇ ಕಡೆ ಹೋಗುವುದರಿಂದ ಪಾಠಶಾಲೆಗಳಿಗೆ ಹೋಗತಕ್ಕಂಥ. ಮಕ್ಕಳಿಗೆ ತೊಂದರೆಯಾಗಿರುತ್ತದೆ. ರಸ್ತೆಯ ಮೇಲೆಲ್ಲ ನೀರು ಹರಿದು ಓಡಾಡುವುದಕ್ಕೂ ಅನಾನುಕೂಲ ಪರಿಸ್ಥಿತಿ ಉಂಟಾಗಿರುತ್ತದೆ ಅದನ್ನೆಲ್ಲ ಸರಿ ಮಾಡಿಸಿಕೊಡಬೇಕೆಂದು ಮನವಿ ಮಾಡಿಕೊಂಡು ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಎಚ್. ವಿಶ್ವನಾಥ (ಕೃಷ್ಣರಾಜನಗರ).—ಸನ್ಮಾನ್ಯ ಅಧ್ಯಕ್ಷರೇ ಮಾನ್ಯ ಲೋಕೋಪಯೋಗಿ ಸಚಿವರು ಇಟ್ಟಿರತಕ್ಕಂಥ ಬೇಡಿಕೆಗಳನ್ನು ಸಮರ್ಥಿಸುತ್ತಾ ಒಂದೆರಡು ಸಲಹೆಗಳನ್ನು ಕೊಡಲು ಇಷ್ಟಪಡುತ್ತೇನೆ. ಅಧ್ಯಕ್ಷರೆ ಈಗಾಗಲೇ ಹಲವಾರು ಸದಸ್ಯರು ಈ ಇಲಾಖೆಯ ಬಗ್ಗೆ ಬಹಳ ದೀರ್ಘವಾಗಿ ಚರ್ಚೆ ಮಾಡಿದ್ದಾರೆ. ಆದರೆ ನಾನು ಎರಡು ಅಂಶಗಳನ್ನು ಸಚಿವರ ಗಮನಕ್ಕೆ ತಮ್ಮ ಮೂಲಕ

ತರಲು ಇಚ್ಛೆಪಡುತ್ತೇನೆ. ಒಂದನೆಯದಾಗಿ, ಅಧ್ಯಕ್ಷರೇ ನಮ್ಮ ಕನ್ನಡ ನಾಡಿನಲ್ಲಿ ಹಲವಾರು ಜನ ವಿನ್ಯಾಸಕರು ಹುಟ್ಟಿ ಹೋದರು. ವಿಶ್ವೇಶ್ವರಯ್ಯನವರಂಥ ವಿನ್ಯಾಸಕರು ಹುಟ್ಟಿದಂಥ ನಾಡು ನಮ್ಮ ಕನ್ನಡನಾಡು. ಆದರೆ ಈಗಿರತಕ್ಕಂಥ ಪರಿಸ್ಥಿತಿಯಲ್ಲಿ ನಮ್ಮ ವಿಶ್ವೇಶ್ವರಯ್ಯನವರಿಗೆ ಹೋಲಿಸಿದರೆ ಬಹುಶಃ ಇನ್ನು ಅಂಥವರು ಹುಟ್ಟುತ್ತಾರೆಯೋ ಎಂದೆನಿಸುತ್ತದೆ. ತಮಗೆ ಒಂದು ಉದಾಹರಣೆಯನ್ನು ಹೇಳುವುದಾದರೆ ನಮ್ಮ ರಾಜ್ಯದಲ್ಲಿ ಪ್ರವಾಸಿ ಮಂದಿರಗಳನ್ನು ಹೊಸದಾಗಿ ಕಟ್ಟಿರತಕ್ಕಂಥದ್ದನ್ನು ನೋಡುತ್ತಿರುತ್ತೇವೆ. ಇವೆಲ್ಲವೂ ಒಂದೇ ರೀತಿಯದಾಗಿರುತ್ತದೆ. ಒಬ್ಬರು ವಿ.ಐ.ಪಿ. ಬರುತ್ತಾರೆ. ಒಬ್ಬರು ಮುಖ್ಯ ಮಂತ್ರಿಗಳು ಬರುತ್ತಾರೆ ಎಂಬುದನ್ನು ಮರೆತು ಬಿಟ್ಟಿದ್ದಾರೆಯೋ ಅನ್ನುವ ರೀತಿಯಲ್ಲಿರುತ್ತದೆ. ಒಂದು ಸಿಟ್ಟಿಂಗ್ ರೂಮ್ ಇರುವುದಿಲ್ಲ. ಎಲ್ಲ ಕಡೆಯೂ ಒಂದು ಹಾಲ್ ಎಂದು ಇರುತ್ತದೆ. ಬಂದಂಥ ಜನರು ಆ ಹಾಲ್‌ನಲ್ಲಿಯೇ ಕುಳಿತುಕೊಳ್ಳಬೇಕು. ಜಲಭಾದಗೆ ಯಾರಾದರು ಹೋಗಬೇಕೆಂದರೆ ಪ್ರತ್ಯೇಕವಾದ ವ್ಯವಸ್ಥೆ ಇಲ್ಲ. ಈ ರೀತಿಯಾಗಿ ಐ.ಬಿ.ಗಳ ನಿರ್ಮಾಣ ಮಾಡಿರತಕ್ಕಂಥ ವಿನ್ಯಾಸಕರು ನಮ್ಮಲ್ಲಿ ಇದ್ದಾರೆ. ಐ.ಬಿ.ಗಳಲ್ಲಿ ವಿಸಿಟರ್ಸ್ ಬಂದರೆ ಅವರು ಕುಳಿತುಕೊಳ್ಳಲು ಸಿಟಿಂಗ್ ರೂಮ್ ಇರುವುದಿಲ್ಲ. ಸರಿಯಾದ ಲೆಟ್ರಿನ್‌ಗಳು ಇರುವುದಿಲ್ಲ. ಇಂಥ ಒಂದು ಅವ್ಯವಸ್ಥೆಯನ್ನು ಸರಿಪಡಿಸಿ ವ್ಯವಸ್ಥಿತಗೊಳಿಸಬೇಕೆಂದು ತಮ್ಮ ಮೂಲಕ ಸಲಹೆಯನ್ನು ಕೊಡಲಿಕ್ಕೆ ಇಚ್ಛೆಪಡುತ್ತೇನೆ.

ಇನ್ನು ಇನ್‌ಸ್ಪೆಕ್ಷನ್ ಬಂಗಲೆಗಳಲ್ಲಿ ಡೈನಿಂಗ್ ಹಾಲ್ ಎಂದು ಇರುತ್ತದೆ. ಡೈನಿಂಗ್ ಹಾಲ್‌ನಲ್ಲಿ ಕೈತೊಳೆಯುವ ಬೇಸಿನ್‌ಗಳನ್ನು ಇಟ್ಟಿರುತ್ತಾರೆ. ಅಲ್ಲಿ ಊಟ ಮಾಡುತ್ತಿದ್ದರೆ ಇನ್ನೊಬ್ಬರು ಕೈ ತೊಳೆಯುವವರು ಅಲ್ಲಿಯೇ ಕ್ಯಾಕರಿಸಿ ಉಗಿಯುತ್ತಿರುತ್ತಾರೆ. ಇದು ಗಮನಿಸಿದರೆ ಎಷ್ಟು ಅಸಹ್ಯವಾಗಿ ತೋರುತ್ತದೆ. ಆದ್ದರಿಂದ ಊಟವಾದ ಮೇಲೆ ಕೈತೊಳೆಯಲು ಬೇರೆ ಸಪರೇಟ್ ರೂಮಿನ ವ್ಯವಸ್ಥೆಯನ್ನು ಮಾಡಬೇಕು. ಕೈತೊಳೆಯುವ ವಾಷ್ ಬೇಸಿನ್‌ಗಳನ್ನು ಇಡಬೇಕು. ಈ ರೀತಿ ವ್ಯವಸ್ಥಿತವಾದ ಐ.ಬಿ.ಗಳನ್ನು ಕೊಡಬೇಕೆಂದು ಸಲಹೆ ಕೊಡುವುದಕ್ಕೆ ಇಚ್ಛೆಪಡುತ್ತೇನೆ.

ಮತ್ತೆ ಎರಡನೆಯದಾಗಿ ನಮ್ಮಲ್ಲಿ ಅನ್ಯುಯಲ್ ರಿಪೇರ್ಸ್ ಎಂದು ಮಾಡುತ್ತಾರೆ. ಅನ್ಯುಯಲ್ ರಿಪೇರ್ಸ್‌ಗಾಗಿ ಬಿಲ್ಡಿಂಗ್‌ಗಳಿಗೆ ೬೦ನೇ ಇಸವಿಯಲ್ಲಿ ಏನು ಹಣವನ್ನು ಕೊಡುತ್ತಿದ್ದರೋ ಅಷ್ಟೇ ಹಣವನ್ನು ಕೊಡುತ್ತಿರುತ್ತಾರೆ. ಹಿಂದೆ ಎರಡು ಪರ್ಸೆಂಟ್ ಕೊಡುತ್ತಿದ್ದರು. ೧೯೮೨ನೇ ಇಸವಿಯಾದರೂ ಅಷ್ಟನ್ನೇ ಕೊಡುತ್ತಿದ್ದಾರೆ. ೧೯೬೦ನೇ ಇಸವಿಯಲ್ಲಿ ೫೦ ಸಾವಿರ ರೂಪಾಯಿಗಳನ್ನು ಹಾಕಿ ಖರ್ಚು ಮಾಡಿ ಕಟ್ಟಿದ್ದು. ವರ್ಷ ವರ್ಷ ಇದಕ್ಕೆ ದುರಸ್ತಿ ಮಾಡಬೇಕೆಂದರೆ ಎರಡು ಪರ್ಸೆಂಟ್ ಅಂದರೆ ೨೦೦ ರೂಪಾಯಿಗಳಿಂದ ಹಿಡಿದು ೫೦೦ ರೂಪಾಯಿಗಳ ತನಕ ಕೊಡುತ್ತಿರುತ್ತಾರೆ. ಹೀಗೆಯೇ ಇದು ಮುಂದುವರಿದರೆ ಇನ್ನು ೧೦ ವರ್ಷಗಳು ಕಳೆದರೆ ಬಹುಶಃ ಅರವತ್ತು ವರ್ಷಗಳ ಹಿಂದೆ ಕಟ್ಟಿರತಕ್ಕಂಥ ಬಿಲ್ಡಿಂಗ್‌ಗಳು ನಮ್ಮ ಕೈಗೆ ಸಿಗುತ್ತದೋ ಇಲ್ಲವೋ ಹೇಳುವುದಕ್ಕೆ ಬರುವುದಿಲ್ಲ. ಸಚಿವರು ತಮ್ಮ ಉತ್ತರದಲ್ಲಿ ಹೇಳಬೇಕು. ವರ್ಷಕ್ಕೆ ಎರಡುಬಾರಿಯಾದರೂ ಕಂಪಲ್‌ಸರಿ ಅನ್ಯುಯಲ್ ರಿಪೇರಿ ಎಂದು ತೆಗೆಯಬೇಕು. ನಮ್ಮ ತಾಲ್ಲೂಕಿನಲ್ಲಿ ನಮ್ಮ ಕ್ಷೇತ್ರದಲ್ಲಿ ೧೦೩ ಪಿ.ಡಬ್ಲ್ಯು.ಡಿ ಕ್ವಾರ್ಟರ್ಸ್ ಇರುತ್ತದೆ. ಅನ್ಯುಯಲ್ ರಿಪೇರ್ಸ್‌ಗಾಗಿ ನೀವು ಕೊಡತಕ್ಕಂಥ ಎರಡು ಪರ್ಸೆಂಟ್ ಹಣ ಇದು ಏನೇನು ಸಾಲದು. ಇವುಗಳಿಗೆ ಕಾಂಪೌಂಡ್ ಗೋಡೆ ಹೀಕದೆ ಕಟ್ಟಿರತಕ್ಕಂಥ ವ್ಯವಸ್ಥೆ ಕೂಡ ನಮ್ಮಲ್ಲಿ ಇದೆ. ಆದ್ದರಿಂದ ತಾವು ೧೯೮೨ನೇ ಇಸವಿಯ ಲೆಕ್ಕಾಚಾರ ಹಾಕಿಕೊಂಡು ವರ್ಷ ವರ್ಷ ದುರಸ್ತಿಗಾಗಿ ಸರಿಯಾದ ರೀತಿಯಲ್ಲಿ ಹಣವನ್ನು ಒದಗಿಸಿ ಕಟ್ಟಡಗಳು ಉಳಿಯುವಂತೆ ವ್ಯವಸ್ಥೆಯನ್ನು ಮಾಡಬೇಕೆಂದು ಈ ಸಂದರ್ಭದಲ್ಲಿ ಕೇಳಿಕೊಳ್ಳುತ್ತೇನೆ.

ಇನ್ನು ನಮ್ಮ ಸಚಿವರು ಬಹಳ ದಕ್ಷತೆಯಿಂದ ಈ ಇಲಾಖೆಯನ್ನು ನಡೆಸಿಕೊಂಡು ಬರುವವರಿದ್ದಾರೆ. ಯುವಜನ ಸಮಾಜದಲ್ಲಿ ರಾಜಕೀಯಕ್ಕೆ ಇಳಿದು ಬಹುಶಃ ರಾಜಕೀಯ ಕಷ್ಟನಷ್ಟಗಳನ್ನು ಅರ್ಥಮಾಡಿಕೊಂಡವರಾಗಿರುತ್ತಾರೆ. ಅವರು ಇನ್ನೂ ಕೂಡ ಹೆಚ್ಚಿನ ಕೆಲಸ ಮಾಡಲಿ ಎಂದು ಹೇಳಿ ಇಷ್ಟು ಹೇಳಲು ಅವಕಾಶ ಮಾಡಿಕೊಟ್ಟಿದ್ದಕ್ಕೆ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

೬-೦೦ ಪಿ. ಎಂ.

† ಶ್ರೀ ಜೆ. ಡಿ. ಸೋಮಪ್ಪ.--(ಸಕಲೇಶಪುರ) ಮಾನ್ಯ ಅಧ್ಯಕ್ಷರೇ ಲೋಕೋಪಯೋಗಿ ಇಲಾಖೆಯ ಮೇಲೆ ತಂದಿರತಕ್ಕ ಬೇಡಿಕೆಯನ್ನು ಸಂಪೂರ್ಣವಾಗಿ ಬೆಂಬಲಿಸಿ, ಕೆಲವು ಸಲಹೆಗಳನ್ನು

ಕೊಡಲು ಇಚ್ಛಿಸುತ್ತೇನೆ. ಈಗಾಗಲೇ ಅನೇಕಜನ ಮಾನ್ಯಸದಸ್ಯರುಗಳು ಲೋಕೋಪಯೋಗಿ ಇಲಾಖೆಯ ಮೇಲೆ ಮಾತನಾಡಿದ್ದಾರೆ. ನಿಜವಾಗಿಯೂ ಕೂಡ ರಾಜ್ಯದಲ್ಲಿ ಪ್ರತಿಯೊಬ್ಬ ಮನುಷ್ಯನಿಗೂ ಅತ್ಯಾವಶ್ಯವಾಗಿ ಅದರಲ್ಲೂ ಹಳ್ಳಿಗಾಡಿನ ರೈತಾಪಿ ಜನರಿಗೆ ಮುಖ್ಯವಾಗಿ ಬೇಕಾದಂತಹ ಇಲಾಖೆ ಲೋಕೋಪಯೋಗಿ ಇಲಾಖೆ. ಆದರೆ ದುರಾದೃಷ್ಟವಶಾತ್ ನಮ್ಮ ಸರ್ಕಾರ ಇರಿಗೇಷನ್‌ಗೆ ಹೆಚ್ಚಿನ ಹಣವನ್ನು ಖರ್ಚುಮಾಡುತ್ತಾ ಇರುವುದರಿಂದ ಲೋಕೋಪಯೋಗಿ ಇಲಾಖೆಗೆ ಕಡಿಮೆ ಹಣವಿರುವುದರಿಂದ ಹಳ್ಳಿಗಾಡಿನ ಜನರಿಗೆ ಅದರ ಪ್ರಯೋಜನ ಮುಟ್ಟುತ್ತಿಲ್ಲ. ಈಗತಾನೇ ಮಾನ್ಯ ಚಂದ್ರೇಗೌಡರು ಮಾತನಾಡಿದಹಾಗೆ ಮಲೆನಾಡಿನಲ್ಲಿ ಇವತ್ತು ಅರಣ್ಯಸಂಪತ್ತು ಬೇಕಾದಷ್ಟು ಇದೆ. ಅರಣ್ಯದಿಂದ ಬೇಕಾದಷ್ಟು ಹಣ ಸರ್ಕಾರದ ಬೊಕ್ಕಸಕ್ಕೆ ಬರುತ್ತದೆ. ಜೊತೆಗೆ ಅಗ್ರಿಕಲ್ಚರ್ ಇನ್‌ಕಮ್ ಟ್ಯಾಕ್ಸ್ ಬರುತ್ತದೆ. ಇಷ್ಟೆಲ್ಲಾ ಬಂದರೂ ಆ ಭಾಗದ ಜನರನ್ನು ಲೋಕೋಪಯೋಗಿ ಇಲಾಖೆ ಕೊನೆಯ ದೃಷ್ಟಿಯಿಂದ ನೋಡುತ್ತಿದೆ. ಮಾನ್ಯ ಲೋಕೋಪಯೋಗಿ ಸಚಿವರಿಗೆ ಮಲೆನಾಡು ಬೋರ್ಡನ್ನು ಮಾಡಬೇಕೆಂದು ಮನಸ್ಸು ಇದೆ. ಅದನ್ನು ಯಾವಾಗ ಮಾಡುತ್ತಾರೋ ಗೊತ್ತಿಲ್ಲ. ಸರ್ಕಾರದ ಧೋರಣೆಯಿಂದ ಮಲೆನಾಡು ಭಾಗಕ್ಕೆ ರಸ್ತೆ ಸಂಪರ್ಕ ಆಗುತ್ತಿಲ್ಲ. ರಸ್ತೆಗಳ ಮೆಂಟೇನ್‌ನ್ಸ್ ಬಗ್ಗೆ ಚಂದ್ರೇಗೌಡರು ಮಾತನಾಡಿದ್ದಾರೆ. ಆ ವಿಷಯದಲ್ಲಿ ನಾನು ಹೆಚ್ಚಿಗೆ ಮಾತನಾಡುವುದಿಲ್ಲ. ಬಯಲು ಸೀಮೆಯಲ್ಲಿ ವರ್ಷಕ್ಕೆ ೬ ಇಂಚು ಮಳೆಯಾದರೆ ಮಲೆನಾಡು ಪ್ರದೇಶಗಳಲ್ಲಿ ೧ ಗಂಟೆಗೆ ೧೦-೧೨ ಇಂಚು ಮಳೆಯಾಗುತ್ತದೆ. ಆ ಪ್ರದೇಶಗಳಿಗೆ ಮೇಂಟೇನೆನ್ಸ್ ಗ್ರಾಂಟನ್ನು ಕೊಡುತ್ತಿದ್ದಾರೆ. ಮಲೆನಾಡು ಪ್ರದೇಶಗಳಲ್ಲಿ ರಸ್ತೆ, ಸೇತುವೆಗಳು ಮಳೆಗಾಲದಲ್ಲಿ ಕುಸಿದು ಹೋಗುವುದು ಉಂಟು. ಹಾಸನದಲ್ಲಿ ಎರಡು ಡಿವಿಜನ್ ಇದೆ. ಒಂದು ಹಾಸನ. ಇನ್ನೊಂದು ಚನ್ನರಾಯಪಟ್ಟಣ. ಹಣವನ್ನು ಡಿವಿಜನ್‌ವೈಸ್ ಹಂಚುವಾಗ ಹಾಸನ ಡಿವಿಜನ್‌ಗೆ ೧೦ ಪರ್ಸೆಂಟ್ ಜಾಸ್ತಿ ಹಂಚಬಹುದು ಸಕಲೇಶಪುರದಲ್ಲಿ ನಮ್ಮ ಡಿವಿಜನ್‌ನಿಂದ ಬರತಕ್ಕ ಹಣವನ್ನು ಪಡೆದು ಕೆಲಸಶುರು ಮಾಡುವುದರೊಳಗೆ ೧ ವರ್ಷವಾಗುತ್ತದೆ. ರಸ್ತೆ ಸಂಪರ್ಕ ಮಲೆನಾಡು ಪ್ರದೇಶಗಳಲ್ಲಿ ಬಹಳ ಅನಾನುಕೂಲವಾಗಿರುತ್ತದೆ. ಮಲೆನಾಡಿಗೋಸ್ಕರ ಒಂದು ವಿಶೇಷವಾದ ಯೋಜನೆಯನ್ನು ಮಂತ್ರಿಗಳು ಸರಿಯಾಗಿ ಮಂಡಿಸಬೇಕು, ಆ ಯೋಜನೆಯ ಮುಖಾಂತರ ರಸ್ತೆಗಳ ಕೆಲಸಕಾರ್ಯಗಳನ್ನು ಮಾಡಿಸಿಕೊಡಬೇಕೆಂದು ಮಂತ್ರಿಗಳಿಗೆ ಹೇಳುತ್ತೇನೆ ಪಟ್ಟಣಗಳಲ್ಲಿರತಕ್ಕ ಜನ ದೂರದರ್ಶನ ನೋಡುತ್ತಾರೆ, ಕಾಂಕ್ರಿಟ್ ರಸ್ತೆಯಲ್ಲಿ ಓಡಾಡುತ್ತಾರೆ, ಸಿನಿಮಾ ನೋಡುತ್ತಾರೆ. ಪಾಪ ಹಳ್ಳಿಗಾಡಿನಲ್ಲಿರತಕ್ಕ ಜನ ಮನೆಮುಂದೆ ಓಡಾಡತಕ್ಕ ವಾಹನಗಳನ್ನು ನೋಡುವ ಭಾಗ್ಯವಿಲ್ಲವಾಗಿದೆ. ಕೊನೆಯ ಪಕ್ಷ ಹಳ್ಳಿಗಾಡಿನ ಪ್ರದೇಶಗಳಲ್ಲಿ ೨೫ ವಾಹನಗಳಾದರೂ ಓಡಾಡಲು ರಸ್ತೆ ನಿರ್ಮಿಸಬೇಕು. ಈಗ ಮೋಟಾರು ಸೈಕಲ್ ಆಟೋರಿಕ್ಷಾ ಹಳ್ಳಿಗಳಿಗೆ ಹೋಗುತ್ತಿವೆ. ಹಳ್ಳಿಯ ಜನರೂ ಕೂಡ ನಾಜೂಕಾಗಿ ತಿರುಗಾಡಬೇಕೆಂದು ಆಸೆ ಇಟ್ಟುಕೊಂಡಿರುತ್ತಾರೆ. ಜನರ ನೈರ್ಮಲ್ಯ ದೃಷ್ಟಿಯಿಂದ ಹಳ್ಳಿಗಳ ಅನುಕೂಲ ದೃಷ್ಟಿಯಿಂದ ಎಲ್ಲಾ ಹಳ್ಳಿಗಳ ರಸ್ತೆಗಳಿಗಳೂ ಟಾರು ಹಾಕುವ ಒಂದು ಯೋಜನೆಯನ್ನು ಮಂತ್ರಿಗಳು ಇದರಲ್ಲಿ ಸೇರಿಸಿಕೊಳ್ಳಬೇಕೆಂದು ನಾನು ಅರಿಕೆ ಮಾಡಿಕೊಳ್ಳುತ್ತೇನೆ. ರಸ್ತೆಗಳನ್ನು ರಕ್ಷಣೆ ಮಾಡುವುದನ್ನು ಕೂಡ ಲೋಕೋಪಯೋಗಿ ತೆಗೆದುಕೊಳ್ಳಬೇಕು. ಮಲೆನಾಡು ಪ್ರದೇಶಕ್ಕೆ ಹೆಚ್ಚಿನ ರಸ್ತೆಗಳನ್ನು ನಿಮ್ಮ ಇಲಾಖೆಗೆ ಸೇರಿಸಿಕೊಂಡು ದುರಸ್ತಿ ಮಾಡಿ ರೈತಾಪಿ ಜನರಿಗೆ ಅನುಕೂಲ ಮಾಡತಕ್ಕಂತಹ ಒಂದು ಯೋಜನೆಯನ್ನು ಹಾಕಿಕೊಳ್ಳಬೇಕೆಂದು ನಾನು ಕಳಕಳಿಯಿಂದ ಪ್ರಾರ್ಥಿಸಿಕೊಳ್ಳುತ್ತೇನೆ, ಬಡ್ಜೆಟ್‌ನಲ್ಲಿ ಸೇರಿಸುವಂತಹ ಕೆಲಸದ ವಿಚಾರವಾಗಿ ಮಾನ್ಯ ಚಂದ್ರೇಗೌಡರು ಮಾತನಾಡಿದ್ದಾರೆ. ದಿವಂಗತ ಅರಸುರವರು ೨ ಕೋಟಿ ರೂಪಾಯಿ ಪ್ರಾಜೆಕ್ಟ್‌ನಲ್ಲಿ ನನ್ನ ಕ್ಷೇತ್ರಕ್ಕೆ ೬ ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದರು. ನಾನು ಕಾಂಗ್ರೆಸ್ ಐ ಗೆ ಸೇರಿದಮೇಲೆ ವಜಾಮಾಡಿಬಿಟ್ಟರು. ೧೯೮೦ನೇ ಇಸವಿಯಲ್ಲಿ ನಮ್ಮ ಸರ್ಕಾರ ಬಂದುಮೇಲೆ ೧೨ಲಕ್ಷ ರೂಪಾಯಿಗಳನ್ನು ಆ ಕೆಲಸಗಳಿಗೋಸ್ಕರ ಕೊಟ್ಟಿದ್ದಾರೆ. ಕೊಟ್ಟಂತಹ ಹಣ ಶಾಂತರಹಳ್ಳಿ ಕುಂಬಳ್ಳಿ ರೈಲ್ವೆಸ್ಟೇಷನ್ ಹತ್ತಿರ ಕೆಲಸಗಳಿಗೋಸ್ಕರ ೨ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದರೂ $\frac{1}{3}$ ಸೇರಿಲ್ಲ. ಕಳೆದ ವರ್ಷ ಆ ಕೆಲಸ ಕ್ಯಾರಿಓವರ್ ಆಯಿತು. ಈ ವರ್ಷವಾದರೂ ಆ ಕೆಲಸವನ್ನು ಸೇರಿಸಿಕೊಂಡುವ ರೀತಿಯಲ್ಲಿ ಮಾಡಿಸಿಕೊಡಬೇಕು, ಮಲೆನಾಡಿನ ಭಾಗಕ್ಕೆ ಹೆಚ್ಚಿನ ಕೆಲಸಕಾರ್ಯಗಳು ಆಗಬೇಕು, ಮಲೆನಾಡಿನ ಪ್ರದೇಶಗಳಲ್ಲಿ ಸೇತುವೆಗಳಿಗಾಗಿ ಹೆಚ್ಚಿನ ಹಣವನ್ನು ಒದಗಿಸಬೇಕೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ನಮ್ಮ ಕ್ಷೇತ್ರದಲ್ಲಿ ಮೊದಲು ಒಂದೇ ಡಿವಿಜನ್ ಇತ್ತು. ೧೯೭೭ನೇ ಇಸವಿಯಲ್ಲಿ ೨ ಡಿವಿಜನ್‌ಗಳಾಯಿತು. ಆ ಕಾಲದಲ್ಲಿ ಚನ್ನರಾಯಪಟ್ಟಣ ಡಿವಿಜನ್‌ಗೆ ಹೊಸ ರೋಲರ್, ಲಾರಿಗಳು ಹೋದವು. ಸಕಲೇಶಪುರ ಡಿವಿಜನ್‌ಗೆ ೧೯೫೪ನೇ

ಮಾಡಲ್‌ನ ಲಾರಿ. ರೋಡ್ ರೋಲರ್ ಬಂದುವು. ಅವುಗಳು ವಾಸಕ್ಕೆ ಎರಡು ದಿವಸ ಕೆಲಸ ಮಾಡ ತ್ತವೆ ೫ ದಿವಸ ರಿಪೇರಿಗೆ ಹೋಗುತ್ತವೆ. ಕೆಲಸ ಬೇಗ ನಡೆಯುತ್ತಿಲ್ಲ, ಲಾರಿಗಳು ಪದೇ ಪದೇ ಕೆಟ್ಟು ಹೋಗುತ್ತಿವೆ. ಲಾರಿಗಳನ್ನು ಕಂಟ್ರಾಕ್ಟರುಗಳು ಸ್ವಂತ ಇಟ್ಟುಕೊಳ್ಳುವುದರಿಂದ ಅಷ್ಟು ತೊಂದರೆ ಯಾಗುವುದಿಲ್ಲ. ರೋಡ್‌ರೋಲರ್‌ನ್ನು ಆದಷ್ಟು ಬೇಗ ನಮ್ಮ ಡಿವಿಜನ್‌ಗೆ ಕೊಡಿಸತಕ್ಕಂತಹ ಒಂದು ವ್ಯವಸ್ಥೆಯನ್ನು ಮಾಡಬೇಕು. ಲಾರಿಗಳನ್ನು ಸಹ ಹೊಸದಾಗಿ ಕೊಡಿಸತಕ್ಕಂತಹ ಒಂದು ವ್ಯವಸ್ಥೆ ಯನ್ನು ಮಾಡಬೇಕೆಂದು ಈ ಸಂದರ್ಭದಲ್ಲಿ ಕೇಳಿಕೊಳ್ಳುತ್ತೇನೆ

ಇವತ್ತು ನಮ್ಮ ರಾಜ್ಯಕ್ಕೆ ಸಿಮೆಂಟಿನ ಅಭಾವ ಬಂದಿದೆ. ಸಿಮೆಂಟ್ ಇಲ್ಲದೆ ಇರುವುದರಿಂದ ಅನೇಕ ಕೆಲಸಕಾರ್ಯಗಳು ಕುಂಠಿತವಾಗುತ್ತಿವೆ. ಮುಂದಿನ ವರ್ಷ ಸಿಮೆಂಟ್ ಬರಬಹುದು, ವರ್ಷಕ್ಕೆ ಎಷ್ಟು ಸಿಮೆಂಟ್ ಬೇಕೆಂಬುದನ್ನು ಲೆಕ್ಕಹಾಕಿ ಸಿಮೆಂಟನ್ನು ಸ್ಟಾಕ್ ಇಟ್ಟುಕೊಳ್ಳಬೇಕು. ಹಳ್ಳಿ ಗಾಡಿನ ಪ್ರದೇಶಗಳಲ್ಲಿ ಆಗಬೇಕಾಗಿರುವ ಕೆಸಲಕಾರ್ಯಗಳು ಅಂದರೆ ಸೇತುವೆಗಳು ಕೆರೆ ಕೆಲಸ, ತೂಬು ಕೋಡಿ ರಿಪೇರಿ ಕೆಲಸಕಾರ್ಯಗಳಿಗೆ ಸಿಮೆಂಟ್ ಸರಬರಾಜು ಮಾಡಲು ತಾವು ಒಂದು ವ್ಯವಸ್ಥೆ ಮಾಡ ಬೇಕು.

ಇನ್ನು ಗ್ಯಾಂಗ್ ಕೂಲೀಸ್ ಬಗ್ಗೆ ಹೇಳುವುದಾದರೆ ಅವರಿಗೆ ಕೊಡತಕ್ಕ ಸಂಬಳ ಸಾಲುವುದಿಲ್ಲ. ಮಲೆನಾಡಿನ ಪ್ರದೇಶಗಳಲ್ಲಿ ಕೆಲಸ ಮಾಡಿದರೆ ದಿವಸಕ್ಕೆ ೧೦–೧೨ ರೂಪಾಯಿ ಕೊಡುತ್ತಾರೆ. ತಾವು ಗ್ಯಾಂಗ್ ಕೂಲೀಸ್‌ಗೆ ೭ ರೂಪಾಯಿ ಕೊಡುತ್ತಿರಬಹುದು.

ಶ್ರೀ ಕಾಗೋಡುತಿಮ್ಮಪ್ಪ.—ಈಗ ೯ ರೂಪಾಯಿಗಳನ್ನು ಕೊಡಲಾಗುತ್ತಿದೆ.

ಶ್ರೀ ಜೆ. ಡಿ. ಸೋಮಪ್ಪ.—೯ ರೂಪಾಯಿ ಕೊಡುತ್ತಿದ್ದರೆ ಸರಿ. ಅವರುಗಳು ಯಾವಾಗಲೂ ಮರದಡಿ ಮಲಗಿರುತ್ತಾರೆಂದೂ ಹೇಳಿದರು. ಅವರುಗಳನ್ನು ಖಾಯಂ ಮಾಡತಕ್ಕದು ಸದನ ಮುಂದೆ ಅನೇಕ ಸಾರಿ ಬಂದಿದೆ. ಅವರನ್ನು ಖಾಯಂ ಮಾಡ ಬೇಕು ೨೦–೨೫ ವರ್ಷಗಳ ಕಾಲ ಲೋಕೋಪಯೋಗಿ ಇಲಾಖೆಯಲ್ಲಿ ಕೆಲಸ ಮಾಡಿಕೊಂಡು ಬಂದಿದ್ದಾರೆ. ಯಾರೂ ಜಾಸ್ತಿ ವರ್ಷಗಳ ಕಾಲ ಕೆಲಸ ಮಾಡಿಕೊಂಡು ಬಂದಿದ್ದಾರೆ ಅಂತಹವರಿಗೆ ಖಾಯಂ ಮಾಡುವ ಅವಕಾಶವುಂಟು ಮಾಡ ಬೇಕೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಮಾನ್ಯ ದೇವೇಗೌಡರು ಇರಿಗೇಷನ್ ಡಿಪಾರ್ಟ್‌ಮೆಂಟ್ ಬಗ್ಗೆ ಮಾತನಾಡುತ್ತಾ ಎಸ್ಟಿಮೆಂಟ್‌ಗಳನ್ನು ಮಂಜೂರು ಮಾಡುವುದಿಲ್ಲ, ಗ್ರ್ಯಾಂಟ್ ಇಲ್ಲವೆಂದು ಹೇಳು ವುದು ಈ ರೀತಿ ಎಲ್ಲಾ ಆಗುತ್ತಿದೆ. ಆದ್ದರಿಂದ ಜಿಲ್ಲೆಗೆ ಒಂದಾದರೂ ಮೈನರ್ ಇರಿಗೇಷನ್ ಸಬ್ ಡಿವಿಜನ್ ಮಾಡಿ. ನಮ್ಮ ಸದ್ಯೋಜಾತಪ್ಪನವರು ನಮ್ಮ ಭಾಗದಲ್ಲಿ ಇರಿಗೇಷನ್ ವರ್ಕ್ಸ್‌ಗಳನ್ನು ಬಿಟ್ಟಿ ದ್ದಾರೆ. ಆದ್ದರಿಂದ ನಮ್ಮಲ್ಲಿ ಒಂದು ಮೈನರ್ ಇರಿಗೇಷನ್ ಸಬ್ ಡಿವಿಜನ್‌ಗಳನ್ನು ತಾಲ್ಲೂಕಿ ಗೊಂದು ಪ್ರಾರಂಭ ಮಾಡಬೇಕೆಂದು ಹೇಳುತ್ತೇನೆ.

ನಮ್ಮ ಕ್ಷೇತ್ರವಾದ ಆಲೂರು ತಾಲ್ಲೂಕ್ ಕೇಂದ್ರದಲ್ಲಿ ಒಂದು ಪ್ರವಾಸಿ ಮಂದಿರ ಕಟ್ಟುವ ಬಗ್ಗೆ ಎಸ್ಟಿ ಮೇಟ್ ತಯಾರಾಗಿದೆ. ಈ ಮೊದಲು ಇದನ್ನು ಕಟ್ಟಲು ಜಾಗವಿಲ್ಲವೆಂದು ಹೇಳಿದ್ದರು. ಈಗ ರೆವಿನ್ಯೂ ಇಲಾಖೆಯಿಂದ ಜಾಗ ಕೊಡಿಸಲು ನಾನು ಏರ್ಪಾಡು ಮಾಡಿದ್ದೇನೆ. ಆದ್ದರಿಂದ ಇದನ್ನು ತಾವು ಜಾಗ್ರತೆ ಕಟ್ಟಿಸುವುದಕ್ಕೆ ವ್ಯವಸ್ಥೆ ಮಾಡಬೇಕೆಂದು ಹೇಳುತ್ತೇನೆ. ತಮ್ಮ ಕಾಲದಲ್ಲಿ ಪ್ರತಿ ಪ್ರವಾಸಿ ಮಂದಿರಕ್ಕೂ ಟೆಲಿಫೋನ್ ಸಂಪರ್ಕವನ್ನು ಹಾಕಿಸಬೇಕೆಂದು ಕೇಳಿಕೊಳ್ಳುತ್ತೇನೆ. ಏಕೆಂದರೆ, ಮಂತ್ರಿಗಳು ಅಥವಾ ಬೇರೆ ಯಾರಾದರು ಬರುತ್ತಾರೆಂದು ನಾವು ಟಿ.ಬಿ.ಯಲ್ಲಿ ಕಾಯುತ್ತಿರುತ್ತೇವೆ. ಆಗ ಕಾರಣಾಂತರಗಳಿಂದ ಅವರುಗಳು ಬರುವುದು ತಡವಾದರೆ ಟೆಲಿಫೋನ್ ಸೌಲಭ್ಯವಿಲ್ಲದಿದ್ದರೆ ನಮಗೆ ಅದು ಗೊತ್ತಾಗುವುದಿಲ್ಲ. ಸಾಮಾನ್ಯವಾಗಿ ಟಿ.ಬಿ.ಗಳು ಊರಿನಿಂದ ಹೊರಗೆ ಇರುತ್ತವೆ. ಈ ಕಾರಣ ದಿಂದ ವಿಷಯ ತಿಳಿಯಲು ನಾವು ಮೈಲಿಗಟ್ಟಲೆ ನಡೆದುಕೊಂಡು ಊರಿನೊಳಕ್ಕೆ ಹೋಗಬೇಕಾಗುತ್ತದೆ. ಈ ಕಷ್ಟವನ್ನು ತಪ್ಪಿಸಲು ರಾಜ್ಯದಲ್ಲಿರುವಂತಹ ೧೭೫–೨೦೦ ಟಿ.ಬಿ.ಗಳಿಗೂ ಟೆಲಿಫೋನ್ ಸೌಲಭ್ಯ ಕಲ್ಪಿಸಿಕೊಡಬೇಕೆಂದು ಹೇಳುತ್ತೇನೆ. ಈಗ ಜಿಲ್ಲಾ ಕೇಂದ್ರಗಳಲ್ಲಿರುವ ಟಿ.ಬಿ.ಗಳಲ್ಲಿ ಈ ಸೌಲಭ್ಯವಿದೆ. ಆದ್ದರಿಂದ ತಾಲ್ಲೂಕ್ ಮಟ್ಟದಲ್ಲಿರುವ ಟಿ ಬಿ ಗಳಿಗೂ ಸಹ ಇದನು ಕಲ್ಪಿಸಿಕೊಡಬೇಕೆಂದು ಮಾನ್ಯ ಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ. ಮಾನ್ಯ ಮಂತ್ರಿಗಳು ಬಹಳ ಒಂದು ದಕ್ಷತೆಯಿಂದ ಹಾಗೂ ಹುರುಪಿ ನಿಂದ ಕೆಲಸ ಮಾಡುತ್ತಿದ್ದಾರೆ. ಈ ಮೊದಲು ಮಲೆನಾಡಿನವರೇ ಈ ಖಾತೆಯನ್ನು ವಹಿಸಿಕೊಂಡಿದ್ದರು.

ಆದರೆ ಅವರು ಮಲೆನಾಡಿನ ಒಂದು ಅಭಿವೃದ್ಧಿ ಬಗ್ಗೆ ಹೆಚ್ಚಿನ ಆಸಕ್ತಿ ವಹಿಸಿರಲಿಲ್ಲ. ಆದರೆ ತಮ್ಮ ಕಾಲದಲ್ಲಿ ಮಲೆನಾಡಿನ ರಸ್ತೆಗಳ ಬಗ್ಗೆ ಹೆಚ್ಚಿನ ಒಂದು ಮುತುವರ್ಜಿ ವಹಿಸಿದ್ದೀರಿ. ಇದೇರೀತಿ ಇನ್ನು ಮುಂದೆಯೂ ಸಹ ಹೆಚ್ಚಿನ ಮುತುವರ್ಜಿ ವಹಿಸಿ ಕೆಲಸ ಮಾಡಬೇಕೆಂದು ಹೇಳುತ್ತೇನೆ.

ಇನ್ನು ಮಲೆನಾಡಿಗೂ ಮತ್ತು ಬಯಲು ಸೀಮೆಗೂ ಇರುವ ಮೇನ್‌ಟೆನೆನ್ಸ್ ಗ್ರಾಂಟ್‌ನ ಒಂದು ತಾರತಮ್ಯವನ್ನು ಸರಿಪಡಿಸಿ ಮಲೆನಾಡಿನ ಭಾಗಕ್ಕೂ ಹೆಚ್ಚು ಕೊಡುವುದಕ್ಕೆ ವ್ಯವಸ್ಥೆ ಮಾಡಬೇಕೆಂದು ಹೇಳುತ್ತೇನೆ.

ಇನ್ನು ಎಸ್. ಆರ್. ಗ್ರಾಂಟ್ ಬಗ್ಗೆ ಮಾನ್ಯ ದೇವೆಗೌಡರು ಹೇಳಿದ್ದಾರೆ. ಇದು ಒಂದೊಂದು ಕಡೆಗೂ ವ್ಯತ್ಯಾಸವಾಗುತ್ತಾ ಹೋಗುತ್ತದೆ. ಈಗ ಉದಾಹರಣೆಗೆ ಹೇಳಬೇಕೆಂದರೆ ಹಾಸನದಲ್ಲಿ ಒಂದು ಸಾವಿರ ಸೈಜ್–ಕಲ್ಲಿನ ಬೆಲೆ ೭೦೦–೭೦೦ ರೂ.ಗಳಿದ್ದರೆ ಸಕಲೇಶಪುರದಲ್ಲಿ ಒಂದು ಸಾವಿರ ಸೈಜ್–ಕಲ್ಲಿಗೆ ಒಂದು ಸಾವಿರ ರೂಪಾಯಿಗಳ ಬೆಲೆ ಇದೆ. ಅದೇ ರೀತಿ ಹಾಸನದಲ್ಲಿ ಗಾರೆಯವರ ಕೂಲಿ ೨೦–೨೫ ರೂ.ಗಳಿದ್ದರೆ ನಮ್ಮ ಕಡೆ ೩೦–೩೫ ರೂ.ಗಳಿದೆ. ಹೆಂಚುಗಳ ದರ ಸಹ ನಮ್ಮ ಭಾಗದಲ್ಲಿ ಒಂದು ಸಾವಿರಕ್ಕೆ ಟ್ಯಾಕ್ಸ್ ಅಲ್ಲದೆ ೧೧೦೦ ರೂ.ಗಳಿಂದ ೧೨೦೦ ರೂ.ಗಳವರೆಗೆ ಇದ್ದರೆ ಬೇರೆ ಕಡೆ ಒಂದು ಸಾವಿರ ರೂ.ಗಳಿಗೆ ಸಿಗುತ್ತದೆ. ಈ ರೀತಿ ದರಗಳಲ್ಲಿ ವ್ಯತ್ಯಾಸವಿರುವುದರಿಂದ ನಮ್ಮ ಭಾಗದಲ್ಲಿ ಲೋಕೋಪಯೋಗಿ ಇಲಾಖೆಯು ಕೆಲಸ ಮಾಡಲು ತೊಂದರೆಯಾಗುತ್ತಿದೆ. ಆದಕಾರಣ ಆಯಾ ಸಬ್–ಡಿವಿಜನ್ ಮಟ್ಟದಲ್ಲಿ ಏನೇನು ದರಗಳ ವ್ಯತ್ಯಾಸವಿದೆ ಎಂಬುದನ್ನು ನೋಡಿಕೊಂಡು ಅದಕ್ಕೆ ತಕ್ಕಂತೆ ಷೆಡ್ಯೂಲ್ ಆಫ್ ರೇಟ್‌ಗಳನ್ನು ನಿಗದಿ ಮಾಡಬೇಕೆಂದು ಕೇಳಿಕೊಂಡು ನನಗೆ ಇಷ್ಟು ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಕಡಿದಾಳ್ ದಿವಾಕರ್ (ತೀರ್ಥಹಳ್ಳಿ)—ಮಾನ್ಯ ಅಧ್ಯಕ್ಷರೇ, ಮಾನ್ಯ ಲೋಕೋಪಯೋಗಿ ಸಚಿವರು ಮತ್ತು ಮೀನುಗಾರಿಕೆ ಸಚಿವರು ಏನು ತಮ್ಮ ಇಲಾಖಾ ಬೇಡಿಕೆಗಳನ್ನು ಈ ಸಭೆಯ ಮುಂದಿಟ್ಟಿದ್ದಾರೆ, ಅದಕ್ಕೆ ನಾನು ಸ್ವಾಗತ ಮಾಡುತ್ತಾ ಕೆಲವಾರು ಮಾತುಗಳನ್ನು ಆಡುವುದಕ್ಕೆ ಇಷ್ಟ ಪಡುತ್ತೇನೆ. ಮುಖ್ಯವಾಗಿ ನಾನು ಮೀನುಗಾರಿಕೆ ಬಗ್ಗೆ ಕೆಲವಾರು ಮಾತುಗಳನ್ನು ಹೇಳಬೇಕೆಂದಿದ್ದೇನೆ. ಇದು ಬಹಳ ಮುಖ್ಯವಾದಂಥ ಇಲಾಖೆ. ಆದಕಾರಣ ಇದಕ್ಕೆ ಕೊಟ್ಟ ಹಣ ಸಾಲದೆಂದು ಹೇಳುತ್ತೇನೆ. ಆಹಾರ ಧಾನ್ಯದ ಅಭಾವವಿರುವ ಈ ಕಾಲದಲ್ಲಿ ಉತ್ತಮ ಪೌಷ್ಟಿಕಾಂಶಗಳುಳ್ಳ ಈ ಮೀನನ್ನು ಬಹಳ ಜನರು ಉಪಯೋಗಿಸುತ್ತಿದ್ದಾರೆ ಸಸ್ಯಹಾರಿಗಳೂ ಸಹ ಇದು ಸಸ್ಯಹಾರ ಎಂದು ಉಪಯೋಗಿಸುತ್ತಿದ್ದಾರೆ ಬಂಗಾಳದ ಜನರು ಇದನ್ನು ಉಪಯೋಗಿಸುತ್ತಿದ್ದಾರೆ. ಮಂಗಳೂರಿನಲ್ಲಿರುವ ಬಹುತೇಕ ಜನರು ಇದನ್ನು ಉಪಯೋಗಿಸುತ್ತಿದ್ದಾರೆ. ಶ್ರೀ ಎ. ಜಿ. ಕೊಡಗಿ ಮೊದಲ್ಗೊಂಡು ಬಹುತೇಕ ಜನರು ಇದು ತರಕಾರಿ ಎಂದು ತಿಳಿದುಕೊಂಡು ಉಪಯೋಗಿಸುತ್ತಿದ್ದಾರೆ. ಈ ಕಾರಣದಿಂದ ತಮ್ಮ ಬೇಡಿಕೆ ಹಣ ಸಾಲದೆಂದು ಹೇಳುತ್ತೇನೆ. ಈಗ ಮೆರಿನ್ ಪ್ರಾಜೆಟ್‌ಗೆ ಸಂಬಂಧಪಟ್ಟಂತೆ ತಾವು ಸಮುದ್ರ ಮೀನು ಗಾರಿಕೆಯನ್ನು ಚುರುಕುಗೊಳಿಸಬೇಕು. ದುರದೃಷ್ಟ ಸಂಗತಿ ಎಂದರೆ, ನಮ್ಮ ಕಡಲ ತೀರಕ್ಕೆ ಬೇರೆ ರಾಜ್ಯದವರು ಬಂದು ಮೀನು ಹಿಡಿಯುತ್ತಿದ್ದಾರೆ. ಬೇರೆ ದೇಶದವರು ಸಹ ನಮ್ಮ ರಾಜ್ಯದ ೨೦೦ ಮೈಲಿಗಳ ಸುತ್ತಳತೆಯೊಳಗೆ ಬಂದು ಮೀನು ಹಿಡಿಯುತ್ತಿದ್ದಾರೆ, ಇದನ್ನು ತಪ್ಪಿಸಲು ತಾವು ಕೂಡಲೇ ಕ್ರಮ ತೆಗೆದುಕೊಳ್ಳಬೇಕು.

ಇನ್ನು ಮಂಗಳೂರು ಫರ್ಟಿಲೈಜರ್ ಫ್ಯಾಕ್ಟರಿ ಹಾಗೂ ಬೇರೆ ಬೇರೆ ಫ್ಯಾಕ್ಟರಿಗಳು ಕಲುಷಿತ ನೀರನ್ನು ಕಡಲಿನೊಳಗೆ ಬಿಡುತ್ತಿರುವುದರಿಂದ ಮೀನುಗಳು ನಶಿಸಿಹೋಗುತ್ತಿವೆ. ಇಂತಹ ಜಾಗಗಳಲ್ಲಿ ಮೀನುಗಳನ್ನು ಸಾಕುವುದೇ ಒಂದು ಕಷ್ಟದ ಕೆಲಸವಾಗಿದೆ. ಇದೇರೀತಿ ನಮ್ಮ ರಾಜ್ಯದೊಳಗಡೆ ಹರಿಯುತ್ತಿರುವ ನದಿಗಳ ನೀರೂ ಸಹ ಕಲುಷಿತಗೊಂಡು ಮೀನುಗಳು ನಶಿಸಿಹೋಗುತ್ತಿವೆ. ಕುದುರೆಮುಖ ಪ್ರಾಜೆಟ್ ಹಾಗೂ ಕೆಲವು ಕೈಗಾರಿಕೆಗಳವರು ನದಿಗಳಿಗೆ ಬಿಡುತ್ತಿರುವ ನೀರಿನಲ್ಲಿ ಕಬ್ಬಿಣದ ಅಂಶ ಜಾಸ್ತಿಯಿರುವುದರಿಂದ ಮೀನುಗಳು ಬರುವುದಕ್ಕೆ ಸಾಧ್ಯವಾಗದೆ ಸಾಯುತ್ತಿವೆ. ಆದಕಾರಣ ಇದರ ಬಗ್ಗೆ ತಾವು ಏನು ಕ್ರಮ ತೆಗೆದುಕೊಂಡಿದ್ದೀರೆಂಬುದನ್ನು ತಮ್ಮ ಉತ್ತರದಲ್ಲಿ ಹೇಳಬೇಕು. ಈಗ ತಾವು ಮೀನಿನ ಮರಿಗಳ ಉತ್ಪಾದನೆಗೆಂದು ಲಕ್ಷಾಂತರ ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದೀರಿ. ಆದರೆ ನಮ್ಮ ರಾಜ್ಯಕ್ಕೆ ಬೇಕಾಗುವಷ್ಟು ಮೀನಿನ ಮರಿಗಳು ಸಿಗುತ್ತಿಲ್ಲ. ಈ ಕಾರಣದಿಂದ ತಾವು ಕಲ್ಕತ್ತಾ

ದಿಂದ ತರಿಸಲು ವ್ಯವಸ್ಥೆ ಮಾಡಿದ್ದೀರೆಂದು ನನಗೆ ಗೊತ್ತಾಗಿದೆ. ಈಗ ಭದ್ರಾ ಪ್ರಾಜೆಕ್ಟ್‌ನಲ್ಲಿ ಮೀನು ಮರಿಗಳ ಉತ್ಪಾದನೆಯನ್ನು ಸಾಕಷ್ಟು ಪ್ರಮಾಣದಲ್ಲಿ ಮಾಡಲು ಸಾಧ್ಯವಾಗುತ್ತಿಲ್ಲ. ಏಕೆಂದರೆ......

ಶ್ರೀ ಪಿ. ರಾಮದೇವ್.—ಈಗ ಮಲ್ಲೇಶ್ವರಂ ಟ್ಯಾಂಕ್‌ನಲ್ಲಿ ಚೈನಾದಿಂದ ತರಿಸಿರುವ ಮೀನುಗಳನ್ನು ಇಟ್ಟಿದ್ದಾರೆ. ಚೈನಾ ಮೀನುಗಳು ಎಷ್ಟು ರುಚಿಯಾಗಿರುತ್ತದೋ ನನಗೆ ಗೊತ್ತಿಲ್ಲ. ಇದರ ಜೊತೆಗೆ ಲಕ್ಷಾಂತರ ರೂಪಾಯಿಗಳನ್ನು ಖರ್ಚು ಮಾಡಿ ಈ ಮೀನನ್ನು ಯಾವ ರೀತಿ ವೃದ್ಧಿ ಮಾಡುತ್ತಾರೋ ನನಗೆ ಗೊತ್ತಿಲ್ಲ.

ಉಪಾಧ್ಯಕ್ಷರು.—ತಮಗೆ ಮೀನಿನ ರುಚಿ ಗೊತ್ತಿಲ್ಲದಿರುವ ಕಾರಣ ತಾವು ಏತಕ್ಕೆ ಮಾತನಾಡುತ್ತೀರಿ ಬಿಡಿ.

ಶ್ರೀ ಪಿ. ರಾಮದೇವ್.—ಆ ಮೀನುಗಳು ನೋಡಲು ಕೆಂಪಗೆ ಇವೆ. ಆದ್ದರಿಂದ ನಮ್ಮ ದೇಶದಲ್ಲಿಯೂ ಕಮ್ಯುನಿಜಂ ಹರಡಬಹುದೆಂದು ಕಾಣುತ್ತದೆ.

ಶ್ರೀ ಕಡಿದಾಳ್ ದಿವಾಕರ್.—ಕಮ್ಯುನಿಸ್ಟ್ ದೇಶಗಳಿಂದಲೇ ನಾವು ಪಂಚವಾರ್ಷಿಕ ಯೋಜನೆಗಳನ್ನು ಕಲಿತದ್ದು. ಆದ್ದರಿಂದ ಈ ಮೀನುಗಳ ಬಗ್ಗೆಯೂ ಸಹ ನಾವು ಆ ದೇಶದಿಂದ ಏನಾದರನ್ನೆ ಕಲಿಯಲು ಸಾಧ್ಯವಿದೆ. ಈಗ ೩೩ ಕೋಟಿ ರೂಪಾಯಿಗಳನ್ನು ಮೆರಿನ್ ಫಿಷರೀಸ್‌ಗೆ ಸಂಬಂಧಪಟ್ಟಂತೆ ಮತ್ತು ೨೫ ಕೋಟಿ ರೂಪಾಯಿಗಳನ್ನು ಇನ್‌ಲ್ಯಾಂಡ್ ಫಿಷರೀಸ್‌ಗೆ ಸಂಬಂಧಪಟ್ಟಂತೆ ನಮ್ಮ ಯೋಜನೆಯಲ್ಲಿ ಖರ್ಚು ಮಾಡುತ್ತಿದ್ದೀರಿ. ಉತ್ತಮ ಮೀನು ಮರಿಗಳನ್ನು ಸಾಕಲು ತಾವು ಈ ಹಣ ಖರ್ಚು ಮಾಡುತ್ತಿದ್ದೀರಿ. ಆದರೆ ಭದ್ರಾ ಪ್ರಾಜೆಕ್ಟ್‌ನಲ್ಲಿರುವ ನೀರಿನಲ್ಲಿ ಕಬ್ಬಿಣದ ಅಂಶ ಜಾಸ್ತಿ ಇರುವ ಕಾರಣ ಅಲ್ಲಿ ಮೀನುಗಳು ಬದುಕುವುದಕ್ಕೇ ಸಾಧ್ಯವಾಗುತ್ತಿಲ್ಲ. ಇದು ತಮ್ಮ ಗಮನಕ್ಕೆ ಬಂದಮೇಲೂ ಸಹ ತಾವು ಹೆಚ್ಚು ಹಣ ಖರ್ಚು ಮಾಡುತ್ತಿದ್ದೀರಿ. ಇದು ಸರಿಯಲ್ಲ. ಇದಕ್ಕೆ ಬದಲು ಬೇರೆ ಪ್ರದೇಶಗಳಲ್ಲಿ ನಮ್ಮ ರಾಜ್ಯಕ್ಕೆ ಬೇಕಾಗುವಂತಹ ಮೀನಿನ ಮರಿಗಳನ್ನು ಉತ್ಪಾದನೆ ಮಾಡಲು ಗಮನಹರಿಸಬೇಕೆಂದು ಹೇಳುತ್ತೇನೆ. ಈಗ ಖಾಸಗಿಯವರಿಗೂ ಸಹ ಮೀನಿನ ಮರಿ ಉತ್ಪಾದನೆಗೆ ಪ್ರೋತ್ಸಾಹ ಕೊಡಲಾಗುವುದೆಂದು ತಮ್ಮ ಇಲಾಖಾ ವರದಿಯಲ್ಲಿ ಹೇಳಿದ್ದೀರಿ. ನಿರುದ್ಯೋಗಿಗಳಾಗಿರುವ ಮೀನುಗಾರಿಕಾ ಪದವೀಧರರಿಗೆ ಮೀನಿನ ಮರಿಗಳನ್ನು ಬೆಳೆಸಲು ಫಾರಂಗಳನ್ನು ಕಟ್ಟಿಸಿಕೊಡಲಾಗುವುದೆಂದು ಹೇಳಿದ್ದೀರಿ. ಕಬಿನಿ ಪ್ರಾಜೆಕ್ಟ್‌ನಲ್ಲಿ ಈ ಒಂದು ಕೆಲಸವನ್ನು ಮಾಡಿದ್ದೀರಿ. ಎಲ್ಲ ಕಡೆಯೂ ಈ ಕೆಲಸವನ್ನು ೬ ತಿಂಗಳ ಹಿಂದೆಯೇ ಮಾಡಿದ್ದರೆ ಇವರುಗಳು ಮೀನುಮರಿಗಳ ಉತ್ಪಾದನೆಯನ್ನು ಹೆಚ್ಚಿನ ಪ್ರಮಾಣದಲ್ಲಿ ಮಾಡುತ್ತಿದ್ದರು. ಈಗಲಾದರೂ ಮೀನುಗಾರಿಕೆಯಲ್ಲಿ ಬಿ.ಎಫ್.ಎಸ್. ಮತ್ತು ಎಂ.ಎಫ್.ಎಸ್. ಮಾಡಿರುವಂತಹ ನಿರುದ್ಯೋಗಿ ಪದವೀಧರರಿಗೆ ಹೆಚ್ಚಿನ ಸಹಕಾರ ಕೊಡಿ ಎಂದು ಕೇಳಿಕೊಳ್ಳುತ್ತೇನೆ.

ಇನ್ನು ಇನ್‌–ಲ್ಯಾಂಡ್ ಫಿಷರೀಸ್‌ಗೆ ತಾವು ಹೆಚ್ಚಿನ ಮಹತ್ವ ಕೊಟ್ಟಿದ್ದೀರಿ. ಈಗ ತಾವು ದೊಡ್ಡ ದೊಡ್ಡ ಪ್ರಾಜೆಕ್ಟ್‌ಗಳಲ್ಲಿ ತಾವು ಮೀನು ಮರಿಗಳನ್ನು ಬೆಳೆಸುತ್ತಿರುವುದರ ಜೊತೆಗೆ ನಮ್ಮ ರಾಜ್ಯದಲ್ಲಿರುವಂತಹ ದೊಡ್ಡ ದೊಡ್ಡ ಕೆರೆಗಳಲ್ಲಿಯೂ ಸಹ ಮೀನಿನ ಮರಿಗಳನ್ನು ಒಳ್ಳೆಯ ಆಧುನಿಕ ರೀತಿಯಲ್ಲಿ ಬೆಳೆಸಿದರೆ ನಮ್ಮ ಒಟ್ಟು ಆಹಾರದಲ್ಲಿ ೫೦ ಭಾಗವನ್ನು ಈ ಮೀನುಗಳಿಂದಲೇ ಪಡೆಯಲು ಸಾಧ್ಯವಾಗುತ್ತದೆ. ಆದರೆ ತಾವು ಇದಕ್ಕೆ ಇಟ್ಟಿರುವ ಹಣ ಏನೇನೂ ಸಾಲದು. ಇದನ್ನು ಹೆಚ್ಚು ಮಾಡಬೇಕು ಮತ್ತು ಮೀನುಗಾರಿಕೆಗೆ ಹೆಚ್ಚಿನ ಒಂದು ಮುತುವರ್ಜಿ ಕೊಡಬೇಕೆಂದು ಮತ್ತೊಮ್ಮೆ ಕೇಳಿಕೊಳ್ಳುತ್ತೇನೆ.

ಜೊತೆಗೆ ಈ ಲೋಕೋಪಯೋಗಿ ಇಲಾಖೆ ಎನ್ನುವುದು ಈವತ್ತಿನ ದಿವಸ ಬಹಳ ಮಹತ್ವದ ಒಂದು ಇಲಾಖೆ. ಬಹುಶಃ ಮಾನ್ಯ ಮಂತ್ರಿಗಳಾದ ಶ್ರೀ ಕಾಗೋಡು ತಿಮ್ಮಪ್ಪನವರು ಪ್ರಯತ್ನಪಟ್ಟರೆ ಎಂ.ಎಲ್.ಎ. ಅವರ ಮಾನವನ್ನು ಉಳಿಸಬಹುದು ಇಲ್ಲದೇಹೋದರೆ ನಮ್ಮ ಮಾನ ಹೋಗುತ್ತದೆ. ಕಾರಣ ಏನೆಂದರೆ ಇವರು ಎಂ.ಎ.ಎಲ್. ಆಗಿದ್ದಾರಲ್ಲಾ ನಮ್ಮ ಊರಿಗೆ ಏನಾದರೂ ಒಂದು ಕೆರೆಯನ್ನೋ ಕಟ್ಟೆಯನ್ನೋ ಏನಾದರೂ ಮಾಡಿಕೊಟ್ಟಿದ್ದಾರಾ ಅನ್ನುವ ದೂರುಗಳು ಬರುತ್ತದೆ. ನಾವು ಇದ್ದರೂ ಏನೂ ಪ್ರಯೋಜನವಾಗುವುದಿಲ್ಲ. ನಮ್ಮ ದುರಾದೃಷ್ಟವೇನೋ ಎರಡು ವರ್ಷಗಳಿಂದಲೂ ಕೂಡ ಈ ಇಲಾಖೆಯ ಕೆಲಸ ನಿಧಾನವಾಗುತ್ತಾ ಇದೆ. ಇಲಾಖೆಯವರನ್ನು ಕೇಳಿದರೆ ಇದರ ಬಗ್ಗೆ ನಿರುತ್ಸಾಹ ತೋರಿಸುತ್ತಾರೆ. ಅನೇಕ ಸಂದರ್ಭಗಳಲ್ಲಿ ಅವರು ಏನು ಹೇಳುತ್ತಾರೆಂದರೆ ಈ ಕೆಲಸವನ್ನು ಮಾಡುವುದಕ್ಕೆ ಯಾವ ಕಂಟ್ರಾಕ್ಟರ್ ಕೂಡ ಮುಂದೆ ಬರುವುದಿಲ್ಲ ಅಂತ

ಹೇಳುತ್ತಾರೆ. ಇಂಥಾ ಪರಿಸ್ಥಿತಿ ಏಕೆ ಬರುತ್ತದೋ ಗೊತ್ತಿಲ್ಲ. ತಾವು ಈಗಲಾದರೂ ದೊಡ್ಡ ಮನಸ್ಸು ಮಾಡಿ. ನಮ್ಮಲ್ಲಿ ೧೪ ಫುಟ್ ಬ್ರಿಡ್ಜ್ ಕಟ್ಟುವುದಕ್ಕೆ ತೀವ್ರತರವಾಗಿ ಪ್ರಯತ್ನಪಟ್ಟರೂ ಕೂಡ ಒಂದು ಫುಟ್ ಬ್ರಿಡ್ಜನ್ನೂ ಇದುವರೆಗೆ ಕಟ್ಟುವುದಕ್ಕೆ ಆಗಲಿಲ್ಲ. ಅವರನ್ನು ಹೋಗಿ ಏನಾದರೂ ಕೇಳಿದರೆ ಯಾರೂ ಇದಕ್ಕೆ ಟೆಂಡರ್ ಹಾಕುವುದಿಲ್ಲ ಎಂದು ಹೇಳುತ್ತಾರೆ. ಆದುದರಿಂದ ಮಾನ್ಯ ಮಂತ್ರಿಗಳು ಈ ಬಗ್ಗೆ ಗಮನಹರಿಸಬೇಕು ಎಂದು ಕೇಳುತ್ತೇನೆ.

ಇನ್ನು ಬಹುದಿನಗಳ ಬೇಡಿಕೆಯಾದ ಸೇತುವೆಗಳನ್ನು ಕಟ್ಟುವುದರ ಬಗ್ಗೆ ಹೇಳಬೇಕಾದರೆ ನಮ್ಮ ತುಂಗಾನದಿಗೆ ತಿರ್‌ಪುತ್ತೂರಹಳ್ಳಿ ಹತ್ತಿರ ಒಂದು ಸೇತುವೆ ಕಟ್ಟಬೇಕಾಗಿದೆ. ಆ ಸೇತುವೆ ಕಟ್ಟುವುದಕ್ಕೆ ೨ ಲಕ್ಷ ರೂಪಾಯಿ ಸ್ಯಾಂಕ್ಷನ್ ಕೂಡ ಆಗಿತ್ತು. ಆದರೆ ಅದು ಈಗ ಮತ್ತೆ ಮತ್ತೆ ರಿವೈಸ್ ಆಗಿ ಈಗ ೫೬ ಲಕ್ಷಕ್ಕೆ ಬಂದಿದೆ. ಈಗಾಗಲೇ ಅದಕ್ಕೆ ೩-೪ ಲಕ್ಷ ರೂಪಾಯಿಯನ್ನು ಖರ್ಚು ಮಾಡಿದ್ದಾರೆ, Rs. 3 to 4 lakhs have been given by the Construction Corporation. ನನಗೆ ತಿಳಿದಮಟ್ಟಿಗೆ ಶಿವಮೊಗ್ಗಾ ಕ್ಯಾಬಿನೆಟ್ ಮೀಟಿಂಗ್‌ನಲ್ಲಿ ತುಂಗಭದ್ರಾ ಹತ್ತಿರ ತಿರ್‌ಪುತ್ತೂರ್ ಹಳ್ಳಿಯಲ್ಲಿ ಒಂದು ಸೇತುವೆಯನ್ನು ಕಟ್ಟಲು ಮಂಜೂರಾತಿ ಕೊಟ್ಟಿದ್ದಾರೆಂದು ತಿಳಿದು ಬಂದಿದೆ. ಅದಕ್ಕಾಗಿ ನಾನು ತಮ್ಮನ್ನು ಅಭಿನಂದಿಸುತ್ತೇನೆ. ಆದರೆ ಈ ಕೆಲಸ ಶುರುಮಾಡಬೇಕು ಎಂದು ತೀರ್ಮಾನವಾಗಿ ೨೦ ವರ್ಷವಾಯಿತು, ಇದುವರೆಗೂ ಆ ಕೆಲಸ ಆಗಿಲ್ಲ. ಆದುದರಿಂದ ನಾನು ತಮ್ಮನ್ನು ಕೇಳುವುದು ಈ ವರ್ಷವಾದರೂ ಅದಕ್ಕೆ ಒಂದು ಏಜನ್ಸಿಯನ್ನು ಫಿಕ್ಸ್ ಮಾಡಿ ಆದಷ್ಟು ಜರೂರಾಗಿ ಕೆಲಸ ಮಾಡಬೇಕೆಂದು ನಾನು ಹೇಳುತ್ತೇನೆ. ತಮ್ಮ ಇಲಾಖೆಯಲ್ಲಿ ಅತಿ ಜರೂರಾಗಿ ಮಾಡಬೇಕಾಗುವ ಅನೇಕ ಸೇತುವೆ ಕೆಲಸಗಳು ೩-೪-೫ ವರ್ಷಗಳಿಂದಲೂ ಏತಕ್ಕೆ ನಿಧಾನವಾಗುತ್ತದೋ ಗೊತ್ತಿಲ್ಲ. ತಮಗೆ ಹೇಳಬೇಕಾದರೆ ನಮ್ಮ ತಾಲ್ಲೂಕಿನಲ್ಲೇ ೩೫ ಕೆರೆಗಳನ್ನು ತೂಬು ಮತ್ತು ಕೋಡಿ ಕಟ್ಟಬೇಕೆಂದು ಎರಡು ವರ್ಷದ ಹಿಂದೆಯೇ ಒಡೆದಿದ್ದಾರೆ. ಅಲ್ಲಿ ಕಾನ್‌ಕ್ರೀಟ್ ಹಾಕಲು ಜಲಿ ಹಾಕಿದ್ದಾರೆ ಆದರೆ ಡಿಸೈನ್ ಪ್ರಕಾರ ಪ್ಯಾನಲ್ ಕಟ್ಟಬೇಕಾಗಿತ್ತು, ಆ ಕೆಲಸ ನಿಧಾನವಾಗಿದೆ, ಇನ್ನೂ ಆಗಿಲ್ಲ. ಆದುದರಿಂದ ನಾನು ತಮ್ಮನ್ನು ಕೇಳುವುದೇನೆಂದರೆ, ನೀವು ಹೊಸ ಕೆರೆಗಳನ್ನು ಕಟ್ಟದೇ ಇದ್ದರೂ ಚಿಂತೆ ಇಲ್ಲ, ಒಡೆದ ಕೆರೆಗಳನ್ನು ಕಟ್ಟುವುದಕ್ಕೆ ಏನು ಕಾರ್ಯಕ್ರಮಗಳನ್ನು ತೆಗೆದುಕೊಂಡಿದ್ದೀರಿ ಅದನ್ನಾದರೂ ಮಾಡಿ. ಏತಕ್ಕೆಂದರೆ ನಮ್ಮ ಮಲೆನಾಡಿನ ಭಾಗದಲ್ಲಿ ಮಳೆಗಾಲದಲ್ಲಿ ಬೇಕಾದಷ್ಟು ನೀರು ಬಂದರೂ ಕೂಡ ಏಪ್ರಿಲ್-ಮೇ ತಿಂಗಳಿನಲ್ಲಿ ಬೇಸಿಗೆ ಕಾಲದಲ್ಲಿ ಕುಡಿಯುವುದಕ್ಕೆ ಅಲ್ಲಿ ಜಾನುವಾರುಗಳಿಗೆ ನೀರೇ ಸಿಕ್ಕುವುದಿಲ್ಲ. ಈಗ ಕೋಡಿ ಮತ್ತು ತೂಬು ಕಟ್ಟುವುದಕ್ಕೆ ಏನು ಕೆರೆಗಳನ್ನು ಒಡೆದಿದ್ದೀರಿ ಅದನ್ನೂ ಮಾಡದೇ ಹೋದರೆ ದನಕರುಗಳಿಗೆ ನೀರು ಕುಡಿಯುವುದಕ್ಕೆ ಕಷ್ಟವಾಗುತ್ತದೆ. ಆದುದರಿಂದ ಆದಷ್ಟು ಜಾಗ್ರತೆಯಾಗಿ ತೂಬು ಮತ್ತು ಕೋಡಿ ಕಟ್ಟುವ ಕೆಲಸವನ್ನು ಮಾಡಿಕೊಡಬೇಕು ಎಂದು ಕೇಳುತ್ತೇನೆ. ಇನ್ನೊಂದು ವಿಚಾರ ಏನೆಂದರೆ ಬೇರೆ ಬೇರೆ ಕೆಲಸಗಳು ಅಂದರೆ ಬಿಲ್ಡಿಂಗ್ ಮತ್ತು ಸೇತುವೆ ಕೆಲಸಗಳು ಬಿದ್ದು ಹೋಗಿರುವುದನ್ನು ಮೆಕೆಲಕ್ಕೆತ್ತುವ ಕೆಲಸ ೩ ತಿಂಗಳಿಂದಲೂ ನಡೆಯುತ್ತಾ ಇದೆ, ಅದಕ್ಕೆ ಎಸ್ಟಿಮೇಟ್ ಮತ್ತು ಡಿಸೈನ್ ಜಾಗ್ರತೆಯಾಗಿ ಮಾಡಿಸಬೇಕು. ತಮಗೆ ಹೇಳಬೇಕಾದರೆ ಶಿವಮೊಗ್ಗ-ಮಂಗಳೂರು ಸ್ಟೇಟ್‌ಹೈವೇನಲ್ಲಿ ಮೊನ್ನೆ ಮಳೆ ಬಿದ್ದ ಪರಿಣಾಮವಾಗಿ ಸೇತುವೆ ಬಿದ್ದು ಹೋಗಿದೆ. ಏತಕ್ಕೆ ಹೀಗಾಯಿತು ಎಂದು ನಾನು ಅವರನ್ನು ಕೇಳಿದಾಗ ಹೇಳಿದರು, ಆರು ಅಡಿಯಷ್ಟು ಅದರಲ್ಲಿ ಮಣ್ಣೇ ತುಂಬಿದ್ದಾರೆ, ಮತ್ತು ಮೂರು ಅಡಿಯಷ್ಟು ಫೌಂಡೇಷನ್ ಹಾಕಿದ್ದಾರೆ, ಈ ತರಹ ಡಿಸೈನ್ ಮಾಡಿದ್ದಾರೆ. ಆದುದರಿಂದ ಮಳೆ ಬಿದ್ದಾಗ ಬಿದ್ದುಹೋಯಿತು ಎಂದು ಹೇಳಿದರು. ಹಾಗೆಯೇ ಶಿವಮೊಗ್ಗಾದ ಹತ್ತಿರ ತೀರ್ಥಹಳ್ಳಿ ಮತ್ತು ಭಾರತೀಪುರ ಏನು ಇದೆ ಈ ಭಾಗದ ಕೆಲಸಗಳ ಬಗ್ಗೆಯೂ ಡಿಸೈನ್ ಮಾಡಿಸಿ ಕೆಲಸಗಳನ್ನು ಮಾಡಿಕೊಡಬೇಕು ಎಂದು ಹೇಳುತ್ತೇನೆ.

ಇನ್ನು ಇದರ ಜೊತೆಗೆ ತಾವು ಬೇರೆ ಬೇರೆ ಕೆಲಸಗಳನ್ನೂ ಸಹ ವಹಿಸಿಕೊಂಡಿದ್ದೀರಿ. ನಿಮ್ಮ ಇಲಾಖೆಯ ಕೆಲಸಗಳೇ ಬಹಳ ಹೆಚ್ಚು ಇರುವುದರಿಂದ ಬೇರೆ ಕೆಲಸಗಳನ್ನು ಮಾಡುವುದಕ್ಕಾಗುವುದಿಲ್ಲ. ಉದಾಹರಣೆಗೆ ಸ್ಕೂಲ್ ಕಟ್ಟಡಗಳು, ಆಸ್ಪತ್ರೆ ಕಟ್ಟಡಗಳು. ಯಾರಾದರೂ ದಾನಿಗಳು ಈ ಕಟ್ಟಡಗಳನ್ನು ಕಟ್ಟುವುದಕ್ಕೆ ೨೫ ಸಾವಿರ ರೂಪಾಯಿ ಡೊನೇಷನ್ ಕೊಟ್ಟರೆ ೩-೪ ವರ್ಷವಾದರೂ ಆ ಕಟ್ಟಡಗಳು ಆಗುತ್ತಾ ಇಲ್ಲ. ನಮ್ಮ ತಾಲ್ಲೂಕಿನಲ್ಲೇ ಈ ತರಹ ೩-೪ ಇವೆ. ಅವರು ಪೂರ್ತಿ ಹಣ ಕೊಟ್ಟಿದ್ದರೂ ಆ ಕೆಲಸ ಆಗುತ್ತಾ ಇಲ್ಲ. ಕೇಳಿದರೆ ಕಂಟ್ರಾಕ್ಟರ್ ಯಾರೂ ಇದನ್ನು ಕಟ್ಟುವುದಕ್ಕೆ

ಮುಂದೆ ಬರುವುದಿಲ್ಲ, ತಮ್ಮ ಇಲಾಖೆಯಲ್ಲಿ ಮತ್ತು ಎಸ್.ಆರ್. ನಲ್ಲಿ ಹೀಗೆ ಕಾರಣಗಳನ್ನು ಹೇಳುತ್ತಾರೆ.

ಶ್ರೀ ಕಾಗೋಡು ತಿಮ್ಮಪ್ಪ.—ಸಂಬಂಧಪಟ್ಟ ಇಲಾಖೆಯವರಿಂದ ಪೂರ್ತಾ ಹಣ ಬಂದರೆ ಮಾಡಿಸ ಬಹುದು. ಆದರೆ ಅವರು ಕೊಟ್ಟ ಹಣದಲ್ಲಿ ಮಾಡಿಸಬೇಕು ಎಂದರೆ ಮಿಕ್ಕ ಹಣವನ್ನು ಯಾರು ಕೊಡಬೇಕು

ಶ್ರೀ ಕಡಿದಾಳ್ ದಿವಾಕರ್.—ತಾವು ಮಂಜೂರು ಮಾಡುವ ಹೊತ್ತಿಗೆ ಅವರು ಅದಕ್ಕೆ ಬೇಕಾಗುವ ೨೫ ಸಾವಿರ ರೂಪಾಯಿಯನ್ನು ಕಟ್ಟಿಸಿಕೊಳ್ಳದೇ ತಾವು ಮಂಜೂರು ಮಾಡುತ್ತೀರಾ ?

ಶ್ರೀ ಲಕ್ಷ್ಮೀಸಾಗರ್.—ಹಿಂದೆ ಮಹಾರಾಜರ ಕಾಲದಲ್ಲಿ ಅನೇಕ ಜನ ಖಾಸಗೀ ವ್ಯಕ್ತಿಗಳು ಅವರ ಸ್ವಂತ ದುಡಿಮೆಯ ಮೇಲೆ ಹಣವನ್ನು ಕೊಟ್ಟಿದ್ದಾರೆ. ಹಾಗೆ ಅವರು ಕೊಟ್ಟಂಥಾ ಹಣದಿಂದ ಸಾರ್ವಜನಿಕರ ಉಪಯೋಗಕ್ಕಾಗಿ ಒಂದು ಶಾಲೆಯನ್ನೋ ಅಥವಾ ಒಂದು ಆಸ್ಪತ್ರೆಯನ್ನೋ ಮಾಡಿ ಕೊಡುತ್ತಿದ್ದರು, ಈಗ ಅದು ನಿಂತು ಹೋಗಿದೆ. ಅನೇಕ ಜನರು ದುಡ್ಡು ಕೊಡುವುದಕ್ಕೆ ಮುಂದೆ ಬಂದರೆ ಅದನ್ನು ತೆಗೆದುಕೊಂಡು ಮಿಕ್ಕ ಹಣ ಆಮೇಲೆ ಕೊಡಿ. ತಾವು ಅವರು ಕೊಟ್ಟಂಥಾ ಹಣವನ್ನೂ ತೆಗೆದುಕೊಳ್ಳುವುದಿಲ್ಲ, ಇಲ್ಲವೇ ನೀವೇ ಆ ಕೆಲಸವನ್ನೂ ಮಾಡುವುದಿಲ್ಲ. ಇದು ಯಾವ ನ್ಯಾಯ ?

ಶ್ರೀ ಕಾಗೋಡು ತಿಮ್ಮಪ್ಪ.—ನಾವು ಅವರಿಂದ ಹಣ ತೆಗೆದುಕೊಂಡು ಅವರ ಹೆಸರಿನಲ್ಲಿ ಕಟ್ಟು ವುದಕ್ಕೆ ತೊಂದರೆ ಏನೂ ಇಲ್ಲ. ಆದರೆ ಅವರು ೧೦೦ಕ್ಕೆ ೧೦೦ ರಷ್ಟು ಹಣ ಕೊಡಬೇಕು ಅಷ್ಟೇ.

ಶ್ರೀ ಎ. ಲಕ್ಷ್ಮೀಸಾಗರ್.—ಮೊದಲು ಅವರಿಂದ ಬಂದಿದ್ದನ್ನು ತೆಗೆದುಕೊಳ್ಳಿ, ನಿಮಗೆ ಒಂದು ಗಾದೇ ಹೇಳಬೇಕಾಗಿದೆ, ಅದೇನೆಂದರೆ ಏನಪ್ಪ ನಂಜಣ್ಣ ಎಂದರೆ ಬಂದಷ್ಟೇ ಗುಂಜಪ್ಪಾ ಎಂಬಂತೆ ಮೊದಲು ಬಂದಿದ್ದನ್ನು ತೆಗೆದುಕೊಳ್ಳಿ.

MR. DEAUTY SPEAKER.—Good Suggestion.

ಶ್ರೀ ಕಡಿದಾಳ್ ದಿವಾಕರ್.—ಹೀಗೆ ಅವರು ಆಸ್ಪತ್ರೆ ಕಟ್ಟಡಕ್ಕೆ ಎಂದು ೨೫ ಸಾವಿರ ರೂಪಾಯಿ ಕೊಟ್ಟರೂ ಕೂಡ ಅವರ ಹೆಸರಿನಲ್ಲಿ ಈ ಆಸ್ಪತ್ರೆ ಕೆಲಸ ಇನ್ನೂ ಆಗುತ್ತಾ ಇಲ್ಲ. ನಾನು ಕೇಳುವುದು ಇಷ್ಟೆ. ಒಂದುವೇಳೆ ನಿಮ್ಮ ಇಲಾಖೆಯಲ್ಲಿ ಈ ಕೆಲಸವಾಗದೇ ಹೋದರೆ ಈ ಬಗ್ಗೆ ನಿಮ್ಮ ಕ್ಯಾಬಿನೆಟ್‌ನಲ್ಲಿ ತೀರ್ಮಾನ ತೆಗೆದುಕೊಳ್ಳಿ. ಆಯಾಯ ಇಲಾಖೆಗೆ ಸಂಬಂಧಪಟ್ಟಂತೆ ಯಾವ್ಯಾವ ಜೂನಿಯರ್ ಇಂಜನೀಯರ್, ಅಸಿಸ್ಟೆಂಟ್ ಇಂಜನೀಯರ್ ಇಟ್ಟಿರುತ್ತಾರೋ ಅವರೇ ಈ ಕೆಲಸಗಳನ್ನು ತೆಗೆದು ಕೊಂಡು ಅವರವರೇ ಈ ಕೆಲಸಗಳನ್ನು ಮಾಡಿಸಿಕೊಳ್ಳುವ ಹಾಗೆ ತೀರ್ಮಾನ ತೆಗೆದುಕೊಳ್ಳಿ ಇಲ್ಲವೇ ಇದನ್ನು ಆಯಾಯಾ ಇಲಾಖೆಗೆ ವಹಿಸಿಕೊಡಿ. ಈ ಬಗ್ಗೆ ತಾವು ಉತ್ತರ ಕೊಡುವಾಗ ತಿಳಿಸಬೇಕು ಎಂದು ಕೇಳುತ್ತೇನೆ. ಇಲ್ಲದೇ ಹೋದರೆ ೩-೪ ವರ್ಷವಾದರೂ ಸಹ ಈ ಕೆಲಸ ಮಾಡುವುದಿಲ್ಲ. ನಾನು ಕೇಳುವುದು ಇಷ್ಟೆ. ಇನ್ನು ಎಷ್ಟು ದಿವಸದಲ್ಲಿ ಈ ಡೋನೇಷನ್ ಕೊಟ್ಟಂಥಾವರ ಕೆಲಸವನ್ನು ತೆಗೆದು ಕೊಂಡು ಮುಗಿಸಿಕೊಡುತ್ತೀರಿ, ಅದನ್ನು ಹೇಳುತ್ತೀರಾ ? ಇಲ್ಲದೇಹೋದರೆ ಇದಕ್ಕೆ ಯಾವುದಾದರೂ ಒಂದು ಆಲ್ಟರ್‌ನೇಟೀವ್ ಅರೇಂಜ್‌ಮೆಂಟ್ಸನ್ನಾದರೂ ಮಾಡುತ್ತೀರಾ, ಏನು ಮಾಡುತ್ತೀರಿ ಅನ್ನು ವುದನ್ನು ತಾವು ತಿಳಿಸಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಇನ್ನು ಕೊನೆಯದಾಗಿ ಒಂದೆರಡು ಮಾತು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ. ಈಗ ನ್ಯಾಷನಲ್ ಹೈವೇ ಕೆಲವು ಕಡೆಗಳಲ್ಲಿ ಆಗುತ್ತಾ ಇದೆ. ನಮ್ಮ ರಾಜ್ಯದಲ್ಲಿ ಸ್ಟೇಟ್ ಹೈವೇ ಇರುವುದು ಬಹಳ ಕಡಿಮೆ. ಅದನ್ನು ಇಂಪ್ರೂವ್ ಮಾಡಬೇಕೆಂದು ಹೇಳುತ್ತೇನೆ. ನಾನು ಈ ಮಾತನ್ನು ಏತಕ್ಕೆ ಹೇಳುತ್ತಿದ್ದೇನೆಂದರೆ ನಾನು ಸ್ವಂತ ಕಾರ್ ಡ್ರೈವ್ ಮಾಡುತ್ತಾ ಇರುವುದರಿಂದ ನನ್ನ ಅನುಭವಕ್ಕೆ ಬಂದಿದ್ದನ್ನು ಹೇಳುತ್ತಾ ಇದ್ದೇನೆ. ದಯವಿಟ್ಟು ಎಲ್ಲಾ ಕಡೆಯೂ ಡಬ್ಬಲ್ ರೋಡ್ ಮಾಡಬೇಕು ಎಂದು ಹೇಳುತ್ತೇನೆ. ಕಾರಣ ಸಾಮಾನ್ಯವಾಗಿ ಎಲ್ಲಾ ಕಡೆಯೂ ಈಗ ಲಾರಿ ಓಡಾಡುವುದು ಜಾಸ್ತಿ. ಅವರು ಬಹಳ ಸ್ಪೀಡ್‌ನಲ್ಲಿ ಬರುತ್ತಾರೆ. ಸಂಜೆ ಬರುವಾಗ ಅವರು ಹಾಕತಕ್ಕಂಥಾ ಲೈಟ್ ಡಿಮ್ ಹಾಕಿರುವುದು ಇಲ್ಲ ಅನ್ನುವುದು ಗೊತ್ತಾಗುವುದಿಲ್ಲ, ಚೆನ್ನಾಗಿ ಕುಡಿದುಬಿಟ್ಟು ರಾಂಗ್ ಸೈಡ್‌ನಲ್ಲಿ ಬರು ತ್ತಾರೆ. ಆದರಿಂದ ಆಕ್ಸಿಡೆಂಟ್ಸ್ ಆಗುವುದು ಜಾಸ್ತಿ. ಆದುದರಿಂದ ಎಲ್ಲಾ ಕಡೆಯೂ ನ್ಯಾಷನಲ್ ಹೈವೇ

ಮಾಡಿ, ಡಬಲ್ ರೋಡ್ ಮಾಡಿ ಎಂದು ಹೇಳುತ್ತೇನೆ. ಪೂರ್ವಕಾಲದಲ್ಲಿ ಮಳೆಗಾಲದಲ್ಲಿ ಬರುವಂಥಾ ಲಾರಿಗಳು ಡ್ರೈವರ್‌ಗಳ ಅನುಭವ ಮತ್ತು ಅವರ ಕಷ್ಟಗಳನ್ನು ನೋಡಿದಾಗ ಲಾರಿ ಡ್ರೈವ್ ಮಾಡ ತಕ್ಕಂಥಾದವರಿಗೆ ಅಲ್ಲಲ್ಲಿ ಒಂದು ಸ್ಕ್ವಾಡ್ ಇಡುತ್ತಿದ್ದರು. ಈವಾಗಲಾದರೂ ಅಲ್ಲಲ್ಲಿ ಒಂದು ಸ್ಕ್ವಾಡ್ ಅನ್ನು ಸಾರಿಗೆ ಇಲಾಖೆ ಮಂತ್ರಿಗಳು ಇಡಬೇಕು ಎಂದು ಹೇಳುತ್ತೇನೆ. ಯಾರು ಈ ಸಾರಿಗೆ ನಿಯಮವನ್ನು ಪಾಲಿಸುವುದಿಲ್ಲವೋ ಅವರಿಗೆ ಡ್ರೈವಿಂಗ್ ಲೈಸನ್ಸ್ ಅನ್ನು ಕ್ಯಾನ್ಸಲ್ ಮಾಡುವ ವ್ಯವಸ್ಥೆ ಮಾಡಿ. ನಾವು ನಿಮಗೆ ತೆರಿಗೆ ಕೊಡುತ್ತೇವೆ, ದಯವಿಟ್ಟು ನೀವು ನಮಗೆ ರಕ್ಷಣೆ ಕೊಡಬೇಕು. ಏತಕ್ಕೆಂದರೆ ನಾವು ರಸ್ತೆಮೇಲೆ ಹೋದರೆ ಗ್ಯಾರಂಟಿಯಾಗಿ ಮನೆಗೆ ವಾಪಸ್ಸು ಬರುತ್ತೇವೆಂದು ಹೇಳುವುದಕ್ಕಾಗುವುದಿಲ್ಲ.

ಇನ್ನು ವರ್ಕ್‌ಛಾರ್ಜ್ ಎಸ್ಟಾಬ್ಲಿಷ್‌ಮೆಂಟ್ ವಿಚಾರ ಹೇಳಿದ್ದೀರಿ. ಇವರನ್ನು ಖಾಯಂ ಮಾಡುತ್ತೇವೆಂದು ಹೇಳಿದ್ದೀರಿ. ಬಹಳ ಸಂತೋಷ ತಾವು ಬಡವರ ಕಟ್ಟಾ ಸಮಾಜವಾದಿಗಳು, ಬಡವರ ಬಗ್ಗೆ ತಾವು ಕಾಳಜಿ ಇರತಕ್ಕಂಥಾವರು, ಈ ವರ್ಕ್‌ಛಾರ್ಜ್ ಎಸ್ಟಾಬ್ಲಿಷ್‌ಮೆಂಟ್‌ನಲ್ಲಿ ಕೆಲಸ ಮಾಡತಕ್ಕಂಥಾವರು ಏನು ಇದ್ದಾರೆ ಇದರ ಡಬ್ಬಲ್ ಕೆಲಸದಷ್ಟು ಇದರಲ್ಲಿರುವ ಗ್ಯಾಂಗ್‌ಮನ್ಸ್, ಕೂಲೀಸ್‌ಗಳು ಮಾಡುತ್ತಾರೆ. ಅವರು ೮–೧೦ ವರ್ಷದಿಂದಲೂ ಎಷ್ಟೋ ಕೆಲಸಗಳನ್ನು ಮಾಡಿ ಒಳ್ಳೆಯ ಹೆಸರುಗಳನ್ನು ಪಡೆದಿದ್ದಾರೆ. ತಮಗೆ ಹೇಳಬೇಕಾದರೆ ಅವರ ಪಾತ್ರ ಇದರಲ್ಲಿ ಬಹಳ ಮುಖ್ಯವಾದುದು. ಆದುದರಿಂದ ಅವರನ್ನೂ ಸಹ ತಾವು ಖಾಯಂ ಮಾಡಬೇಕು ಎಂದು ಹೇಳುತ್ತೇನೆ. ಯಾರು ೮–೧೦ ವರ್ಷದಿಂದ ಕೆಲಸ ಮಾಡಿರುತ್ತಾರೋ, ಬಹುಶಃ ಅದಕ್ಕಿಂತ ಮೊದಲು ಕೆಲಸ ಮಾಡಿದ್ದರೆ ಅವರನು ಮೊದಲು ಖಾಯಂ ಮಾಡಿ, ಆಮೇಲೆ ಇವರನ್ನು ಖಾಯಂ ಮಾಡಿ. ಅವರು ಈ ಇಲಾಖೆಯಲ್ಲಿ ಒಳ್ಳೆಯ ಕೆಲಸಗಳನ್ನು ಮಾಡಿದ್ದಾರೆ. ಈ ಕೆಲಸ ಮಾಡಿದರೆ ತಾವು ಕಟ್ಟಾ ಸಮಾಜವಾದಿಗಳು ಎಂದು ಅನಿಸಿಕೊಳ್ಳುತ್ತೀರಿ. ಒಬ್ಬ ಸದಸ್ಯರು ತಾವೆಲ್ಲಾ ಸಮಾಜ ವಾದಿಗಳಲ್ಲವೆ

ಶ್ರೀ ಡಿದಾಳ್ ದಿವಾಕರ್.—ನಾವೆಲ್ಲರೂ ಸಮಾಜವಾದಿಗಳು. ಅದರಲ್ಲಿ ಇವರು ಸ್ವಲ್ಪ ಜಾಸ್ತಿ ಸಮಾಜವಾದಿಗಳು ಎಂದು ಎಂದು ಹೇಳುತ್ತೇನೆ. ನಾನು ಮೊದಲು ಹೇಳಿದ ಹಾಗೆ ಆ ಗ್ಯಾಂಗ್‌ಮೆನ್‌ಗಳನ್ನೂ ಸಹ ಖಾಯಂ ಮಾಡಬೇಕೆಂದು ತಿಳಿಸಿ, ಮಾನ್ಯ ಅಧ್ಯಕ್ಷರು ನನಗೆ ಮಾತನಾಡಲು ಇಷ್ಟು ಕಾಲಾವಕಾಶ ಕೊಟ್ಟಿದ್ದಕ್ಕಾಗಿ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

MR. DEPUTY SPEAKER.—The House now stands adjourned to meet again tomorrow at 9-00 A.M.

(The House adjourned at Thirty Minutes past Six of the Clock to meet again at Nine of the Clock, on Tuesday the 13th July 1982.)